# ಅಧ್ಯಾಯ-೦೩

# ಜನತೆ

ಒಂದು ನಿರ್ದಿಷ್ಟ ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳಂತಹ ಅಂಶಗಳ ಪರಿಶೀಲನೆಯೂ ಆವಶ್ಯವಾಗಿರುತ್ತವೆ. ಈ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ಸಹಜವಾಗಿಯೇ ಭಿನ್ನವಾಗಿರುತ್ತವೆ. ಅದರಂತೆ, ರಾಜ್ಯದ ದಕ್ಷಿಣ ತುದಿಯಲ್ಲಿರುವ ಚಾಮರಾಜನಗರ ಜಿಲ್ಲೆಯಲ್ಲಿಯೂ ವಿವಿಧ ಜಾತಿ ಮತ್ತು ಬುಡಕಟ್ಟು, ಮತ-ಧರ್ಮ, ಆಚಾರ-ವಿಚಾರ, ಹಬ್ಬ-ಹರಿದಿನ, ನಂಬಿಕೆ, ಆಹಾರ-ವಿಹಾರಾಭ್ಯಾಸ, ವೇಷ-ಭೂಷಣ, ಭಾಷೆಗಳೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡುಬರುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲು ಯತ್ನಿಸಲಾಗಿದೆ.

## ಜನಸಂಖ್ಯೆ

ಯಾವುದೇ ಪ್ರದೇಶದ ಜನಸಂಖ್ಯಾ ಅಧ್ಯಯನ ಅಲ್ಲಿಯ ಜನಸಂಪನ್ಮೂಲದ ಸ್ವರೂಪ, ವೈವಿಧ್ಯತೆಗಳನ್ನು ಅರಿಯಲು ನೆರವಾಗುತ್ತದೆ. ಮಿಗಿಲಾಗಿ, ಸ್ಥಳೀಯ ಅಗತ್ಯಗಳಿಗನುಗುಣವಾಗಿ, ಪ್ರಾದೇಶಿಕ ಜನಸಂಖ್ಯೆಯನ್ನು ಆಧರಿಸಿ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ನೀತಿ ನಿಯಮಗಳನ್ನು ರೂಪಿಸಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನಸಂಖ್ಯಾ ಸ್ವರೂಪ ವೈಶಿಷ್ಟ್ಯಗಳನ್ನು ಇಲ್ಲಿ ನಿರೂಪಿಸಲಾಗಿದೆ. ೨೦೦೧ರ ಜನಸಂಖ್ಯಾಗಣತಿಯಲ್ಲಿ ರಾಜ್ಯದಲ್ಲಿ ೨೭ನೇ ಸ್ಥಾನವನ್ನು ಪಡೆದಿದ್ದ ಚಾಮರಾಜನಗರ ಜಿಲ್ಲೆಯು ನಾಲ್ಕು ತಾಲೂಕುಗಳನ್ನೊಳಗೊಂಡಿದ್ದು, ಜಿಲ್ಲೆಯ ಜನಸಂಖ್ಯೆಯು ೯,೬೫,೪೬೨ (೪,೮೯,೯೪೦ ಪುರುಷರು ಹಾಗೂ ೪,೭೫,೫೨೨ ಮಹಿಳೆಯರು) ಆಗಿತ್ತು. ಇದರಲ್ಲಿ ಶೇ. ೮೪.೬೬% ರಷ್ಟು ಜನ ಗ್ರಾಮೀಣ ಭಾಗದಲ್ಲಿದ್ದರೆ, ಶೇ.೧೫.೩೪ರಷ್ಟು ಜನ ನಗರ ಪ್ರದೇಶದಲ್ಲಿದ್ದರು. ಈ ಜನಸಂಖ್ಯೆಯು ಜಿಲ್ಲೆಯ ಹದಿನಾರು ಹೋಬಳಿಗಳಲ್ಲಿರುವ ೫೧೨(೪೪೬ ವಸತಿ ಹಾಗೂ ೬೬ ನಿರ್ವಸತಿ) ಕಂದಾಯ ಗ್ರಾಮ, ೪೬೧ ದಾಖಲೆ(ಉಪ)ಗ್ರಾಮ ಮತ್ತು ನಾಲ್ಕು ಪಟ್ಟಣಗಳಲ್ಲಿ ಹಂಚಿಹೋಗಿತ್ತು. ಜಿಲ್ಲೆಯಲ್ಲಿ ಚಾಮರಾಜನಗರ ತಾಲೂಕು ಅತಿ ಹೆಚ್ಚು ಜನಸಂಖ್ಯೆಯನ್ನು (೩,೩೭.೫೭೧) ಹೊಂದಿದ್ದು, ೩,೩೬,೮೩೮ ಜನಸಂಖ್ಯೆಯನ್ನೊಳಗೊಂಡಿದ್ದ ಕೊಳ್ಳೇಗಾಲ ತಾಲೂಕು ಎರಡನೇ ಸ್ಥಾನವನ್ನು ಪಡೆದಿತ್ತು. ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. ೭೦ ರಷ್ಟು ಜನಸಂಖ್ಯೆಯು ಈ ಎರಡು ತಾಲೂಕುಗಳಲ್ಲಿ ಹಂಚಲ್ಪಟ್ಟಿತ್ತು. ಕೊಳ್ಳೇಗಾಲ ತಾಲೂಕು ವಿಸ್ತೀರ್ಣಾನುಸಾರ ಜಿಲ್ಲೆಯ ಅತ್ಯಂತ ವಿಶಾಲವಾದ ತಾಲೂಕಾಗಿದ್ದು, ಜನಸಂಖ್ಯೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದು, ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. ೩೪.೮೮ ರಷ್ಟಿತ್ತು. ಜಿಲ್ಲೆಯ ಅತಿ ಚಿಕ್ಕ ತಾಲೂಕಾದ ಯಳಂದೂರು ತಾಲೂಕಿನ ಜನಸಂಖ್ಯೆಯು ಕೇವಲ ೭೭,೯೭೧ ಆಗಿದ್ದು, ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೮.೦೭ ಮಾತ್ರ ಆಗಿದ್ದಿತು.

೨೦೧೧ರ ಜನಗಣತಿಯನ್ವಯ ತತ್ಕಾಲಿಕ ಅಂಕಿ ಅಂಶಗಳಂತೆ ರಾಜ್ಯದ ಒಟ್ಟು ಜನಸಂಖ್ಯೆ ೬,೧೧,೩೦,೭೦೪(೩,೧೦,೫೭,೭೪೨ ಪುರುಷರು ಹಾಗೂ ೩,೦೦,೭೨,೯೬೨ ಮಹಿಳೆಯರು)ಆಗಿದ್ದು ಇದರಲ್ಲಿ ಜಿಲ್ಲೆಯ ಜನಸಂಖ್ಯೆಯು ೧೦,೨೦,೯೬೨ (೫,೧೩,೩೫೯ ಪುರುಷರು ಹಾಗೂ ೫,೦೭,೬೦೩ ಮಹಿಳೆಯರು) ಆಗಿದ್ದು, ಇದು ರಾಜ್ಯದ ಜನಸಂಖ್ಯೆಯಲ್ಲಿ ಶೇ.೧.೬೭ ಆಗಿತ್ತು. ಇದರಲ್ಲಿ ಶೇ.೮೨.೮೩ ರಷ್ಟು ಜನ ಗ್ರಾಮೀಣ ಭಾಗದಲ್ಲಿದ್ದರೆ, ಶೇ.೧೭.೧೭ ರಷ್ಟು ಜನ ನಗರ ಪ್ರದೇಶದಲ್ಲಿದ್ದರು. ಜಿಲ್ಲೆಯಲ್ಲಿ, ೩,೫೮,೦೮೪ ಜನಸಂಖ್ಯೆಯನ್ನು ಹೊಂದಿರುವ ಚಾಮರಾಜನಗರ ತಾಲೂಕು ಅಗ್ರಸ್ಥಾನದಲ್ಲಿದ್ದರೆ, ಕೊಳ್ಳೇಗಾಲ (೩,೫೭,೭೭೬), ಗುಂಡ್ಲುಪೇಟೆ (೨,೨೨,೯೩೨), ಹಾಗೂ ಯಳಂದೂರು (೮೨,೧೩೭) ತಾಲೂಕು ಕ್ರಮವಾಗಿ ನಂತರದ ಸ್ಥಾನದಲ್ಲಿದ್ದವು. ಮುಂದಿನ ಕೋಷ್ಟಕ ೩.೧ರಲ್ಲಿ, ೧೯೮೧–೨೦೧೧ರ ಜನಗಣತಿಯನ್ವಯ ಜಿಲ್ಲೆಯ ತಾಲೂಕುವಾರು ಜನಸಂಖ್ಯೆಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಅನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೧: ೧೯೮೧–೨೦೧೧ರ ತಾಲೂಕುವಾರು ಜನಸಂಖ್ಯಾ ವಿವರ**

| ತಾಲೂಕು | ೧೯೮೧ | ೧೯೯೧ | ೨೦೦೧ | ೨೦೧೧(ತತ್ಕಾಲಿಕ) |
|---|---|---|---|---|
| **ಕೊಳ್ಳೇಗಾಲ** | | | | |
| ಗ್ರಾಮ | ೨,೨೮,೫೧೮ | ೨,೫೭,೦೦೦ | ೨,೮೪,೨೩೧ | ೨೮೯೩೮೫ |
| ನಗರ | ೩೬,೧೦೯ | ೪೭,೬೦೦ | ೫೨,೬೦೭ | ೬೮೩೯೧ |
| ಒಟ್ಟು | **೨,೬೪,೬೨೭** | **೩,೦೪,೬೦೦** | **೩,೩೬,೮೩೮** | **೩೫೭೭೭೬** |
| **ಗುಂಡ್ಲುಪೇಟೆ** | | | | |
| ಗ್ರಾಮ | ೧,೪೮,೯೧೪ | ೧,೭೧,೮೦೦ | ೧,೮೬,೭೪೨ | ೧೯೪೭೭೮ |
| ನಗರ | ೧೯,೯೬೫ | ೨೩,೯೦೦ | ೨೬,೩೪೦ | ೨೮೧೫೪ |
| ಒಟ್ಟು | **೧,೬೮,೮೭೯** | **೧,೯೫,೭೦೦** | **೨,೧೩,೦೮೨** | **೨೨೨೯೩೨** |
| **ಚಾಮರಾಜನಗರ** | | | | |
| ಗ್ರಾಮ | ೨,೩೨, ೮೯೫ | ೨,೬೬,೮೦೦ | ೨,೭೭,೦೧೩ | ೨೮೮೧೨೫ |
| ನಗರ | ೪೦,೪೨೨ | ೪೪,೫೦೦ | ೬೦,೫೫೮ | ೬೯೯೫೯ |
| ಒಟ್ಟು | **೨, ೭೩,೩೧೭** | **೩,೧೧,೩೦೦** | **೩,೩೭,೫೭೧** | **೩೫೮೦೮೪** |
| **ಯಳಂದೂರು** | | | | |
| ಗ್ರಾಮ | ೫೪,೬೬೫ | ೬೪,೦೦೦ | ೬೯,೩೮೬ | ೭೩೩೮೧ |
| ನಗರ | ೬,೭೧೦ | ೭,೨೦೦ | ೮,೫೮೫ | ೮೭೮೯ |
| ಒಟ್ಟು | **೬೧,೩೭೫** | **೭೧,೨೦೦** | **೭೭,೯೭೧** | **೮೨೧೭೦** |
| **ಜಿಲ್ಲೆಯ ಒಟ್ಟು** | | | | |
| ಗ್ರಾಮ | ೬,೬೪,೯೯೨ | ೭,೫೯,೬೦೦ | ೮,೧೭,೩೭೨ | ೮೪೫೬೬೯ |
| ನಗರ | ೧,೦೩,೨೦೬ | ೧೨,೭೦೦ | ೧,೪೮,೦೯೦ | ೧೭೫೨೯೩ |
| ಒಟ್ಟು | **೭,೬೮,೧೯೮** | **೮,೮೩,೩೦೦** | **೯,೬೫,೪೬೨** | **೧೦,೨೦,೯೬** |

## ಜನಸಂಖ್ಯಾ ಬೆಳವಣಿಗೆ

೧೮೫೩-೫೪ರ ಖಾನೇಷುಮಾರಿ ಜನಗಣತಿಯಂತೆ ಇಂದಿನ ಚಾಮರಾಜನಗರ ಜಿಲ್ಲೆಯ ಕಸಬಾ ತಾಲೂಕಿನಲ್ಲಿ ೭೦,೭೫೦; ಗುಂಡ್ಲುಪೇಟೆ ತಾಲೂಕಿನಲ್ಲಿ ೩೩,೬೫೭; ಯಳಂದೂರು ತಾಲೂಕಿನಲ್ಲಿ ೨೫,೦೦೦ ಜನರಿದ್ದರೆಂದು ಅಂದಾಜಿಸಲಾಗಿದ್ದು, ಆಗ ಕೊಳ್ಳೇಗಾಲ ತಾಲೂಕು ಮದ್ರಾಸ್ ಪ್ರಾಂತ (ಪ್ರೆಸಿಡೆನ್ಸಿ)ದ ನಿಯಂತ್ರಣದಲ್ಲಿತ್ತು. ಮುಂದೆ ೧೮೭೧ರಿಂದ ಭಾರತದಲ್ಲಿ ಅಧೀಕೃತವಾಗಿ ಜನಗಣತಿ ಪ್ರಕ್ರಿಯೆ ಆರಂಭವಾಯಿತು. ಅದರಂತೆ, ಈ ತಾಲೂಕುಗಳಲ್ಲಿ ಆಗ ಕ್ರಮವಾಗಿ ೧೮೭೧ರಲ್ಲಿ ೮೨,೨೧೪, ೫೮,೬೨೦, ಮತ್ತು ೨೭,೪೫೯; ೧೮೮೧ರಲ್ಲಿ ೭೫,೨೨೪, ೫೪,೪೦೪, ೨೮,೧೦೩ ಮತ್ತು ೭೭,೫೨೨(ಕೊಳ್ಳೇಗಾಲ); ಹಾಗೂ ೧೮೯೧ರಲ್ಲಿ ೯೧,೨೫೦, ೬೩,೦೩೬, ೩೧,೭೫೪ ಮತ್ತು ೮೮,೫೩೩(ಕೊಳ್ಳೇಗಾಲ) ಜನರಿದ್ದ ಅಂಶ ಆಯಾ ದಶಕದ ಜನಸಂಖ್ಯಾ ಗಣತಿಯಿಂದ ವೇದ್ಯವಾಗುತ್ತದೆ. ೧೮೭೧-೧೮೮೧ರ ದಶಕದಲ್ಲಿ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕುಗಳಲ್ಲಿ ಜನಸಂಖ್ಯಾ ಬೆಳವಣಿಗೆಯು ಗಮನಾರ್ಹವಾಗಿ ಕುಂಠಿತಗೊಂಡಿದ್ದರೆ, ಇದೇ ಅವಧಿಯಲ್ಲಿ ಯಳಂದೂರು ತಾಲೂಕಿನಲ್ಲಿ ಅಲ್ಪ ಹೆಚ್ಚಳ ಕಂಡುಬಂದಿತ್ತು. ಇದಕ್ಕೆ ೧೮೭೦ರ ದಶಕದಲ್ಲಾದ ಭೀಕರ ಕ್ಷಾಮವೇ ಕಾರಣವಾಗಿತ್ತು. ಅದೇ ೧೮೮೧-೯೧ರ ದಶಕದಲ್ಲಿ ಜನಸಂಖ್ಯೆಯಲ್ಲಿ ಮತ್ತೆ ಏರಿಕೆ ಕಂಡುಬರುತ್ತದೆ.

ಅಂದಿನ ಮೈಸೂರು ಜಿಲ್ಲೆಯಲ್ಲಿ ಅಂತರ್ಗತವಾಗಿದ್ದ ಇಂದಿನ ಚಾಮರಾಜನಗರ ಜಿಲ್ಲಾಪ್ರದೇಶದಲ್ಲೂ, ೧೯೦೧ರಿಂದ ೧೯೯೧ರವರೆಗಿನ ಜನಸಂಖ್ಯೆಯನ್ನು ಗಮನಿಸಿದರೆ ಪ್ರತೀ ದಶಕದಲ್ಲೂ ಜನಸಂಖ್ಯೆಯ ಹೆಚ್ಚಳ ಕಂಡುಬರುತ್ತದೆ. ೧೯೦೧ ರಿಂದ ೧೯೧೧ರ ದಶಕದಲ್ಲಿ ರಾಜ್ಯದ ಜನಸಂಖ್ಯೆಯ ದಶಕದ ವ್ಯತ್ಯಾಸವು ಮಲೇರಿಯಾ ಮತ್ತಿತರ ಕಾರಣಗಳಿಂದಾಗಿ ಕುಗ್ಗಿದ್ದು, ಈ ಪ್ರವೃತ್ತಿ ಇಂದಿನ ಚಾಮರಾಜನಗರ ಜಿಲ್ಲಾಪ್ರದೇಶದ ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳಲ್ಲೂ ಕಂಡುಬಂದಿತ್ತು. ೧೯೧೧-೨೧ರ ದಶಕದಲ್ಲಿ ಇದು ಶೇ. ೨.೯೧ರಷ್ಟು ಇಳಿತವನ್ನು ಕಂಡಿತು. ಅಲ್ಲಿಂದೀಚೆಗೆ ನಿರಂತರ ಜನಸಂಖ್ಯಾ ಹೆಚ್ಚಳವನ್ನು ಗಮನಿಸಬಹುದಾಗಿದ್ದು, ೧೯೬೧-೭೧ರ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆಯು ಶೇ.೧೫.೫೦ರಷ್ಟು ಹೆಚ್ಚಾಗಿದ್ದು, ಯಳಂದೂರು ತಾಲೂಕಿನಲ್ಲಿ ಶೇ. ೮.೬೦ ಬೆಳವಣಿಗೆಯಾಗಿದ್ದರೂ, ಅದರ ನಗರ ಜನಸಂಖ್ಯಾ ಬೆಳವಣಿಗೆಯು ನಕಾರಾತ್ಮಕವಾಗಿತ್ತು. ಆನಂತರದ ದಶಕದಲ್ಲಿ ಜಿಲ್ಲೆಯಲ್ಲಿ ಈ ದರವು ಶೇ. ೨೪.೬೧ಕ್ಕೆ ಏರಿಕೆಯಾಗಿರುವುದು ಉಲ್ಲೇಖಾರ್ಹ. ಅದೇ ೧೯೮೧-೯೧ರಲ್ಲಿ(೧೪.೯೯%), ೧೯೯೧-೨೦೦೧ (೯.೨೯%) ಹಾಗೂ ೨೦೦೧-೧೧ರ ದಶಕಗಳಲ್ಲಿ (೫.೭೫%) ಜನಸಂಖ್ಯಾ ಹೆಚ್ಚಳವು ಕ್ರಮೇಣ ಇಳಿಮುಖನಾಗಿರುವುದು ಗಮನಾರ್ಹ. ೨೦೦೧-೧೧ರ ದಶಕದಲ್ಲಿ ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ. ೫.೭೫ರಷ್ಟು ಹೆಚ್ಚಳವಾಗಿತ್ತು. ಅದೇ ಸಂದರ್ಭದಲ್ಲಿ ಗ್ರಾಮೀಣ ಜನಸಂಖ್ಯೆಯಲ್ಲಿ ಶೇ.೩.೪೬ರಷ್ಟು ಹಾಗೂ, ನಗರ ಜನಸಂಖ್ಯೆಯಲ್ಲಿ ಶೇ.೧೮.೩೭ ರಷ್ಟು ಬೆಳವಣಿಗೆ ಕಳೆದ ದಶಕದಲ್ಲಾಗಿತ್ತು. ಇದೇ ಸಂದರ್ಭದಲ್ಲಿ ರಾಜ್ಯಮಟ್ಟದಲ್ಲಿ ಇದು ಕ್ರಮವಾಗಿ ಶೇ.೫.೬೭, ಶೇ.೩೧.೨೭ (ಗ್ರಾಮೀಣ) ಹಾಗೂ ಶೇ.೭.೬೩ (ನಗರ) ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯನ್ನು ವೀಕ್ಷಿಸಿತ್ತು. ಕುಟುಂಬ ಕಲ್ಯಾಣ ಯೋಜನೆಯಿಂದಾಗಿ ಮೂಡಿದ ಜನಜಾಗೃತಿಯಿಂದಾಗಿ ಇದು ಸಾಧ್ಯವಾಗಿದೆ. ಕಳೆದ ದಶಕದಲ್ಲಿ ಜಿಲ್ಲೆಯ ಪುರುಷ ಜನಸಂಖ್ಯೆಯು (೫,೧೩,೩೫೯)ಶೇ.೪.೭೮ರಷ್ಟು ಬೇಳವಣಿಗೆಯನ್ನು ಕಂಡಿದ್ದು, ಇದು ಕ್ರಮವಾಗಿ ಶೇ. ೨.೬೩ (ಗ್ರಾಮೀಣ) ಹಾಗೂ ಶೇ. ೧೬.೬೬ (ನಗರ) ಅಗಿತ್ತು. ಇದೇ ರೀತಿ ಜಿಲ್ಲೆಯ ಮಹಿಳಾ ಜನಸಂಖ್ಯೆಯು (೫,೦೭,೬೦೩) ಶೇ. ೬.೭೫ರಷ್ಟು ಬೇಳವಣಿಗೆಯನ್ನು ವೀಕ್ಷಿಸಿದ್ದು, ಕ್ರಮವಾಗಿ ಗ್ರಾಮೀಣ ಭಾಗದಲ್ಲಿ ಶೇ. ೪.೩೨ ಹಾಗೂ ನಗರ ಪ್ರದೇಶದಲ್ಲಿ ಶೇ.೨೦.೧೩ರಷ್ಟು ಕ್ರಮವಾಗಿ ಆಗಿತ್ತು. ಜಿಲ್ಲೆಯ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆ ವಿವರಕ್ಕೆ ಕೋಷ್ಟಕ ೩.೨ ನೋಡಿ.

**ಕೋಷ್ಟಕ ೩.೨: ಜಿಲ್ಲೆಯ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆ ವಿವರ (೧೯೦೧-೨೦೧೧)**

| ೧೯೦೧-೧೧ | ೧೯೧೧-೨೧ | ೧೯೨೧-೩೧ | ೧೯೩೧-೪೧ | ೧೯೪೧-೫೧ | ೧೯೫೧-೬೧ | ೧೯೬೧-೭೧ | ೧೯೭೧-೮೧ | ೧೯೮೧-೯೧ | ೧೯೯೧-೨೦೦೧ | ೨೦೦೧-೧೧ |
|---|---|---|---|---|---|---|---|---|---|---|
| ೨.೯೧ | -೪.೬೨ | ೭.೩೦ | ೧೦.೭೪ | ೧೫.೧೪ | ೧೮.೭೬ | ೧೫.೫೦ | ೨೪.೬೧ | ೧೪.೯ | ೧೯.೨೯ | ೫.೭೫ |

## ಜನಸಾಂದ್ರತೆ

ಒಂದು ಪ್ರದೇಶದ ಪ್ರತೀ ಚದರ ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನಸಾಂದ್ರತೆಯು ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ಜಿಲ್ಲೆಯ ಜನಸಾಂದ್ರತೆಯು ೧೯೯೧ರ ಜನಗಣತಿಯಂತೆ ೧೯೩ ಆಗಿದ್ದು ಇದು ರಾಜ್ಯದ ಜನಸಾಂದ್ರತೆಗಿಂತ(೨೩೫) ಕಡಿಮೆಯಾಗಿತ್ತು. ಅದೇ ೨೦೦೧ರ ಜನಗಣತಿಯಲ್ಲಿ ಇದು ೧೮೯ಕ್ಕೆ ಇಳಿದಿದ್ದು, ರಾಜ್ಯದ ಜನಸಾಂದ್ರತೆ(೨೭೬) ಪ್ರಮಾಣಕ್ಕಿಂತ ಕಡಿಮೆ ಇತ್ತು. ಮುಂದೆ ೨೦೧೧ರಲ್ಲಿ ನಡೆದ ಜನಗಣತಿಯಲ್ಲಿ, ಜಿಲ್ಲೆಯ ಜನಸಾಂದ್ರತಾ ಪ್ರಮಾಣವು ೨೦೦ಕ್ಕೆ ಅಧಿಕಗೊಂಡಿತಾದರೂ, ರಾಜ್ಯದ ಪ್ರಮಾಣಕ್ಕಿಂತ ಕಡಿಮೆ ಇದ್ದು, ರಾಜ್ಯ ಮಟ್ಟದಲ್ಲಿ ೨೪ನೆಯ ಸ್ಥಾನದಲ್ಲಿತ್ತು. ಜನಸಾಂದ್ರತೆಯ ದೃಷ್ಟಿಯಿಂದ ಜಿಲ್ಲೆಯಲ್ಲಿ ಯಳಂದೂರು ತಾಲೂಕು ಅಗ್ರಸ್ಥಾನದಲ್ಲಿದ್ದರೆ, ಜಿಲ್ಲಾಕೇಂದ್ರ ಚಾಮರಾಜನಗರವು ದ್ವಿತೀಯ ಸ್ಥಾನದಲ್ಲಿದ್ದು, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕು ಕ್ರಮವಾಗಿ ಮೂರು ಮತ್ತು ನಾಲ್ಕನೆಯ ಸ್ಥಾನದಲ್ಲಿ ನಿರಂತರವಾಗಿ ಮುಂದುವರಿದಿರುವುದು ಉಲ್ಲೇಖಾರ್ಹ. ೨೦೦೧ರ ಜನಗಣತಿಯಂತೆ, ಗ್ರಾಮೀಣ ಪ್ರದೇಶದಲ್ಲಿಯ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ೧೬೨ ಇದ್ದು ನಗರ ಪ್ರದೇಶದಲ್ಲಿ ೨೭೧೨ ಇರುತ್ತದೆ. ಈ ಮುಂದಿನ ಕೋಷ್ಟಕ ೩.೩ರಲ್ಲಿ ೧೯೯೧-೨೦೧೧ರ ಜನಗಣತಿಯಂತೆ ತಾಲೂಕುವಾರು ಜನಸಾಂದ್ರತೆಯನ್ನು ನೀಡಲಾಗಿದೆ.

**ಕೋಷ್ಟಕ. ೩.೩: ಜನಸಾಂದ್ರತೆ**

| ತಾಲೂಕುಗಳು | ೧೯೯೧ | | | ೨೦೦೧ | | | ೨೦೧೧ | | |
|---|---|---|---|---|---|---|---|---|---|
| | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| ಕೊಳ್ಳೇಗಾಲ | | | ೧೦೯ | | | ೧೨೧ | | | – |
| ಗುಂಡ್ಲುಪೇಟೆ | | | ೧೩೯ | | | ೧೫೩ | | | – |
| ಚಾಮರಾಜನಗರ | | | ೨೫೩ | | | ೨೭೫ | | | – |
| ಯಳಂದೂರು | | | ೨೭೧ | | | ೨೯೩ | | | – |
| ಒಟ್ಟು | | | ೧೯೩ | | | ೧೮೯ | | | ೨೦೦ |

*೨೦೧೧ರ ಜನಗಣತಿಯ ತಾತ್ಕಾಲಿಕ ಲೆಕ್ಕದಂತೆ ಜಿಲ್ಲೆಯ ಜನಸಾಂದ್ರತೆ ೨೦೦ ಆಗಿರುತ್ತದೆ (ತಾಲೂಕುವಾರು ವಿವರಗಳು ಅಧಿಕೃತವಾಗಿ ಲಭ್ಯವಿರುವುದಿಲ್ಲ).*

## ವಾಸದ ಮನೆಗಳು ಮತ್ತು ಕುಟುಂಬಗಳು

ಜನಗಣತಿಯ ವ್ಯಾಖ್ಯಾನದ ಪ್ರಕಾರ, ವಾಸದ ಮನೆಯೆಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕುಟುಂಬಗಳು ವಾಸಿಸುವ ಪೂರ್ತಿ ಅಥವಾ ಭಾಗಶಃ ಕಟ್ಟಡ ಎಂದರ್ಥ. ಕುಟುಂಬವೆಂದರೆ ಒಬ್ಬರು ಅಥವಾ

ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡುಗೆಮನೆಯಲ್ಲಿ ತಯಾರಿಸಿದ ಅಡುಗೆಯನ್ನು (ಅನೇಕ ಸಂದರ್ಭಗಳಲ್ಲಿ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನ ಸಮೂಹ ಎಂದರ್ಥ. ಕೆಲವು ಕುಟುಂಬಗಳಿಗೆ ವಾಸದ ಮನೆಗಳಿರುವುದಿಲ್ಲ. ಅಂತಹ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳು ಎಂದು ಕರೆಯುತ್ತಾರೆ. ೧೯೮೧-೨೦೧೧ರ ಜನಗಣತಿಯನ್ವಯ ಜಿಲ್ಲೆಯಲ್ಲಿದ್ದ ವಾಸದ ಮನೆ ಮತ್ತು ಕುಟುಂಬಗಳ ಮಾಹಿತಿಯನ್ನು ಒದಗಿಸಲಾಗಿದೆ

**ಕೋಷ್ಟಕ ೩.೪ ವಾಸದ ಮನೆಗಳು ಮತ್ತು ಕುಟುಂಬಗಳು**

| ತಾಲೂಕುಗಳು | ೧೯೮೧ | | | ೧೯೯೧ | | | ೨೦೦೧ | | |
|---|---|---|---|---|---|---|---|---|---|
| | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು | ಗ್ರಾಮ | ನಗರ | ಒಟ್ಟು |
| **ಕೊಳ್ಳೇಗಾಲ** | | | | | | | | | |
| ವಾಸದ ಮನೆಗಳು | ೪೧,೪೬೪ | ೬,೧೨೫ | ೪೭,೫೮೯ | ೪೬,೦೭೪ | ೮,೬೭೭ | ೫೪,೭೫೧ | ೫೯,೭೯೫ | ೧೦,೭೧೭ | ೭೦,೯೧೨ |
| ಕುಟುಂಬಗಳು | ೪೧,೬೫೧ | ೬,೧೬೮ | ೪೭,೮೧೯ | ೫೦,೦೦೧ | ೮,೭೧೬ | ೫೮,೭೧೭ | ೬೦,೪೩೯ | ೧೦,೪೭೩ | ೭೦,೯೧೨ |
| **ಗುಂಡ್ಲುಪೇಟೆ** | | | | | | | | | |
| ವಾಸದ ಮನೆಗಳು | ೨೭,೬೪೮ | ೩,೫೯೦ | ೩೧,೨೩೮ | ೩೨,೯೯೬ | ೪,೫೨೩ | ೩೭,೫೧೯ | ೩೯,೭೮೬ | ೫,೪೪೫ | ೪೫,೨೩೧ |
| ಕುಟುಂಬಗಳು | ೨೭,೯೭೩ | ೩,೬೧೦ | ೩೧,೫೮೩ | ೩೩,೩೦೪ | ೪,೫೪೯ | ೩೭,೮೫೩ | ೩೯,೩೯೮ | ೫,೩೫೪ | ೪೪,೭೫೨ |
| **ಚಾಮರಾಜನಗರ** | | | | | | | | | |
| ವಾಸದ ಮನೆಗಳು | ೪೦,೮೯೬ | ೬,೮೩೬ | ೪೭,೭೩೨ | ೫೦,೮೩೩ | ೭,೯೧೫ | ೫೮,೭೪೮ | ೫೯,೭೮೧ | ೧೨,೨೯೯ | ೭೨,೦೮೦ |
| ಕುಟುಂಬಗಳು | ೪೨,೮೬೦ | ೬,೯೬೩ | ೪೯,೮೨೩ | ೫೧,೯೬೧ | ೮,೦೬೬ | ೬೦,೦೨೭ | ೫೯,೩೭೧ | ೧೨,೩೦೨ | ೭೧,೬೭೩ |
| **ಯಳಂದೂರು** | | | | | | | | | |
| ವಾಸದ ಮನೆಗಳು | ೯,೭೪೨ | ೧,೨೫೨ | ೧೦,೯೯೪ | ೧೧,೫೬೯ | ೧,೪೭೫ | ೧೩,೦೪೪ | ೧೩,೮೫೯ | ೧,೭೪೮ | ೧೫.೬೦೭ |
| ಕುಟುಂಬಗಳು | ೯,೮೬೮ | ೧,೨೬೭ | ೧೧,೧೩೫ | ೧೧,೮೮೫ | ೧,೫೦೭ | ೧೩,೩೯೨ | ೧೩,೮೨೪ | ೧,೭೫೨ | ೧೫,೫೭೬ |
| **ಜಿಲ್ಲೆಯ ಒಟ್ಟು** | | | | | | | | | |
| **ವಾಸದ ಮನೆಗಳು** | **೧,೧೯,೭೫೦** | **೧೭,೮೦೩** | **೧,೩೭,೫೫೩** | **೧,೪೧,೪೭೨** | **೨೨,೫೯೦** | **೧,೬೪,೦೬೨** | **೧೩,೮೫೯** | **೧,೭೪೮** | **೧೫,೬೦೭** |
| **ಕುಟುಂಬಗಳು** | **೧,೨೨,೩೫೨** | **೧೮,೦೦೮** | **೧,೪೦,೩೬೦** | **೧,೪೭,೧೫೧** | **೨೨,೮೩೮** | **೧,೬೯,೯೮೯** | **೧,೭೩,೦೩೨** | **೨೯,೮೮೧** | **೨,೦೨,೯೧೩** |

### ಕೋಷ್ಟಕ ೩.೫: ತಾಲ್ಲೂಕುವಾರು ಕ್ಷೇತ್ರ, ವಾಸದಮನೆ, ಕುಟುಂಬಗಳು ಹಾಗೂ ಜನಸಂಖ್ಯೆ (೧೯೯೧ರ ಜನಗಣತಿ)ವಿವರ

| ತಾಲ್ಲೂಕು | ಒಟ್ಟು/ ಗ್ರಾಮೀಣ/ನಗರ | ಕ್ಷೇತ್ರ ಚದರ ಕಿ.ಮೀ. | ಗ್ರಾಮಗಳು | | ಪಟ್ಟಣಗಳ ಸಂಖ್ಯೆ | ವಾಸದ ಮನೆಗಳು | ಕುಟುಂಬಗಳು | ಜನಸಂಖ್ಯೆ | | | ಪ್ರತಿ ಚದರ ಕಿ.ಮೀ. ಜನಸಾಂದ್ರತೆ |
|---|---|---|---|---|---|---|---|---|---|---|---|
| | | | ಜನ ವಸತಿ | ಜನ ವಸತಿ ರಹಿತ | | | | ಒಟ್ಟು | ಗಂಡು | ಹೆಣ್ಣು | |
| ಚಾಮರಾಜ ನಗರ | ಒಟ್ಟು | ೧,೨೨೯.೨೦ | ೧೭೩ | ೧೫ | ೧ | ೫೮,೭೪೮ | ೬೦,೦೨೭ | ೩,೧೧,೩೨೩ | ೧,೫೯,೪೭೧ | ೧,೫೧,೮೫೨ | ೨೫೩ |
| | ಗ್ರಾಮೀಣ | ೧,೨೧೮.೮೯ | ೧೭೩ | ೧೫ | – | ೫೦,೮೩೩ | ೫೧,೯೬೧ | ೨,೬೬,೮೪೫ | ೧,೩೬,೧೧೮ | ೧,೩೦,೭೨೭ | ೨೧೯ |
| | ನಗರ | ೧೦.೩೧ | – | – | ೧ | ೭,೯೧೫ | ೮,೦೬೬ | ೪೪,೪೭೮ | ೨೩,೩೫೩ | ೨೧,೧೨೫ | ೪,೩೧೪ |
| ಗುಂಡ್ಲುಪೇಟೆ | ಒಟ್ಟು | ೧,೪೦೬.೨೦ | ೧೪೪ | ೧೪ | ೧ | ೩೭,೫೧೯ | ೩೭,೮೫೩ | ೧,೯೫,೭೦೬ | ೯೮,೭೦೩ | ೯೭,೦೦೩ | ೧೩೯ |
| | ಗ್ರಾಮೀಣ | ೧,೪೦೩.೧೫ | ೧೪೪ | ೧೪ | – | ೩೨,೯೯೬ | ೩೩,೩೦೪ | ೧,೭೧,೭೭೨ | ೮೬,೪೮೪ | ೮೫,೨೮೮ | ೧೨೨ |
| | ನಗರ | ೦೩.೦೫ | – | – | ೧ | ೪,೫೨೩ | ೪,೫೪೯ | ೨೩,೯೩೪ | ೧೨,೨೧೯ | ೧೧,೭೧೫ | ೭,೮೪೭ |
| ಕೊಳ್ಳೇಗಾಲ | ಒಟ್ಟು | ೨,೭೮೬.೧೦ | ೧೦೩ | ೩೭ | ೨ | ೫೪,೭೫೧ | ೫೮,೭೧೭ | ೩,೦೪,೬೨೧ | ೧,೫೭,೪೬೧ | ೧,೪೭,೧೬೦ | ೧೦೯ |
| | ಗ್ರಾಮೀಣ | ೨,೭೫೨.೫೯ | ೧೦೩ | ೩೭ | – | ೪೬,೦೭೪ | ೫೦,೦೦೧ | ೨,೫೭,೦೩೬ | ೧,೩೨,೮೦೯ | ೧,೨೪,೨೨೭ | ೯೩ |
| | ನಗರ | ೩೩.೫೧ | – | – | ೨ | ೮,೬೭೭ | ೮,೭೧೬ | ೪೭,೫೮೫ | ೨೪,೬೫೨ | ೨೨,೯೩೩ | ೧,೪೨೦ |
| ಯಳಂದೂರು | ಒಟ್ಟು | ೨೬೪.೭೨ | ೨೬ | – | ೧ | ೧೩,೦೪೪ | ೧೩,೩೯೨ | ೭೧,೭೧೫ | ೩೬,೬೯೮ | ೩೫,೦೧೭ | ೨೭೧ |
| | ಗ್ರಾಮೀಣ | ೨೬೪.೩೮ | ೨೬ | – | – | ೧೧,೫೬೯ | ೧೧,೮೮೫ | ೬೪,೦೩೭ | ೩೨,೬೫೭ | ೩೧,೩೮೦ | ೨೪೨ |
| | ನಗರ | ೦.೩೪ | – | – | ೧ | ೧,೪೭೫ | ೧,೫೦೭ | ೭,೬೭೮ | ೪,೦೪೧ | ೩,೬೩೭ | ೨೨,೫೮೨ |

### ಕೋಷ್ಟಕ ೩.೬:೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ವಾಸದ ಮನೆಗಳು ಹಾಗೂ ಜನಸಂಖ್ಯೆ ವಿವರ

| ಕ್ರ. ಸಂ | ತಾಲ್ಲೂಕು | ಒಟ್ಟು ವಾಸದ ಮನೆಗಳು | ಒಟ್ಟು ನಿವಾಸಿಗಳು | ಪುರುಷರು | ಮಹಿಳೆಯರು |
|---|---|---|---|---|---|
| ೧. | ಕೊಳ್ಳೇಗಾಲ | | | | |
| | **ಒಟ್ಟು** | **೭೦,೫೧೨** | **೩೩೬,೮೩೮** | **೧೭೨,೬೫೭** | **೧೬೪,೧೮೧** |
| | **ಗ್ರಾಮೀಣ** | ೫೯,೭೯೫ | ೨೮೪,೨೩೧ | ೧೪೫,೯೪೨ | ೧೩೮,೨೮೯ |
| | **ನಗರ** | ೧೦,೭೧೭ | ೫೨,೬೦೭ | ೨೬,೭೧೫ | ೨೫,೮೯೨ |
| ೨. | ಚಾಮರಾಜನಗರ | | | | |
| | **ಒಟ್ಟು** | **೭೨,೦೮೦** | **೩೩೭,೫೭೧** | **೧೭೦,೨೨೫** | **೧೬೭,೩೪೬** |
| | **ಗ್ರಾಮೀಣ** | ೫೯,೭೮೧ | ೨೭೭,೦೧೩ | ೧೩೯,೫೯೩ | ೧೩೭,೪೨೦ |
| | **ನಗರ** | ೧೨,೨೯೯ | ೬೦,೫೫೮ | ೩೦,೬೩೨ | ೨೯,೯೨೬ |
| ೩. | ಗುಂಡ್ಲುಪೇಟೆ | | | | |
| | **ಒಟ್ಟು** | **೪೫,೨೩೧** | **೨೧೩,೦೮೨** | **೧೦೭,೩೯೫** | **೧೦೫,೬೮೭** |
| | **ಗ್ರಾಮೀಣ** | ೩೯,೭೮೬ | ೧೮೬,೭೪೨ | ೯೩,೯೮೧ | ೯೨,೭೬೧ |
| | **ನಗರ** | ೫,೪೪೫ | ೨೬,೩೪೦ | ೧೩,೪೧೪ | ೧೨,೯೨೬ |
| ೪. | ಯಳಂದೂರು | | | | |
| | **ಒಟ್ಟು** | **೧೫,೬೦೭** | **೭೭,೯೭೧** | **೩೯,೬೬೩** | **೩೮,೩೦೮** |
| | **ಗ್ರಾಮೀಣ** | ೧೩,೮೫೯ | ೬೯,೩೮೬ | ೩೫,೨೬೭ | ೩೪,೧೧೯ |
| | **ನಗರ** | ೧,೭೪೮ | ೮,೫೮೫ | ೪,೩೯೬ | ೪,೧೮೯ |

## ನಿರ್ವಸಿತ ಕುಟುಂಬಗಳು, ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರದೆ ಸಾಮಾನ್ಯವಾಗಿ ಬಸ್‌ನಿಲ್ದಾಣ, ರೈಲ್ವೆನಿಲ್ದಾಣ, ಹಳೇಕಟ್ಟಡ, ಮಂಟಪ, ರಸ್ತೆಬದಿಯಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯ ಪ್ರಕಾರ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ೧೯೮೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಇದ್ದ ನಿರ್ವಸಿತ ಕುಟುಂಬಗಳ ತಾಲೂಕುವಾರು ವಿವರವನ್ನು ಕೋಷ್ಟಕ ೩.೭ರಲ್ಲಿ ನೀಡಲಾಗಿದೆ.

ಜನಗಣತಿಯ ಪ್ರಕಾರ ವಿದ್ಯಾರ್ಥಿನಿಲಯ, ಭೋಜನ ಗೃಹ, ಸೆರೆಮನೆ, ಆಶ್ರಮ ಮುಂತಾದೆಡೆಗಳಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದು ಕರೆಯಲಾಗುತ್ತದೆ. ೧೯೯೧ ಹಾಗೂ ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ನಿರ್ವಸಿತ ಹಾಗೂ ಸಾಂಸ್ಥಿಕ ಕುಟುಂಬಗಳ ಬಗ್ಗೆ ಮಾಹಿತಿಯನ್ನು ಕೋಷ್ಟಕ ೩.೮, ೩.೮ ಹಾಗೂ ೩.೧೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೭: ನಿರ್ವಸಿತ ಕುಟುಂಬಗಳ ವಿವರ (೧೯೮೧)**

| ತಾಲೂಕು | ಗ್ರಾಮೀಣ (೧೯೮೧) | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಕುಟುಂಬಗಳು | ಗಂ | ಹೆ | ಕುಟುಂಬಗಳು | ಗಂ | ಹೆ | ಕುಟುಂಬಗಳು | ಗಂ | ಹೆ |
| ಚಾಮರಾಜನಗರ | ೯೨ | ೧೬೮ | ೧೫೦ | ೧೬ | ೧೫ | ೧೮ | ೧೦೮ | ೧೮೩ | ೧೬೮ |
| ಗುಂಡ್ಲುಪೇಟೆ | ೨೮ | ೫೬ | ೩೭ | ೮ | ೧೧ | ೫ | ೩೬ | ೬೭ | ೪೨ |
| ಕೊಳ್ಳೇಗಾಲ | ೭೨ | ೯೨ | ೫೭ ‘ | ೧೨ | ೧೪ | ೨೨ | ೮೪ | ೧೦೬ | ೭೯ |
| ಯಳಂದೂರು | ೩೧ | ೪೪ | ‘೨೮ | ೬ | ೭ | ೩ | ೩೭ | ೫೧ | ೩೧ |

**ಕೋಷ್ಟಕ ೩.೮: ವಸತಿ ರಹಿತ ಹಾಗೂ ಸಾಂಸ್ಥಿಕ ಜನಸಂಖ್ಯೆ (೧೯೯೧ ಜನಗಣತಿ)ಯ ತಾಲೂಕುವಾರು ವಿವರ**

| ಒಟ್ಟು/ ಗ್ರಾಮೀಣ / ನಗರ | ವಸತಿ ರಹಿತ ಜನಸಂಖ್ಯೆ | | | | ಸಾಂಸ್ಥಿಕ ಜನಸಂಖ್ಯೆ | | | |
|---|---|---|---|---|---|---|---|---|
| | ಕುಟುಂಬಗಳ ಸಂಖ್ಯೆ | ಜನಸಂಖ್ಯೆ | ಪುರುಷರು | ಮಹಿಳೆಯರು | ಕುಟುಂಬಗಳ ಸಂಖ್ಯೆ | ಜನಸಂಖ್ಯೆ | ಪುರುಷರು | ಮಹಿಳೆಯರು |
| ಚಾಮರಾಜನಗರ | | | | | | | | |
| **ಒಟ್ಟು** | **೧೦೨** | **೧೮೫** | **೧೩೩** | **೫೨** | **೪೪** | **೧೯೮೯** | **೧೬೫೬** | **೩೩೩** |
| ಗ್ರಾಮೀಣ | ೧೦ | ೪೨ | ೧೯ | ೨೩ | ೧೯ | ೨೮೬ | ೨೦೫ | ೮೧ |
| ನಗರ | ೯೨ | ೧೪೩ | ೧೧೪ | ೨೯ | ೨೫ | ೧೭೦೩ | ೧೪೫೧ | ೨೫೨ |
| ಗುಂಡ್ಲುಪೇಟೆ | | | | | | | | |
| **ಒಟ್ಟು** | **೨೯** | **೯೮** | **೫೨** | **೪೬** | **೨೫** | **೭೨೨** | **೬೨೭** | **೯೫** |
| ಗ್ರಾಮೀಣ | ೧೧ | ೪೯ | ೨೫ | ೨೪ | ೧೪ | ೫೦೧ | ೪೦೬ | ೯೫ |
| ನಗರ | ೧೮ | ೪೯ | ೨೭ | ೨೨ | ೧೧ | ೨೨೧ | ೨೨೧ | – |
| ಕೊಳ್ಳೇಗಾಲ | | | | | | | | |
| **ಒಟ್ಟು** | **೪೭** | **೧೪೧** | **೭೯** | **೬೨** | **೪೮** | **೧೭೫೦** | **೧೩೫೨** | **೩೯೮** |
| ಗ್ರಾಮೀಣ | ೩೮ | ೧೩೦ | ೭೦ | ೬೦ | ೩೪ | ೧೦೨೬ | ೭೪೯ | ೨೭೭ |
| ನಗರ | ೯ | ೧೧ | ೯ | ೨ | ೧೪ | ೭೨೪ | ೬೦೩ | ೧೨೧ |

| ಯಳಂದೂರು | | | | | | | | |
|---|---|---|---|---|---|---|---|---|
| ಒಟ್ಟು | ೪ | ೧೭ | ೭ | ೧೦ | ೧೧ | ೪೮೨ | ೪೦೭ | ೭೫ |
| ಗ್ರಾಮೀಣ | ೪ | ೧೭ | ೭ | ೧೦ | ೭ | ೨೬೭ | ೨೩೨ | ೩೫ |
| ನಗರ | – | – | – | – | ೪ | ೨೧೫ | ೧೭೫ | ೪೦ |

**ಕೋಷ್ಟಕ ೩.೯: ವಸತಿರಹಿತ ಮತ್ತು ಸಾಂಸ್ಥಿಕ ಕುಟುಂಬಗಳು ಹಾಗೂ ಜನಸಂಖ್ಯೆ ವಿವರ(೨೦೧೧ರ ಜನ ಗಣತಿಯಂತೆ)**

| ತಾಲೂಕು | | ಗೃಹರಹಿತ ಜನಸಂಖ್ಯೆ | | | | ಸಾಂಸ್ಥಿಕ ಜನಸಂಖ್ಯೆ | | | |
|---|---|---|---|---|---|---|---|---|---|
| | | ವಸತಿ ರಹಿತ ಕುಟುಂಬಗಳ ಸಂಖ್ಯೆ | ಒಟ್ಟು | ಗಂಡಸರು | ಹೆಂಗಸರು | ವಿವಿಧೆಡೆ ಇರುವ ಸಾಂಸ್ಥಿಕ ಸಂಖ್ಯೆ | ಒಟ್ಟು | ಗಂಡಸರು | ಹೆಂಗಸರು |
| ಚಾಮರಾಜನಗರ | ಒಟ್ಟು | ೮೯ | ೩೦೩ | ೧೬೬ | ೧೩೭ | ೩೧೭ | ೬೬೨೪ | ೪೬೭೭ | ೧೯೪೭ |
| | ಗ್ರಾಮೀಣ | ೫೬ | ೧೭೩ | ೯೩ | ೮೦ | ೨೩೯ | ೪೦೭೪ | ೨೮೦೬ | ೧೨೬೮ |
| | ನಗರ | ೩೩ | ೧೩೦ | ೭೩ | ೫೭ | ೭೮ | ೨೫೫೦ | ೧೮೭೧ | ೬೭೯ |
| ಗುಂಡ್ಲುಪೇಟೆ | ಒಟ್ಟು | ೧೯ | ೯೨ | ೫೧ | ೪೧ | ೭೫ | ೧೧೪೫೬ | ೯೬೫ | ೪೯೧ |
| | ಗ್ರಾಮೀಣ | ೬ | ೨೬ | ೧೬ | ೧೦ | ೫೪ | ೮೯೫ | ೬೨೨ | ೨೭೩ |
| | (ಟಿಎಂಸಿ) ನಗರ | ೧೩ | ೬೬ | ೩೫ | ೩೧ | ೨೧ | ೫೬೧ | ೩೪೩ | ೨೧೮ |
| ಚಾಮರಾಜನಗರ | ಒಟ್ಟು | ೩೩ | ೮೫ | ೪೨ | ೪೩ | ೮೨ | ೧೮೫೪ | ೧೨೮೪ | ೫೭೦ |
| | ಗ್ರಾಮೀಣ | ೨೨ | ೬೦ | ೨೮ | ೩೨ | ೬೧ | ೧೨೧೨ | ೮೨೨ | ೩೯೦ |
| | (ಸಿಎಂಸಿ) ನಗರ | ೧೧ | ೨೫ | ೧೪ | ೧೧ | ೨೧ | ೬೪೨ | ೪೬೨ | ೧೮೦ |
| ಯಳಂದೂರು | ಒಟ್ಟು | ೪ | ೧೫ | ೯ | ೬ | ೨೯ | ೬೪೨ | ೫೩೧ | ೧೧೧ |
| | ಗ್ರಾಮೀಣ | ೪ | ೧೫ | ೯ | ೬ | ೨೯ | ೩೭೯ | ೩೦೪ | ೭೫ |
| | (ಟಿ.ಪಿ) ನಗರ | – | – | – | – | ೧೦ | ೨೬೩ | ೨೨೭ | ೩೬ |
| ಕೊಳ್ಳೇಗಾಲ | ಒಟ್ಟು | ೩೩ | ೧೧೧ | ೬೪ | ೪೭ | ೧೨೧ | ೨೬೭೨ | ೧೮೯೭ | ೭೭೫ |
| | ಗ್ರಾಮೀಣ | ೨೪ | ೭೨ | ೪೦ | ೩೨ | ೯೫ | ೧೫೮೮ | ೧೦೫೮ | ೫೩೦ |
| | (ಟಿಎಂಸಿ) ನಗರ | ೯ | ೩೯ | ೨೪ | ೧೫ | ೨೬ | ೧೦೮೪ | ೮೩೯ | ೨೪೫ |

**ಕೋಷ್ಟಕ ೩.೯ಅ: ೨೦೧೧ರ ಗಣತಿ ಪ್ರಕಾರ ಜಿಲ್ಲೆಯಲ್ಲಿರುವ ಕುಟುಂಬಗಳು ಹಾಗೂ ವಾಸದ ಮನೆಗಳ ವಿವರ**

| | | ಕುಟುಂಬಗಳು | ವಾಸದ ಮನೆಗಳು | ಇತರೆ (ಸಾಂಸ್ಥಿಕ ಜನಸಂಖ್ಯೆಯನ್ನು ಹೊರತುಪಡಿಸಿ) |
|---|---|---|---|---|
| ಚಾಮರಾಜನಗರ ಜಿಲ್ಲೆ | ಗ್ರಾಮೀಣ | ೨,೦೩,೭೪೮ | ೧,೯೮,೦೩೮ | ೫,೭೧೦ |
| | ನಗರ | ೪೦,೪೫೦ | ೩೯,೮೨೫ | ೬೨೫ |
| | ಒಟ್ಟು | ೨,೪೪,೧೯೮ | ೨,೩೭,೮೬೩ | ೬,೩೩೫ |

## ವಲಸೆ

ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ವಾಸಿಸುವುದನ್ನು 'ವಲಸೆ' ಎಂದು ಪರಿಗಣಿಸಲಾಗುತ್ತದೆ. ವಲಸೆ ಹೋಗುವುದು ಬಹು ಹಿಂದಿನಿಂದಲೂ ನಡೆದು ಬಂದಿರುವ ಒಂದು ಆರ್ಥಿಕ ಹಾಗೂ ಸಾಮಾಜಿಕ ಪ್ರಕ್ರಿಯೆ. ವಲಸೆಯು ತಾತ್ಕಾಲಿಕವಾಗಿರಬಹುದು, ಇಲ್ಲವೇ ಶಾಶ್ವತವಾಗಿರಬಹುದು. ತಾತ್ಕಾಲಿಕ ವಲಸೆಯು ವರ್ಷದ ಯಾವುದಾದರೂ ಒಂದು ಋತುಮಾನಕ್ಕೆ ಅಥವಾ ಒಂದು ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತದೆ. ಉದಾಹರಣೆಗೆ, ಸುಗ್ಗಿಯ ನಂತರ ಬಿಡುವಿನ ವೇಳೆಯಲ್ಲಿ ಮೈದಾನ ಪ್ರದೇಶದಿಂದ ಮಲೆನಾಡು ಪ್ರದೇಶಗಳಿಗೆ ವಲಸೆ ಹೋಗಿ ಬಳಿಕ ಬಿತ್ತನೆ ವೇಳೆಯಲ್ಲಿ ಹಿಂತಿರುಗುವುದು, ತಾತ್ಕಾಲಿಕ ವಲಸೆ ಎಂದೆನಿಸಿಕೊಳ್ಳುತ್ತದೆ. ಭೀಕರ ಬರ, ತೀವ್ರ ಭೂಕಂಪ, ಪದೇಪದೇ ಯುದ್ಧದ ದಾಳಿ ಮೊದಲಾದ ಕಾರಣಗಳಿಂದ ಒಂದೆಡೆ ಬದುಕಲು ಕಷ್ಟವಾದವರು ಸುರಕ್ಷಿತ ಸ್ಥಳಕ್ಕೆ ಖಾಯಂ ಆಗಿ ಗುಳೇ ಹೋಗುವುದು ಶಾಶ್ವತ ವಲಸೆ ಆಗುತ್ತದೆ. ವಿವಾಹ, ಉದ್ಯೋಗ ಮೊದಲಾದ ಅಂಶಗಳೂ ವಲಸೆಗೆ ಕಾರಣವಾಗಿವೆ. ಮುಂದಿನ ಕೋಷ್ಟಕದಲ್ಲಿ, ೨೦೦೧ರ ಜನಗಣತಿಯಂತೆ ಇತರೆಡೆಗಳಲ್ಲಿ ಹುಟ್ಟಿ ಚಾಮರಾಜನಗರ ಜಿಲ್ಲೆಯಲ್ಲಿ ಗಣತಿಯಾದವರ ಸಂಖ್ಯೆಯನ್ನು ನೀಡಲಾಗಿದೆ.

## ಸ್ತ್ರೀ – ಪುರುಷರ ಪ್ರಮಾಣ

ಸ್ತ್ರೀ–ಪುರುಷರ ಪ್ರಮಾಣವೆಂದರೆ ಪ್ರತೀ ಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆ. ಸ್ತ್ರೀ–ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯ, ವೈವಾಹಿಕ ಸ್ಥಾನಮಾನ, ಜನರ ವಲಸೆ, ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ೧೯೯೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯು ೮,೮೩,೩೦೦(೪.೫೨.೪೦೦ ಪುರುಷರು ಹಾಗೂ ೪,೩೦,೯೦೦ ಮಹಿಳೆಯರು) ಆಗಿದ್ದು ಸ್ತ್ರೀ–ಪುರುಷರ ಪ್ರಮಾಣವು ೯೫೩ ಆಗಿದ್ದಿತು. ೨೦೦೧ರಲ್ಲಿ ಜಿಲ್ಲೆಯ ಜನಸಂಖ್ಯೆಯು ೯,೬೫,೪೬೨ (೪,೮೯,೯೪೦ ಪುರುಷರು ಹಾಗೂ ೪,೭೫,೫೨೨) ಇದ್ದು, ಸ್ತ್ರೀ–ಪುರುಷರ ಪ್ರಮಾಣವು ಸರಾಸರಿ ೯೭೧ (ಗ್ರಾಮೀಣ –೯೭೧ ಹಾಗೂ ನಗರ – ೯೭೦) ಇದ್ದು, ರಾಜ್ಯದ ಸ್ತ್ರೀ–ಪುರುಷರ ಪ್ರಮಾಣ(೯೬೫)ಕ್ಕಿಂತ ಹೆಚ್ಚಾಗಿತ್ತು . ಅದೇ ೨೦೧೧ರ ಜನಗಣತಿಯಲ್ಲಿ ಜಿಲ್ಲೆಯ ಜನಸಂಖ್ಯೆಯು ೧೦,೨೦,೯೬೨ (೫,೧೩,೩೫೯ ಪುರುಷರು ಹಾಗೂ ೫,೦೭,೬೦೩ ಮಹಿಳೆಯರು) ಇದ್ದು, ಜಿಲ್ಲೆಯಲ್ಲಿನ ಸ್ತ್ರೀ–ಪುರುಷರ ಸರಾಸರಿ ಪ್ರಮಾಣವು ೯೮೯(ಗ್ರಾಮೀಣ – ೯೮೭ ಹಾಗೂ ನಗರ – ೯೯೯) ಇದ್ದು, ರಾಜ್ಯದ ಸ್ತ್ರೀ–ಪುರುಷರ ಪ್ರಮಾಣ(೯೬೮)ಕ್ಕಿಂತ ಹೆಚ್ಚಾಗಿರುವುದು ಉಲ್ಲೇಖಾರ್ಹವಾಗಿದ್ದು, ರಾಜ್ಯದಲ್ಲಿ ಜಿಲ್ಲೆಯು ೧೪ನೆಯ ಸ್ಥಾನದಲ್ಲಿತ್ತು. ಈ ಮುಂದಿನ ಕೋಷ್ಟಕ ೩.೧೦ರಲ್ಲಿ ಜಿಲ್ಲೆಯಲ್ಲಿನ ಸ್ತ್ರೀ–ಪುರುಷರ ಪ್ರಮಾಣವನ್ನು ೧೯೦೧ರ ದಶಕದಿಂದ ೨೦೧೧ರವರೆವಿಗೆ (೨೦೧೧ರ ತಾತ್ಕಾಲಿಕ ಅಂಕಿ–ಅಂಶ ) ನೀಡಲಾಗಿದೆ.

**ಕೋಷ್ಟಕ ೩.೧೦ ಸ್ತ್ರೀ–ಪುರುಷರ ಪ್ರಮಾಣ (೧೯೦೧–೨೦೧೧)**

| | ೧೯೦೧–೧೧ | ೧೯೧೧–೨೧ | ೧೯೨೧–೩೧ | ೧೯೩೧–೪೧ | ೧೯೪೧–೫೧ | ೧೯೫೧–೬೧ | ೧೯೬೧–೭೧ | ೧೯೭೧–೮೧ | ೧೯೮೧–೯೧ | ೧೯೯೧–೨೦೦೧ | ೨೦೦೧–೧೧ | ೨೦೧೧ |
|---|---|---|---|---|---|---|---|---|---|---|---|---|
| **ಜಿಲ್ಲೆ** | ೧೦೨೪ | ೧೦೧೫ | ೧೦೦೭ | ೯೯೮ | ೯೭೫ | ೯೭೮ | ೯೬೮ | ೯೫೫ | ೯೫೬ | ೯೫೩ | ೯೭೧ | ೯೮೯ |
| **ರಾಜ್ಯ** | ೯೮೩ | ೯೮೧ | ೯೬೯ | ೯೬೫ | ೯೬೦ | ೯೬೬ | ೯೫೯ | ೯೫೭ | ೯೬೩ | ೯೬೮ | ೯೮೯ | ೯೬೮ |

## ವಯೋಮಾನದಂತೆ ವಿಂಗಡಣೆ

ವಯೋಮಾನದಂತೆ ಜನತೆಯನ್ನು ವಿಂಗಡಿಸುವುದು ಜನತೆಯ ಲಕ್ಷಣವನ್ನು ಸೂಚಿಸುವ ಒಂದು ಮುಖ್ಯ ಸಾಮಾಜಿಕ ಪ್ರಕ್ರಿಯೆ. ಈ ವಿಂಗಡಣೆಯಿಂದ ದುಡಿಯುವ ವಯಸ್ಸಿನವರನ್ನೂ ದುಡಿಯಲು ಸಾಧ್ಯವಿಲ್ಲದವರ ಸಂಖ್ಯೆಯನ್ನೂ ತಿಳಿಯಲು ಸಾಧ್ಯವಾಗುತ್ತದೆ. ದೇಶದ ಜನಶಕ್ತಿಯನ್ನು ತಿಳಿಯಲು ಸಹ ಇದು ನೆರವಾಗುತ್ತದೆ. ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ಹಾಗೂ ೬೦ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ವೃತ್ತಿ ಯೋಗ್ಯರೆಂದು ಪರಿಗಣಿಸುವುದಿಲ್ಲ. ಕೋಷ್ಟಕ ೩.೧೧ರಲ್ಲಿ ಆರು ವರ್ಷದೊಳಗಿನ ಮಕ್ಕಳ ಜನಸಂಖ್ಯಾ ವಿವರವನ್ನು ನೀಡಲಾಗಿದೆ.

**ಕೋಷ್ಟಕ ೩.೧೧: ೨೦೦೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿದ್ದ ೦–೬ ವರ್ಷದೊಳಗಿನ ಮಕ್ಕಳು**

| ತಾಲೂಕು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ೭೮ | ೭೯ | ೮೦ | ೮೧ | ೮೨ | ೮೩ | ೮೪ | ೮೫ | ೮೬ |
| ಚಾಮರಾಜನಗರ | ೩೧೪೭೫ | ೧೫೬೮೯ | ೧೫೭೮೬ | ೭೫೨೧ | ೩೮೩೩ | ೩೬೮೮ | ೩೮೯೯೬ | ೧೯೫೨೨ | ೧೯೪೭೪ |
| ಗುಂಡ್ಲುಪೇಟೆ | ೨೦೭೧೪ | ೧೦೫೫೬ | ೧೦೧೫೮ | ೩೧೯೩ | ೧೬೫೨ | ೧೫೪೧ | ೨೩೯೦೭ | ೧೨೨೦೮ | ೧೧೬೯೯ |
| ಕೊಳ್ಳೇಗಾಲ | ೩೭೧೬೩ | ೧೯೨೦೧ | ೧೭೯೬೨ | ೫೫೬೪ | ೨೮೧೬ | ೨೭೪೮ | ೪೨೭೨೭ | ೨೨೦೧೭ | ೨೦೭೧೦ |
| ಯಳಂದೂರು | ೮೩೫೩ | ೪೨೭೩ | ೪೦೮೦ | ೯೫೪ | ೪೯೧ | ೪೬೩ | ೯೩೦೭ | ೪೭೬೪ | ೪೫೪೩ |
| ಜಿಲ್ಲಾ ಮೊತ್ತ | ೯೭೭೦೫ | ೪೯೭೧೯ | ೪೭೯೮೬ | ೧೭೨೩೨ | ೮೭೯೨ | ೮೪೪೦ | ೧೧೪೯೩೭ | ೫೮೫೧೧ | ೫೬೪೨೬ |

*ಮೂಲ: ೨೦೦೧ರ ಜನಗಣತಿ*

## ವೈವಾಹಿಕ ಸ್ಥಿತಿ

ಜನಗಣತಿಯಲ್ಲಿ ವೈವಾಹಿಕ ಸ್ಥಿತಿಯ ಆಧಾರದ ಮೇಲೆ ವಿವಾಹಿತರು, ಅವಿವಾಹಿತರು, ವಿಚ್ಛೇದನ ಪಡೆದವರು, ಬೇರೆಯಾದವರು, ವಿಧುರರು ಮತ್ತು ವಿಧವೆಯರು ಎಂಬುದಾಗಿ ವಿಂಗಡಿಸುತ್ತಾರೆ. ಈ ವಿಂಗಡಣೆಯಿಂದ ಬಾಲ್ಯ ವಿವಾಹ, ವಿಧವಾ ವಿವಾಹ ಮೊದಲಾದ ವೈವಾಹಿಕ ಸ್ಥಿತಿಗತಿಗಳನ್ನು ತಿಳಿಯಬಹುದಲ್ಲದೇ ಈ ಅಂಶಗಳು ಜಿಲ್ಲೆಯ ಸಾಮಾಜಿಕ ಜೀವನದ ಬಗ್ಗೆ ತಿಳಿಯಲೂ ನೆರವಾಗುತ್ತವೆ. ಕೋಷ್ಟಕ ೩.೧೨ರಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಪೂರಕ ಅಂಕಿ–ಅಂಶಗಳನ್ನು ನೀಡಲಾಗಿದೆ.

**ಕೋಷ್ಟಕ ೩.೧೨: ಜಿಲ್ಲೆಯಲ್ಲಿದ್ದ ಜನಸಂಖ್ಯೆಯ ವೈವಾಹಿಕ ಸ್ಥಿತಿ ವಿವರ (೨೦೦೧ ರ ಜನಗಣತಿಯಂತೆ)**

| ವೈವಾಹಿಕ ಸ್ಥಿತಿ | ಒಟ್ಟು | ಗ್ರಾಮೀಣ | ನಗರ |
|---|---|---|---|
| ವಿವಾಹವಾಗದಿರುವವರು | ೪,೪೩,೫೪೬ | ೩,೭೦,೭೩೬ | ೭೨,೮೧೦ |
| ವಿವಾಹಗೊಂಡಿರುವವರು | ೪,೬೨,೫೯೭ | ೩,೯೬,೦೪೭ | ೬೬,೫೫೦ |
| ವಿಧವೆ/ವಿಧುರ | ೫೫,೪೫೩ | ೪೭,೦೮೭ | ೮,೩೬೬ |
| ವಿಚ್ಛೇಧನ/ಪ್ರತ್ಯೇಕಗೊಂಡವರು | ೩,೬೬೬ | ೩,೫೦೨ | ೩೬೪ |
| ಅನಿರ್ದಿಷ್ಟ | – | – | – |
| ಒಟ್ಟು | ೯,೬೫,೪೬೨ | ೮,೧೭,೭೩೬ | ೧,೪೮,೦೯೦ |

## ಜೀವಿತಾವಧಿ

ಯಾವುದೇ ಪ್ರದೇಶದ ಜನರ ಜೀವಿತಾವಧಿ ಅವರ ಆರೋಗ್ಯ,. ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ಹಿನದನೆಲೆಯಲ್ಲಿ ಆಯಾ ಪ್ರದೇಶದ ಜನರ ಜೀವಿತಾವಧಿಯನ್ನು ಆಧರಿಸಿ, ಈ ಸ್ಥಳೀಯ ಅಗತ್ಯಗಳಿಗನುಗುಣವಾಗಿ ಜನರ ಜೀವಿತಾವಧಿಯನ್ನು ವೃದ್ಧಿಸಲು ಉತ್ತಮ ಆರೋಗ್ಯ ವ್ಯವಸ್ಥೆ, ಆಹಾರಗಳಲ್ಲಿನ ಪೌಷ್ಠಿಕಾಂಶವನ್ನು ಸುಧಾರಿಸುವುದೇ ಮುಮತಾದ ಕ್ರಮ ಕೈಗೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನರ ಸರಾಸರಿ ಜೀವಿತಾವಧಿ ಅಂಕಿ-ಅಂಶವನ್ನು ನೀಡಲಾಗಿದೆ.

**ಕೋಷ್ಟಕ ೩.೧೩: ಜಿಲ್ಲೆಯ ಜನರ ಸರಾಸರಿ ಜೀವಿತಾವಧಿ**

| | ೧೯೯೧-೯೨ | | | ೨೦೦೧-೦೨ | | |
|---|---|---|---|---|---|---|
| ಚಾಮರಾಜನಗರ | ಸರಾಸರಿ | ಪುರುಷ | ಮಹಿಳೆ | ಸರಾಸರಿ | ಪುರುಷ | ಮಹಿಳೆ |
| | ೬೨.೫ | ೬೧.೫ | ೬೩.೫ | ೬೩.೫ | ೬೨.೫ | ೬೪.೫ |

## ಗ್ರಾಮೀಣ ಜನತೆ

ಹಳ್ಳಿಗಳಲ್ಲಿ ವಾಸ ಮಾಡುವ ಜನರನ್ನು 'ಗ್ರಾಮೀಣ ಜನತೆ' ಎನ್ನಲಾಗುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯು ಪಟ್ಟಣ ಪ್ರದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಈ ಅಂಶವು ಚಾಮರಾಜನಗರ ಜಿಲ್ಲೆಗೂ ಅನ್ವಯವಾಗುತ್ತದೆ. ೧೯೯೧ರ ಜನಗಣತಿಯ ಪ್ರಕಾರ, ಅಂದಿನ ಮೈಸೂರು ಜಿಲ್ಲೆಯಲ್ಲಿದ್ದ ಇಂದಿನ ಚಾಮರಾಜನಗರ ಪ್ರದೇಶದ ಗ್ರಾಮೀಣ ಜನಸಂಖ್ಯೆಯು ೭,೫೯,೬೦೦ ಇದ್ದು, ಇದು ಒಟ್ಟಿನ ಜನಸಂಖ್ಯೆಯ ಶೇ.೮೬ರಷ್ಟಾಗಿತ್ತು. ತಾಲೂಕುವಾರು ಅಂಕಿಅಂಶಗಳನ್ನು ಗಮನಿಸಿದರೆ, ಚಾಮರಾಜನಗರ(೨,೬೬,೮೦೦) ಮತ್ತು ಕೊಳ್ಳೇಗಾಲ (೨,೫೭,೦೦) ತಾಲೂಕುಗಳಲ್ಲಿ ಗ್ರಾಮೀಣ ಜನಸಂಖ್ಯೆಯು ಅಧಿಕವಾಗಿದ್ದು, ನಂತರದ ಸ್ಥಾನದಲ್ಲಿ ಕ್ರಮವಾಗಿ ಗುಂಡ್ಲುಪೇಟೆ(೧,೭೧,೮೦೦) ಹಾಗೂ ಯಳಂದೂರು(೬೪,೦೦೦) ತಾಲೂಕುಗಳಿದ್ದು, ಕಸಬಾ(ಚಾಮರಾಜನಗರ) ತಾಲೂಕಿನಲ್ಲಿ ಗ್ರಾಮೀಣ ಜನಸಂಖ್ಯೆಯು ಅತ್ಯಂತ ಹೆಚ್ಚಿಗಿರುವುದನ್ನು (ಶೇ.೩೦%) ಗಮನಿಸಬಹುದಾಗಿತ್ತು. ಅದೇ, ೨೦೦೧ರ ಜನಗಣತಿ ಪ್ರಕಾರ, ಜಿಲ್ಲೆಯ ಒಟ್ಟು ಗ್ರಾಮೀಣ ಜನಸಂಖ್ಯೆಯು ೮,೧೭,೭೩೨ ಅಗಿದ್ದು, ಕೊಳ್ಳೇಗಾಲ ಹಾಗೂ ಕಸಬಾ(ಚಾಮರಾಜನಗರ) ತಾಲೂಕುಗಳು ೨,೮೪,೨೩೧ ಹಾಗೂ ೨,೭೭,೦೧೩ ಜನಸಂಖ್ಯೆಯೊಂದಿಗೆ ಮೊದಲೆರಡು ಸ್ಥಾನಗಳನ್ನು ಪಡೆದಿದ್ದರೆ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳು ೧,೮೬,೭೪೨ ಹಾಗೂ ೬೯,೩೮೬ ಜನಸಂಖ್ಯೆಯೊಂದಿಗೆ ನಂತರದ ಸ್ಥಾನದಲ್ಲಿದ್ದವು. ಈ ಜನಸಂಖ್ಯೆಯು ಜಿಲ್ಲೆಯ ಹದಿನಾರು ಹೋಬಳಿಗಳಲ್ಲಿರುವ ೫೧೨(೪೪೬ ವಸತಿ ಹಾಗೂ ೬೬ ನಿರ್ವಸತಿ) ಕಂದಾಯ ಗ್ರಾಮ, ೪೬೧ ದಾಖಲೆ(ಉಪ)ಗ್ರಾಮ ಮತ್ತು ನಾಲ್ಕು ಪಟ್ಟಣಗಳಲ್ಲಿ ಹಂಚಿಹೋಗಿತ್ತು. ೨೦೧೧ರ ಜನಗಣತಿಯಂತೆ ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯು ೮,೪೫,೬೯ (೪,೨೫,೬೮೦ ಪುರುಷರು ಹಾಗೂ ೪,೧೯,೮೯ ಮಹಿಳೆಯರು) ಇದ್ದಿತು. ಈ ಮುಂದಿನ ಕೋಷ್ಟಕ ೩.೧೪ರಲ್ಲಿ ೧೯೯೧ ಹಾಗೂ ೨೦೦೧ರ ಜನಗಣತಿಯಂತೆ ವಿವಿಧ ಶ್ರೇಣಿಗಳ ಗ್ರಾಮೀಣ ಜನಸಂಖ್ಯೆ ಹಾಗೂ ಗ್ರಾಮಗಳ ಸಂಖ್ಯೆಯನ್ನು ಹಾಗೂ ಕೋಷ್ಟಕ ೩.೧೫ರಲ್ಲಿ ೨೦೦೧ರ ಗಣತಿಯ ಅಂಕಿ-ಅಂಶಗಳನ್ನು ತಾಲೂಕುವಾರು ನೀಡಲಾಗಿದೆ.

ಕೋಷ್ಟಕ ೩.೧೪ ಗ್ರಾಮೀಣ ಜನಸಂಖ್ಯೆ – ಜನಸಂಖ್ಯೆ ಪ್ರಮಾಣದ ಅನ್ವಯ ಗ್ರಾಮಗಳ ತಾಲೂಕುವಾರು ವರ್ಗೀಕರಣ (೧೯೯೧ ಹಾಗೂ ೨೦೦೧ ರ ಜನಗಣತಿ)

| ತಾಲ್ಲೂಕು | ಒಟ್ಟು ವಸತಿ ಗ್ರಾಮಗಳು | ಗ್ರಾಮೀಣ ಜನಸಂಖ್ಯೆ | | | ೨೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳು | ೨೦೦ ರಿಂದ ೪೯೯ ರ ವರೆಗೆ ಜನಸಂಖ್ಯೆ ಇರುವ ಗ್ರಾಮಗಳು | ೫೦೦ ರಿಂದ ೯೯೯ ರ ವರಗೆ ಜನಸಂಖ್ಯೆ ಇರುವ ಗ್ರಾಮಗಳು | ೧೦೦೦ ರಿಂದ ೧೯೯೯ ರ ವರಗೆ ಜನಸಂಖ್ಯೆ ಇರುವ ಗ್ರಾಮಗಳು | ೨೦೦೦ ರಿಂದ ೪೯೯೯ರ ವರೆಗಿನ ಜನಸಂಖ್ಯೆ ಇರುವ ಗ್ರಾಮಗಳು | ೫೦೦೦ ರಿಂದ ೯೯೯೯ ರ ವರೆಗಿನ ಜನಸಂಖ್ಯೆ ಇರುವ ಗ್ರಾಮಗಳು | ೧೦೦೦೦ ಹಾಗೂ ಅದರ ಮೇಲ್ಪಟ್ಟು ಜನಸಂಖ್ಯೆ ಇರುವ ಗ್ರಾಮಗಳು |
|---|---|---|---|---|---|---|---|---|---|---|---|
| | | ಒಟ್ಟು | ಗಂಡು | ಹೆಣ್ಣು | | | | | | | |
| ೧೯೯೧ ರ ಜನಗಣತಿಯಂತೆ | | | | | | | | | | | |
| ಚಾಮರಾಜನಗರ | ೧೭೩ | ೨,೬೬,೮೪೫ | ೧,೩೬,೧೧೮ | ೧,೩೦,೭೨೭ | ೨೫ | ೨೧ | ೩೦ | ೪೫ | ೪೭ | ೫ | – |
| ಗುಂಡ್ಲುಪೇಟೆ | ೧೪೪ | ೧,೭೧,೭೭೨ | ೮೬,೪೮೪ | ೮೫,೨೮೮ | ೨೭ | ೨೪ | ೩೦ | ೩೧ | ೩೦ | ೨ | – |
| ಕೊಳ್ಳೇಗಾಲ | ೧೦೩ | ೨,೫೭,೦೩೬ | ೧,೩೨,೮೦೯ | ೧,೨೪,೨೨೭ | ೧೯ | ೦೧ | ೧೬ | ೧೯ | ೩೦ | ೧೬ | – |
| ಯಳಂದೂರು | ೨೬ | ೬೪,೦೩೭ | ೩೨,೬೫೭ | ೩೧,೩೮೦ | ೦೧ | ೦೯ | ೦೫ | ೦೮ | ೦೬ | ೦೩ | ೧ |
| | | | | | | | | | | | |
| ೨೦೦೧ ರ ಜನಗಣತಿಯಂತೆ | | | | | | | | | | | |
| ಚಾಮರಾಜನಗರ | ೧೭೧ | ೨,೭೭,೦೧೩ | ೧,೩೯,೫೯೩ | ೧,೩೭,೪೨೦ | ೨೨ | ೨೨ | ೩೦ | ೪೫ | ೪೬ | ೬ | – |
| ಗುಂಡ್ಲುಪೇಟೆ | ೧೪೦ | ೧,೮೬,೭೪೨ | ೯೩,,೯೮೧ | ೯೨.೭೬೧ | ೨೨ | ೧೮ | ೨೫ | ೪೦ | ೩೩ | ೨ | – |
| ಕೊಳ್ಳೇಗಾಲ | ೮೫ | ೨,೮೪,೨೩೧ | ೧,೪೫,೯೪೨ | ೧,೩೮,೨೮೯ | ೧ | ೪ | ೯ | ೨೦ | ೩೦ | ೧೮ | ೩ |
| ಯಳಂದೂರು | ೨೮ | ೬೯,೩೮೬ | ೩೫,೨೬೭ | ೩೪,೧೧೯ | ೧ | ೨ | ೩ | ೧೦ | ೭ | ೫ | – |
| **ಒಟ್ಟು** | **೪೨೪** | **೮,೧೭,೩೭೨** | **೪,೧೪,೭೮೩** | **೪,೦೨,೫೮೯** | **೪೬** | **೪೬** | **೬೭** | **೧೧೫** | **೧೧೬** | **೩೧** | **೩** |

## ಕೋಷ್ಟಕ ೩.೧೫: ೨೦೦೧ ರ ಜನಗಣತಿ ಪ್ರಕಾರ ಜನಸಂಖ್ಯಾವಾರು ವಸತಿ ಗ್ರಾಮಗಳ ವಿಂಗಡಣೆ

| ಕ್ರ. ಸಂ. | ತಾಲೂಕು | ವಾಸ್ತವ್ಯ ಯೋಗ್ಯವಾದ ಒಟ್ಟು ಹಳ್ಳಿಗಳ ಸಂಖ್ಯೆ | ಒಟ್ಟು ಗ್ರಾಮೀಣ ಜನಸಂಖ್ಯೆ | | | ಶೇಕಡವಾರು ಹಳ್ಳಿಗಳ ಸಂಖ್ಯೆ | ೨೦೦ ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವುದು | |
|---|---|---|---|---|---|---|---|---|
| | | | ಒಟ್ಟು | ಪುರುಷ | ಮಹಿಳೆ | | ಪುರುಷ | ಮಹಿಳೆ |
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧ | ಗುಂಡ್ಲುಪೇಟೆ | ೧೪೦ | ೧,೮೬,೭೪೨ | ೯೩,೯೮೧ | ೯೨,೭೬೧ | ೨೨(೧೫.೭) | ೬೮೧ | ೫೯೩ |
| ೨ | ಚಾಮರಾಜ ನಗರ | ೧೭೧ | ೨,೭೭,೦೧೩ | ೧,೩೯,೫೯೩ | ೧,೩೭,೪೨೦ | ೨೨(೧೨.೯) | ೮೪೭ | ೭೬೨ |
| ೩ | ಯಳಂದೂರು | ೨೮ | ೬೯,೩೮೬ | ೩೫,೨೬೭ | ೩೪,೧೧೯ | ೧(೩.೬) | ೭೧ | ೭೦ |
| ೪ | ಕೊಳ್ಳೇಗಾಲ | ೮೫ | ೨,೮೪,೨೩೧ | ೧,೪೫,೯೪೨ | ೧,೩೮,೨೮೯ | ೧(೧.೨) | ೩೦ | ೨೪ |
| | **ಒಟ್ಟು** | **೪೨೪** | **೮,೧೭,೩೭೨** | **೪,೧೪,೭೮೩** | **೪,೦೨,೫೮೯** | **೪೬(೧೦.೮)** | **೧,೬೨೯** | **೧,೪೮೯** |

| ಶೇಕಡವಾರು ಹಳ್ಳಿಗಳ ಸಂಖ್ಯೆ | ಜನಸಂಖ್ಯೆ ೨೦೦–೪೯೯ | | ಶೇಕಡವಾರು ಹಳ್ಳಿಗಳ ಸಂಖ್ಯೆ | ಜನಸಂಖ್ಯೆ ೫೦೦–೯೯೯ | | ಶೇಕಡವಾರು ಹಳ್ಳಿಗಳ ಸಂಖ್ಯೆ | ಜನಸಂಖ್ಯೆ ೧,೦೦೦–೧,೯೯೯ | |
|---|---|---|---|---|---|---|---|---|
| | ಪುರುಷ | ಮಹಿಳೆ | | ಪುರುಷ | ಮಹಿಳೆ | | ಪುರುಷ | ಮಹಿಳೆ |
| ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ | ೧೮ |
| ೧೮(೧೨.೯) | ೩,೨೧೦ | ೩,೦೯೩ | ೨೫(೧೭.೯) | ೮,೯೫೬ | ೮,೭೮೨ | ೪೦(೨೮.೬) | ೨೬,೧೪೫ | ೨೫,೯೪೮ |
| ೨೨(೧೨.೯) | ೪,೦೬೦ | ೪,೦೫೭ | ೩೦(೧೭.೫) | ೧೧,೯೨೧ | ೧೧,೬೮೧ | ೪೫(೨೬.೩) | ೩೨,೨೮೧ | ೩೧,೬೬೮ |
| ೨(೭.೧) | ೩೫೮ | ೩೨೮ | ೩(೧೦.೭) | ೧,೧೨೯ | ೧,೧೪೨ | ೧೦(೩೫.೭) | ೭,೧೦೬ | ೬,೮೬೦ |
| ೪(೪.೭) | ೯೨೯ | ೮೩೪ | ೯(೧೦.೬) | ೩,೩೯೮ | ೩,೧೬೧ | ೨೦(೨೩.೫) | ೧೪,೯೨೫ | ೧೪,೩೮೬ |
| **೪೬(೧೦.೮)** | **೮,೫೫೭** | **೮,೩೧೨** | **೬೭(೧೫.೮)** | **೨೫,೪೦೪** | **೨೪,೭೬೬** | **೧೧೫(೨೭.೧)** | **೮೦,೪೫೭** | **೭೮,೮೬೨** |

| ಶೇಕಡವಾರು ಹಳ್ಳಿಗಳ ಸಂಖ್ಯೆ | ಜನಸಂಖ್ಯೆ ೨,೦೦೦–೪,೯೯೯ | | ಶೇಕಡವಾರು ಹಳ್ಳಿಗಳ ಸಂಖ್ಯೆ | ಜನಸಂಖ್ಯೆ ೫,೦೦೦–೯,೯೯೯ | | ಶೇಕಡವಾರು ಹಳ್ಳಿಗಳ ಸಂಖ್ಯೆ ಪುರುಷ | ಜನಸಂಖ್ಯೆ ೧೦,೦೦೦ಕ್ಕಿಂತ ಮೇಲ್ಪಟ್ಟ | |
|---|---|---|---|---|---|---|---|---|
| | ಪುರುಷ | ಮಹಿಳೆ | | ಪುರುಷ | ಮಹಿಳೆ | | ಪುರುಷ | ಮಹಿಳೆ |
| ೧೯ | ೨೦ | ೨೧ | ೨೨ | ೨೩ | ೨೪ | ೨೫ | ೨೬ | ೨೭ |
| ೩೩(೨೩.೬) | ೪೮,೨೫೬ | ೪೭,೭೪೩ | ೨(೧.೪) | ೬,೭೩೩ | ೬,೬೦೨ | –(೦.೦) | – | – |
| ೪೬(೨೬.೯) | ೭೨,೩೨೩ | ೭೧,೨೩೯ | ೬(೩.೫) | ೧೮,೧೬೧ | ೧೮,೦೧೩ | –(೦.೦) | – | – |
| ೭(೨೫.೦) | ೧೨,೦೫೭ | ೧೧,೫೧೭ | ೫(೧೭.೯) | ೧೪,೫೪೬ | ೧೪,೨೦೨ | –(೦.೦) | – | – |
| ೩೦(೩೫.೩) | ೪೩,೫೬೮ | ೪೧,೮೪೨ | ೧೮(೨೧.೨) | ೬೪,೨೬೦ | ೬೦,೫೧೩ | ೩(೩.೫) | ೧೮,೮೩೨ | ೧೭,೫೨೯ |
| **೧೧೬(೨೭.೪)** | **೧,೭೬,೨೦೪** | **೧,೭೨,೩೪೧** | **೩೧(೭.೩)** | **೧,೦೩,೭೦೦** | **೯೯,೩೩೦** | **೩(೦.೭)** | **೧೮,೮೩೨** | **೧೭,೫೨೯** |

## ಪಟ್ಟಣಗಳ ಜನಸಂಖ್ಯೆ ಹಾಗೂ ಬೆಳವಣಿಗೆ

ಪಟ್ಟಣ ಮತ್ತು ನಗರಗಳ ಬೆಳವಣಿಗೆಯನ್ನು 'ನಗರೀಕರಣ' ಎಂದು ಕರೆಯುತ್ತಾರೆ. ನಗರೀಕರಣವು ಒಂದು ಪ್ರಮುಖ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುವ ಅಂಶವೂ ಆಗಿದೆ. ಪಟ್ಟಣವನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಜನಗಣತಿಯಲ್ಲಿ ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಅದರಂತೆ ಪಟ್ಟಣಗಳ ಕನಿಷ್ಠ ಜನಸಂಖ್ಯೆ ಐದು ಸಾವಿರ ಇರಬೇಕು. ಶೇ.೭೫ರಷ್ಟು ಜನ ಕೃಷಿಯೇತರ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀ. ಗೆ ಕನಿಷ್ಟ ೪೦೦ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ (ನೋಟಿಫೈಡ್) ಪ್ರದೇಶಗಳು ಪಟ್ಟಣಗಳ ವ್ಯಾಪ್ತಿಗೆ ಬರುತ್ತವೆ.

೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯ ನಗರ(೧,೨೩,೭೦೦) ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ.೧೪ರಷ್ಟಿದ್ದು, ಕೊಳ್ಳೇಗಾಲ ಪಟ್ಟಣವು ೪೭,೬೦೦ ಜನಸಂಖ್ಯೆಯೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ೪೪,೫೦೦ ಜನಸಂಖ್ಯೆಯೊಂದಿಗೆ ಚಾಮರಾಜನಗರ ಪಟ್ಟಣವು ದ್ವಿತೀಯ ಸ್ಥಾನದಲ್ಲಿತ್ತು. ಗುಂಡ್ಲುಪೇಟೆ ಪಟ್ಟಣ ೨೩,೯೦೦ ಹಾಗೂ ಯಳಂದೂರು ಪಟ್ಟಣ ೭,೭೦೦ ಜನಸಂಖ್ಯೆಯೊಂದಿಗೆ ನಂತರದ ಸ್ಥಾನದಲ್ಲಿದ್ದವು. ಅದೇ, ೨೦೦೧ರಲ್ಲಿ ಜಿಲ್ಲೆಯ ನಗರ ಜನಸಂಖ್ಯೆಯು (೧,೪೦,೯೮೦) ಶೇ. ೧೫.೩೩ಕ್ಕೆ ಹೆಚ್ಚಿತು. ೨೦೦೧ರ ಗಣತಿ ಪ್ರಕಾರ, ಆ ವೇಳೆಗೆ ಜಿಲ್ಲಾಕೇಂದ್ರವಾಗಿದ್ದ ಚಾಮರಾಜನಗರ ಪಟ್ಟಣದ ಜನಸಂಖ್ಯೆಯು ೬೦,೫೫೮ ಕ್ಕೆ ಹೆಚ್ಚಳಗೊಂಡರೆ, ೫೨,೬೦೭ ಜನಸಂಖ್ಯೆಯನ್ನು ಹೊಂದಿದ್ದ ಕೊಳ್ಳೇಗಾಲ ಪಟ್ಟಣವು ಎರಡನೆಯ ಸ್ಥಾನಕ್ಕಿಳಿಯಿತು. ಆನಂತರದ ಸ್ಥಾನಗಳು ಕ್ರಮವಾಗಿ ಗುಂಡ್ಲುಪೇಟೆ (೨೬,೩೪೦) ಹಾಗೂ ಯಳಂದೂರು (೮,೫೮೫) ಪಟ್ಟಣಗಳ ಪಾಲಾಗಿತ್ತು. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ನಗರ ಜನಸಂಖ್ಯೆಯು ೧,೭೫,೨೯೩ (೮೭,೬೭೯ ಪುರುಷರು ಹಾಗೂ ೮೭,೬೧೪ ಮಹಿಳೆಯರು)ಆಗಿತ್ತು. ಚಾಮರಾಜ ನಗರ ಪಟ್ಟಣದ ಜನಸಂಖ್ಯೆಯು ೬೯,೯೫೯ಕ್ಕೆ(೩೪,೯೦೩ ಪುರುಷರು ಹಾಗೂ ೩೫,೦೫೬ ಮಹಿಳೆಯರು) ಹೆಚ್ಚಳಗೊಂಡರೆ, ಕೊಳ್ಳೇಗಾಲ ಪಟ್ಟಣದ ಜನಸಂಖ್ಯೆಯು ೬೮,೩೮೧(೩೪,೩೪೬ ಪುರುಷರು ಹಾಗೂ ೩೪,೦೪೫ ಮಹಿಳೆಯರು)ಕ್ಕೂ, ಗುಂಡ್ಲುಪೇಟೆ ಪಟ್ಟಣದ ಜನಸಂಖ್ಯೆಯು ೨೮,೧೫೪(೧೪,೦೧೩ ಪುರುಷರು ಹಾಗೂ ೧೨,೧೪೧ ಮಹಿಳೆಯರು)ಕ್ಕೂ ಹಾಗೂ ಯಳಂದೂರು ಪಟ್ಟಣದ ಜನಸಂಖ್ಯೆಯು ೮,೭೨೯(೪,೪೧೭ ಪುರುಷರು ಹಾಗೂ ೪,೩೭೨ ಮಹಿಳೆಯರು) ಕ್ಕೂ ಅಧಿಕಗೊಂಡಿತ್ತು. ಅದರಲ್ಲೂ ಚಾಮರಾಜನಗರ ಹಾಗೂ ಕೊಳ್ಳೇಗಾಲ ಪಟ್ಟಣಗಳಲ್ಲಿನ ಪುರುಷ–ಮಹಿಳೆಯರ ಸಂಖ್ಯೆಯಲ್ಲಿ ಕಂಡುಬರುವ ಅಲ್ಪ ವ್ಯತ್ಯಾಸವು ಉಲ್ಲೇಖಾರ್ಹವಾಗಿದೆ.

೧೯೦೧ ರಿಂದ ೨೦೦೧ರವರೆಗಿನ ದಶಕ ಗಳಲ್ಲಿ ಜಿಲ್ಲೆಯಲ್ಲಿದ್ದ ಪಟ್ಟಣಗಳ ಸಂಖ್ಯೆ, ಜನಸಂಖ್ಯೆ, ಪಟ್ಟಣಗಳ ಜನಸಂಖ್ಯೆಯಲ್ಲಾದ ವ್ಯತ್ಯಾಸ ಹಾಗೂ ಈ ಬೆಳವಣಿಗೆಯ ಶತಾಂಶ ಮತ್ತು ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶದ ವಿವರಗಳಿಗೆ ಇದೇ ಗ್ರಂಥದ ಅಧ್ಯಾಯ ೮ ( ಆರ್ಥಿಕ ಪ್ರವೃತ್ತಿಗಳು) ರಲ್ಲಿ ಕೋಷ್ಟಕ ೮.೫ ನೋಡಿ.

## ಪರಿಶಿಷ್ಟ ಜಾತಿ

ಭಾರತೀಯ ಸಂವಿಧಾನದ ೩೪೧ನೇ ವಿಧಿಯಲ್ಲಿ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿ, ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಗಿದೆ. ಭಾರತ ಸರ್ಕಾರವು ಕರ್ನಾಟಕ

ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ರಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ವರ್ಗ (ಬುಡಕಟ್ಟು)ಗಳ ಆಜ್ಞೆಗೆ ತಿದ್ದುಪಡಿಯನ್ನು ತಂದಿದೆ. ೧೯೯೧ರ ಜನಗಣತಿಯಂತೆ ಹಿಂದಿನ ಅವಿಭಜಿತ ಮೈಸೂರು ಜಿಲ್ಲೆಯಲ್ಲಿದ್ದ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿ ೨,೦೬,೧೦೦ ಜನ, ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ, ಶೇ.೨೩.೩೩ ರಷ್ಟಾಗಿರುತ್ತದೆ. ಈ ಶೇಕಡಾಂಶವು ರಾಜ್ಯದ ಶೇಕಡಾಂಶಕ್ಕಿಂತ (ಶೇ.೧೬.೩೮) ಜಾಸ್ತಿಯಿದೆ. ಇವರು ಜಿಲ್ಲೆಯ ಕೊಳ್ಳೇಗಾಲ(೭೭,೩೦೦) ತಾಲೂಕಿನಲ್ಲಿ ಹೆಚ್ಚಾಗಿದ್ದರೆ, ೬೯,೨೦೦ ಜನ ಚಾಮರಾಜನಗರ ತಾಲೂಕಿನಲ್ಲೂ, ೩೫,೮೦೦ ಜನ ಗುಂಡ್ಲುಪೇಟೆ ತಾಲೂಕಿನಲ್ಲೂ, ಹಾಗೂ ಉಳಿದ ೨೩,೮೦೦ ಜನ ಯಳಂದೂರು ತಾಲೂಕಿನಲ್ಲೂ ಹಂಚಿ ಹೋಗಿದ್ದರು. ಅದೇ ೨೦೦೧ರಲ್ಲಿ, ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನಸಂಖ್ಯೆಯು ೨,೩೭,೬೦೦ಕ್ಕೆ ಅಧಿಕಗೊಂಡಿರುವುದು ಗಣತಿಯಿಂದ ವೇದ್ಯವಾಗುತ್ತದೆ. ಈ ಅವಧಿಯಲ್ಲಿ, ಕೊಳ್ಳೇಗಾಲ ತಾಲೂಕು (೯೧,೬೦೦) ಅಗ್ರಸ್ಥಾನದಲ್ಲಿದ್ದರೆ, ಚಾಮರಾಜನಗರ(೭೮,೮೦೦), ಗುಂಡ್ಲುಪೇಟೆ(೪೦,೭೦೦), ಹಾಗೂ ಯಳಂದೂರು (೨೬,೫೦೦) ತಾಲೂಕುಗಳು ನಂತರದ ಸ್ಥಾನದಲ್ಲಿದ್ದವು. ೨೦೧೧ರ ಜನಗಣತಿಯಂತೆ, ಜಿಲ್ಲೆಯಲ್ಲಿ ೨,೫೯,೪೪೫ ಪರಿಶಿಷ್ಟ ಜಾತಿಗೆ ಸೇರಿದ ಜನರಿದ್ದರು.

**ಕೋಷ್ಟಕ ೩.೧೬: ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿಯವರ ಜನಸಂಖ್ಯಾ ವಿವರ( ೧೯೯೧–೨೦೦೧ರ ಜನಗಣತಿ)**

| ತಾಲೂಕು | | ೧೯೯೧ | | | ೨೦೦೧ | | |
|---|---|---|---|---|---|---|---|
| | | ಪುರುಷರು | ಸ್ತ್ರೀಯರು | ಒಟು | ಪುರುಷರು | ಸ್ತ್ರೀಯರು | ಒಟ್ಟು |
| ಕೊಳ್ಳೇಗಾಲ | ಒಟ್ಟು | **೧೦,೫೭೯** | **೧೦,೬೭೮** | **೨೧,೨೫೭** | **೧೩,೧೨೬** | **೧೩,೨೩೧** | **೨೬,೩೫೭** |
| | ಗ್ರಾಮ | ೯,೯೦೨ | ೯,೭೩೧ | ೧೯,೩೩೩ | ೧೧,೭೨೪ | ೧೧,೮೯೬ | ೨೩,೬೨೦ |
| | ನಗರ | ೯೭೭ | ೯೪೭ | ೧,೯೨೪ | ೧,೪೦೨ | ೧,೩೩೫ | ೨,೭೩೭ |
| ಗುಂಡ್ಲುಪೇಟೆ | ಒಟ್ಟು | **೧೫,೭೨೭** | **೧೫,೦೧೫** | **೩೦,೭೪೨** | **೧೮,೭೩೪** | **೧೮,೧೩೦** | **೩೬,೮೬೪** |
| | ಗ್ರಾಮ | ೧೪,೭೨೧ | ೧೩,೯೬೫ | ೨೮,೬೮೬ | ೧೭,೪೫೧ | ೧೬,೮೧೮ | ೩೪,೨೬೯ |
| | ನಗರ | ೧,೦೦೬ | ೧,೦೫೦ | ೨,೦೫೬ | ೧,೨೮೩ | ೧,೩೧೨ | ೨,೫೯೫ |
| ಚಾಮರಾಜನಗರ | ಒಟ್ಟು | **೨೨,೦೭೯** | **೨೧,೨೮೦** | **೪೩,೩೫೯** | **೨೭,೨೪೬** | **೨೫,೮೩೧** | **೫೩,೦೭೭** |
| | ಗ್ರಾಮ | ೧೮,೮೫೭ | ೧೮,೦೧೭ | ೩೬,೮೭೪ | ೨೩,೦೮೭ | ೨೧,೭೭೮ | ೪೪,೮೬೫ |
| | ನಗರ | ೩,೨೨೨ | ೩,೨೬೩ | ೬,೪೮೫ | ೪,೧೫೯ | ೪,೦೫೩ | ೮,೨೧೨ |
| ಯಳಂದೂರು | ಒಟ್ಟು | **೨೧,೨೫೭** | **೨೦,೦೭೯** | **೪೧,೩೩೬** | **೨೬,೧೧೮** | **೨೪,೫೯೪** | **೫೦,೭೧೨** |
| | ಗ್ರಾಮ | ೧೫,೦೮೭ | ೧೪,೫೪೦ | ೨೯,೬೨೭ | ೧೮,೧೨೩ | ೧೭,೪೯೭ | ೩೫,೬೨೦ |
| | ನಗರ | ೬,೧೭೦ | ೫,೫೨೯ | ೧೧,೬೯೯ | ೭,೯೯೫ | ೭,೦೯೭ | ೧೫,೦೯೨ |
| **ಜಿಲ್ಲೆಯ ಒಟ್ಟು** | **ಒಟ್ಟು** | **೯೩,೦೧೬** | **೮೯,೭೯೧** | **೧,೮೨,೮೦೭** | **೧,೧೫,೨೯೬** | **೧,೧೧,೩೩೦** | **೨,೨೬,೬೨೬** |
| | **ಗ್ರಾಮ** | **೭೮,೬೦೪** | **೭೬,೪೦೭** | **೧,೫೫,೦೧೧** | **೯೬,೫೪೬** | **೯೪,೦೦೫** | **೧,೯೦,೫೫೧** |
| | **ನಗರ** | **೧೪,೪೧೨** | **೧೩,೩೮೪** | **೨೭,೭೯೬** | **೧೮,೭೫೦** | **೧೭,೩೨೫** | **೩೬,೦೭೫** |

## ಪರಿಶಿಷ್ಟ ಪಂಗಡ (ಬುಡಕಟ್ಟು)

ಭಾರತ ಸಂವಿಧಾನದ ೩೪೨ನೇ ವಿಧಿಯಂತೆ ಪಟ್ಟಿ ಮಾಡಲಾದ ಜಾತಿ, ಉಪಜಾತಿ ಹಾಗೂ ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳೆಂದು ಕರೆಯಲಾಗಿದೆ. ೧೯೯೧ರ ಜನಗಣತಿಯಂತೆ ಅವಿಭಜಿತ ಮೈಸೂರು ಜಿಲ್ಲೆಯಲ್ಲಿದ್ದ ಇಂದಿನ ಚಾಮರಾಜನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ೩೮,೭೦೦ ಜನರಿದ್ದರು. ಇವರಲ್ಲಿ ೧೯,೬೦೦ ಜನ ಕೊಳ್ಳೇಗಾಲ ತಾಲೂಕಿನಲ್ಲೂ, ೯,೦೦೦ ಜನ ಯಳಂದೂರು ತಾಲೂಕಿನಲ್ಲೂ, ೭,೨೦೦ ಜನ ಚಾಮರಾಜನಗರ ತಾಲೂಕಿನಲ್ಲೂ ಹಾಗೂ ಗುಂಡ್ಲುಪೇಟೆ ತಾಲೂಕಿನಲ್ಲೂ ವಾಸಿಸುತ್ತಿದ್ದರು. ಅದೇ, ೨೦೦೧ ರ ಗಣತಿಯಂತೆ ಜಿಲ್ಲೆಯಲ್ಲಿ ಇವರ ಜನಸಂಖ್ಯೆಯು ೧,೦೬,೧೧೦ಕ್ಕೆ ಏರಿರುವುದು ಉಲ್ಲೇಖಾರ್ಹವಾಗಿದ್ದು, ಕೊಳ್ಳೇಗಾಲ (೩೪,೮೦೦), ಚಾಮರಾಜನಗರ (೩೩,೦೦೦), ಗುಂಡ್ಲುಪೇಟೆ (೨೪,೬೦೦) ಹಾಗೂ ಯಳಂದೂರು (೧೩,೭೦೦) ತಾಲೂಕುಗಳಲ್ಲಿ ಹಂಚಿ ಹೋಗಿದ್ದರು. ೨೦೧೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಇವರ ಜನಸಂಖ್ಯೆಯು ೧,೨೦,೨೧೯.ಆಗಿತ್ತು.

ಮುಂದಿನ ಕೋಷ್ಟಕಗಳಲ್ಲಿ ೧೯೯೧ ಮತ್ತು ೨೦೦೧ನೇ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ಪರಿಶಿಷ್ಟ ವರ್ಗದ ಪುರುಷರು ಹಾಗೂ ಸ್ತ್ರೀಯರ ತಾಲೂಕುವಾರು ಜನಸಂಖ್ಯೆಯನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗನುಗುಣವಾಗಿ ನೀಡಲಾಗಿದೆ.

**ಕೋಷ್ಟಕ ೩.೧೭: ೧೯೯೧ ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರ ಜಿಲ್ಲಾ ವಿವರ**

| | | ಪರಿಶಿಷ್ಟ ಪಂಗಡದವರು | ಜಿಲ್ಲೆಯ ಒಟ್ಟು ಜನಸಂಖ್ಯೆ | ಪರಿಶಿಷ್ಟ ಪಂಗಡ ಜನಸಂಖ್ಯೆ ಶೇಕಡಾವಾರು ಪ್ರಮಾಣ |
|---|---|---|---|---|
| ಚಾಮರಾಜನಗರ | ಒಟ್ಟು | ೧೦೬೧೧೧ | ೯೬೫೪೬೨ | ೧೦.೯೯% |
| | ಗ್ರಾಮೀಣ | ೮೪೮೯೭ | ೮೧೭೩೭೨ | ೧೦.೩೯% |
| | ನಗರ | ೨೧೨೧೪ | ೧೪೮೦೯೦ | ೧೪.೩೩% |

**ಕೋಷ್ಟಕ ೩.೧೮: ೨೦೦೧ನೇ ಜನಗಣತಿ ಪ್ರಕಾರ ಜಿಲ್ಲೆಯಲ್ಲಿರುವ ಪರಿಶಿಷ್ಟ ಪಂಗಡದವರ ವಿವರ**

| ತಾಲೂಕು | ಗ್ರಾಮೀಣ | | | ನಗರ | | |
|---|---|---|---|---|---|---|
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| **ಚಾಮರಾಜನಗರ** | ೨೭೦೬೮ | ೧೩೪೩೦ | ೧೩೬೩೮ | ೫೯೦೦ | ೨೯೫೫ | ೨೯೪೫ |
| **ಗುಂಡ್ಲುಪೇಟೆ** | ೧೮೫೬೨ | ೯೨೫೧ | ೯೩೧೧ | ೬೦೨೬ | ೨೯೮೦ | ೩೦೪೬ |
| **ಕೊಳ್ಳೇಗಾಲ** | ೨೮೫೯೯ | ೧೪೫೨೫ | ೧೪೦೭೪ | ೬೨೪೦ | ೩೧೦೧ | ೩೧೩೯ |
| **ಯಳಂದೂರು** | ೧೦೬೬೮ | ೫೪೭೪ | ೫೧೯೪ | ೩೦೪೮ | ೧೪೮೯ | ೧೫೫೯ |
| **ಜಿಲ್ಲಾ ಮೊತ್ತ** | **೮೪೮೯೭** | **೪೨೬೮೦** | **೪೨೨೧೭** | **೨೧೨೧೪** | **೧೦೫೨೫** | **೧೦೬೮೯** |

## ಅಂಗವಿಕಲರು

ಕುರುಡರು, ಕಿವುಡರು ಮತ್ತು ಮೂಗರನ್ನು ೧೯೪೧ರ ಪೂರ್ವದಲ್ಲಿ ಗಣತಿ ಮಾಡಲಾಗುತ್ತಿದ್ದು, ಆನಂತರದಲ್ಲಿ ಅದನ್ನು ನಿಲ್ಲಿಸಲಾಯಿತು. ಪುನಃ ೧೯೮೧ರ ಜನಗಣತಿಯಲ್ಲಿ ಅಂಗವಿಕಲರ ಗಣತಿಯನ್ನು ಮಾಡಲಾಗಿದೆ. ವಾಸದ ಮನೆಗಳ ಗಣತಿ ಸಮಯದಲ್ಲಿ ಅಂಗವಿಕಲರನ್ನು ಪ್ರತ್ಯೇಕವಾಗಿ ಗಣತಿ ಮಾಡಲಾಗುತ್ತದೆ.

ಆದರೆ ಅನೇಕ ಅಂಗವಿಕಲರು ನಿರ್ವಸಿತರಾಗಿ ಭಿಕ್ಷುಕ ಸಮುದಾಯದಲ್ಲಿದ್ದು, ಜನಗಣತಿ ಮಾಡುವ ಸಮಯದಲ್ಲಿ ಅವರು ಮನೆಗಳಲ್ಲಿ ಅಲಭ್ಯವಾಗುವುದರಿಂದ ಈ ಅಂಕಿ ಅಂಶವು ನೈಜ ಚಿತ್ರವನ್ನು ಸ್ಪಷ್ಟವಾಗಿ ಕೊಡಲಾರದೆಂಬ ಅಭಿಪ್ರಾಯವಿದೆ. ೨೦೦೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೨.೪೮ ರಷ್ಟು (ಶೇ. ೨.೯೮ ಪುರುಷರು ಹಾಗೂ ಶೇ. ೧.೯೭ ಮಹಿಳೆಯರು) ಜನ ಅಂಗವಿಕಲರಿದ್ದು, ಇದರಲ್ಲಿ ಶೇ. ೨.೫೯ ರಷ್ಟು( ಶೇ. ೩.೧೧ ಪುರುಷರು ಹಾಗೂ ಶೇ. ೨.೦೬ ಮಹಿಳೆಯರು) ಜನ ಗ್ರಾಮೀಣ ಭಾಗದಲ್ಲೂ, ಮತ್ತು ಶೇ.೧.೮೬ ರಷ್ಟು(ಶೇ. ೨.೨೬ ಪುರುಷರು ಹಾಗೂ ಶೇ. ೧.೪೫ ಮಹಿಳೆಯರು) ಜನ ನಗರ ಪ್ರದೇಶದಲ್ಲೂ ದಾಖಲಿಸಲ್ಪಟ್ಟಿದ್ದರು.

## ಭಾಷೆಗಳು

ಜಿಲ್ಲೆಯಲ್ಲಿ ೧೯೭೧ರ ಜನಗಣತಿಯ ಪ್ರಕಾರ ಶೇ.೯೧.೦೩೦ರಷ್ಟು ಜನ ಕನ್ನಡ ಮಾತನಾಡುವವರೂ, ಶೇ.೩.೯ ಜನ ಉರ್ದು ಮಾತನಾಡುವವರೂ ಇದ್ದು, ಈ ಮುಂದಿನ ಕೋಷ್ಟಕ ೩.೧೯ರಲ್ಲಿ ವಿವಿಧ ಭಾಷೆಗಳನ್ನಾಡುವ ೫೦೦ಕ್ಕೂ ಹೆಚ್ಚು ಜನರಿರುವ ಕೆಲವೊಂದು ಭಾಷಾವಾರು ತಾಲೂಕುವಾರು ಜನಸಂಖ್ಯೆಯನ್ನು ನೀಡಿದೆ. ಅದೇ ರೀತಿ ೧೯೯೧ ಹಾಗೂ ೨೦೦೧ರ ಜನಗಣತಿಯನ್ವಯ ಜಿಲ್ಲೆಯಲ್ಲಿದ್ದ ವಿವಿಧ ಭಾಷಿಕರ ವಿವರವನ್ನು ಕೋಷ್ಟಕ ೩.೨೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೧೯: ೧೯೭೧ ರ ಜನಗಣತಿಯ ಪ್ರಕಾರ ಜಿಲ್ಲೆಯ ಐದು ಪ್ರಮುಖ ಭಾಷಿಕರ ತಾಲೂಕುವಾರು ವಿವರ**

| ತಾಲೂಕು | ಕನ್ನಡ (ಮಾತನಾಡುವವರ ಶೇ. ಪ್ರಮಾಣ) | ಉರ್ದು | ತೆಲುಗು | ಮರಾಠಿ | ತುಳು |
|---|---|---|---|---|---|
| ಚಾಮರಾಜನಗರ | ೨,೦೯,೦೨೭(೯೧. ೮೫) | ೮,೫೯೮ | ೩,೦೯೩ | ೫೨೩ | ೧೨೭ |
| ಗುಂಡ್ಲುಪೇಟೆ | ೧,೩೧,೫೪೨(೯೪. ೫೩) | ೨,೦೨೪ | ೧,೩೬೮ | ೪೮೮ | ೩೪ |
| ಕೊಳ್ಳೇಗಾಲ | ೧,೫೨,೬೪೩(೭೫.೯೫) | ೭,೮೦೧ | ೧೮,೦೩೩ | ೪೦೦ | ೧೦೦ |
| ಯಳಂದೂರು | ೪೬,೫೦೭(೯೫. ೩೦) | ೧,೨೦೪ | ೪೮೮ | ೦೭ | ೦೬ |

**ಕೋಷ್ಟಕ ೩.೨೦: ೧೯೯೧ ಹಾಗೂ ೨೦೦೧ ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿದ್ದ ವಿವಿಧ ಭಾಷಿಕರ ವಿವರ**

| ಕ್ರ. ಸಂ | ಭಾಷೆ | ೧೯೯೧ ರ ಗಣತಿ | | ೨೦೦೧ರ ಗಣತಿ | |
|---|---|---|---|---|---|
| | | ಭಾಷಿಕರು | ಶೇ. ಪ್ರಮಾಣ | ಭಾಷಿಕರು | ಶೇ. .ಪ್ರಮಾಣ |
| ೧. | ಕನ್ನಡ | ೭,೫೭,೫೭೫ | ೮೫.೭೬ | ೮,೨೧,೬೫೬ | ೮೫.೧೦ |
| ೨. | ತಮಿಳು | ೪೭,೧೨೬ | ೫.೩೩ | ೪೪,೮೮೩ | ೪.೬೫ |
| ೩. | ತೆಲುಗು | ೩೨,೭೧೫ | ೩.೭೦ | ೩೪,೮೨೨ | ೩.೬೧ |
| ೪. | ಉರ್ದು | ೩೨,೫೮೬ | ೩.೬೯ | ೩೭,೫೩೯ | ೩.೮೯ |
| ೫. | ಹಿಂದಿ | ೫,೪೫೯ | ೦.೬೨ | ೧೮,೩೩೨ | ೧.೯೦ |
| ೬. | ಟಿಬೆಟ್ | ೩,೫೩೭ | ೦.೪೦ | ೩,೪೪೨ | ೦.೩೬ |
| ೭. | ಮರಾಠಿ | ೧,೭೨೯ | ೦.೨೦ | ೧,೪೯೧ | ೦.೧೫ |

| | | | | | |
|---|---|---|---|---|---|
| ೮. | ಮಲಯಾಳಿ | ೧,೪೩೯ | ೦.೧೬ | ೧,೩೪೯ | ೦.೧೪ |
| ೯. | ಕೊಂಕಣಿ | ೪೨೩ | ೦.೦೫ | ೩೪೨ | ೦.೦೪ |
| ೧೦. | ತುಳು | ೨೬೮ | ೦.೦೩ | ೨೯೮ | ೦.೦೩ |
| ೧೧. | ಕೊಡಗು | ೫೬ | ೦.೦೧ | ೩೮೦ | ೦.೦೪ |
| ೧೨. | ಕುರುಬ/ಕುರುಂಬ | – | ೦.೦೦ | ೧೮೧ | ೦.೦೨ |
| ೧೩.ಅರಾಬಿಕ್/ ಅರಬಿ | ೩೧ | ೦.೦೦ | ೨ | ೦.೦೦ | |
| ೧೪. | ಭಿಲ್/ಭಿಲೊಡಿ | ೧೬ | ೦.೦೦ | – | ೦.೦೦ |
| ೧೫. | ಆಂಗ್ಲ | ೩ | ೦.೦೦ | ೩೪ | ೦.೦೦ |
| ೧೬. | ಗಾರೋ | – | ೦.೦೦ | ೧ | ೦.೦೦ |
| ೧೭. | ಕಿನ್ನರಿ | – | ೦.೦೦ | ೧ | ೦.೦೦ |
| ೧೮. | ನೇಪಾಳಿ | ೧೮ | ೦.೦೦ | ೨೦ | ೦.೦೦ |
| ೧೯. | ಬೆಂಗಾಳಿ | ೭ | ೦.೦೦ | ೧೧೪ | ೦.೦೧ |
| ೨೦. | ಪಂಜಾಬಿ | ೨ | ೦.೦೦ | – | ೦.೦೦ |
| ೨೧. | ಅಸ್ಸಾಮಿ | – ೦.೦೦ | ೫ | ೦.೦೦ | |
| ೨೨. | ಗುಜರಾತಿ | – | ೦.೦೦ | ೭೧ | ೦.೦೧ |
| ೨೩. | ಕಾಶ್ಮೀರಿ | – | ೦.೦೦ | – | ೦.೦೦ |
| ೨೪. | ಮಣಿಪುರಿ | – | ೦.೦೦ | – | ೦.೦೦ |
| ೨೫. | ಒರಿಯಾ | – | ೦.೦೦ | ೬ | ೦.೦೦ |
| ೨೬. | ಸಂಸ್ಕೃತ | – | ೦.೦೦ | ೧ | ೦.೦೦ |
| ೨೭. | ಸಿಂಧಿ | – | ೦.೦೦ | – | ೦.೦೦ |
| ೨೮. | ಇನ್ನಿತರೆ ಭಾಷೆಗಳು | ೩೭೬ | ೦.೦೪ | ೪೯೨ | ೦.೦೫ |

## ಸಾಕ್ಷರತೆ

ಜನಗಣತಿಯ ಪ್ರಕಾರ ಯಾವುದೇ ಭಾಷೆಯಲ್ಲಿ ಓದಲು ಮತ್ತು ಬರೆಯಲು ಸಮರ್ಥರಾದವರನ್ನು ಅಕ್ಷರಸ್ಥ ಎಂದು ಕರೆಯಲಾಗುತ್ತದೆ. ಇದಕ್ಕೆ ನಿರ್ದಿಷ್ಟವಾದ ಶೈಕ್ಷಣಿಕ ಅರ್ಹತೆ ಅಥವಾ ಸಾಂಪ್ರದಾಯಿಕ ಶಿಕ್ಷಣದ ಅಗತ್ಯವಿರುವುದಿಲ್ಲ. ವಯೋಮಿತಿ ೦–೬ ವರ್ಷದ ವರ್ಗಕ್ಕೆ ಸೇರಿದ ಎಲ್ಲಾ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಲಾಗಿದೆ. ೧೯೯೧ರ ಜನಗಣತಿಯಂತೆ ಅವಿಭಜಿತ ಮೈಸೂರು ಜಿಲ್ಲೆಯಲ್ಲಿದ್ದ, ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿನ ಸರಾಸರಿ ಸಾಕ್ಷರತೆ ಪ್ರಮಾಣವು ಶೇ. ೩೭.೯೪ ಆಗಿದ್ದು, ಪುರುಷರಲ್ಲಿ ಶೇ. ೪೭.೧೭ ಮತ್ತು ಸ್ತ್ರೀಯರಲ್ಲಿ ಶೇ. ೨೮.೩೦ ಇದ್ದಿತು. ಇದು ರಾಜ್ಯದ ಶೇಕಡಾಂಶಕ್ಕಿಂತ (ಪುರುಷರು ಶೇ. ೬೭.೨೬, ಸ್ತ್ರೀಯರು–ಶೇ.೪೪.೩೪ ಮತ್ತು ಒಟ್ಟಾರೆ ಶೇ.೫೬.೦೪) ಕಡಿಮೆಯಾಗಿತ್ತು. ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವು ಶೇ.೫೧.೨೬ (ಪುರುಷರಲ್ಲಿ ೫೯.೨೫ ಮತ್ತು ಸ್ತ್ರೀಯರಲ್ಲಿ ೫೧.೬೨) ಆಗಿದ್ದಿತು. ರಾಜ್ಯದಲ್ಲಿ ಈ ಶೇಕಡಾಂಶವು ೬೭.೦೪ (ಪುರುಷರು : ೭೬.೨೯ ಮತ್ತು ಸ್ತ್ರೀಯರು: ೪೩.೦೨) ಆಗಿದ್ದಿತು. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿನ ಸರಾಸರಿ ಸಾಕ್ಷರತಾ

ಪ್ರಮಾಣವು ಶೇ. ೬೧.೧೨ (ಪುರುಷರು–ಶೇ.೬೭.೮೮ ಹಾಗೂ ಸ್ತ್ರೀಯರು–ಶೇ.೫೪.೩೨) ಇದ್ದು, ರಾಜ್ಯದ ಸಾಕ್ಷರತಾ ಪ್ರಮಾಣವಾದ ಶೇ.೫೦.೮೭(ಪುರುಷರು–ಶೇ.೫೯.೦೩ ಹಾಗೂ ಸ್ತ್ರೀಯರು–ಶೇ.೪೨.೪೮)ಕ್ಕಿಂತ ಅಧಿಕವಾಗಿತ್ತು. ಜಿಲ್ಲೆಯಲ್ಲಿದ್ದ ಒಟ್ಟು ೫,೬೬,೦೭೬ (೩,೧೫,೩೨೧ ಪುರುಷರು ಹಾಗೂ ೨,೫೦,೭೫೫ ಮಹಿಳೆಯರು) ಸಾಕ್ಷರಸ್ಥರಲ್ಲಿ ,ಗ್ರಾಮೀಣ ಭಾಗದಲ್ಲಿ ೪,೪೧,೫೨೧ (೨,೪೯,೧೯೯ ಪುರುಷರು ಹಾಗೂ ೧,೯೨,೩೨೨ ಮಹಿಳೆಯರು)ಮಂದಿ, ಹಾಗೂ ನಗರ ಪ್ರದೇಶಗಳಲ್ಲಿ ೧,೨೪,೫೫೫(೬೬,೧೨೨ ಪುರುಷರು ಹಾಗೂ ೫೮,೪೩೩ ಮಹಿಳೆಯರು) ಮಂದಿ ಸಾಕ್ಷರಸ್ಥರು ಹಂಚಿ ಹೋಗಿದ್ದರು. ಕೋಷ್ಟಕ ೩.೨೧, ೩.೨೨ ಹಾಗೂ ೩.೨೩ರಲ್ಲಿ ಪೂರಕ ಅಂಕಿ–ಅಂಶಗಳನ್ನು ನೀಡಲಾಗಿದೆ.

**ಕೋಷ್ಟಕ ೩.೨೧: ೨೦೧೧ರ ಜನಗಣತಿಯನ್ವಯ ಜಿಲ್ಲೆಯಲ್ಲಿದ್ದ ಸಾಕ್ಷರತಾ ಪ್ರಮಾಣದ ವಿವರ**

| ರಾಜ್ಯ/ಜಿಲ್ಲೆಗಳು | ೨೦೧೧ ರ ಜನಸಂಖ್ಯೆ (ಲಕ್ಷಗಳಲ್ಲಿ) | | | ೦–೬ ವರ್ಷದೊಳಗಿನ ಜನಸಂಖ್ಯೆ (ಲಕ್ಷಗಳಲ್ಲಿ) | | | ಒಟ್ಟು ಸಾಕ್ಷರರು (ಲಕ್ಷಗಳಲ್ಲಿ) | | | ಸಾಕ್ಷರತೆ ಪ್ರಮಾಣ | | |
|---|---|---|---|---|---|---|---|---|---|---|---|---|
| | ಜನರು | ಪುರುಷರು | ಹೆಂಗಸರು | ಜನರು | ಪುರುಷರು | ಹೆಂಗಸರು | ಜನರು | ಪುರುಷರು | ಹೆಂಗಸರು | ಜನರು | ಪುರುಷರು | ಹೆಂಗಸರು |
| ಚಾಮರಾಜನಗರ | ೧೦.೨೧ | ೫.೦೮ | ೫.೧೩ | ೦.೯೫ | ೦.೪೯ | ೦.೪೬ | ೫.೬೬ | ೩.೧೫ | ೨.೫೧ | ೬೧.೧೨ | ೬೭.೮೮ | ೫೪.೩೨ |

**ಕೋಷ್ಟಕ ೩.೨೨: ೨೦೦೧ರ ಜನಗಣತಿಯನ್ವಯ ಅಕ್ಷರಸ್ಥರ ತಾಲೂಕುವಾರು ವಿವರ**

| ತಾಲೂಕು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| **ಚಾಮರಾಜನಗರ** | ೧೧೧೪೩೬ | ೬೫೭೩೪ | ೪೫೭೦೨ | ೩೫೩೭೯ | ೧೯೬೨೨ | ೧೫೭೫೭ | ೧೪೬೮೧೫ | ೮೫೩೫೬ | ೬೧೪೫೯ |
| **ಗುಂಡ್ಲುಪೇಟೆ** | ೭೬೯೬೨ | ೪೬೯೦೭ | ೩೦೦೫೫ | ೧೬೪೫೭ | ೯೩೫೨ | ೭೧೦೫ | ೯೩೪೧೯ | ೫೬೨೫೯ | ೩೭೧೬೦ |
| **ಕೊಳ್ಳೇಗಾಲ** | ೧೨೨೩೯೫ | ೭೩೪೦೩ | ೪೮೯೯೨ | ೩೬೦೧೭ | ೧೯೭೭೦ | ೧೬೨೪೭ | ೧೫೮೪೧೨ | ೯೩೧೭೩ | ೬೫೨೩೯ |
| **ಯಳಂದೂರು** | ೨೯೧೫೮ | ೧೭೦೬೬ | ೧೨೦೯೨ | ೪೮೯೬ | ೨೮೧೮ | ೨೦೭೮ | ೩೪೦೫೪ | ೧೯೮೮೪ | ೧೪೧೭೦ |
| **ಜಿಲ್ಲಾ ಮೊತ್ತ** | ೩೩೯೯೫೧ | ೨೦೩೧೧೦ | ೧೩೬೮೪೧ | ೯೨೭೪೯ | ೫೧೫೬೨ | ೪೧೧೮೭ | ೪೩೨೭೦೦ | ೨೫೪೬೭೨ | ೧೭೮೦೨೮ |

*ಮೂಲ: ೨೦೦೧ನೇ ಜನಗಣತಿ*

**ಕೋಷ್ಟಕ ೩.೨೩: ೨೦೦೧ ರ ಜನಗಣತಿ ಪ್ರಕಾರ ಜಿಲ್ಲೆಯ ತಾಲೂಕುವಾರು ಸಾಕ್ಷರತೆ ಶೇಕಡಾವಾರು ಪ್ರಮಾಣ**

| ತಾಲೂಕು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಾಮರಾಜನಗರ | ೫೩.೧ | ೩೭.೬ | ೪೫.೪ | ೭೩.೨ | ೬೦.೧ | ೬೬.೭ | ೫೬.೬ | ೪೧.೬ | ೪೯.೨ |
| ಗುಂಡ್ಲುಪೇಟೆ | ೫೬.೨ | ೩೬.೪ | ೪೬.೪ | ೭೯.೫ | ೬೨.೪ | ೭೧.೧ | ೫೯.೧ | ೩೯.೫ | ೪೯.೪ |
| ಕೊಳ್ಳೇಗಾಲ | ೫೭.೯ | ೪೦.೭ | ೪೯.೫ | ೮೨.೭ | ೭೦.೨ | ೭೬.೬ | ೬೧.೯ | ೪೫.೫ | ೫೩.೯ |
| ಯಳಂದೂರು | ೫೫.೧ | ೪೦.೩ | ೪೭.೮ | ೭೨.೨ | ೫೫.೮ | ೬೪.೨ | ೫೭.೦ | ೪೨.೦ | ೪೯.೬ |
| ಜಿಲ್ಲಾ ಮೊತ್ತ | ೫೫.೬ | ೩೮.೬ | ೪೭.೨ | ೭೭.೭ | ೬೩.೯ | ೭೦.೯ | ೫೯.೦ | ೪೨.೫ | ೫೦.೯ |

*ಮೂಲ: ೨೦೦೧ನೇ ಜನಗಣತಿ*

## ಧರ್ಮಗಳು

ಈ ಜಿಲ್ಲೆಯಲ್ಲಿ ಪ್ರಮುಖವಾಗಿ ಹಿಂದೂ, ಇಸ್ಲಾಂ, ಜೈನ ಹಾಗೂ ಕ್ರೈಸ್ತ ಧರ್ಮಗಳು ಆಚರಣೆಯಲ್ಲಿವೆಯಾದರೂ ಬೌದ್ಧ ಧರ್ಮೀಯರೂ ಕೊಳ್ಳೇಗಾಲ ತಾಲೂಕಿನಲ್ಲಿ ಕಾಣಸಿಗುತ್ತಾರೆ. ೧೯೮೧ರಲ್ಲಿದ್ದಂತೆ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿ ಆಚರಣೆಯಲ್ಲಿದ್ದ ಪ್ರಮುಖ ಧರ್ಮೀಯರ ಪಟ್ಟಿಯನ್ನಿಲ್ಲಿ ನೀಡಲಾಗಿದೆ. ೧೯೮೧ ಹಾಗೂ ೧೯೯೧ ಜನಗಣತಿಯ ಪ್ರಕಾರ ಅಂದಿನ ಮೈಸೂರು ಜಿಲ್ಲೆಯಲ್ಲಿದ್ದ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿದ್ದ ವಿವಿಧ ಧರ್ಮೀಯರ ವಿವರ ಮತ್ತು ೨೦೦೧ರ ಗಣತಿಯ ವಿವರಗಳನ್ನು ಕೋಷ್ಟಕ ೩.೨೪, ೩.೨೫ ಹಾಗೂ ೩.೨೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೩.೨೪: ೧೯೮೧ ರ ಜನಗಣತಿ ಪ್ರಕಾರ ಇಂದಿನ ಚಾಮರಾಜನಗರ ಪ್ರದೇಶದಲ್ಲಿದ್ದ ಪ್ರಮುಖ ಧರ್ಮೀಯರ ವಿವರ**

| ತಾಲೂಕು | ಒಟ್ಟು ಜನಸಂಖ್ಯೆ | ಬೌದ್ಧ | ಕ್ರೈಸ್ತ | ಹಿಂದೂ | ಜೈನ | ಮುಸ್ಲಿಂ | ಸಿಖ್ಖ್ | ಇತರೆ | ಧರ್ಮ ವ್ಯಕ್ತಪಡಿಸದವರು |
|---|---|---|---|---|---|---|---|---|---|
| ಚಾಮರಾಜನಗರ | ೨,೭೩,೩೧೭ | – | ೩,೧೮೧ | ೨,೫೭,೯೦೨ | ೪೩೭ | ೧೧,೭೫೮ | – | ೩೯ | – |
| ಗುಂಡ್ಲುಪೇಟೆ | ೧,೬೮,೮೭೯ | – | ೩೨೦ | ೧,೬೪,೨೬೮ | ೧೨೩ | ೪,೧೬೭ | – | ೦೧ | – |
| ಕೊಳ್ಳೇಗಾಲ | ೨,೬೪,೬೨೭ | ೩,೪೩೧ | ೧೨,೯೧೫ | ೨,೩೭,೮೬೫ | ೨೬ | ೧೦,೩೬೮ | ೪ | ೧೩ | ೫ |
| ಯಳಂದೂರು | ೬೧,೩೭೫ | – | ೫೫ | ೫೯,೪೫೯ | – | ೧,೮೫೦ | – | ೧೧ | – |

**ಕೋಷ್ಟಕ ೩.೨೫: ೧೯೯೧ ರ ಜನಗಣತಿ ಪ್ರಕಾರ ಇಂದಿನ ಚಾಮರಾಜನಗರ ಪ್ರದೇಶದಲ್ಲಿದ್ದ ಪ್ರಮುಖ ಧರ್ಮೀಯರ ವಿವರ**

| ತಾಲೂಕು | ಒಟ್ಟು ಜನಸಂಖ್ಯೆ | ಬೌದ್ಧ | ಕ್ರೈಸ್ತ | ಹಿಂದೂ | ಜೈನ | ಮುಸ್ಲಿಂ | ಸಿಖ್ಖ್ | ಇತರೆ | ಧರ್ಮ ವ್ಯಕ್ತಪಡಿಸದವರು |
|---|---|---|---|---|---|---|---|---|---|
| ಚಾಮರಾಜನಗರ | ೩,೧೧,೩೨೩ | – | ೩,೫೭೪ | ೨,೯೩,೨೦೩ | ೧೮೯ | ೧೪,೩೦೩ | – | ೦೩ | ೫೧ |
| ಗುಂಡ್ಲುಪೇಟ | ೧,೯೫,೭೦೬ | – | ೩೬೮ | ೧,೯೦,೦೧೯ | ೨೩೭ | ೪,೯೨೧ | ೫ | ೦೧ | ೧೫೫ |
| ಕೊಳ್ಳೇಗಾಲ | ೩,೦೪,೬೨೧ | ೩,೫೩೭ | ೧೪,೧೧೭ | ೨,೭೩,೩೭೧ | ೩ | ೧೩,೦೬೭ | ೮ | ೧೧ | ೫೦೭ |
| ಯಳಂದೂರು | ೭೧,೭೧೫ | – | ೮೩ | ೬೯,೪೨೮ | – | ೨,೧೭೨ | ೧ | – | ೩೧ |
| ಒಟ್ಟು | **೮,೮೩,೩೬೫** | **೩,೫೩೭** | **೧೮,೧೪೨** | **೮,೨೬,೦೨೧** | **೪೨೯** | **೩೪,೪೬೩** | **೧೪** | **೧೫** | **೭೪೪** |

**ಕೋಷ್ಟಕ ೩.೨೬: ೨೦೦೧ರ ಜನಗಣತಿ ಪ್ರಕಾರ ಚಾಮರಾಜನಗರ ಜಿಲ್ಲೆಯಲ್ಲಿದ್ದ ಪ್ರಮುಖ ಧರ್ಮೀಯರ ವಿವರ**

| ತಾಲೂಕು | ಒಟ್ಟು ಜನಸಂಖ್ಯೆ | ಬೌದ್ಧ | ಕ್ರೈಸ್ತ | ಹಿಂದೂ | ಜೈನ | ಮುಸ್ಲಿಂ | ಸಿಖ್ಖ್ | ಇತರೆ | ಧರ್ಮ ವ್ಯಕ್ತಪಡಿಸದವರು |
|---|---|---|---|---|---|---|---|---|---|
| ಚಾಮರಾಜನಗರ | ೩,೩೭,೫೭೧ | ೧೬,೫೪೭ | ೩,೪೭೫ | ೨,೯೯,೬೩೦ | ೬೨೦ | ೧೬,೫೦೧ | ೮ | ೬೮ | ೬೩೨ |
| ಗುಂಡ್ಲುಪೇಟೆ | ೨,೧೩,೦೮೨ | ೩,೬೫೨ | ೪೨೪ | ೨,೦೨,೯೨೮ | ೩೫೦ | ೫,೫೦೮ | ೨೧ | ೦೯ | ೧೯೦ |
| ಕೊಳ್ಳೇಗಾಲ | ೩,೩೬,೮೩೮ | ೮,೭೫೨ | ೧೭,೨೭೩ | ೨,೯೨,೨೯೭ | ೪೧ | ೧೫,೨೨೦ | ೨೬ | ೨೬೬೪ | ೫೬೫ |
| ಯಳಂದೂರು | ೭೭,೯೭೧ | ೫,೧೬೩ | ೬೫ | ೬೮,೭೩೬ | ೨೩ | ೨,೪೪೫ | ೧ | ೧,೪೬೨ | ೭೬ |
| ಒಟ್ಟು | **೯,೬೫,೪೬೨** | **೩೪,೧೧೪** | **೨೧,೨೩೭** | **೮,೬೩,೫೯೧** | **೧,೦೩೪** | **೩೯,೭೬೪** | **೫೬** | **೪,೨೦೩** | **೧,೪೬೬** |

ಲೌಕಿಕ ಮತ್ತು ಪಾರಮಾರ್ಥಿಕ ಪರಿಕಲ್ಪನೆಯಲ್ಲಿ ಮಾನವೀಯ ನಡೆವಳಿ, ಅರಿವು, ಅನುಸರಿಸಬೇಕಾದ ನ್ಯಾಯಿಕ ಮಾರ್ಗಗಳನ್ನು ಕುರಿತು ತಿಳಿಸಿಕೊಡುವುದೇ ಧರ್ಮ ಎಂದು ಸರಳವಾಗಿ ಹೇಳಬಹುದು. ಇವೆಲ್ಲವೂ ಮನುಷ್ಯನ ಬದುಕಿಗೆ ಸಾರ್ವತ್ರಿಕ ಚೌಕಟ್ಟನ್ನು ರೂಪಿಸಿಕೊಡುವುದರಿಂದ ಎಲ್ಲ ಮನುಷ್ಯರಿಗೂ 'ಧರ್ಮ' ಒಂದು ಅವಲಂಬನೆಯಾಗಿದೆ. ಅನಾದಿಕಾಲದಿಂದ ಅನುಸರಿಸಿಕೊಂಡು ಬರಲಾಗುತ್ತಿರುವ ರೂಢಿಗಳನ್ನು ಎಲ್ಲಾ ಧರ್ಮಗಳೂ ಕಾಲಕಾಲಕ್ಕೆ ನಿರ್ವಹಿಸುತ್ತಾ ಬಂದಿವೆ. ಸಮಾಜದಲ್ಲಿ ಅನೇಕ ಧರ್ಮಗಳು ಇದ್ದರೂ ಎಲ್ಲಾ ಧರ್ಮಗಳ ಆಶಯ ಒಂದೇ ಆಗಿದೆ. ಪ್ರಪಂಚದಲ್ಲಿನ ಎಲ್ಲಾ ಧರ್ಮಗಳ ಉದ್ದೇಶ ಒಂದೇ. ಕ್ರೈಸ್ತ, ಮುಸ್ಲಿಂ, ಸಿಖ್ ಮುಂತಾದ ಧರ್ಮಗಳು ಒಬ್ಬೊಬ್ಬ ಬೋಧಕರ ಬೋಧನೆಗಳ ಅನುಸಾರವಿದ್ದರೆ, ಹಿಂದೂ ಧರ್ಮ ಅನೇಕ ತತ್ವಜ್ಞಾನಿಗಳು, ಸಾಧುಸಂತರುಗಳಿಂದ ಕಾಲಕಾಲಕ್ಕೆ ರೂಪಿತವಾದುದಾಗಿದೆ. ಇದಕ್ಕೆ ಸನಾತನ ಪರಂಪರೆಯಿದೆ. ಹಿಂದೂ ಧರ್ಮದ ಭಿನ್ನವಾದ ತಾತ್ವಿಕ ಚಿಂತನೆಗಳಿಂದಾಗಿ ಬೌದ್ಧ, ಜೈನ, ಮುಂತಾದ ಪ್ರತ್ಯೇಕ ಧರ್ಮಗಳು ಅಸ್ತಿತ್ವಕ್ಕೆ ಬಂದು, ಅವುಗಳ ಅನುಯಾಯಿಗಳು ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸುವುದಕ್ಕಾಗಿ ತಮ್ಮದೇ ಆದ ಲಾಂಛನ, ದೈವಾರಾಧನೆ, ಪೂಜಾವಿಧಿ, ಪವಿತ್ರದಿನ, ಯಾತ್ರಾಸ್ಥಳ ಮುಂತಾದವನ್ನು ನಿಗದಿಪಡಿಸಿಕೊಂಡಿದ್ದು, ನಿರಂತರವಾಗಿ ಅದನ್ನು ಅನುಸರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಹಾಗೆ ಅನುಸರಿಸುವ ಜನ ಎಲ್ಲೆಲ್ಲಿ ನೆಲೆಸಿರುತ್ತಾರೋ ಅಲ್ಲೆಲ್ಲಾ ಅಂತಹ ಆಚರಣೆಗಳು ಕಂಡುಬರುತ್ತವೆ. ಹೀಗಾಗಿ ಅನೇಕ ಧರ್ಮ, ಮತ ಪಂಥಗಳು ದೇಶಾದ್ಯಂತ ಪಸರಿಸಿವೆ.

ಈ ಜಿಲ್ಲೆಯಲ್ಲಿ ರಾಜರು, ರಾಜಮನೆತನಗಳಿಗೆ ಸೇರಿದ ಅನೇಕ ದೇವಾಲಯ ನಿರ್ಮಾಣ ಮುಂತಾದ ಕಾರ್ಯಗಳ ಜೊತೆಗೆ ಅವುಗಳ ನಿರಂತರ ಪೂಜೆಗೆ ದೊಡ್ಡ ಪ್ರಮಾಣದಲ್ಲಿ ದತ್ತಿ ಬಿಟ್ಟಿರುವುದನ್ನು ಅಸಂಖ್ಯಾತ ಶಾಸನಗಳು ಖಚಿತ ಪಡಿಸುತ್ತವೆ.

ಹೊಯ್ಸಳ ದೊರೆ ಮುಮ್ಮಡಿ ನರಸಿಂಹ ಮತ್ತವನ ಮಗ ಮುಮ್ಮಡಿ ಬಲ್ಲಾಳರ ಕಾಲದಲ್ಲಿಯೂ, ಮಂತ್ರಿ ಹಾಗೂ ಡಣ್ಣಾಯಕನಾಗಿದ್ದ ಮಾಧವ ಡಣ್ಣಾಯಕನ ಅಧಿಕಾರಿಯಾಗಿದ್ದ ಮಾರಗೌಡ ಎಂಬಾತ ಕ್ರಿ.ಶ ೧೩೧೬ರಲ್ಲಿ ಹರದನಹಳ್ಳಿಯಲ್ಲಿ ಅಣಿಲೇಶ್ವರ ದೇವಾಲಯ ಕಟ್ಟಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಇದೇ ಮಾಧವ ಡಣ್ಣಾಯಕನು ತೆರಕಣಾಂಬಿಯ ಗೋಪಿನಾಥ ದೇವರಿಗೆ ಕಿಲಗೆರೆ ಮತ್ತು ಬೆಲಕುಪ್ಪೆ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ಚಾಮರಾಜನಗರದ ಶಾಸನ ತಿಳಿಸುತ್ತದೆ.

ಧಾರ್ಮಿಕ ನಂಬಿಕೆಗಳಿಂದ ದೇವಾಲಯ ನಿರ್ಮಾಣ, ಜೀರ್ಣೋದ್ಧಾರ, ಪ್ರವಾಸಿಗರಿಗೆ, ಪರಸ್ಥಳದವರಿಗೆ ಉಳಿದುಕೊಳ್ಳಲು ಮತ್ತು ಊಟದ ವ್ಯವಸ್ಥೆ ಮಾಡುವುದಕ್ಕಾಗಿ ಛತ್ರನಿರ್ಮಾಣ, ಅರವಂಟಿಗೆ, ವಿದ್ಯೆ, ಧ್ಯಾನ, ಸಂಸ್ಕೃತಿ ಪ್ರಸಾರ, ಕೆರೆ ಕಟ್ಟಿಸುವುದೇ ಮುಂತಾದ ನಿರ್ವಹಣೆಗಾಗಿ ದತ್ತಿ ಬಿಡುವುದು ಕಂಡುಬರುತ್ತವೆ. ಕ್ರಿ.ಶ ೯ನೆಯ ಶತಮಾನದಲ್ಲಿ ಚಾವುಂಡಬ್ಬೆ ಎಂಬಾಕೆಯ ಹೆಗ್ಗೊಠಾರದಲ್ಲಿ ದೇಗುಲ ಕಟ್ಟಿಸಿದ ಪಾಳುಬಿದ್ದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ, ರಂಗಮಂಟಪಗಳನ್ನು ನಿರ್ಮಿಸಿಕೊಟ್ಟ, ದೇವರ ಮೂರ್ತಿಗಳನ್ನು ಮಾಡಿಸಿಕೊಟ್ಟ ಬಗ್ಗೆ ಅನೇಕ ಶಾಸನಗಳು ಕಂಡುಬರುತ್ತವೆ. ಆಂಜನೇಯ ಮತ್ತು ಗಣಪತಿ ದೇವಾಲಯಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಯಳಂದೂರು ತಾಲೂಕಿನಲ್ಲಿ ಪುರಾಣ ಪ್ರಸಿದ್ಧ ದೇವಾಲಯಗಳೂ, ಮಾರಿಗುಡಿಗಳು ಹೇರಳವಾಗಿವೆ. ಗೌರೀಶ್ವರ ದೇವಾಲಯ (ಕ್ರಿ.ಶ.೧೫೦೦–ಸಿಂಗದೇವ) ಲಕ್ಷ್ಮೀವರಾಹಸ್ವಾಮಿ ಪುರಾತನ ದೇವಸ್ಥಾನಗಳಾಗಿವೆ.

ಮೊದಲು ಜೈನ-ದೇವಾಲಯಗಳಾಗಿದ್ದು ಆ ನಂತರ ಹಿಂದೂ ಗುಡಿಗಳಾಗಿ ಪರಿವರ್ತನೆಗೊಂಡಿರುವುದೂ ಕಂಡುಬರುತ್ತದೆ. ಹೊನ್ನೂಳೆ ಪಕ್ಕದಲ್ಲಿರುವ ಆಂಜನೇಯ ದೇವಸ್ಥಾನ ಜಪದಕಟ್ಟೆ ದೇವಸ್ಥಾನ ಎಂದು ಪ್ರಸಿದ್ಧವಾಗಿದೆ. ಕಾಳಮ್ಮ, ಎಲ್ಲಮ್ಮ, ಮಾರಮ್ಮ, ದುರ್ಗಾ, ಅಂಕಾಳ ಪರಮೇಶ್ವರಿ, ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ ಇತ್ಯಾದಿ. ಅಗರ ಗ್ರಾಮದಲ್ಲಿ ವರದರಾಜ, ಆಂಜನೇಯ, ಮಾಂಬಳಿ ಬಸವಣ್ಣ ದೇವಾಲಯ ಮುಂತಾದ ಹಲವಾರು ಪ್ರಸಿದ್ಧ ದೇವಾಲಯಗಳಿವೆ.

## ಹಿಂದೂಧರ್ಮ

ಹಿಂದೂಗಳು ಅನೇಕ ಜಾತಿ, ಉಪಜಾತಿ ಮತ್ತು ಪಂಥಗಳಾಗಿ ವಿಂಗಡಿಸಲ್ಪಟ್ಟಿದ್ದು, ವೇದ, ಉಪನಿಷತ್ತು ಮತ್ತು ಪುರಾಣ ಹಾಗೂ ಮಹಾಕಾವ್ಯಗಳು ಹಿಂದೂಗಳ ಪವಿತ್ರ ಗ್ರಂಥಗಳಾಗಿವೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಹಾಗೂ ಬಸವಣ್ಣನಂತಹ ಅನೇಕ ತತ್ವಜ್ಞಾನಿಗಳ, ಸಾಧು-ಸಂತರ ತತ್ವಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅವರು ನಿರೂಪಿಸಿದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿ ವಿಶಿಷ್ಟಾದ್ವೈತ ಪಂಥಗಳ ಅನುಯಾಯಿಗಳಾಗಿದ್ದಾರೆ. ಹಿಂದೂಗಳು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿ, ಪಾಲನೆ, ಲಯಕ್ಕೆ ಪ್ರಾತಿನಿಧಿಕ ರೂಪಕೊಟ್ಟು ಪೂಜಿಸುತ್ತಾರೆ. ಇನ್ನಿತರೆ ದೇವಾನುದೇವತೆಗಳನ್ನು ಆರಾಧಿಸಿ ಪೂಜಿಸುವುದೂ ಇದೆ. ಬಹುಮುಖಿ ಸಂಸ್ಕೃತಿಯಂತೆಯೇ ವಿವಿಧತೆಗಳಲ್ಲಿ ಏಕತೆಯ ಪರಿಕಲ್ಪನೆ ಹೊಂದಿರುವುದು ಹಿಂದೂ ಧರ್ಮ. ಅನೇಕ ಹೆಸರುಗಳಲ್ಲಿ ವಿವಿಧ ಜಾತಿ ವರ್ಗದವರು (ದೇವಸ್ಥಾನ ಹಾಗೂ ಮನೆ ಮನೆಗಳಲ್ಲಿಯೂ) ದೇವರನ್ನು ಪೂಜಿಸುತ್ತಾರೆ.

ಹಿಂದೂ ಧರ್ಮ ಒಂದು ಸನಾತನ ಧರ್ಮ. ತುಂಬ ಸಂಕೀರ್ಣವಾದ ಹಾಗೂ ವಿಶಾಲವಾದ ಹಂದರವುಳ್ಳದ್ದಾಗಿದ್ದು, ಹಿಂದೂಗಳಲ್ಲಿ ಧರ್ಮವು ಜೀವನದ ಒಂದು ನಡೆಯಾಗಿದೆ. ಹಿಂದೂಧರ್ಮದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ನಾಲ್ಕು ವೇದಗಳಿದ್ದು, ಅವುಗಳನ್ನು ಜ್ಞಾನಮಾರ್ಗವೆಂದು ಕರೆಯುತ್ತಾರೆ. ಧಾರ್ಮಿಕ ಶಾಸ್ತ್ರ ಗ್ರಂಥಗಳನ್ನು 'ಸ್ಮೃತಿ'ಗಳೆಂದು ಕರೆಯುತ್ತಾರೆ. ಇವು 'ಮಂತ್ರ', 'ಬ್ರಾಹ್ಮಣ' ಎಂಬ ಕರ್ಮಾಚರಣೆ, ವಿಧಿವಿಧಾನಗಳು, 'ಅರಣ್ಯಕ'ಗಳೆಂಬ ಯಜ್ಞಾದಿಗಳ ಮೇಲೆ ಆಧಾರವಾಗಿರುವ ಧ್ಯಾನವಿಧಾನಗಳು ಮತ್ತು 'ಉಪನಿಷತ್ತು' ಗಳಿಂದ ಕೂಡಿವೆ. ಸುಮಾರು ೧೦೮ ಉಪನಿಷತ್ತುಗಳಿವೆ. ರಾಮಾಯಣ ಮತ್ತು ಮಹಾಭಾರತಗಳೆಂಬ ಮಹಾಕಾವ್ಯಗಳಿವೆ. ಪ್ರತಿ ಒಂದೊಂದರಲ್ಲಿಯೂ ಅನೇಕ ವಿಧವಾಗಿ ವಿವರಗಳು, ಉಪನಾಮಕೃತ ಸ್ಮೃತಿ ಗ್ರಂಥಗಳಿವೆ. ಅನೇಕ ಪ್ರಾಚೀನ ಪುರಾಣ ಗ್ರಂಥಗಳಲ್ಲಿ ಅಮೂಲ್ಯವಾದ ಆಧ್ಯಾತ್ಮಿಕ ಮತ್ತು ಧಾರ್ಮಿಕ ತತ್ವ ಸಿದ್ಧಾಂತಗಳಿವೆ.

ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳು, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಎಂಬ ಚತುರಾಶ್ರಮಗಳು ಇವೆ. ಕರ್ಮಸಿದ್ಧಾಂತದಲ್ಲಿ ನಂಬಿಕೆ, ಪುನರ್ಜನ್ಮದಲ್ಲಿ ನಂಬಿಕೆ, ಪಾಪಪುಣ್ಯಗಳ ಪರಿಕಲ್ಪನೆ, ತೀರ್ಥಕ್ಷೇತ್ರ ಯಾತ್ರೆಗಳಲ್ಲಿ ನಂಬಿಕೆಯುಳ್ಳವರಾಗಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿಯೂ ಕೂಡ ಅದೇ ಪರಂಪರೆ ಕಂಡು ಬಂದರೂ, ಇಲ್ಲಿ ಒಂದು ವಿಶಿಷ್ಟವಾದ ಸಂತ ಸಂಸ್ಕೃತಿ ಇದೆ. ಹುಲಿಯನ್ನು ವಾಹನ ಮಾಡಿಕೊಂಡು ಕಾಡು ಸುತ್ತಿದ ಮಹದೇಶ್ವರ, ರೈತರ ಒಕ್ಕಲುತನದ ಜೀವನಾಡಿಯಾದ ಮಂಟೇಸ್ವಾಮಿ, ಸೋಲಿಗರ ಕುಸುಮಾಲೆಯನ್ನು ವಿವಾಹವಾಗಿ ಜೀವನಪ್ರೀತಿಯನ್ನು ಕಲಿಸಿದ ಬಿಳಿಗಿರಿರಂಗ, ಚಾಮರಾಜನಗರದ ಕೆಳವರ್ಗದವರು ತಯಾರಿಸಿಕೊಟ್ಟ ಪಾದರಕ್ಷೆಗಳು, ಬಿಳಿಗಿರಿ

ರಂಗನಾಥನ ದೇವಾಲಯದೊಳಗೆ ಪವಿತ್ರವೆಂದು ಪೂಜೆಗೊಳ್ಳುವ, ಹೋದವರೆಲ್ಲ ಅದನ್ನು ಮುಟ್ಟಿಸಿಕೊಳ್ಳುವ ಆಚರಣೆ, ಮಹದೇಶ್ವರ ಬೆಟ್ಟದಲ್ಲಿ ಅಸಂಖ್ಯಾತ ದೇವರ ಗುಡ್ಡರು ದೀಕ್ಷೆ ಪಡೆಯುವ ರೀತಿ, ಚಿಕ್ಕಲ್ಲೂರು ಸಿದ್ದಪ್ಪಾಜಿ ದೇವರು, ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸೋಲಿಗರ ಆರಾಧ್ಯದೈವವಾದ ದೊಡ್ಡ ಸಂಪಿಗೆ ದೇವರು, ಮುಂತಾದ ಶರಣ, ಸಂತಧರ್ಮಗಳಿರುವುದನ್ನು ಕಾಣಬಹುದು.

## ಪಂಥಗಳು

ಶ್ರೇಷ್ಠ ವೇದಾಂತಿ ಎನಿಸಿದ ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಪರಮಾತ್ಮನಿಗೆ ನಾರಾಯಣ ಎಂದೇ ಸಂಬೋಧನೆ ಮಾಡಿರುತ್ತಾರೆ. ಆದರೆ ಕೆಲವರು ಅವರ ಗ್ರಂಥಗಳಲ್ಲಿ ಪರಮಾತ್ಮನಿಗೆ ಶಿವ ಎಂದು ಸಂಬೋಧನೆ ಇದೆ ಎಂದು ವಾದಿಸುತ್ತಾರೆ. ಶಿವನೇ ಪರಮಾತ್ಮನೆಂದು ಪರಿಗಣಿಸುವ ಶೈವ ಸಿದ್ಧಾಂತವು ಹರಿಯೇ ಸರ್ವೋತ್ತಮನೆಂದು ಘೋಷಿಸುವ ರಾಮಾನುಜರ ವೇದಾಂತ ಬೋಧನೆಗಿಂತ ಪ್ರತ್ಯೇಕವೇನೂ ಅಲ್ಲ. ಶಿವನೇ ಪರತತ್ವವೆಂದು ಶೈವರೂ, ಹರಿಯೇ ಸರ್ವೋತ್ತಮನೆಂದು ವೈಷ್ಣವರೂ ಒತ್ತಿ ಹೇಳಬಹುದು. ಆದರೆ, ಯಾವ ಹಿಂದುವೂ ಇತರ ಪಂಥದವರು ಪೂಜಿಸುವ ದೇವರ ಅಸ್ತಿತ್ವವನ್ನು ಪ್ರಶ್ನಿಸುವುದಿಲ್ಲ. ಅಲ್ಲದೇ, ತನಗಿಷ್ಟ ಬಂದ ದೇವರನ್ನು ಅತ್ಯಂತ ಉಚ್ಚಮಟ್ಟಕ್ಕೇರಿಸಲು ಪ್ರತಿ ಹಿಂದುವೂ ಸ್ವತಂತ್ರನಿರುತ್ತಾನೆ. ಭಗವಂತನನ್ನು ಹರಿ (ವಿಷ್ಣು) ಎಂದಾದರೂ ಕರೆಯಿರಿ ಅಥವಾ ಹರ (ಶಿವ) ಎಂದಾದರೂ ಕರೆಯಿರಿ; ಜನಪ್ರಿಯ ಹಿಂದೂ ಧರ್ಮವು, ಬೇರಾವುದೇ ಏಕೇಶ್ವರವಾದಿ ಧರ್ಮದಂತೆ, ಭಗವಂತನಿಗೆ ತೋರಿಸಬೇಕಾದ ಭಯ – ಭಕ್ತಿ ಮತ್ತು ಶರಣಾಗತಿ ಭಾವವನ್ನು ಸ್ವಲ್ಪವೂ ಚ್ಯುತಿಯಾಗದಂತೆ ತೋರಿಸಬೇಕೆಂದು ನಿರೀಕ್ಷಿಸುತ್ತದೆ. ಇದಕ್ಕೆ ಕಾರಣವೇನೆಂದರೆ, ಹಿಂದೂ ಧರ್ಮವು ಎಲ್ಲಾ ದೇವರುಗಳನ್ನು ಪರಮಾತ್ಮನ ವಿವಿಧ ಅಂಶಗಳೆಂದು ಭಾವಿಸುವುದು, ಪರಮಾತ್ಮನು ಒಬ್ಬನೇ ಎನ್ನುವುದು ಎಷ್ಟು ಸರಿಯೋ ಅವನು ಬೇರೆ ಬೇರೆ ರೂಪ ಮತ್ತು ಹೆಸರುಗಳ ಮೂಲಕ ಪ್ರಕಟವಾಗುತ್ತಾನೆಂಬುದು ಅಷ್ಟೇ ಸರಿ. ಇದೇ ಎಲ್ಲಾ ಹಿಂದೂಗಳ ನಂಬಿಕೆ ಮತ್ತು ಹಿಂದೂ ಧರ್ಮದ ಪರಂಪರೆ.

## ಶೈವ ಮತ

ಚಾಮರಾಜನಗರ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಶೈವ ಮತಕ್ಕೆ ಆಶ್ರಯ ನೀಡಿರುವುದು ಅನೇಕ ಶಾಸನಗಳು ನೀಡುವ ಮಾಹಿತಿಯಿಂದ ಗೊತ್ತಾಗುತ್ತದೆ. ಮಲೆಮಹದೇಶ್ವರ ಬೆಟ್ಟ, ಬೆಟ್ಟದಪುರ, ಹರದನಹಳ್ಳಿ, ಚಾಮರಾಜನಗರ, ಮೂಗೂರು, ಗುಂಡ್ಲುಪೇಟೆ, ಆಲೂರು, ನರಸಮಂಗಲ ಮುಂತಾದ ಪ್ರದೇಶಗಳಲ್ಲಿ ಶೈವದೇವಾಲಯಗಳು ಪ್ರಮುಖವಾಗಿ ಕಂಡುಬರುತ್ತವೆ. ಅಂತಹ ದಾಖಲೆಗಳಲ್ಲಿ ಕೆಲವನ್ನು ಇಲ್ಲಿ ಹೇಳುವುದು ಉಚಿತ. ಗುಂಡ್ಲುಪೇಟೆ ತಾಲ್ಲೂಕಿನ ಸ್ಕಂದಗಿರಿ ಅಥವಾ ಪಾರ್ವತಿ ಬೆಟ್ಟದಲ್ಲಿ ಕುಮಾರಸ್ವಾಮಿಗೆ ಪ್ರಸನ್ನನಾಗಿ ಪಾರ್ವತಿ ಸಹಿತನಾಗಿ ಸೋಮೇಶ್ವರನು ನೆಲೆಸಿರುವನೆಂದು ನಂಬಲಾಗಿದೆ. ಸೋಮೇಶ್ವರ ಲಿಂಗ ಮತ್ತು ಜಗಜ್ಜನನಿ ಪಾರ್ವತಿಯ ಮೂರ್ತಿಯನ್ನು ಅಗಸ್ತ್ಯ ಮಹಾಮುನಿ ಪ್ರತಿಷ್ಠಾಪಿಸಿ ಪೂಜಿಸಿದ್ದಾರೆಂಬ ಐತಿಹ್ಯವಿದೆ. ಗಂಗೈಕೊಂಡ ಚೋಳಮಂಡಲಕ್ಕೆ ಸೇರಿದ್ದ ಪದಿನಾಡಿನ ಉತ್ತಮಚೋಳ ನಲ್ಲೂರೆಂದು ಕರೆಯುತ್ತಿದ್ದ ಮರೈಯೂರಿನಲ್ಲಿರುವ ವಲ್ಲಾಳೀಶ್ವರ ದೇವಾಲಯವು ಇಮ್ಮಡಿ ಬಲ್ಲಾಳನಿಂದ ನಿರ್ಮಿಸಲ್ಪಟ್ಟಿದೆ. ರಾಜನಿಗೆ ಪುಣ್ಯವಾಗಲೆಂದು ಕಂದೈಯಮಾಣನು ದೇವಾಲಯದ ಪೂಜಾದಿ ಕಾರ್ಯಗಳನ್ನು ವಹಿಸಿಕೊಂಡನು ಇಂದಿನ ಯೆರಿಯೂರೇ ಆ ಮರೈಯೂರು. ಮುಮ್ಮಡಿ ನರಸಿಂಹನ ಕ್ರಿ.ಶ.೧೨೬೭ನೇ ವರ್ಷದ ಅಗರದ ಶಾಸನವು ದುರ್ಗೆಯಾರಗರದ ತಿರುವಿರಾಮೀಶ್ವರ ಮುಡೈಯಾರ್ ದೇವಾಲಯಕ್ಕೆ ನಾಲ್ಕು ಸಾಲು ಮನೆಗಳನ್ನು ದತ್ತಿ

ಬಿಟ್ಟ ವಿಷಯವನ್ನು ತಿಳಿಸುತ್ತದೆ. ಆ ಮನೆಗಳಿಂದ ಬರುವ ಆದಾಯದ ಅರ್ಧದಷ್ಟನ್ನು ಕಾರ್ತಿಕ ಪೂಜೆಗೆ ವಿನಿಯೋಗಿಸಲು ಬಿಡಲಾಗಿತ್ತು. ಮುಮ್ಮಡಿ ವೀರ ಬಲ್ಲಾಳನ ಕಾಲದ್ದೆನ್ನಲಾದ [ಯಳಂದೂರು ೧೧೦] ಶಾಸನ [ಕ್ರಿ.ಶ.೧೨೯೬] ಇದೇ ದೇವರಿಗೆ ಪ್ರತಿ ತಿಂಗಳೂ ಶೈವ ಪ್ರಬಂಧದ ವಾಚನಕ್ಕಾಗಿ ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ಇದೇ ಅರಸನ ಆಳ್ವಿಕೆಯ ಕಾಲಕ್ಕೆ ಸೇರಿರುವ [ಕ್ರಿ.ಶ.೧೩೦೧] ಮಾಂಬಳ್ಳಿಯ ಶಾಸನ [ಯಳಂದೂರು ೧೪೭] ವು ಅಲ್ಲಿನ ವೈದ್ಯನಾಥೇಶ್ವರ ದೇವಾಲಯದ ಶ್ರೀಕಾರ್ಯಕ್ಕಾಗಿ ನಾನಾ ದೇಸಿಗಳು ದತ್ತಿ ಬಿಟ್ಟರೆನ್ನುತ್ತದೆ.

ಒಂದನೇ ಬುಕ್ಕನ ಆಳ್ವಿಕೆಯ ಕಾಲದಲ್ಲಿ ಬಸವಯ್ಯ ದಣ್ಣಾಯಕನ ಕೈಕೆಳಗೆ ಅಧಿಕಾರಿಗಳಾಗಿದ್ದ ನಾಗರಸ ಮತ್ತು ಗಣಪತಿ [ಕ್ರಮವಾಗಿ ಚಾ.ನ.೨೬೪ ಮತ್ತು ೨೬೦] ಆ ದೇವಾಲಯಕ್ಕೆ ದತ್ತಿಗಳನ್ನು ನೀಡಿದರು. ಮುಮ್ಮಡಿ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ದೇವಾಲಯದ ರಂಗ ಮಂಟಪಕ್ಕೆ ಬೇರೆ ಬೇರೆ ಗೌಡತಿಗಳು ಅನೇಕ ಕಂಬಗಳನ್ನು ಮಾಡಿಸಿಕೊಟ್ಟರು. ಶಾಸನದಲ್ಲಿ ಅಣಿಲೇಶ್ವರ ಎಂದು ಕರೆಯಲಾಗುವ ಹರದನಹಳ್ಳಿಯ [ಪ್ರಾಚೀನ ಹೆಸರು ಮಗೆಯ] ದಿವ್ಯ ಲಿಂಗೇಶ್ವರ ದೇವಾಲಯವನ್ನು ಸುಮಾರು ಕ್ರಿ.ಶ.೧೩೧೬ರಲ್ಲಿ ಪುರುಸಗೌಡನ ಮಗ ಮಾರಗೌಡನು ಕಟ್ಟಿಸಿದ [ಚಾ.ನ.೨೯೩]. ಉಪೇಂದ್ರಪುರ [ಇಂದಿನ ಮದ್ದೂರು] ವೆಂಬ ಹೆಸರನ್ನು ಹೊಂದಿದ್ದ ಗ್ರಾಮದ ಮಹಾಜನರು ಮತ್ತಿತರ ಅಧಿಕಾರಿಗಳು ದೇಶಿನಾಥದೇವರ ಸೇವಾದಿಗಳಿಗೆ ದತ್ತಿ ನೀಡಿದುದನ್ನು ಕ್ರಿ..ಶ.೧೩೮೧ರ [ಯಳಂದೂರು ೪೨] ಮದ್ದೂರಿನ ಶಾಸನ ತಿಳಿಸುತ್ತದೆ. ಅದೇ ಗ್ರಾಮದಲ್ಲಿರುವ ದೇಶೇಶ್ವರ [ದೇಶಿನಾಥ] ದೇವಾಲಯದ ಅದಿಷ್ಠಾನದ ಮೇಲೆ ಕಂಡರಿಸಿರುವ ಶಾಸನ [ಯಳಂದೂರು ೪೧]ದ (ಜನವರಿ ೭) ಕಾಲಕ್ಕಿಂತ ಐದು ದಿನಗಳ ನಂತರದ್ದು [ಜನವರಿ ೧೧, ೧೩೮೧]. ಮೂಲದತ್ತಿಯ ಜೊತೆಗೆ ಇತರ ಭೂದಾನಗಳನ್ನು ನೀಡಿದ ಸಂಗತಿಯನ್ನು ಇದು ನಿರೂಪಿಸುತ್ತದೆ.

ಕ್ರಿ.ಶ. ೧೪೨೨ರ ಆಗಸ್ಟ್ ೨ಕ್ಕೆ ಸರಿ ಹೊಂದುವ ಗುಂಡ್ಲುಪೇಟೆ ೭೮ನೇ ಶಾಸನವು ತನ್ನ ತಂದೆಯಾದ ದೇವರಾಯ ಮಹಾರಾಯನಿಗೆ ದೇವಲೋಕ ಲಭಿಸಲಿ ಎಂದು ಪ್ರಾರ್ಥಿಸಿ ಆ ಸಲುವಾಗಿ ಮಹಾಮಂಡಲೇಶ್ವರ ಮುಮ್ಮಡಿ ಹರಿಹರನು ನಂಜುಂಡೇಶ್ವರ ದೇವರಿಗೆ ಮತ್ತು ಹನ್ನೊಂದು ಜನ ಬ್ರಾಹ್ಮಣರಿಗೆ ನೀಡಿದ ದಾನದ ವಿಷಯವನ್ನು ತಿಳಿಸುತ್ತದೆ. [ಎ.ಕ.ಪು.೮೧, ಸಂ.೧೧೧]. ಕ್ರಿ.ಶ.೧೫೩೫ನೆಯ ವರ್ಷದ ತ್ರಿಯಂಬಕಪುರದ ಶಾಸನ [ಗುಂ.ಪೇ.೧೩೭]ವು ತಿಳಿಸುವಂತೆ, ತ್ರಿಯಂಬಕ ದೇವರ ದೇವಾಲಯದ ಸ್ಥಾನಿಕ ನಂಜನಾಥ ಜೋಯಿಸನ ಮಗ ಅಯ್ಯಪನು ಕಮಲಾಪುರ ಅಗ್ರಹಾರವೆಂಬ ಪ್ರತಿನಾಮವನ್ನು ಪಡೆದಿದ್ದ ಹಲ್ಲಾಳ ಗ್ರಾಮದಲ್ಲಿದ್ದ ತನ್ನ ಭೂಮಿಯನ್ನು ರಾಮಾಭಟ್ಟಯ್ಯನ ಕಾರ್ಯಕರ್ತನೂ ಮತ್ತು ದೇವಾಲಯದ ಅಧಿಕಾರಿಯೂ ಆಗಿದ್ದ ಭಾಸ್ಕರಯ್ಯನಿಗೆ ವಿಕ್ರಯಿಸಿದನು. ತ್ರಯಂಬಕ ದೇವರ ದೇವಾಲಯಕ್ಕಾಗಿ ಆ ಭೂಮಿಯನ್ನು ಖರೀದಿಸಲಾಗಿತ್ತು.

ಕ್ರಿ.ಶ. ೧೫೨೩ರ [ಚಾ.ನ.೨೨೪] ಶಾಸನವು ಉಮ್ಮತ್ತೂರಿನ ನಾಯಕತನ ಮಾಡುತ್ತಿದ್ದ ಸಾಳುವ ಗೋವಿಂದ ರಾಜನ ಕೈಕೆಳಗೆ ಮಾಗಣಿಕಾರನಾಗಿದ್ದ ತುರುಮುಡಿ ಪಾಕದ ತಿರುವೇಂಗಡ ಮೊದಲಿಯಾರನ ಮಗ ಜಡೆಯಾರು ಮುದಲಿಯಾರು ಹಟ್ಟಲ ಕೋಟೆಯಲ್ಲಿ ವೀರಭದ್ರ ದೇವರ ಪ್ರತಿಷ್ಠೆ ಮಾಡಿಸಿದುದನ್ನು ನಿರೂಪಿಸುತ್ತದೆ. ದಾನ ನೀಡಿದ ಭೂಮಿಕಾಣಿಗಳನ್ನು ಆ ದೇವರ ಸ್ಥಾನಕ್ಕೆ ಕಾರ್ಯಕರ್ತನಾದ ಅಲ್ಲಪ್ಪನಿಗೆ ಸಲ್ಲಿಸಲಾಯಿತು. ಮುಂದೆ ಮತ್ತಾರಾದರೂ ದಾನ ನೀಡಿದರೆ ಅದೂ ಅಲ್ಲಪ್ಪನಿಗೇ ಸಲ್ಲತಕ್ಕದ್ದೆಂದೂ, ದೇವರ ಪೂಜೆಗೆ ತನಗಿಷ್ಟ ಬಂದವರನ್ನು ಅರ್ಚಕರನ್ನಾಗಿ ನೇಮಿಸಿಕೊಳ್ಳುವ ಪೂರ್ಣಾಧಿಕಾರ ಅವನಿಗುಂಟೆಂದೂ

ಇವುಗಳ ಬಗ್ಗೆ ಪಾರುಪತ್ಯಗಾರನೂ ಪ್ರಶ್ನಿಸುವಂತಿಲ್ಲವೆಂದೂ ಅದರಲ್ಲಿ ಸ್ಪಷ್ಟಪಡಿಸಿರುವುದೊಂದು ವಿಶೇಷ. ದೇವಾಲಯದ ಶ್ರೀಕಾರ್ಯವನ್ನು ವೇಳೆ ವೇಳೆಗೆ ತಪ್ಪದೇ ನಡೆಸಿಕೊಂಡು ಬರಬೇಕೆಂಬುದು ಅತಿ ಮುಖ್ಯವಾದ ನಿಬಂಧನೆಯಾಗಿತ್ತು. ಕ್ರಿ.ಶ. ೧೫೮೫ ರಲ್ಲಿ ಆರವೀಡು ಮನೆತನದ ಇಮ್ಮಡಿ ಶ್ರೀರಂಗರಾಯನ ಕೈಕೆಳಗೆ ದೇವಪ್ಪಗೌಡನ ಮಗ ರಾಮರಾಜ ನಾಯಕನು ಹದಿನಾಡ ಸೀಮೆಯ ಪ್ರಭುವಾಗಿದ್ದ. ಈತ ಗುಂಡಸಾಗರದ ಅಮೃತೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ [ಕೊ.ಗಾ. ୪೦].

ಚಾಮರಾಜನಗರದ ಮುಖ್ಯ ಆಕರ್ಷಣೆಯಾದ ಚಾಮರಾಜೇಶ್ವರ ದೇವಾಲಯವನ್ನು ಕ್ರಿ..ಶ. ೧೮೨೮ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿ ಲಿಂಗಪ್ರತಿಷ್ಠೆಯನ್ನು ಮಾಡಿಸಿದರೆಂದು ಅಲ್ಲಿನ ಶಾಸನ [ಚಾ.ನ. ೫]ವು ತಿಳಿಸುತ್ತದೆ. ಇದೇ ದೇವಾಲಯದ ಪಶ್ಚಿಮ ಭಾಗದಲ್ಲಿ ಲಿಂಗಯ್ಯನೆಂಬುವನು ಕ್ರಿ.ಶ.೧೬೪೫ರಲ್ಲಿ ಕಾಳಹಸ್ತೀಶ್ವರ ವಿಗ್ರಹವನ್ನು ಪ್ರತಿಷ್ಠೆ ಮಾಡಿಸಿದನು. [ಚಾ.ನ.೨೭೧]. ಒಂದು ಶತಮಾನದ ನಂತರ ಕ್ರಿ.ಶ. ೧೭೫೩ರಲ್ಲಿ ಹನುಮಂತಯ್ಯನೆಂಬುವನು ದಕ್ಷಿಣಾಮೂರ್ತಿಯ ಪ್ರತಿಷ್ಠೆ ಮಾಡಿಸಿದ [ಚಾ.ನ.೨೭೩].ಕ್ರಿ.ಶ. ೧೮೬೭ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮರಾಜೇಶ್ವರ ದೇವಾಲಯಕ್ಕೆ ಗೋಪುರವನ್ನು ನಿರ್ಮಿಸಿ, ಚಿನ್ನದ ಕಲಶವನ್ನು ಮಾಡಿಸಿ ಪ್ರತಿಷ್ಠಿಸಿದರು.

ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಆದಿಗುರು ಶ್ರೀ ಶಂಕರಾಚಾರ್ಯರು ಪಂಚಾಯತನ ಪೂಜಾ ವಿಧಾನವನ್ನು ಕೂಡ ಜನಪ್ರಿಯಗೊಳಿಸಿದರು. (ಕ್ರಿ.ಶ.೭೮೮–೮೨೦) ಸೂರ್ಯ, ಶಿವ, ಗಣಪತಿ, ವಿಷ್ಣು ಮತ್ತು ಶಕ್ತಿ ಈ ದೇವತೆಗಳನ್ನು ಅವರವರ ನಿರ್ದಿಷ್ಟ ಸ್ಥಾನದಲ್ಲಿಟ್ಟು ಪೂಜಿಸುವ ವಿಧಾನಕ್ಕೆ 'ಪಂಚಾಯತನ ಪೂಜೆ' ಎಂದು ಹೆಸರು. ಇದರಲ್ಲಿ ಯಾವ ಉಪಾಸಕನಿಗೆ ಯಾವ ಮೂರ್ತಿಯು ಕುಲದೇವತೆಯೋ ಆ ದೇವತಾ ಮೂರ್ತಿಯನ್ನು ಕೇಂದ್ರ ಸ್ಥಾನದಲ್ಲಿರಿಸಿ ಉಳಿದ ನಾಲ್ಕು ದೇವತಾ ಮೂರ್ತಿಗಳನ್ನು ಈಶಾನ್ಯ, ಆಗ್ನೇಯ, ನೈರುತ್ಯ ಮತ್ತು ವಾಯುವ್ಯಗಳಲ್ಲಿ ಇರಿಸಬೇಕು. ಇದರ ಮೂಲಕವಾಗಿ ಸೂರ್ಯನಿಂದ ಆರೋಗ್ಯ, ಗಣಪತಿಯಿಂದ ನಿರ್ವಿಘ್ನತೆ, ದುರ್ಗಾದೇವಿಯಿಂದ ಐಶ್ವರ್ಯ, ಶಿವನಿಂದ ಜ್ಞಾನ, ವಿಷ್ಣುವಿನಿಂದ ಮೋಕ್ಷ ಪಡೆಯಬಹುದೆಂಬ ನಂಬಿಕೆ ಇದೆ. ಬ್ರಹ್ಮನೇ ಸರ್ವಶಕ್ತ–ನಿತ್ಯ, ಉಳಿದುದೆಲ್ಲವೂ ಮಿಥ್ಯ, ನಾವು ಬ್ರಹ್ಮನನ್ನು ಹೊಂದಬೇಕು ಅಥವಾ ನಾವೇ ಬ್ರಹ್ಮನಾಗಬೇಕು. 'ಅಹಂಬ್ರಹ್ಮಾಸ್ಮಿ' ಎಂಬುದೇ ಇದರ ತತ್ವ ಸಿದ್ಧಾಂತ.

ಧರ್ಮ ಪ್ರಚಾರದ ದೀಕ್ಷೆ ತೊಟ್ಟು ಶ್ರೀಶೈಲದಿಂದ ಹೊರಬಂದಿದ್ದ ಅನೇಕ ಕಾಳಾಮುಖ ಆಚಾರ್ಯರು ಹಿಂದೆ ಕರ್ನಾಟಕ ಮತ್ತು ತಮಿಳು ನಾಡುಗಳಲ್ಲೆಲ್ಲಾ ಹರಡಿದ್ದರು. ಒಬ್ಬೊಬ್ಬರೂ ಒಂದೊಂದು ಸ್ಥಳದಲ್ಲಿ ಅವರದೇ ಹೆಸರಿನ ಶಿವಾಲಯಗಳನ್ನು ಸ್ಥಾಪಿಸಿಕೊಂಡು ಅವುಗಳ ಸ್ಥಾನಪತಿಗಳೆಂದು ಭಕ್ತ ವೃಂದವನ್ನು ಪಡೆದಿದ್ದರು. ಶಿವಲಂಕಾರೇಶ್ವರ ಎಂಬ ಆಚಾರ್ಯರು ಹಿರಿ ಮಡಿವಾಳ, ಹೂಗ್ಯ, ನಲ್ಲೂರು, ಕಣ್ಣೂರು, ಬಂಡಳ್ಳಿ ಮುಂತಾದೆಡೆಗಳಲ್ಲಿ ಚಂದ್ರುಣಿ ಮಠವನ್ನೂ, ಪಂದೇಶ್ವರರು ಬರಗೂರಿನಲ್ಲಿ ಶ್ರೀ ವಾಣಿಜ್ಯಪುರಿ ಮಠವನ್ನೂ, ಸಿದ್ಧೇಶ್ವರರು ಕಂಬಾಳ ಮತ್ತು ಪಾಲಮಲೆಯಲ್ಲಿ ಕೆಂಬಾಳು ಮಠವನ್ನೂ, ಬ್ರಹ್ಮೇಶ್ವರರು ಮಾರ್ಟಳ್ಳಿಯಲ್ಲಿ ಮಹಾಲಿಂಗಿ ಮಠವನ್ನೂ ಸ್ಥಾಪಿಸಿದ್ದರು. ಇವರು ಮಾತ್ರವಲ್ಲದೆ, ಶಾಗ್ಯದ ನೀಲಕಂಠೇಶ್ವರ, ಆಲಗು ಮೂಲೆಯ ಮಲ್ಲಿಕಾರ್ಜುನ, ತುಮ್ಮನಾಚಿಯ ತ್ರಿಯಂಬಕದೇವ, ಗಾಜನೂರಿನ ಸೋಮೇಶ್ವರ, ಮಿಣ್ಯದ ಬಸವೇಶ್ವರ, ಪೊನ್ನಾಚಿಯ ಪೊನ್ನಾಮಲೇಶ ಮುಂತಾದ ಕಾಳಾಮುಖ ಆಚಾರ್ಯರು ಮಾದೇಶ್ವರ ಸಾಂಗತ್ಯದಲ್ಲಿ ಹೆಸರಿಲ್ಪಟ್ಟಿದ್ದಾರೆ.

## ವೀರಶೈವ ಮತ

ಇದನ್ನು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಎಂದೂ ಕರೆಯುವರು. ಇದರ ಪ್ರಕಾರ ಶಿವನೊಬ್ಬನೇ ಸತ್ಯ, ಎಲ್ಲವೂ ಶಿವಮಯ. ಇದನ್ನು ಪ್ರತಿಪಾದಿಸಿದವರು ಬಸವಣ್ಣನವರು (ಕ್ರಿ.ಶ ೧೧೩೧ರಿಂದ ೧೧೬೭) ವೀರಶೈವದಲ್ಲಿ ಅಂಗದ ಮೇಲೆ ಲಿಂಗವಿರುವವನೇ ಶರಣ ಅಥವಾ ಶಿವಸ್ವರೂಪಿ, ತನ್ನ ಶಕ್ತಿಗೆ ಅಧೀನನಾಗಿ ತಾನೇ ಜೀವನಾಗಿರುವ ಶಿವನು ತನ್ನ ಶಕ್ತಿಯನ್ನು ಜಯಿಸುತ್ತಾನೆ ಎಂದು ನಂಬಿರುವುದರಿಂದ ಶಿವನೇ ಜಗತ್ತಿಗೆ ಆಧಾರ ಎನ್ನುವರು. ಚಾಮರಾಜ ನಗರ ಜಿಲ್ಲೆಯಲ್ಲಿ ವೀರ ಶೈವರು ಅಥವಾ ಲಿಂಗಾಯತರು ಗಣನೀಯ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಬಹುಶಃ ೧೪ ನೇ ಶತಮಾನದಿಂದ ಈ ಪ್ರದೇಶದಲ್ಲಿ ವೀರಶೈವ ಧರ್ಮ ಹೆಚ್ಚು ಜನಪ್ರಿಯವಾಗುತ್ತಾ ಬಂದಿರುವಂತಿದೆ.

ಕುಂತೂರಿನ ವೀರಶೈವ ಮತದ ಗುರು ಸಾಲೂರ ಶಾಂತದೇವನಿಗೆ ಹದಿನಾಡಿಗೆ ಸೇರಿದ ಕುಂತೂರು ಗ್ರಾಮವನ್ನು ದಾನ ನೀಡಿದುದನ್ನು ಕ್ರಿ.ಶ. ೧೫೧೨ ರ [ಕೊಳ್ಳೇಗಾಲ ೭] ಶಾಸನ ತಿಳಿಸುತ್ತದೆ. ಪ್ರತಿಗ್ರಹಿಯು ಮತದಲ್ಲಿ ೫೦ ವೊಡೆಯರಿಗೆ ಆರೋಗಣೆ ವಸ್ತುಗಳನ್ನು ಒದಗಿಸಿ ಅವರೊಂದಿಗೆ ಅಲ್ಲಿ ವಾಸಿಸಬೇಕೆಂದು ಹೇಳಿದೆ. ಇದೇ ಮತದ ಗುರುವಾದ ನಂಜಯ್ಯ ದೇವ ಎಂಬಾತನನ್ನು ಕ್ರಿ.ಶ. ೧೫೫೯ರ [ಕೊ.ಗಾ. ೮] ಶಾಸನವು ಉಲ್ಲೇಖಿಸುತ್ತದೆ. ಇದೇ ಶಾಸನವು ಹೇಳುವಂತೆ, ರಾಮಾಭಟ್ಟಯ್ಯ ಅಚ್ಯುತರಾಯನ ಕೈಕೆಳಗಿನ ಉನ್ನತ ಅಧಿಕಾರಿಯಾಗಿದ್ದ. ಅವನು ತುಮುಲವೊಂದು [ಬಹುಶ ಕುಂತೂರಿನಲ್ಲಿ] ಸಂಭವಿಸಿದಾಗ ೩೦ ವರಹಗಳನ್ನು ಸಂಗ್ರಹಿಸಿದ್ದನೆಂದು ಕಾಣುತ್ತದೆ. ಈ ಗ್ರಾಮವು ವಾಸ್ತವದಲ್ಲಿ ವೀರಶೈವ ಮತವೊಂದಕ್ಕೆ ಸರ್ವಮಾನ್ಯವಾಗಿ ಸೇರಿದುದಾಗಿತ್ತು. ಹಾಗಾಗಿ ಈ ಗ್ರಾಮ ತೆರಿಗೆಗಳನ್ನು ನೀಡಬೇಕಾಗಿರಲಿಲ್ಲ. ಆದರೆ ಆಗ ನಡೆದಿದ್ದ ಗೊಂದಲದಿಂದಾಗಿ ಪುಂಡುಗಂದಾಯದ ರೂಪದಲ್ಲಿ ರಾಮಾಭಟ್ಟನು ಅದನ್ನು ಸಂಗ್ರಹಿಸಲು ಅವಕಾಶವಾಗಿತ್ತು, ಆ ಹಣದೊಂದಿಗೆ ಅವನು ಹಿಂತಿರುತ್ತಿದ್ದಾಗ ವೀರಶೈವ ಗುರು ಸಾಲೂರ ನಂಜಯ್ಯ ದೇವನು ರಾಮಾಭಟ್ಟನನ್ನು ಆಶೀರ್ವದಿಸಿದ ಕಾರಣ ಅವನು ಆ ಮೊತ್ತವನ್ನು ಹಿಂತಿರುಗಿಸಿದ್ದು ಮಾತ್ರವೇ ಅಲ್ಲದೆ, ತೆರಿಗೆಗಳಿಂದ ವಿನಾಯತಿ ನೀಡಿ ಅದನ್ನು ಸರ್ವಮಾನ್ಯವಾಗಿ ಬಿಟ್ಟು ಶಾಸನವೊಂದನ್ನು ಹಾಕಿಸಿದನು.

ಕ್ರಿ.ಶ. ೧೫೮೫ ರಲ್ಲಿ ಆರವೀಡು ಮನೆತನದ ಇಮ್ಮಡಿ ಶ್ರೀರಂಗರಾಯನ ಕೈಕೆಳಗೆ ದೇವಪ್ಪಗೌಡನ ಮಗ ರಾಮರಾಜ ನಾಯಕನು ಹದಿನಾಡ ಸೀಮೆಯ ಪ್ರಭುವಾಗಿದ್ದ. ಈತ ಗುಂಡ ಸಾಗರದ ಅಮೃತೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ [ಕೊ.ಗಾ. ४೦]. ಇದೇ ರಾಮರಾಜ ನಾಯಕನು ಒಂದನೇ ವೆಂಕಟಪತಿಯ ಕೈಕೆಳಗೂ ಕ್ರಿ.ಶ. ೧೫೯೩ ರಲ್ಲಿ ಸೇವೆ ಸಲ್ಲಿಸುತ್ತಿದ್ದನು [ಚಾ.ನ. ೨೧೬]. ಇವನು ಶಿವರಾತ್ರೆಯ ದೇವನ ಶಿಷ್ಯನಾದ ಸುತ್ತೂರ ಮತದ ಚನ್ನ ಬಸವರಾಜ ದೇವನಿಗೆ ಹಸುರಹಳ್ಳಿ ಗ್ರಾಮವನ್ನು ದಾನ ನೀಡಿದ.

ಕ್ರಿ.ಶ. ೧೬೦೫ ರ ಒಂದನೇ ವೆಂಕಟಪತಿಯ ಶಾಸನ [ಚಾ.ನ. ೧]ವು ಹಂಗರೆಪುರ ಗ್ರಾಮವನ್ನು ಶ್ರೋತ್ರಿಯ ಗುತ್ತಿಗೆಯಾಗಿ ಅನುಭವಿಸುತ್ತಿದ್ದ ಮಲರಾಜ ಒಡೆಯ ಮತ್ತು ಅದರ ಕಂದಾಯವನ್ನು ಪಡೆದುಕೊಳ್ಳುತ್ತಿದ್ದ ಅರೆಕೊತಾರದ ಚಂದ್ರಶೇಖರ ವೊಡೆಯರ ಪರಸ್ಪರ ಒಪ್ಪಿಗೆಯ ಮೇರೆಗೆ ಅರೆಕೊತಾರದ ವೀರಭದ್ರ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಕಳಲೆಯ ಪ್ರಭು ಮಲ್ಲರಾಜ ಅರಸನ ಮಗಳಾದ ಮಲ್ಲಾಜಮ್ಮ ಎಂಬುವಳು ಕಲ್ಲಮಠವೆಂಬ ಹೆಸರಿನ [ಮಹಾ ಮಹತ್ತಿನ ಕಲ್ಲಮಠ] ವೀರಶೈವ ಮಠವೊಂದನ್ನು ಕಟ್ಟಿಸಿದುದನ್ನು ಕ್ರಿ.ಶ. ೧೬೪೭ ರ ಮಲ್ಲಾರಪಾಳ್ಯ ಶಾಸನವು [ಯಳಂ. ೧೭೦] ಉಲ್ಲೇಖಿಸುತ್ತದೆ. ಈ ಮಠಕ್ಕೆ ಹದಿನಾಡ ಪ್ರಭುವಾದ ಲಿಂಗರಾಜಯ್ಯನು ತನ್ನ ಸೀಮೆಯೊಳಗಣ ಮದ್ದೂರ ಸ್ಥಳಕ್ಕೆ ಸೇರಿದ ಎರಡು ಗ್ರಾಮಗಳನ್ನು ದತ್ತಿ ಬಿಟ್ಟನು.

ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆಯಾದ ಚಾಮರಾಜನ ಜನ್ಮ ಸ್ಥಳವಾದ ಅರೆಕೊತಾರದಲ್ಲಿ ಚಾಮರಾಜೇಶ್ವರ ದೇವಾಲಯವನ್ನು ಕಟ್ಟಿಸಿದಾಗ [೧೮೨೮], ಅಂಚವಾಡಿಯ ವೀರಭದ್ರ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಯಿತು.

## ವೈಷ್ಣವ ಮತ

**(ಅ) ಶ್ರೀವೈಷ್ಣವ ಪಂಥ:** ಶ್ರೀ ರಾಮಾನುಜಾಚಾರ್ಯರು ತಮಿಳುನಾಡಿನ ಶ್ರೀ ಪೆರಂಬೂರಿನಲ್ಲಿ ಜನಿಸಿದ್ದು, ಮೇಲುಕೋಟೆಯನ್ನು ಕಾರ್ಯಕ್ಷೇತ್ರವಾಗಿಸಿಕೊಂಡಿದ್ದರು. ಹಿಂದೂ ಧರ್ಮದ ಒಂದು ಶಾಖೆಯಾದ ಶ್ರೀವೈಷ್ಣವ ಮತವನ್ನು (ಕ್ರಿ.ಶ ೧೦೧೭–೧೧೩೭) ಇವರು ಪ್ರತಿಪಾದಿಸಿದರು. ಇದನ್ನು ವಿಶಿಷ್ಟಾದ್ವೈತ ಪಂಥವೆಂದೂ ಕರೆಯುತ್ತಾರೆ. ವಿಜಯನಗರ ಮತ್ತು ಮೈಸೂರ ಅರಸರು ವಿಶೇಷವಾಗಿ ಈ ಮತಕ್ಕೆ ಪ್ರೋತ್ಸಾಹ ನೀಡಿದರು. ಕೃಷ್ಣ, ನರಸಿಂಹ, ರಾಮ, ಜನಾರ್ಧನ, ಗೋಪಾಲ, ಕೇಶವ ಮುಂತಾದ ಹೆಸರಿನಿಂದ ವಿಷ್ಣುವನ್ನು ಪೂಜಿಸಲಾಗುತ್ತದೆ. ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿರಂಗ, ಗೋಪಾಲಸ್ವಾಮಿ ಬೆಟ್ಟದ ವೇಣುಗೋಪಾಲ, ಗುಂಡ್ಲುಪೇಟೆಯ ವಿಜಯನಾರಾಯಣ ಮತ್ತು ಪರವಾಸುದೇವ, ತೆರಕಣಾಂಬಿಯ ವರದರಾಜ ಮತ್ತು ಗೋಪಾಲಕೃಷ್ಣ ದೇವಸ್ಥಾನ ಮುಂತಾದವು ಜಿಲ್ಲೆಯಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಶೈವ ಮತ್ತು ವಿಷ್ಣು ಪಂಥಗಳು ಸಮನಾಗಿಯೇ ಕಂಡುಬರುತ್ತವೆ.

ಕ್ರಿ.ಶ. ೧೩೭೨ರ ಗುಂಡ್ಲುಪೇಟೆ ಶಾಸನದಲ್ಲಿ ಪ್ರಸನ್ನ ವಿಜಯಾಪುರದ ಅಗ್ರಹಾರದ ಮಹಾಜನಗಳು ರಾಮನಾಥ ದೇವಾಲಯದ ಪಾತ್ರ ಭೋಗಕ್ಕಾಗಿ [ನರ್ತಕಿಯರ ಸೇವೆ] ೩೦ ಗದ್ಯಾಣಗಳನ್ನು ದಾನವಾಗಿ ಕೊಟ್ಟ ವಿಷಯವಿದೆ. ಇದೇ ಊರಿನಲ್ಲಿ ದೊರೆತ ಇದೇ ಕಾಲದ ಇನ್ನೊಂದು ಶಾಸನ [ಗುಂ.ಪೇ. ೧೭] ನಾಗವ್ವೆಯ ಮಗನಾದ ಹಿರಿಯ ರಾಮಣ್ಣನು ಕೇತವ್ವೆಯನ್ನು ದೇವಾಲಯದ ಪಾತ್ರವೆಂದು ರಾಮನಾಥ ದೇವರಿಗೆ ಪಾತ್ರಭೋಗವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಚಾಮರಾಜ ನಗರದ ಶಾಸನವೊಂದು [ಚಾ.ನ. ೭೨] ವಾಳ್ಳೆಯಮ್ಮುಗಿಯಾರೆಡುತ್ತಗ್ಯೆ ಅಳಗಿಯಾನ್ ಎಂಬ ವ್ಯಕ್ತಿಗೆ ಲಕ್ಷ್ಮೀ ನಾರಾಯಣ ದೇವಾಲಯದ ಶ್ರೀವೈಷ್ಣವರು ಗ್ರಾಮವೊಂದನ್ನು ದತ್ತಿಯಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈತನು ಒಂದು ಮಹಾಮಂಟಪವನ್ನು ಆ ದೇವಾಲಯಕ್ಕೆ ಕಟ್ಟಿಸಿಕೊಟ್ಟಿದ್ದರಿಂದ ಅವನ ಸೇವೆಯನ್ನು ಗೌರವಿಸಿ ಈ ದತ್ತಿಯನ್ನು ನೀಡಿರಬಹುದು.

ಕ್ರಿ.ಶ. ೧೨೧೬ ರ ಶಾಸನ [ಚಾ.ನ. ೩೨] ವೊಂದು ೩೦ ಗದ್ಯಾಣಗಳನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ. ಬಹುಶಃ ವಾಸುದೇವ ದೇವಾಲಯದಲ್ಲಿ ತಿರುನಡೈ ಮಾಳಿಗೈ [ಪ್ರದಕ್ಷಿಣಾ ಪಥ] ನಿರ್ಮಿಸಲು ಕೊಟ್ಟಿರಬಹುದೆಂದು ಕಾಣುತ್ತದೆ. ಸುಮಾರು ೧೨ನೇ ಶತಮಾನದ ಲಿಪಿಯಲ್ಲಿರುವ ಶಾಸನವೊಂದು [ಚಾ.ನ. ೩೪೧] ನಂದಾ ದೀಪಕ್ಕಾಗಿ ನೀಡಿದ ದತ್ತಿಯೊಂದನ್ನು ಉಲ್ಲೇಖಿಸುತ್ತದೆ. ಈ ದೇವಾಲಯದ ಮಂಟಪದಲ್ಲಿನ ಕಂಬಗಳನ್ನು ಅನೇಕ ಭಕ್ತರು ಕಟ್ಟಿಸಿಕೊಟ್ಟರು [ಚಾ.ನ. ೩೨೫–೩೪೦].

ಗುಂಡ್ಲುಪೇಟೆಯ ಪ್ರಾಚೀನ ದೇವಾಲಯ ಕುಡುಗನಾಡ ವಿಜಯ ನಾರಾಯಣ ದೇವರ ನಿತ್ಯ ಸಮಾರಾಧನೆಗೆ ಕ್ರಿ.ಶ ೧೨೨೧ರಲ್ಲಿ ಶ್ರೀರಂಗ ಡಣ್ಣಾಯಕನು ದತ್ತಿ ಬಿಟ್ಟಿರುವ ಅಂಶವನ್ನು ಕಲ್ಲಹಳ್ಳಿಯ ಊರಿನ ಬಾಗಿಲಲ್ಲಿರುವ ಶಾಸನ ತಿಳಿಸುತ್ತದೆ. ಹೊಯ್ಸಳ ವಿಷ್ಣುವರ್ಧನ ಇದನ್ನು ಪ್ರತಿಷ್ಠಿಸಿದನೆಂದು ನಂಬಲಾಗಿದೆ. ಕ್ರಿ.ಶ. ೧೫೪೩ ರಲ್ಲಿ ಆದಿತ್ಯರಸರ ಮಕ್ಕಳು ರುಪ್ಪರಸವೊಡೆಯರು ಈ ದೇವಾಲಯದ ಘಾಳಿ ಮಂಟಪವನ್ನು ಕಟ್ಟಿಸಿ ಉದಯ ಕಾಳದ ನೈವೇದ್ಯಕ್ಕೆ ದತ್ತಿಯನ್ನು ಬಿಟ್ಟಿದ್ದಾರೆ.

ಗೋಪಾಲ ಸ್ವಾಮಿ (ಹಿಮವದ್ ಗೋಪಾಲಸ್ವಾಮಿ) ಬೆಟ್ಟದಲ್ಲಿ ತೆರಕಣಾಂಬಿಯ ಪೆರುಮಾಳ ದಣ್ಣಾಯಕನ ಮಗ ಮಾಧವ ದಣ್ಣಾಯಕನು ಕ್ರಿ.ಶ. ೧೩೧೫ ರಲ್ಲಿ ಗೋಪಿನಾಥನನ್ನು ಪ್ರತಿಷ್ಠಾಪಿಸಿದ. ಶ್ರೀ ಕೃಷ್ಣನು ರುಕ್ಮಿಣಿ ಸತ್ಯಭಾಮೆಯರೊಡನೆ ಇಲ್ಲಿ ನೆಲೆಸಿರುವನೆಂದು ಪ್ರತೀತಿ. ದೇವರ "ಅಂಗರಂಗ ಭೋಗಕ್ಕೆ, ತಿರುವಳಿಯಾಟಕ್ಕೆ ಬಲ್ಲಾಳ ದೇವರಸನಿಂದ ಕುಡುಗಣದೊಳಗಣ ಕಣ್ಣವಗಾಲವನು" ದತ್ತಿ ಬಿಟ್ಟುದನ್ನು ಶಾಸನಗಳು ಅರುಹುತ್ತವೆ.

ಯಳಂದೂರು ತಾಲ್ಲೂಕಿನ ಬಿಳಿಕಲ್ಲು ತಿರು ವೆಂಕಟನಾಥನಿಗೆ ಹದಿನಾಡಿನ ಮುದ್ದುರಾಜನು ೧೬೬೭ ರಲ್ಲಿ ದತ್ತಿ ಬಿಟ್ಟ ವಿಷಯ ಇಲ್ಲಿ ದೊರಕಿರುವ ತಾಮ್ರ ಶಾಸನದಿಂದ ತಿಳಿದು ಬರುತ್ತದೆ. ದಿವಾನ್ ಪೂರ್ಣಯ್ಯನವರು ಈ ದೇವಾಲಯದ ಸೇವೆಗಾಗಿ ಎರಡು ಗ್ರಾಮಗಳನ್ನು ದತ್ತಿ ಬಿಟ್ಟರೆಂದು ತಿಳಿದು ಬರುತ್ತದೆ.

**(ಆ) ವೈಷ್ಣವ ಪಂಥ:** ಇದು ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತ. (ಕ್ರಿ.ಶ ೧೨೩೮–೧೩೧೭) ವಿಷ್ಣುವಿನ ಅರ್ಚನೆಯೇ ಮುಖ್ಯ. ಎಲ್ಲ ಜೀವರಿಗೂ ಮತ್ತು ದೇವರಿಗೂ ಇರುವ ಭಿನ್ನತೆಗಳನ್ನು ಹೇಳುವುದರಿಂದ ದ್ವೈತಸಿದ್ಧಾಂತವೆನ್ನುವರು.

ಉಡುಪಿಯ ಬಳಿಯ ಬೆಳ್ಳೆ [ಪಾಜಕ] ಕ್ಷೇತ್ರದಲ್ಲಿ ಹದಿಮೂರನೇ ಶತಮಾನದ ಆದಿಯಲ್ಲಿ ಜನಿಸಿದ ಶ್ರೀ ಮಧ್ವಾಚಾರ್ಯರೇ ದ್ವೈತ ಸಂಪ್ರದಾಯವನ್ನು ಜನಪ್ರಿಯಗೊಳಿಸಿದವರು. ಅವರು ಈ ಹಿಂದಿನಿಂದ ಇದ್ದ ದ್ವೈತ ತತ್ವಗಳನ್ನೆಲ್ಲಾ ಪುನರ್ವಿಮರ್ಶೆ ಮಾಡಿ ವೇದ ಸಾಹಿತ್ಯದೊಡನೆ ಸಮನ್ವಯಗೊಳಿಸಿ, ಅವುಗಳ ಪರಮಾರ್ಥವನ್ನು ಪರಿಷ್ಕರಿಸಿ, ದ್ವೈತ ಮತ ಮತ್ತು ಅದರ ದರ್ಶನವನ್ನು, ಸದ್ವೈಷ್ಣವ ಸಂಪ್ರದಾಯವನ್ನೂ ಪ್ರತಿಷ್ಠಿಸಿದರು. ಜೀವರಿಗೂ ಪರಮಾತ್ಮನಿಗೂ ಪಾರಮಾರ್ಥಿಕವಾದ ಭೇದವನ್ನು ಇಹದಲ್ಲಿಯೂ ಪರದಲ್ಲಿಯೂ ಸ್ಥಾಪಿಸಿರುವುದರಿಂದ ಇವರ ಮತಕ್ಕೆ 'ದ್ವೈತ ಮತ' ಎಂಬ ಹೆಸರು ಬಂದಿದೆ.

ಶ್ರೀ ಮಧ್ವಾಚಾರ್ಯರ ಸಿದ್ಧಾಂತ ತತ್ವಗಳೆಂದರೆ, ಹರಿಯೇ ಸರ್ವೋತ್ತಮನು, ಈ ಜಗತ್ತು ಸತ್ಯವಾದುದು [ಮಿಥ್ಯೆಯಲ್ಲ], ಚೇತನ ಅಚೇತನ ಮತ್ತು ಈಶ್ವರ ಅವರಿಗಿರುವ ಭೇದವು ಸತ್ಯವಾದುದು [ಪಾರಮಾರ್ಥಿಕವು], ಸಕಲ ಜೀವರೂ ಶ್ರೀ ಹರಿಗೆ ಅಧೀನರು ಮತ್ತು ಅವನ ದಾಸರು, ಜೀವರು ಪರಸ್ಪರ ತಾರತಮ್ಯವುಳ್ಳವರು, ಜೀವನಿಗೆ ಸ್ವರೂಪಾನಂದವುಂಟಾಗುವುದೇ ಮುಕ್ತಿಯು, ಅಂತಹ ಮೋಕ್ಷಕ್ಕೆ ನಿರ್ಮಲವಾದ ಭಕ್ತಿ ಮುಖ್ಯ ಸಾಧನವು, ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂಬುದಾಗಿ ಪ್ರಮಾಣಗಳು ಮೂರು ಬಗೆಯಾಗಿವೆ, ಸಕಲ ವೇದಗಳಿಂದಲೂ ಮುಖ್ಯವಾಗಿ ಪ್ರತಿಪಾದ್ಯನು ಶ್ರೀ ಹರಿಯು.

ಜಿಲ್ಲೆಯಲ್ಲಿ ರಾಘವೇಂದ್ರ ಸ್ವಾಮಿ ಮಠಗಳೂ ಸೇರಿದಂತೆ ಮಧ್ವ ಸಂಪ್ರದಾಯದ ಕೆಲವು ಮಠಗಳಿವೆ. ಶ್ರಾವಣ ಬಹುಳ ಬಿದಿಗೆಯಂದು ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನೂ, ಮಾಘ ಶುದ್ಧ ನವಮಿಯಂದು ಮಧ್ವನವಮಿಯನ್ನೂ ಈ ಪಂಥದವರು ಆಚರಿಸುತ್ತಾರೆ.

## ಜೈನ ಧರ್ಮ

ಜೈನ ಧರ್ಮವು ಚಾಮರಾಜನಗರ ಜಿಲ್ಲೆಯ ಪ್ರಮುಖವಾದ ಧರ್ಮಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಈ ಪ್ರದೇಶವನ್ನು ಹಿಂದೆ ಆಳುತ್ತಿದ್ದ ಗಂಗರು, ಚೋಳರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದರಸರು, ಉಮ್ಮತ್ತೂರು ದೊರೆಗಳು ಮತ್ತು ಮೈಸೂರಿನ ಒಡೆಯರು ಜೈನ ಧರ್ಮಕ್ಕೆ ಉದಾರ ಪ್ರೋತ್ಸಾಹ ಮತ್ತು ಪೋಷಣೆ ನೀಡಿರುವುದಕ್ಕೆ ಶಾಸನಗಳು ಮುಂತಾದ ಚಾರಿತ್ರಿಕ ದಾಖಲೆಗಳು ಪುಷ್ಠಿ ಒದಗಿಸುತ್ತವೆ. ಅನೇಕ ರಾಜರು ಜೈನ ಮತಾವಲಂಬಿಗಳಾಗಿ ಇದಕ್ಕೆ ಹೆಚ್ಚಿನ ನೆರವು ಮತ್ತು ಪ್ರೋತ್ಸಾಹ ದೊರಕಿರುವುದೂ ಉಂಟು.

ಅರಿಕುಠಾರ ಅಥವಾ ಅರಕೊಟ್ಟಾರ (ಈಗ ಚಾಮರಾಜನಗರ)ದಲ್ಲಿ ಬಸದಿಗಳ ಜೀರ್ಣೋದ್ಧಾರ ಮತ್ತು ಪೂಜಾ ಸೇವೆಗಳಿಗಾಗಿ ಭೂಮಿಯನ್ನು ದಾನವಿತ್ತ ಅನೇಕ ಶಾಸನಗಳು ಕಂಡು ಬರುತ್ತವೆ. ಹೊಯ್ಸಳ ವಿಷ್ಣುವರ್ಧನ ಸೇನಾಧಿಪತಿ (ಕ್ರಿ.ಶ ೧೦೦೮–೧೧೫೨) ಒಂದನೇ ಪುಣಿಸಮಯ್ಯನ ಮೊಮ್ಮಗ ಎರಡನೇ ಪುಣಿಸಮಯ್ಯನು ತ್ರಿಕೂಟ ಬಸದಿಯನ್ನು ಕಟ್ಟಿಸಿದ. ಇದನ್ನು 'ಪುಣಿಸಜಿನಾಲಯ'ವೆಂದೇ ಕರೆಯಲಾಗುತ್ತಿದೆ. ಶ್ರೀವಿಜಯಪಾರ್ಶ್ವನಾಥ ಮೂಲದೇವರು, ದೀಪಂಗುಡಿ, ಚೋಳದೇಶ, ಪಾಂಡ್ಯ ದೇಶಗಳಿಂದ ವಲಸೆ ಬಂದ ಹನ್ನೆರಡು ಗೋತ್ರಗಳ ಜೈನ ಬ್ರಾಹ್ಮಣರಲ್ಲಿ ಒಂಭತ್ತು ಗೋತ್ರದವರು ಅರಿಕುಠಾರದಲ್ಲಿ ನೆಲೆಸಿದರು. ಇವರು ಬರುವ ಮುನ್ನವೂ ಇಲ್ಲಿ ಏಳುನೂರ ಒಕ್ಕಲು ಜೈನ ಬ್ರಾಹ್ಮಣರು ವಾಸಿಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ.

ಕ್ರಿಸ್ತಶಕದ ಪ್ರಾರಂಭದಿಂದಲೂ ಜೈನ ದಾರ್ಶನಿಕರ ನೆಲೆವೀಡಾಗಿದ್ದ ಕೊಳ್ಳೇಗಾಲ ಮತ್ತು ಇದರ ಸುತ್ತಮುತ್ತಲಿನ ಪ್ರದೇಶದಲ್ಲಿ ಜೈನ ಮುನಿಗಳು ನೆಲೆಸಿದ್ದರು. ಅವರಿಗಾಗಿ ಅಲ್ಲಲ್ಲಿ ಬಸದಿಗಳು ಕಟ್ಟಲ್ಪಟ್ಟಿದ್ದವು ಮತ್ತು ಅವರು ಪೂಜೆ ಸಲ್ಲಿಸಲು ಜಿನಮೂರ್ತಿಗಳು ಪ್ರತಿಷ್ಠಾಪನೆಗೊಂಡಿದ್ದವು. ದೇವಚಂದ್ರನು ರಾಜಾವಳಿ ಕಥೆಯಲ್ಲಿ ತಿಳಿಸಿರುವಂತೆ ಕೊಳ್ಳೇಗಾಲದ ಸಮೀಪದಲ್ಲೇ ಇರುವ ಮಣಗಳ್ಳಿಯು ಸಮಂತಭದ್ರನೆಂಬ ಜೈನಾಚಾರ್ಯನ ತಪೋಭೂಮಿಯೆಂದು ಪ್ರಸಿದ್ಧಿ ಪಡೆದಿತ್ತು. ಕ್ರಿ.ಶ.ಸು. ೪೦೦ರಲ್ಲಿದ್ದ ಇವನು ಇಡೀ ದೇಶದಲ್ಲಿ ಸಂಚಾರ ಮಾಡಿ ಅನೇಕ ರಾಜಾಸ್ಥಾನಗಳನ್ನು ಸಂದರ್ಶಿಸಿ ಜೈನ ಧರ್ಮದ ಪ್ರಭಾವವನ್ನು ಹೆಚ್ಚಿಸಿದನು. ಕೊಳ್ಳೇಗಾಲಕ್ಕೆ ಸೇರಿದಂತಿರುವ ಬಸದಿಪುರದಲ್ಲಿ ಮಹಾ ಜೈನಾಚಾರ್ಯನಾದ ಪೂಜ್ಯ ಪಾದನು [ಕ್ರಿ.ಶ. ೬೨೫–೬೭೫] ಬಹಳ ಕಾಲ ವಾಸವಾಗಿದ್ದನು. ದೇವನಂದಿ ಎಂಬ ಹುಟ್ಟು ಹೆಸರಿನ ಇವನೇ ಮುಂದೆ ಜಿನೇಂದ್ರ ಬುದ್ಧಿ ಎಂಬ ಹೆಸರನ್ನೂ, ವನ ದೇವತೆಗಳಿಂದ ಪಾದಪೂಜೆ ಮಾಡಿಸಿಕೊಂಡುದರಿಂದ ಪೂಜ್ಯಪಾದನೆಂಬ ಹೆಸರನ್ನೂ ಪಡೆದುಕೊಂಡನು. ಪೂರ್ವ ವಿದೇಹ ರಾಜ್ಯದ ಸಮವಸರಣದಲ್ಲಿದ್ದ ಶ್ರೀ ಜಿನಪತಿಗಳಿಂದ ಜೈನ ಸಿದ್ಧಾಂತಗಳನ್ನು ಅಭ್ಯಾಸಮಾಡಿ ಅವನ್ನು ಗ್ರಂಥಸ್ಥಗೊಳಿಸಿದ್ದು ಪೂಜ್ಯಪಾದನ ಹಿರಿಮೆ. ಗುಂಡ್ಲುಪೇಟೆ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಜೈನ ಬಸದಿಗಳು ನಿರ್ಮಾಣವಾಗಿದ್ದು, ಜೈನ ಕವಿಗಳು ಸಾಹಿತ್ಯ ರಚನೆ ಮಾಡಿರುವುದು ಕಂಡು ಬಂದಿದೆ.

ಜಿಲ್ಲೆಯ ದಕ್ಷಿಣ ತುದಿಯ ಗುಂಡ್ಲುಪೇಟೆ ತಾಲೂಕು ಕರ್ನಾಟಕ, ಕೇರಳ, ತಮಿಳುನಾಡಿನ ಗಡಿಭಾಗದಲ್ಲಿದೆ. ಗುಂಡ್ಲುಪೇಟೆ ಕೋಟೆಯ ಬಸ್ತಿಮಾಳದಲ್ಲಿರುವ ಕ್ರಿ.ಶ ೧೧೯೬ಕ್ಕೆ ಸೇರಿದ ಶಾಸನದಲ್ಲಿ ಹೊಯ್ಸಳ ಇಮ್ಮಡಿ

ವೀರಬಲ್ಲಾಳನನ್ನು 'ಸಮ್ಯಕ್ತ್ವ ಚೂಡಾಮಣಿ'ಎಂದು ಕರೆದು, ಕುಡಗನಾಡ ಸಮಸ್ತ ಪ್ರಬುಗಾವುಂಡುಗಳು ತುಪ್ಪೂರು ಬಿಟ್ಟಿಜಿನಾಲಯಕ್ಕೆ ಮಡಹಳ್ಳಿಯನ್ನು ದತ್ತಿ ಬಿಟ್ಟ, ವಜ್ರನಂದಿ ಸಿದ್ಧಾಂತ ದೇವರ ಶಿಷ್ಯ ನಾಗಪಂಡಿತರ ಮಗ ಕನಕನಂದಿ ಪಂಡಿತರ ಕಾಲು ತೊಳೆದು ಸಮಸ್ತ ಗೌಡರೂ ಜಿನಾಲಯದ ಜೀರ್ಣೋದ್ಧಾರ ಮಾಡಿದ, ದೇವರ ಅಷ್ಟವಿಧಾರ್ಚನೆ ಮತ್ತು ಮುನಿಗಳ ಆಹಾರದಾನಕ್ಕೆ ದತ್ತಿಕೊಟ್ಟ ವಿಚಾರವನ್ನು ತಿಳಿಸುತ್ತದೆ. ಹಾಗೇ ವಿಜಯಪುರದ ಅನಂತ ದೇವರಿಗೆ ದತ್ತಿ ಬಿಟ್ಟ ವಿಚಾರವನ್ನು ಇನ್ನೊಂದು ಶಾಸನ ತಿಳಿಸುತ್ತದೆ. ಕೆಲಸೂರಿನ ಬಸದಿಯಲ್ಲಿರುವ ನಾಲ್ಕು ಶಾಸನಗಳು, ತಮಿಳಿನಲ್ಲಿರುವ ಶಾಸನವೊಂದು ದತ್ತಿ ಬಿಟ್ಟ ಅಂಶವನ್ನು ಸೂಚಿಸುತ್ತವೆ. ಬಸದಿಯ ಗೋಡೆಯ ಮೇಲಿರುವ ೧೮೯೯ಕ್ಕೆ ಸೇರಿದ ಶಾಸನವೊಂದು ಕೆಲಸೂರಿನ ಚಂದ್ರಪ್ರಭ ಮತ್ತು ವಿಜಯ ಪಾರ್ಶ್ವನಾಥ ತೀರ್ಥಂಕರರ, ಜ್ವಾಲಿನೀ ದೇವಿಯ ಬಿಂಬಗಳನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಚಿಕ್ಕ ಜೋಗಬ್ಬೆಯು ಸರ್ವ ಲೋಕಾಶ್ರಯ ಬಸದಿಗೆ [ಹಂಗಳ] ಮಾಡಿಸಿರುವ ಚವ್ವೀಸ ತೀರ್ಥಂಕರರ ಪ್ರತಿಮೆ ಅತ್ಯಂತ ಸುಂದರವಾಗಿದೆ. ತೆರಕಣಾಂಬಿ ಸಮೀಪದ ಕೆಲಸೂರಿನಲ್ಲಿರುವ ಚಂದ್ರ ಪ್ರಭ ಬಸದಿಗೆ ಸಾವಿರ ವರ್ಷಗಳ ಇತಿಹಾಸವಿದೆ. ಈ ಜಿಲ್ಲೆಯಲ್ಲಿ ಅನೇಕ ಜೈನ ಕವಿಗಳು ಸಾಹಿತ್ಯ ರಚನೆ ಮಾಡಿ ಪ್ರಸಿದ್ಧರಾಗಿ ಹೋಗಿದ್ದಾರೆ. ಅವರುಗಳಲ್ಲಿ ಹೆಸರಿಸಲೇ ಬೇಕಾದವರೆಂದರೆ ನೇಮಿನಾಥ ಪುರಾಣದ ಕರ್ತೃ ಮಹಾಬಲ, 'ಸೊಬಗಿನಸೋನೆ'ಯ ದೇವರಾಜ, ಸನತ್ಕುಮಾರ ಮತ್ತು ಜೀವಂಧರ ಚರಿತೆಗಳ ತೆರಕಣಾಂಬಿಯ ಬೊಮ್ಮರಸ, ಶೃಂಗಾರ ಕಥೆ ರಚಿಸಿದ ಕೆಲಸೂರಿನ ಪದ್ಮರಸ ಮುಂತಾದವರು.

ಚಾಮರಾಜನಗರಕ್ಕೆ ಮೊದಲು ಅರಿ ಕುಠಾರವೆಂಬ ಹೆಸರಿತ್ತು. ಕ್ರಿ.ಶ. ೧೧೧೬ ರಲ್ಲಿ ಹೊಯ್ಸಳ ಸೇನಾನಿ ಪುಣಿಸ ದಂಡಾಧಿಪನು ತನ್ನ ಹೆಸರಿನಲ್ಲಿ ಕಟ್ಟಿಸಿದ ಪುಣಿಸ ಜಿನಾಲಯವೆಂಬ ಹೆಸರಿನ ಪಾರ್ಶ್ವನಾಥ ಬಸದಿಯೇ ಇಲ್ಲಿ ಈಗ ಉಳಿದಿರುವ ಪ್ರಾಚೀನವಾದ ಕಟ್ಟಡ [ಚಾ.ನ. ೨]. ಕುಲಗಾಣದ ಕ್ರಿ.ಶ. ೧೧೭೩ ರ ಶಾಸನ [ಚಾ.ನ. ३೪३] ದಲ್ಲಿ ಕುಲಗಾಣದ ಬಸದಿಗೆ ಇಡ್ಯೆನಾಡಿನ ಅರವತ್ತು ಪ್ರಭುಗಾಮುಂಡುಗಳು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಶಾಸನದ ದತ್ತಿಯನ್ನು ಸ್ವೀಕರಿಸಿದವನು ಮಹಾ ಮಂಡಲಾಚಾರ್ಯ ಶ್ರೀ ವಾದಿರಾಜದೇವನ ಶಿಷ್ಯನಾದ ಸಿಜ್ಗದೇವನೆಂಬುವನು. ಇದೇ ಬಸದಿಗೆ ಕ್ರಿ.ಶ. ೧೨೪೧ ರಲ್ಲಿ ಕೇತಯ ಡಣ್ಣಾಯಕನು ಅನೇಕ ತೆರಿಗೆಗಳ ಆದಾಯವನ್ನು ದತ್ತಿ ಬಿಟ್ಟುದನ್ನು ಶಾಸನ [ಚಾ.ನ. ३೪೪] ವೊಂದು ತಿಳಿಸುತ್ತದೆ.

ಕನಕಗಿರಿ ಅಥವಾ ಕನಕಾಚಲ ಎಂಬ ಹೆಸರಿನಿಂದ ಪರಿಚಿತವಾಗಿದ್ದ ಮಲೆಯೂರು ಪ್ರಸಿದ್ಧ ಜೈನ ಕೇಂದ್ರಗಳಲ್ಲೊಂದಾಗಿತ್ತು. ಪಾರ್ಶ್ವನಾಥ ಬಸದಿ ಇಲ್ಲಿನ ಪ್ರಾಚೀನತಮ ಸ್ಮಾರಕವೆಂದು ತೋರುತ್ತದೆ. ಪಂಚ ಪರ್ವಗಳ ಆಚರಣೆಯ ಸಮಯದಲ್ಲಿ ದೇವರ ಪೂಜೆಗೆಂದು ಕ್ರಿ.ಶ. ೧೧೮೧ ರಲ್ಲಿ ಚಿಕ್ಕ ತಾಯಿಯು ಗ್ರಾಮವೊಂದನ್ನು ದತ್ತಿ ಬಿಟ್ಟಳು. ಈ ಕನಕಗಿರಿಯಲ್ಲಿ ರಾಯ ರಾಜಗುರು ಹೇಮಚಂದ್ರ ಭಟ್ಟಾರಕರ ಶಿಷ್ಯ ಲಲಿತ ಕೀರ್ತಿ ಭಟ್ಟಾರಕ ಎಂಬ ಜೈನ ಆಚಾರ್ಯರು ತಮ್ಮ 'ನಿಷಿದಿ ನಿಮಿತ್ತ'ವಾಗಿ ವಿಜಯನಾಥ ಪ್ರತಿಮೆಯನ್ನು ಮಾಡಿಸಿದರು. ಈ ಜೈನ ಯತಿಗಳು ಕೊಂಡಕುಂದಾನ್ವಯ, ಮೂಲ ಸಂಘ, ದೇಶಿಯ ಗಣ, ಪುಸ್ತಕಗಚ್ಛ ಹಾಗೂ ಹನಸೋಗೆಯ ಬಳಿ ಸೇರಿದ್ದವರು. [ಕ್ರಿ.ಶ. ೧३೫೫ ರ ಚಾ.ನ. ३೬೫].

ಕ್ರಿ.ಶ. ೧೨೭೮ರ ಹಳೇ ಆಲೂರಿನ [ಚಾ.ನ. ೧೯೫] ಶಾಸನವು ದಕ್ಷಿಣ ಅಯ್ಯಾವಳೆ ಎಂದು ವರ್ಣಿಸಲ್ಪಟ್ಟಿರುವ ಆಲೂರಿನ ವೇಳರು, ಕೋವರು, ಕುಣಿಂದರು, ಮತ್ತು ನಲ್ಲೊಡೆಯರು ಮುಂತಾದ ವಿವಿಧ

ಗುಂಪಿನ ಅನೇಕರು ಚಂದ್ರನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿ ಅಲ್ಲಿ ಪ್ರತಿದಿನದ ಪೂಜೆ ಇತ್ಯಾದಿಗಳು ನಡೆಯುವುದಕ್ಕಾಗಿ ಭೂಮಿಯನ್ನು, ಮನೆಯನ್ನು ದತ್ತಿಯಾಗಿ ನೀಡಿದರು. ಮಲ್ಲಿಸೇನಮಲಧಾರಿಗಳ ಶಿಷ್ಯರೂ ಪಾರಿಸದೇವನ ಮಕ್ಕಳೂ ಆದ ಆದಿಯಣ್ಣ ಮತ್ತು ಚೆಲುವಣ್ಣರು ಈ ದತ್ತಿಯನ್ನು ಪಡೆದರು.

ಕ್ರಿ.ಶ. ೧೪೨೨ಕ್ಕೆ ಸೇರುವ ಎರಡು ಶಾಸನಗಳು [ಚಾ.ನ. ೩೫೫ ಮತ್ತು ೩೬೨] ರಾಜಕುಮಾರ ಮುಮ್ಮಡಿ ಹರಿಹರನು ಕನಕಗಿರಿಯ ಶ್ರೀ ವಿಜಯ [ವಿಜಯನಾಥ] ದೇವರಿಗೆ ದತ್ತಿಗಳನ್ನು ನೀಡಿದುದನ್ನು ಕುರಿತು ತಿಳಿಸಿತ್ತದೆ. ಕ್ರಿ.ಶ. ೧೫೧೭ರಲ್ಲಿ ಮುನಿಚಂದ್ರ ಯತಿಯ ಶಿಷ್ಯನಾದ ಮುನಿಚಂದ್ರ ಈ ಬೆಟ್ಟದಲ್ಲಿ ಸಮಾಧಿ ಹೊಂದಿದನು. [ಚಾ.ನ. ೩೫೮]. ಪಾರ್ಶ್ವನಾಥ ಜಿನಪತಿಯ ಸನ್ನಿಧಿಯಲ್ಲಿ ದೀಕ್ಷೆಯನ್ನು ಪಡೆದ ಲಕ್ಷ್ಮೀಸೇನ ಮುನೀಶ್ವರನು ಶಾಸನದಲ್ಲಿ [ಕ್ರಿ.ಶ. ೧೬೭೪ರ ಚಾ.ನ. ೩೬೦] ಕಂಡುಬರುವ ಮತ್ತೋರ್ವ ಜೈನಚಾರ್ಯ. ಇಲ್ಲಿ ಕನಕಗಿರಿಯನ್ನು ಹೇಮಾದ್ರಿ ಎಂಬುದಾಗಿ ಉಲ್ಲೇಖಿಸಿದೆ. ಶುಭಚಂದ್ರದೇವ ಹಾಗೂ ಶ್ರುತಮುನಿಗಳ ಶಿಷ್ಯನಾದ ಕೊಪಣದ ಚಂದ್ರಕೀರ್ತಿ ದೇವನು ತನ್ನ ಸಮಾಧಿಯ ಮೇಲೆ ಚಂದ್ರಪ್ರಭ ಪ್ರತಿಮೆಯ ಪ್ರತಿಷ್ಠಾಪನೆಗೆ ಪೂರ್ವಸಿದ್ಧತೆ ಮಾಡಿಕೊಂಡಿದ್ದನು. [ಕ್ರಿ.ಶ. ೧೮೮೯ರ ಚಾ.ನ. ೩೬೨]. ಇವರೂ ಮೇಲೆ ಹೇಳಿದ ಪಂಥಕ್ಕೇ ಸೇರಿದವರು. ಕ್ರಿ.ಶ. ೧೮೧೪ ರಲ್ಲಿ ದೇಶಿಗಣದ ಭಟ್ಟಾಕಳಂಕನು ಈ ಬೆಟ್ಟದ ಮೇಲೆ ಮರಣ ಹೊಂದಿ ನಾಕಲೋಕಕ್ಕೆ ಸಂದನು [ಚಾ.ನ. ೩೬೧].

## ಬೌದ್ಧ ಧರ್ಮ

ಇತರ ಧರ್ಮಗಳಂತೆ ಪ್ರಾಚೀನ ಬೌದ್ಧಧರ್ಮ, ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಾಲಿಟ್ಟಿಲ್ಲದಿದ್ದರೂ, ಟಿಬೆಟಿಯನ್ನರು ಈ ಜಿಲ್ಲೆಗೆ ವಲಸೆ ಬಂದು ಪುನರ್ವಸತಿ ಕಲ್ಪಿಸಿಕೊಂಡ ನಂತರ ಚಲಾವಣೆಯಲ್ಲಿದೆ. ಇದೇ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಇವರು ನೆಲೆಯಾಗಿದ್ದಾರೆ. ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ೧೯೮೬ರಲ್ಲಿ ೧೭೮೩೨ ಟಿಬೆಟಿಯನ್ ಬೌದ್ಧರು ಇದ್ದರೆಂದು ತಿಳಿದು ಬರುತ್ತದೆ.

ಅಶೋಕ ಚಕ್ರವರ್ತಿಯ ಕಾಲ [ಕ್ರಿ.ಶ. ಸುಮಾರು ೨೭೩-೨೩೨]ಕ್ಕಾಗಲೇ ಕರ್ನಾಟಕದಲ್ಲಿ ಬೌದ್ಧ ಮತವು ಜನಪ್ರಿಯವಾಗಿತ್ತು. ಅಶೋಕನು ಬನವಾಸಿಗೆ ಬೌದ್ಧ ಮತ ಪ್ರಚಾರಕರನ್ನು ಕಳುಹಿಸಿದ್ದನೆಂದು ನಂಬಲಾಗಿದೆ. ಕ್ರಿ.ಶ. ಸುಮಾರು ೬೪೦ ರಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದ ಹ್ಯೂಯನ್ ತ್ಸಾಂಗ್ ಹೇಳುವಂತೆ ಆ ವೇಳೆಗಾಗಲೇ ಬನವಾಸಿ ನಾಡಿನಲ್ಲಿ ನೂರಾರು ಬೌದ್ಧ ವಿಹಾರಗಳಿದ್ದವು. ಗುಲಬರ್ಗಾ ಜಿಲ್ಲೆಯ ಸನ್ನತಿ ಮತ್ತು ಕನಗನ ಹಳ್ಳಿಯಲ್ಲಿ ಶಾತವಾಹನರ ಕಾಲದ ಸ್ತೂಪದ ಅವಶೇಷಗಳನ್ನು ಅಗೆದು ತೆಗೆಯಲಾಗಿದೆ. ಬಿಜಾಪುರ ಜಿಲ್ಲೆಯ ಬಾದಾಮಿ ಮತ್ತು ಐಹೊಳೆಗಳಲ್ಲಿ ಚಾಲುಕ್ಯರ ಕಾಲದ ಬೌದ್ಧ ಸ್ಮಾರಕಗಳಿವೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಮತ್ತು ಧಾರವಾಡ ಜಿಲ್ಲೆಯ ಕೋಳಿವಾಡದಲ್ಲಿ ತಾರಾ ಭಗವತಿಯ ಪ್ರತಿಮೆಗಳು ದೊರೆತಿವೆ. ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿ ಅನೇಕ ಬೌದ್ಧ ಅವಶೇಷಗಳನ್ನು ಹೊರತೆಗೆಯಲಾಗಿದೆ. ಬೌದ್ಧ ಆರಾಧನೆಯ ಕೇಂದ್ರಗಳಲ್ಲಿ ಕೆಲವನ್ನು ಶೈವ ಪೂಜಾ ಕೇಂದ್ರಗಳನ್ನಾಗಿ ನಂತರದ ಕಾಲದಲ್ಲಿ ಪರಿವರ್ತಿಸಿದ ಬಗ್ಗೆ ಮಾಹಿತಿ ಇದೆ. ಉದಾಹರಣೆಗೆ, ಧರ್ಮಸ್ಥಳದ ಮಂಜುಶ್ರೀಯನ್ನು ಮಂಜುನಾಥ ಎಂದು ಮಾರ್ಪಡಿಸಿರುವುದು. ನಾಥಪಂಥೀಯರ ಪ್ರಭಾವಕ್ಕೆ ಅವು ಸಿಲುಕಿದಂತೆ ಕಂಡು ಬಂದಿದೆ. ಕದ್ರಿಯಲ್ಲಿ ಲೋಕೇಶ್ವರ ಮುಂತಾದ ಹತ್ತನೇ ಶತಮಾನ ಕಾಲಕ್ಕೆ ಸೇರಿದ ವಿಸ್ಮಯಕಾರಿ ಕಂಚಿನ ಮೂರ್ತಿಗಳಿವೆ. ಬೆಂಗಳೂರಿನಲ್ಲಿರುವ ಮಹಾಬೋಧಿ ಸಂಸ್ಥೆಯು ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಅನೇಕ ಪರಿಶಿಷ್ಟ ಸಮೂಹದ ಜನರು ನವ ಬೌದ್ಧರಾಗಿ ಪರಿವರ್ತಿತರಾಗಿದ್ದಾರೆ.

## ಟಿಬೆಟಿಯನ್ ಕ್ಯಾಂಪ್

೧೯೫೯ರಲ್ಲಿ ಟಿಬೆಟ್‌ನಿಂದ ಸ್ವಯಂ ಗಡಿಪಾರಾಗಿ ಬಂದ ದಲೈಲಾಮ ಟಿಬೆಟಿಯನ್ನರ ಪರಮೋಚ್ಚ ಗುರು. ಕ್ರಿ.ಶ ೭ನೇ ಶತಮಾನಕ್ಕಿಂತ ಮುಂಚೆ 'ಬಾನ್' ಎಂಬ ಧರ್ಮದಿಂದ, ಆನಂತರ ೭ನೇ ಶತಮಾನದಲ್ಲಿ ಬೌದ್ಧಧರ್ಮದಿಂದ ಪ್ರಭಾವಿತಗೊಂಡಿದ್ದಾರೆ. ಶೇ. ೧೦ರಷ್ಟು ಜನ ಭಾರತದಲ್ಲಿ ಆಶ್ರಯ ಪಡೆದಿರುವರು. ಇವರ ಭಾಷೆ ಟಿಬೆಟಿಯನ್. ಪ್ರಧಾನ ಕಸುಬು ಕೃಷಿ ಮತ್ತು ಉಣ್ಣೆ ಉತ್ಪನ್ನ. ೧೯೭೩ರಲ್ಲಿ ಟಿಬೆಟಿಯನ್ ನಿರಾಶ್ರಿತ ಜನರಿಗೆ ಕರ್ನಾಟಕದಲ್ಲಿಯೂ ಆಶ್ರಯ ನೀಡಲಾಯಿತು. ಆ ಪ್ರಯುಕ್ತ ಹಳೆ ಬೈಲುಕುಪ್ಪೆ, ಹೊಸ ಬೈಲುಕುಪ್ಪೆ (ಪಿರಿಯಾಪಟ್ಟಣ ತಾಲೂಕು) ಮೈಸೂರು ಜಿಲ್ಲೆ, ಗುರುಪುರ (ಹುಣಸೂರು ತಾ.), ಮೈಸೂರು ಜಿಲ್ಲೆ, ಮುಂಡಗೋಡು (ದಕ್ಷಿಣ ಕನ್ನಡ ಜಿಲ್ಲೆ) ಒಡೆಯರ ಪಾಳ್ಯ (ಕೊಳ್ಳೇಗಾಲ ತಾಲೂಕು, ಚಾಮರಾಜನಗರ ಜಿಲ್ಲೆ) ಎಂಬ ಐದು ಮುಖ್ಯ ಟಿಬೆಟಿಯನ್ ಕ್ಯಾಂಪ್ ಪ್ರಾರಂಭವಾದವು.

ಈ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಒಡೆಯರ ಪಾಳ್ಯದ ಟಿಬೆಟಿಯನ್ ಕ್ಯಾಂಪ್ ೧೯೭೩ರಲ್ಲಿ ಪ್ರಾರಂಭವಾದಾಗ ಸುಮಾರು ೧೦೦೦–೧೫೦೦ ಜನ ಇಲ್ಲಿ ಆಶ್ರಯ ಪಡೆದರು. ವಿಭಿನ್ನ ವ್ಯಕ್ತಿತ್ವ, ಧರ್ಮ, ನಡೆನುಡಿ ಮತ್ತು ಆಹಾರ ಪದ್ಧತಿಯನ್ನುಳ್ಳ ಇವರು ಟಿಬೆಟಿಯನ್ ಕ್ಯಾಂಪ್‌ಗಳಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುತ್ತಲೇ ಇಲ್ಲಿನವರಂತೇ ನೆಲೆಯೂರಿದ್ದಾರೆ. ಒಂದೊಂದು ಕಡೆ ೨೫ರಿಂದ ೩೦ ಕುಟುಂಬಗಳು ವಾಸಿಸುತ್ತಿದ್ದು, ಅವುಗಳನ್ನು ಒಂದೊಂದು ಗ್ರಾಮ ಎಂಬುದಾಗಿ ಗುರುತಿಸಬಹುದು. ಅಂತಹ ೨೨ ಗ್ರಾಮಗಳಿದ್ದು ಟಿಬೆಟಿಯನ್ನರು ಅವುಗಳಿಗೆ ಗ್ರಾಮ ಅಥವಾ ಊರಿನ ಹೆಸರು ನೀಡದೆ, 'ಎ'ಯಿಂದ 'ಯು'ವರೆಗೆ ಹೆಸರು ಕೊಟ್ಟಿದ್ದಾರೆ. ಒಂದೊಂದಕ್ಕೂ ಒಬ್ಬ ಮುಖಂಡನಿರುತ್ತಾನೆ. ವಾರಕ್ಕೊಮ್ಮೆ ಸಭೆ ಸೇರಿ ಕುಂದುಕೊರತೆ ಬಗೆಹರಿಸಿಕೊಳ್ಳುತ್ತಾರೆ. ಸ್ವಿಟ್ಜರ್ಲೆಂಡ್ ಮಾದರಿಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಮನೆಯ ಸುತ್ತ ಬೌದ್ಧ ಧರ್ಮದ ಮಂತ್ರ ಉಳ್ಳ ಬಂಟಿಂಗ್ಸ್ ಇರುತ್ತದೆ. ಪ್ರತಿಗ್ರಾಮಕ್ಕೂ ಒಂದೊಂದು ಬೌದ್ಧದೇವಾಲಯವಿರುತ್ತದೆ. ಪ್ರತಿಯೊಂದು ಕುಟುಂಬದಲ್ಲಿಯೂ ೫–೬ ಜನರಿರುವರು. ಇಡೀ ಕ್ಯಾಂಪಿನ ಉಸ್ತುವಾರಿ ಅಧಿಕಾರಿ ಇದ್ದು, 'ವಾಂಗ್ ಡೂ ಸಿರಿ' ಎಂದು ಕರೆಯುವರು.

ಇವರಿಗೆ ಸರ್ಕಾರದಿಂದ ಸುಮಾರು ೧೫೦೦–೨೦೦೦ ಎಕರೆ ಜಮೀನು ನೀಡಲಾಗಿದ್ದು ಸಹಕಾರಿ ಸಂಘದ ಮೂಲಕ ಎಲ್ಲ ಸೇರಿ ವ್ಯವಸಾಯ ಮಾಡುತ್ತಾರೆ. ಮುಸುಕಿನ ಜೋಳ, ರಾಗಿ, ತೊಗರಿ, ಕಡ್ಲೆಕಾಯಿ ಮುಂತಾದ ಬೆಳೆ ಬೆಳೆಯುತ್ತಾರೆ. ಸಹಕಾರಿ ಸಂಘವೇ ಬೀಜ ಗೊಬ್ಬರ, ಹಣಕಾಸಿನ ಸಹಾಯ ಮಾಡುತ್ತದೆ. ಬೆಳೆಯನ್ನೂ ಸಂಘವೇ ಖರೀದಿಸುತ್ತದೆ. ಇತ್ತೀಚೆಗೆ ಸಾವಯವ ಅಥವಾ ಸಹಜ ಕೃಷಿ ಅಭಿವೃದ್ಧಿ ಪಡಿಸಿದ್ದಾರೆ. ವ್ಯವಸಾಯದ ಕೆಲಸವಿಲ್ಲದಾಗ ಉಣ್ಣೆಯಿಂದ ತಯಾರಿಸಿದ ಕಾರ್ಪೆಟ್, ಸ್ವೆಟರ್‌ಗಳನ್ನು ನಾನಾ ಭಾಗಗಳಲ್ಲಿ ಮಾರಾಟ ಮಾಡುತ್ತಾರೆ. ಇತ್ತೀಚೆಗೆ ಆಧುನಿಕ ಶಿಕ್ಷಣದತ್ತ ಒಲವು ತೋರುತ್ತಿದ್ದಾರೆ.

ಸಾಮಾನ್ಯವಾಗಿ ಫೆಬ್ರವರಿ ತಿಂಗಳಲ್ಲಿ ಮೂರು ದಿನಗಳ ಕಾಲ 'ಲೋಸಾರ್' ಎಂಬ ಹೊಸ ವರ್ಷಾಚರಣೆ ಹಬ್ಬ ಆಚರಿಸುತ್ತಾರೆ. ಇವರು 'ಚೂಬ' ಎಂಬ ಉಡುಪು ಧರಿಸುತ್ತಾರೆ. ಬಾರ್ಲಿ, ಬೆಣ್ಣೆ, ಮಾಂಸ ಇವರ ಮೂಲ ಆಹಾರ. ಇಲ್ಲಿ ಬಂದು ನೆಲೆಸಿದ ನಂತರ ಅನ್ನ, ರಾಗಿಮುದ್ದೆ, ಚಪಾತಿ, ರೊಟ್ಟಿ ಮುಂತಾದವನ್ನು ಬಳಸುತ್ತಾರೆ. ರಾಗಿಯಿಂದ 'ಚಂಗ್' ಎನ್ನುವ ವಿಶೇಷ ಪಾನೀಯ ತಯಾರಿಸಿ, ವಿಶೇಷವಾಗಿ ಹಬ್ಬಗಳಲ್ಲಿ ಬಳಸುವರು. ಮುಸುಕಿನ ಜೋಳ ಹುರಿದು ಹಿಟ್ಟು ಮಾಡಿ ಅದನ್ನು ಟೀ ಅಥವಾ ಬೆಣ್ಣೆ ಜೊತೆ ತಿನ್ನುವರು.

ನ್ಯೂಡಲ್ಸ್ ಮುಂತಾದ ಮೈದಾಹಿಟ್ಟಿನಿಂದ ತಯಾರಿಸಿದ ಆಹಾರವನ್ನು ಸೇವಿಸುತ್ತಾರೆ. ಮಾಂಸಾಹಾರಿಗಳಾಗಿದ್ದು ಮಸಾಲೆರಹಿತ ಮಾಂಸಾಹಾರ ವಿಶೇಷವಾದುದು.

ಮುಕ್ತ ವೈವಾಹಿಕ ಪದ್ಧತಿ ಇದ್ದು, ಗಂಡು ಹೆಣ್ಣು ಯಾರಾದರಾಗಲಿ ತಮಗೆ ಇಷ್ಟವಾದ ವ್ಯಕ್ತಿಯನ್ನು ಮದುವೆಯಾಗಬಹುದು. ಗಂಡಿಗೆ ೨೫ ವರ್ಷ ಹೆಣ್ಣಿಗೆ ೨೦ ವರ್ಷವಾಗಿದ್ದು, ಮದುವೆಗೆ ಹೆಣ್ಣು ಗಂಡುಗಳ ಒಪ್ಪಿಗೆ ಕಡ್ಡಾಯ. ಬೇರೆ ಯಾವುದೇ ನಿರ್ಬಂಧವಿರುವುದಿಲ್ಲ. ಬಹುಪತ್ನಿತ್ವ ರೂಢಿಯಲ್ಲಿದೆ. ಲಾಮಗಳು ಓಲೆಗ್ರಂಥ ನೋಡಿ ಮದುವೆ ದಿನಾಂಕ ಗೊತ್ತುಪಡಿಸುತ್ತಾರೆ. ಹಾಗೂ ಮದುವೆ ಕಾರ್ಯ ನಡೆಸಿಕೊಡುತ್ತಾರೆ. ಇವರು ಬ್ರಹ್ಮಚಾರಿಯಾಗಿರುತ್ತಾರೆ. ಬಂಧು ಬಳಗದವರನ್ನು ಮದುವೆಗೆ ಕರೆದು ವಿವಿಧ ಬಗೆಯ ಅಡುಗೆ ತಯಾರಿಸಿ ಸಾಮೂಹಿಕ ಭೋಜನ ಮಾಡುತ್ತಾರೆ.

ದೇವಸ್ಥಾನವನ್ನು 'ಗೊಂಪಾ' ಎಂದು ಕರೆಯುತ್ತಾರೆ. ಬುದ್ಧ ಆರಾಧ್ಯ ದೈವ. ಬೌದ್ಧ ದೇವಾಲಯಕ್ಕೆ 'ಸ್ಥೂಪ' ಎಂದು ಕರೆಯುವರು. 'ಅಹಿಂಸಾ' ಪರಮೋಧರ್ಮ ಇವರ ಧ್ಯೇಯ ವಾಕ್ಯವಾಗಿದ್ದು, 'ಸಿದೆ' ಎಂದು ಕರೆಯುವರು. 'ಗೊಂಪಾ' ಐದು ಬಗೆಯ ಬಣ್ಣದಿಂದ ಕೂಡಿದ ಬಂಟಿಂಗ್ಸ್‌ಗಳಿಂದ ಕೂಡಿದ್ದು, ಮುಂಭಾಗವನ್ನು ಐದು ಬಣ್ಣದ ಬಟ್ಟೆ ಮತ್ತು ಕಳಸಗಳಿಂದ ಅಲಂಕರಿಸಿರುತ್ತಾರೆ. ನೀಲಿಬಣ್ಣ ಆಕಾಶವನ್ನು, ಬಿಳಿ–ಮೋಡವನ್ನು, ಕೆಂಪು–ಬೆಳಕನ್ನು, ಹಸಿರು–ಸಮೃದ್ಧತೆಯನ್ನು, ಹಳದಿ–ಮಣ್ಣನ್ನು ಸಂಕೇತಿಸುತ್ತದೆ. ಪಂಚಭೂತ ತತ್ವವನ್ನು ಅರುಹುತ್ತದೆ. ಬೆಳಿಗ್ಗೆ ಮತ್ತು ಸಂಜೆ ಎರಡು ಬಾರಿ ಪ್ರಾರ್ಥನೆ ಮಾಡುವರು. ಮಣಿಜಪ ಸಾಮಾನ್ಯವಾಗಿರುತ್ತದೆ.

ಜನಪದ ನೃತ್ಯ ಹಾಗೂ ಹಾಡು ಸಾಂಸ್ಕೃತಿಕ ಚಟುವಟಿಕೆಗಳು. ಲಯನ್‌ಡ್ಯಾನ್ಸ್, ಯಾರ್ಕ್, ಪಿಕಾಕ್, ಡ್ರಾಗನ್, ಜಂಬ್ಡಿಡ್ಯಾನ್ಸ್ ಮುಂತಾದ ನೃತ್ಯ ಮಾಡುತ್ತಾರೆ. ೩೦–೪೦ ವರ್ಷಗಳಿಂದ ಈ ಭಾಗದ ಜನರೊಂದಿಗೆ ಬೆರೆತು ಹೋಗಿರುವ ಟಿಬೇಟಿಯನ್ನರು ಇಲ್ಲಿನವರೇ ಆಗಿ ಬಿಟ್ಟಿದ್ದಾರೆ. ಟಿಬೆಟ್ ಸ್ವತಂತ್ರವಾಗಬೇಕು ಎಂಬುದು ಇವರೆಲ್ಲರ ತುಡಿತ. ಇಲ್ಲಿನವರೂ ಕೂಡ ಅವರೊಂದಿಗೆ ಅರಿತು ಬೆರೆತು ಹೋಗಿದ್ದು ಇಲ್ಲಿಂದ ಹೋಗಿ ಎನ್ನುವಂತಹ ಮಾತು ಬಾಯಿಂದ ಬರಲಾರದು ಎನ್ನುತ್ತಾರೆ.

## ಇಸ್ಲಾಂ ಧರ್ಮ

ಪ್ರಾಯಶಃ ನೆರೆಯ ಮೈಸೂರು ಜಿಲ್ಲೆ ಮತ್ತು ಕೇರಳ ಹಾಗು ತಮಿಳುನಾಡು ರಾಜ್ಯಗಳಿಂದ ಕ್ರಿ.ಶ. ಹದಿನಾಲ್ಕನೇ ಶತಮಾನದ ಆದಿ ಭಾಗದಲ್ಲಿ ಇಸ್ಲಾಂ ಧರ್ಮ ಚಾಮರಾಜನಗರ ಜಿಲ್ಲೆಯನ್ನು ಪ್ರವೇಶಿಸಿತು. ಅವಿಭಜಿತ ಮೈಸೂರು ಜಿಲ್ಲೆಯನ್ನು ತೆಗೆದುಕೊಂಡರೆ ಮಲ್ಲಿಕಾಫರನು 'ದ್ವಾರಸಮುದ್ರವನ್ನು (ಹಳೇಬೀಡು) ವಶಕ್ಕೆ ತೆಗೆದುಕೊಂಡಾಗ ಅಂದರೆ ಸುಮಾರು ೧೩೧೧ರಲ್ಲಿಯೇ ಇಸ್ಲಾಂ ಧರ್ಮ ಕಾಲಿಟ್ಟಿತ್ತು ಎನ್ನಬಹುದು. ಆದರೆ ಸಣ್ಣ ಸಣ್ಣ ತಂಡಗಳಲ್ಲಿ ಮುಸಲ್ಮಾನರು ಈ ಪ್ರದೇಶಕ್ಕೆ ಬಂದದ್ದು ಬಿಜಾಪುರದ ಸೇನಾ ನಾಯಕ ರಣದುಲ್ಲಾ ಖಾನ್(೧೬೩೯) ಮತ್ತು ಕಾಸಿಂ ಖಾನನ (೧೬೮೭)ರ ದಂಡಯಾತ್ರೆಯ ಸಂದರ್ಭದಲ್ಲಿ. ಮೊಗಲ್ ಚಕ್ರವರ್ತಿ ಔರಂಗಜೇಬನು ಗೋಲ್ಕೊಂಡ [೧೬೮೭] ಮತ್ತು ಬಿಜಾಪುರಗಳನ್ನು ವಶಮಾಡಿಕೊಂಡ [೧೬೮೬] ನಂತರ ನಡೆಸಿದ ದಖ್ಖನ್ ಮತ್ತು ದಕ್ಷಿಣದ ದಂಡಯಾತ್ರೆಗಳ ಕಾಲದಲ್ಲಿ ಮುಸ್ಲಿಮರ ವಲಸೆ ಒಂದೇ ಸಮನೆ ನಡೆದು, ನಿಧಾನವಾಗಿ ಮುಂದುವರೆಯಿತು. ಮೈಸೂರು ಅರಸರ ಆಳ್ವಿಕೆಯಲ್ಲಿ ಸೈನ್ಯ ಮತ್ತು ಇತರೆ ಉದ್ಯೋಗದಲ್ಲಿ ಮುಸ್ಲಿಮರನ್ನು ನೇಮಿಸಿಕೊಳ್ಳಲಾಗಿತ್ತು. ಹೈದರ್ [೧೭೬೧–೧೭೮೨] ಮತ್ತು ಟಿಪ್ಪು ಸುಲ್ತಾನರು [೧೭೮೨–೧೭೯೯] ಕ್ರಮವಾಗಿ ಮೈಸೂರು ಸಂಸ್ಥಾನದಲ್ಲಿ ಮುಸ್ಲೀಮರನ್ನು ಉತ್ತೇಜಿಸುವುದರ ಮೂಲಕ ಮುಸ್ಲಿಮರ

ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿದರು. ಈ ಹೆಚ್ಚಳದ ಜೊತೆಗೆ ಮೈಸೂರು ಸಂಸ್ಥಾನದ ಹೊರ ಭಾಗಗಳಿಂದ ಇದೇ ಅವಧಿಯಲ್ಲಿ ಸರ್ಕಾರಿ ನೌಕರಿ ಮತ್ತು ಸೈನ್ಯದಲ್ಲಿ ಸೇರಲು ಅಪಾರ ಸಂಖ್ಯೆಯ ಮುಸ್ಲಿಮರು ಇಲ್ಲಿಗೆ ಬಂದು ನೆಲೆಸಿದರು.

ಚಾಮರಾಜನಗರ ಜಿಲ್ಲೆಯ ಮುಸ್ಲಿಂ ಜನಸಂಖ್ಯೆಯಲ್ಲಿ ಸುನ್ನಿ ಪಂಥದವರೇ ಪ್ರಬಲ ಭಾಗವಾಗಿದ್ದಾರೆ ; ಷಿಯಾ ಪಂಥದವರು ಸ್ಪಷ್ಟವಾಗಿ ಒಂದು ಅಲ್ಪಸಂಖ್ಯಾತ ವರ್ಗದವರಾಗಿದ್ದಾರೆ. ಇಲ್ಲಿ ತಮಿಳು ಮಾತನಾಡುವ ತಮಿಳುನಾಡಿನಿಂದ ವಲಸೆ ಬಂದಿರುವ ಲಬ್ಬೆ ಮುಸ್ಲಿಮರು ಮತ್ತು ಮಲೆಯಾಳಂ ಮಾತನಾಡುವ ಕೇರಳದಿಂದ ವಲಸೆ ಬಂದಿರುವ ಮಾಪಿಳ್ಳೆ ಮುಸ್ಲಿಮರು ಕೂಡ ಇದ್ದಾರೆ. ಲಬ್ಬೆಗಳು ತಮಿಳು ಭಾಷಿಕರಾಗಿದ್ದು ಸಾಮಾನ್ಯವಾಗಿ ವ್ಯವಸಾಯ ಮತ್ತು ಚಿಲ್ಲರೆ ವ್ಯಾಪಾರ ಮಾಡಿ ಜೀವಿಸುವವರಾಗಿದ್ದರೆ, ಮಾಪಿಳ್ಳೆಗಳು ವ್ಯಾಪಾರಿಗಳಾಗಿರುವುದೇ ಅಧಿಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಹರಡಿಹೋಗಿರುವ ಉಳಿದ ಮುಸ್ಲಿಮರನ್ನು ದಖ್ಖನಿಗಳೆಂದು ಕರೆಯಬಹುದಾಗಿದ್ದು ಮನೆಗಳಲ್ಲಿ ಉರ್ದು ಮಾತನಾಡುತ್ತಾರೆ ಮತ್ತು ಅನೇಕ ರೀತಿಯ ಉದ್ಯೋಗಗಳಲ್ಲಿ ತೊಡಗಿಕೊಂಡಿರುತ್ತಾರೆ.

ಅರೇಬಿಯಾದ ಪ್ರವಾದಿ ಮೊಹಮ್ಮದ್ [ಕ್ರಿ.ಶ. ೫೭೦ – ೬೩೧] ಇಸ್ಲಾಂ ಧರ್ಮ [ದೇವ ದೇವರೊಡನೆ ಶಾಂತಿಯಿಂದಿರುವುದು]ವನ್ನು ಬೋಧಿಸಿದರು. ಐದು ಪ್ರಾಥಮಿಕ ಕರ್ತವ್ಯಗಳನ್ನು ಮುಸಲ್ಮಾನನಾದವನು ನಿರ್ವಹಿಸಬೇಕು. ಅವೆಂದರೆ ಕಲೀಮ್ದಾ (ದೇವರು ಒಬ್ಬನೇ ಎಂದು ನಂಬುವುದು) ಪ್ರಾರ್ಥನೆ, ದಾನನೀಡುವುದು, ರಂಜಾನ್ ತಿಂಗಳಲ್ಲಿ ಉಪವಾಸಮಾಡುವುದು ಮತ್ತು ಪವಿತ್ರ ಯಾತ್ರಾಸ್ಥಳ ಮೆಕ್ಕಾಯಾತ್ರೆ ಮಾಡುವುದು.

'ಅಲ್ಲಾ' ಒಬ್ಬನೇ ದೇವರು ಮತ್ತು ಅವನ ಸಂಕಲ್ಪವನ್ನು ಮಾನವ ಕುಲಕ್ಕೆ ಅರುಹುವವರೇ ಮೊಹಮ್ಮದ್. ಯಾರು ತನ್ನ ಸಂದೇಶವನ್ನು ನಂಬುವರೋ, ಮತ್ತು ಯಾರು ದೇವರ ಸಂಕಲ್ಪವನ್ನು ಒಪ್ಪಿಕೊಂಡು ವಿಧೇಯರಾಗಿರುವರೋ ಅಂತಹವರಿಗೆ ಮರಣಾನಂತರ ಶಾಶ್ವತ ಸ್ವರ್ಗವಾಸ ದೊರಕುತ್ತದೆ. ಯಾರು ಅವನ ಉಪದೇಶವನ್ನು ಒಪ್ಪಿಕೊಳ್ಳಲು ನಿರಾಕರಿಸುವರೋ ಅಂತಹವರಿಗೆ ನರಕ ಪ್ರಾಪ್ತಿಯಾಗುವುದೆಂದು ಹೇಳುತ್ತಾರೆ. ಪವಿತ್ರ ಖುರಾನ್ ಗ್ರಂಥದಲ್ಲಿ ದೈನಂದಿನ ಜೀವನದಲ್ಲಿ ಅನುಸರಿಸಬೇಕಾದ ಯೋಗ್ಯ ನಡವಳಿಕೆಯ ನಿಯಮಗಳನ್ನು ವಿಶದಪಡಿಸಲಾಗಿದೆ. ಅಂತಹ ನಿಯಮಗಳಲ್ಲಿ ಬಹಳ ಮುಖ್ಯವಾಗಿ ಒಂದೆಂದರೆ ಎಲ್ಲ ಮುಸ್ಲಿಮರೂ ಒಬ್ಬರನ್ನೊಬ್ಬರು ಸಹೋದರರನಂತೆ ಕಾಣಬೇಕು, ಮತ್ತು ಎಲ್ಲ ಮುಸ್ಲಿಂ ಬಾಂಧವರ ವಿಷಯದಲ್ಲಿಯೂ, ಅವರ ಸ್ಥಾನಮಾನ ಅಥವಾ ಸಂಪತ್ತು ಗೌಣ, ಪರಸ್ಪರ ಸಹೋದರತ್ವವೇ ಈ ಧರ್ಮದ ಮೂಲ ತತ್ವವಾಗಿದೆ. ಜಿಲ್ಲೆಯಲ್ಲಿ ಅನೇಕ ದರ್ಗಾ, ಮಸೀದಿಗಳಿವೆ. ದರ್ಗಾಗಳಲ್ಲಿ ನಡೆಯುವ ವಾರ್ಷಿಕ ಉರುಸ್ ಗಳಲ್ಲಿ ಮುಸ್ಲಿಮೇತರರೂ ಭಾಗವಹಿಸುತ್ತಾರೆ. ಅದರಲ್ಲಿ ಕೊಳ್ಳೇಗಾಲ ತಾಲೂಕು ಶಿವಸಮುದ್ರದ ಹಜರತ್ ಮರ್ದಾನಾ ಗಾಯಬ್ ಉರುಸ್ ಮತ್ತು ಸತ್ತೇಗಾಲದ ಉರುಸ್‌ಗಳು ಬಹು ಪ್ರಮುಖವಾದವು.

ಇತಿಹಾಸಕಾರ ಜೆ.ಯಿ.ಸ್ವೇನ್ ಹೇಳುವ ಪ್ರಕಾರ ಇಸ್ಲಾಂ ಧರ್ಮದಲ್ಲಿ ಪೂಜಾ ವಿಧಾನವು ಕ್ರಿಶ್ಚಿಯನ್ ಚರ್ಚುಗಳಲ್ಲಿರುವುದಕ್ಕಿಂತ ಬಹಳ ಸರಳವಾದುದು. ಅಲ್ಲಿ ಕ್ರಿಶ್ಚಿಯನ್ನರು ಆ ಪದಕ್ಕೆ ನೀಡುವ ಅರ್ಥವನ್ನು ಸಮೀಪಿಸುವಂತಹ ಯಾವುದೇ ಪುರೋಹಿತ ವರ್ಗವಿಲ್ಲ, ಮತ್ತು ಮಸೀದಿಯು ಒಂದು ಕ್ರಮಬದ್ಧವಾದ ಪ್ರಾರ್ಥನಾ ಸೇವೆಗಿಂತ ಮಿಗಿಲಾಗಿ ಪ್ರಾರ್ಥನೆ ಸಲ್ಲಿಸಲು ಮತ್ತು ಖುರಾನನ್ನು ಓದಲೆಂದು ಇರುವ ಒಂದು

ತಾಣ ಮಾತ್ರವಾಗಿದೆ. ಇದೊಂದು ಖಾಸಗಿ ಮತ್ತು ವ್ಯಕ್ತಿ ಕೇಂದ್ರಿತ ಧರ್ಮ ; ನಿಷ್ಠಾವಂತ ಮುಸಲ್ಮಾನನು ತನ್ನ ಮತ್ತು ದೇವರ ನಡುವೆ ಯಾವುದೇ ಮಧ್ಯವರ್ತಿಯನ್ನು ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಉಪಾಸನೆಯ ವಿಧಿಯೆಂದರೆ ಧರ್ಮದ ಸಾರಾಂಶವನ್ನು ಪಠಿಸುವುದು ("ದೇವರು ಕೇವಲ ಒಬ್ಬನೇ, ಮತ್ತು ಮೊಹಮ್ಮದನು ಅವನ ಪ್ರವಾದಿ"), ಪ್ರತಿ ದಿನವೂ ಐದು ಬಾರಿ ನಮಾಜು ಮಾಡುವುದು, ಉಪವಾಸವಿರುವುದು, ಬಡವರಿಗೆ ಭಿಕ್ಷೆ ನೀಡುವುದು, ಮತ್ತು ಜೀವನದಲ್ಲಿ ಒಮ್ಮೆಯಾದರೂ ಮೆಕ್ಕಾಗೆ ಯಾತ್ರೆ ಹೋಗುವುದು ಮುಖ್ಯ ಗುರಿಯಾಗಿದೆ.

ಜಿಲ್ಲೆಯಲ್ಲಿ ಮುಸಲ್ಮಾನ್ ಸಂತರ ಅನೇಕ ದರ್ಗಾಗಳು ಅಥವಾ ಗೋರಿಗಳಿವೆ. ಅವುಗಳಿಗೆ ಹೋಗುವವರಲ್ಲಿ ಧರ್ಮನಿಷ್ಠ ಮುಸಲ್ಮಾನರೇ ಅಲ್ಲದೇ ಅನೇಕ ಹಿಂದುಗಳು ಇರುವುದೊಂದು ವಿಶೇಷ. 'ಉರುಸು'ಎಂಬ ವಾರ್ಷಿಕ ಉತ್ಸವಗಳಿಗಂತೂ ಸಹಸ್ರಾರು ಮಂದಿ ಸೇರುತ್ತಾರೆ.

## ಕ್ರೈಸ್ತ ಧರ್ಮ

ಏಸುಕ್ರಿಸ್ತನ ತತ್ವಗಳನ್ನು ಅನುಸರಿಸುವವರನ್ನು ಕ್ರಿಸ್ತರೆಂದು ಕರೆಯಲಾಗುತ್ತದೆ. 'ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸು' ಎಂಬುದೇ ಕ್ರೈಸ್ತ ಧರ್ಮದ ಧ್ಯೇಯ ವಾಕ್ಯ. ಇವರಲ್ಲಿ ಕ್ಯಾಥೋಲಿಕ್ ಮತ್ತು ಪ್ರಾಟಸ್ಟೆಂಟ್ ಎಂಬ ಎರಡು ಪಂಗಡಗಳಿವೆ. ತಮಿಳುನಾಡಿನ ಮಧುರೈ ಧರ್ಮ ಪ್ರಚಾರಕ ಮಂಡಲಿಯ ಚಟುವಟಿಕೆಗಳ ಮೂಲಕ ಕ್ರೈಸ್ತ ಧರ್ಮವು ಹದಿನೇಳನೇ ಶತಮಾನದ ಪ್ರಥಮಾರ್ಧ ಕಾಲದಲ್ಲಿ ಚಾಮರಾಜನಗರ ಜಿಲ್ಲೆಯನ್ನು ಪ್ರವೇಶಿಸಿತು. ಕೊಳ್ಳೇಗಾಲ ತಾಲ್ಲೂಕಿನ ಅಜ್ಜೀಪುರ ಮೊದಲಾದ ಊರುಗಳಲ್ಲಿ ಕೆಲವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸುವ ಯತ್ನದಲ್ಲಿ ಕ್ರೈಸ್ತ ಧರ್ಮ ಪ್ರಚಾರಕರು ಆಗ ಯಶಸ್ವಿಯಾದರು. ಈ ಭಾಗದಲ್ಲಿ ಸಕ್ರಿಯರಾಗಿದ್ದ ಧರ್ಮ ಪ್ರಚಾರಕರ ವರದಿಗಳಿಂದ ಕೊಳ್ಳೇಗಾಲದ ಅಕ್ಕ ಪಕ್ಕದ ಹಳ್ಳಿಗಳಿಂದ ಅನೇಕ ವ್ಯಕ್ತಿಗಳು ಜ್ಞಾನಸ್ನಾನಕ್ಕಾಗಿ ಸತ್ಯಮಂಗಲಕ್ಕೆ ಹೋಗಿದ್ದರೆಂದು ತಿಳಿದು ಬರುತ್ತದೆ. ಮಹಾರಾಜ ಕಂಠೀರವ ನರಸಿಂಹರಾಜ ಒಡೆಯರ ಕಾಲದಲ್ಲಿ ರೆವರೆಂಡ್ ಫಾದರ್ ಲಿಯೋನಾರ್ಡೋ ಚಿನ್ನಮಿ ಎಂಬ ಹೆಸರಿನ ಇಟ್ಯಾಲಿಯನ್ ಧರ್ಮ ಪ್ರಚಾರಕನು ಶ್ರೀರಂಗಪಟ್ಟಣಕ್ಕೆ ತೆರಳಿ ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡಲು ಅನುಮತಿಯನ್ನು ಪಡೆದುಕೊಂಡನು [೧೬೪೮]. ಶ್ರೀರಂಗಪಟ್ಟಣದಿಂದ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದ ವಿದ್ವಾಂಸನಾದ ಆ ಪಂಡಿತನು ಈ ಪ್ರದೇಶದಲ್ಲಿ, ಮುಖ್ಯವಾಗಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಅನೇಕರನ್ನು ಮತಾಂತರಿಸಿದನೆಂದು ಹೇಳಲಾಗಿದೆ. ಅಲ್ಲಿಯ ವಿದ್ವಾಂಸ ಬ್ರಾಹ್ಮಣರ ಅತಿ ನಿಷ್ಠುರ ಮತ್ತು ಸರಳ ಜೀವನ ಶೈಲಿಯಿಂದ ಪ್ರಭಾವಿತನಾದ ಚಿನ್ನಮಿಯು ಓರ್ವ ಬ್ರಾಹ್ಮಣ ಯತಿಯ ರೀತಿಯಲ್ಲೇ ಬದುಕುತ್ತಾ ಧರ್ಮ ಪ್ರಚಾರ ಕಾರ್ಯ ಮಾಡುತ್ತಿದ್ದನು.

ಕೊಳ್ಳೇಗಾಲದ ಸುತ್ತಮುತ್ತಲಿನ ಹಳ್ಳಿಗಳಾದ ಮಾರ್ಟಳ್ಳಿ, ಕೌದಳ್ಳಿ, ಅಜ್ಜೀಪುರ, ಸಾಂಬಳ್ಳಿ ಮುಂತಾದ ಊರುಗಳ ದೇಶೀಯ ಕ್ರೈಸ್ತರ ಧಾರ್ಮಿಕ ಅಗತ್ಯಗಳನ್ನು ಪೂರೈಸಲೆಂದು ಗುರು ಚಿನ್ನಮಿ ಕೊಳ್ಳೇಗಾಲದಿಂದ ಸುಮಾರು ೨೫ ಕಿ.ಮೀ. ದೂರದ ಬಸವನಪುರದಲ್ಲಿ ಕ್ರೈಸ್ತ ಸನ್ಯಾಸಿ ಮಠವನ್ನು ತೆರೆಯುತ್ತಾನೆ. ಇದರಿಂದ ಅರೆಪಾಳ್ಯ, ಬಸಪ್ಪನಪಾಳ್ಯ ಮುಂತಾದ ಪ್ರದೇಶಗಳಲ್ಲಿಯೂ ಕ್ರೈಸ್ತ ಧರ್ಮ ಹರಡಲು ಅವಕಾಶವಾಗುತ್ತದೆ. ಕ್ರಿಸ್‌ಮಸ್, ಪಾಸ್ಕ ಹಬ್ಬಗಳಂದು ಸುತ್ತಮುತ್ತಲ ಕ್ರೈಸ್ತರಲ್ಲದೇ ಶ್ರೀರಂಗಪಟ್ಟಣ, ಕೂಡಲುಪಾಳ್ಯ, ಕಾನಕಾನಹಳ್ಳಿ, ಕನಕಪುರಗಳಿಂದಲೂ ಪೂಜೆಗಾಗಿ ಜನಬರುತ್ತಿದ್ದರು. ಇಲ್ಲೆಲ್ಲಾ ಮತಾಂತರಗೊಂಡ ಹೊಸ ಕ್ರೈಸ್ತರನ್ನು ಕುರಿತಂತೆ, ಚಿನ್ನಮಿಯು ರೋಂ ನಗರದಲ್ಲಿನ ತಮ್ಮ ಮುಖ್ಯಸ್ಥರಿಗೆ ಹೀಗೆ ವರದಿ ಮಾಡಿದ್ದಾನೆ.

ಇವರೆಲ್ಲರೂ ಸವರ್ಣೀಯರು, ಬಸವಾಪುರದಲ್ಲಿ ಮತಾಂತರಗೊಂಡ ಕುಂಬಾರನೊಬ್ಬನನ್ನು ಬಿಟ್ಟರೆ ಹೆಚ್ಚು ಮಂದಿ ಬ್ರಾಹ್ಮಣರು, ಅಕ್ಕಸಾಲಿಗರು, ಒಕ್ಕಲಿಗರು, ಇವರು ಲೌಕಿಕ ಲಾಭಕ್ಕಾಗಿ ಮತಾಂತರಗೊಂಡಿಲ್ಲ. ಧರ್ಮದ ಸತ್ಯತೆ ಒಳಿತನ್ನು ಮನಗಂಡಿದ್ದಾರೆ. ಬಹುಪತ್ನಿತ್ವವನ್ನು ಬಿಟ್ಟಿದ್ದಾರೆ. ಶನಿವಾರಗಳಂದು ಉಪವಾಸವಿರುತ್ತಾರೆ. ನನ್ನೊಂದಿಗೆ ಧರ್ಮ ಪ್ರಚಾರಕ್ಕೂ ಬರುತ್ತಾರೆ. ದೇವಮಾತೆ ಮರಿಯಳ ಬಗ್ಗೆ ಅಪಾರವಾದ ಪ್ರೀತಿ, ಮಮತೆ ಇಟ್ಟುಕೊಂಡಿದ್ದಾರೆ ಎಂದು ಮುಂತಾಗಿ ಬರೆದಿದ್ದಾನೆ.

ಚಿನ್ನಮಿಯ ನಂತರ ಈ ಭಾಗಕ್ಕೆ ಬಂದ ಗುರು ಚಿಮಾವೋ ಮಾರ್ಟಿನೇಸರು ೧೬೫೮ ರಲ್ಲಿ ಸಂತ ಫ್ರಾನ್ಸಿಸ್ ಕ್ಷೇವಿಯರ್ ದೇವಾಲಯವನ್ನು ಕಟ್ಟಿಸಿದನು. ಚಾಮರಾಜ ನಗರ ಜಿಲ್ಲೆಯ ಪ್ರಪ್ರಥಮ ಕ್ರೈಸ್ತ ದೇವಾಲಯ ಇದೆನ್ನಲಾಗಿದೆ. ಇವರ ನಂತರ ಇಲ್ಲಿಗೆ ಗುರುಗಳಾಗಿ ಬಂದವರು ಕನ್ನಡ ಮತ್ತು ತಮಿಳು ಭಾಷೆಗಳನ್ನು ಅರಿತಿರುತ್ತಿದ್ದರು. ಮಾರ್ಟಳ್ಳಿಯಲ್ಲಿ ಕೂಡ ಸಂತ ಮೈಕೆಲ್ಲನ ದೇಗುಲ ಎಂಬ ಚರ್ಚ್ ಇತ್ತೆಂದು ಹೇಳಲಾಗಿದೆ. ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಕೊಳ್ಳೇಗಾಲ ಭಾಗದ ಕ್ರೈಸ್ತರ ಗುರುಗಳಾಗಿದ್ದವರು ಫ್ರೆಂಚರಾಗಿದ್ದ ಕಾರಣ ಅಲ್ಲಿದ್ದ ಕ್ರೈಸ್ತರಿಗೆ ಯಾವುದೇ ತೊಂದರೆಗಳನ್ನು ನೀಡಲಿಲ್ಲವೆಂದು ಹೇಳಲಾಗಿದೆ. ಈಗ ಕೊಳ್ಳೇಗಾಲ ತಾಲ್ಲೂಕಿನ ಮಾರ್ಟಳ್ಳಿ, ಕೌದಳ್ಳಿ, ಒಡೆಯರ ಪಾಳ್ಯ, ಕಾಮಗೆರೆ, ಜಕ್ಕಳ್ಳಿ, ಸಂದನಪಾಳ್ಯ, ಜಲ್ಲಿಪಾಳ್ಯ, ವಡ್ಡರದೊಡ್ಡಿ, ಕೊಳ್ಳೇಗಾಲ ಪಟ್ಟಣ ಮುಂತಾದ ಕಡೆಗಳಲ್ಲಿ ಕ್ರೈಸ್ತದೇವಾಲಯಗಳಿವೆ. ಕೊಳ್ಳೇಗಾಲ ಪಟ್ಟಣದಲ್ಲಿ ಕ್ಯಾಥೊಲಿಕರ ಒಂದು ಮತ್ತು ಪ್ರಾಟೆಸ್ಟೆಂಟರ ಒಂದು ಹೀಗೆ ಎರಡು ಚರ್ಚುಗಳಿವೆ. ಚಾಮರಾಜ ನಗರದಲ್ಲಿ ೧೯೬೬ ರಲ್ಲಿ ನಿರ್ಮಿಸಿದ ಸೇಂಟ್ ಪಾಲ್ ಪ್ರಾಟೆಸ್ಟೆಂಟ್ ಚರ್ಚ್ ಇದೆ. ಗುಂಡ್ಲುಪೇಟೆ ಪಟ್ಟಣದಲ್ಲಿ ಸಹ ಎರಡು ಚರ್ಚ್‌ಗಳಿದ್ದು, ೧೯೫೫ ರಲ್ಲಿ ನಿರ್ಮಿಸಿದ ಅವರ್ ಲೇಡಿ ಲೂರ್ದ್ ಚರ್ಚ್ ಪ್ರಾಟೆಸ್ಟೆಂಟರದ್ದಾಗಿದೆ.

## ಧಾರ್ಮಿಕ ಸಂಸ್ಥೆಗಳು

ವೀರಶೈವ ಧಾರ್ಮಿಕ ಸಂಸ್ಥೆಗಳಲ್ಲಿ (ಮಠ) ವಿರಕ್ತ ಮಠ ಮತ್ತು ಪಟ್ಟದಮಠ ಎಂದು ಎರಡು ವರ್ಗಗಳಿವೆ. ಇವು ಶಿಕ್ಷಣ ಮತ್ತು ವಿದ್ಯಾರ್ಥಿನಿಲಯಗಳ ಸ್ಥಾಪನೆಯಲ್ಲಿ ಹೆಚ್ಚಿನ ಕೆಲಸ ಮಾಡಿವೆ.

**ಹರದನಹಳ್ಳಿಯ ಶ್ರೀ ಗೋಸಲಪೀಠ ಗುರುಪರಂಪರೆ:** ಇದರ ಇತಿಹಾಸವು ಕಲ್ಯಾಣದ ಶರಣರ ಕಾಲಕ್ಕಿಂತಲೂ ಮುಂಚಿನದೆಂದು ಹೇಳಲಾಗುತ್ತದೆ. ಅಡಕೆ ವ್ಯಾಪಾರ ಮಾಡುವ ಬಣಜಿಗರು 'ಅಳಲೇಶ್ವರ' 'ದಿವ್ಯಲಿಂಗೇಶ್ವರ'ಎಂಬ ಗುಡಿ ಕಟ್ಟಿಸಿದ್ದು, 'ಅನಾದಿಗಣೇಶ್ವರ'ನೆಂಬ ಒಬ್ಬ ವಿರಕ್ತನನ್ನು ಮಠಾಧ್ಯಕ್ಷನನ್ನಾಗಿ ಮಾಡುತ್ತಾರೆ. ಆನಂತರ ಆದಿಗಣನಾಥ ಆಧ್ಯಾತ್ಮಗಣನಾಥ, ರುದ್ರದೇವ, ಬಸವಪ್ರಭು, ಆದಿಲಿಂಗೇಶ, ಚೆನ್ನವೀರೇಶ ಗೋಸಲ ಯತೀಶ, ಶಂಕರೇಶ, ದಿವ್ಯಲಿಂಗೇಶ, ತೋಂಟದ ಸಿದ್ದಲಿಂಗೇಶ್ವರ ಮುಂತಾದ ಗುರುಪರಂಪರೆಗಳಿವೆ ಎಂದೂ, ಇವರು ಅನೇಕ ಪವಾಡಗಳನ್ನು ಮೆರೆದರೆಂದು ಹೇಳುತ್ತಾರೆ. ಅವರಲ್ಲಿ ತೋಂಟದ ಸಿದ್ದಲಿಂಗೇಶ್ವರರು ಅತ್ಯಂತ ಪ್ರಸಿದ್ಧರು.

**ಶ್ರೀ ಮದ್ದಾನೇಶ್ವರರು ಮತ್ತು ಶ್ರೀ ಕರಸ್ಥಲ ನಾಗಲಿಂಗಸ್ವಾಮಿಗಳು:** ವಿಜಯನಗರ ಅರಸ ಪ್ರೌಢದೇವರಾಯನ ದಂಡಾಧಿಪತಿಯಾಗಿದ್ದ ಲಕ್ಕಣ್ಣ ದಂಡೇಶ ಬರೆದಿರುವ 'ಶಿವತತ್ವ ಚಿಂತಾಮಣಿ' ಕೃತಿಯಲ್ಲಿ ಹಳೇ ಮೈಸೂರು ಪ್ರಾಂತದಲ್ಲಿದ್ದ ಅನೇಕ ವಿರಕ್ತರ ಹೆಸರುಗಳು ಕಂಡುಬರುತ್ತವೆ. ವೀರಶೈವಧರ್ಮ ಪ್ರಚಾರಕ್ಕಾಗಿ ನೂರೊಂದು ಜನರನ್ನು ಆಯ್ಕೆ ಮಾಡಿ ನಾಡಿನಾದ್ಯಂತ ಕಳುಹಿಸುತ್ತಾನೆಂದೂ ಅವರನ್ನು 'ನೂರೊಂದು ವಿರಕ್ತರು' ಎಂದು ಕರೆಯಲಾಗುತ್ತದೆಂದು ಹಾಗೂ ಅವರು ಹೋದೆಡೆಗಳಲ್ಲೆಲ್ಲಾ ವಿರಕ್ತ ಮಠಗಳು ಸ್ಥಾಪಿತವಾಗುತ್ತವೆಂದು ತಿಳಿದುಬರುತ್ತದೆ. ಹಾಗೆ ಬಂದವರಲ್ಲಿ ಅಡವೀಮಠದ ಶ್ರೀ ಮದ್ಧಾನೇಶ್ವರರು ಮತ್ತು ಮಂಚಹಳ್ಳಿಯ ಕರಸ್ಥಲ ನಾಗಲಿಂಗ ಸ್ವಾಮಿಗಳು ಕೂಡ ಸೇರಿದ್ದಾರೆ.

ಶ್ರೀ ಮದ್ದಾನೆ ಶಾಂತೇಶರು ಉದಕಮಂಡಲ ಪ್ರಾಂತದ ಮಸಣಿಗುಡಿ ಸಮೀಪದ ಕಾಡಿನಲ್ಲಿ ಸಂಚರಿಸುತ್ತಾ ಬಂದು ಬೇಡ ನಾಯಕ ಕಲಿಯ ಎಂಬುವವನ ಕ್ರೌರ್ಯವನ್ನು ಮಣಿಸಿ ಧರ್ಮಬೀರುವನ್ನಾಗಿ ಮಾಡಿ, ಲಿಂಗದೀಕ್ಷೆ ನೀಡುತ್ತಾರೆ. ಉದಕಮಂಡಲ ಪ್ರಾಂತದಲ್ಲಿ ಧರ್ಮಪ್ರಚಾರ ಮಾಡಿದ ನಂತರ, ಹಂಗಳ ಮತ್ತು ಪಾರ್ವತೀಬೆಟ್ಟದ ಮಾರ್ಗವಾಗಿ ತೆರಕಣಾಂಬಿಗೆ ಬರುತ್ತಾರೆ. ಇದು ವೈಷ್ಣವರ ೧೦೮ ಕ್ಷೇತ್ರಗಳಲ್ಲಿ ಒಂದಾಗಿದ್ದು, ರಾಜಧಾನಿಯಾಗಿತ್ತು. ರಾಜ ಜಗಪತಿ ವೈಷ್ಣವ ಧರ್ಮಾವಲಂಬಿಯಾಗಿದ್ದನು. ಅಲ್ಲಿಗೆ ಬಂದ ಶಾಂತೇಶ್ವರರು ಶೈವಧರ್ಮ ಪ್ರಚಾರ ಮಾಡುತ್ತಾರೆ. ಅದನ್ನು ಕಂಡ ರಾಜಭಟರು, ಅವನನ್ನು ಕರೆದೊಯ್ದು ರಾಜನ ಮುಂದೆ ನಿಲ್ಲಿಸುತ್ತಾರೆ. ವಿಷ್ಣುಭಕ್ತನಾದ ರಾಜ ಕೋಪದಿಂದ ನಾನಾ ಚಿತ್ರಹಿಂಸೆ ನೀಡುತ್ತಾನೆ. ಮದಿಸಿದ ಆನೆಯನ್ನು ತಂದು ವೀರಶೈವ ಧರ್ಮೀಯರಾದ ಶಾಂತೇಶ್ವರನನ್ನು ನಾಶಮಾಡುವಂತೆ ಆಜ್ಞಾಪಿಸುತ್ತಾನೆ. ಯಾವುದಕ್ಕೂ ಜಗ್ಗದ ಶಾಂತೇಶ್ವರರು ಶಾಂತವಾಗಿರುತ್ತಾರೆ. ಮದಿಸಿದ ಆನೆ ಘೀಳಿಡುತ್ತಾ ಬಂದುದು ಇವರನ್ನು ಕಂಡು ಶಾಂತತೆಯಿಂದ ನಿಧಾನವಾಗಿ ಮಂಡಿಯೂರಿದಂತೆ ಕುಳಿತುಕೊಂಡು ಸೊಂಡಿಲನ್ನು ಮೇಲೆತ್ತಿ ತಲೆಯ ಮೇಲಿಟ್ಟುಕೊಳ್ಳುತ್ತದೆ. ಮದಿಸಿದ ಆನೆಯನ್ನು ಮಣಿಸಿದ ಶಾಂತೇಶ್ವರರಿಗೆ 'ಮದ್ದಾನೇಶಾಂತೇಶ್ವರ'ಎಂದು ಹೆಸರಾಯಿತೆಂದು ಹೇಳುತ್ತಾರೆ. ಜನರ ಬಾಯಲ್ಲಿ ಅದು 'ಮದ್ದಾನೇಶ್ವರ'ಆಯಿತು. ಆನಂತರ ರಾಜನ ಮನಸ್ಸಿನ ಪರಿವರ್ತನೆ ಆಗಿ, ಶಾಂತೇಶ್ವರರನ್ನು ಅರಮನೆಯಲ್ಲಿಯೇ ಉಳಿಸಿಕೊಂಡನು. ಆದರೆ ಅವರು ಅರಮನೆಯಲ್ಲಿರಲು ಇಚ್ಚಿಸಲಿಲ್ಲ. ಆ ರಾಜ್ಯದಲ್ಲಿಯೇ ರಾಜ ಪಡಗೂರು ಎಂಬ ಗ್ರಾಮದ ಬಳಿ ಕಾಡಿನಲ್ಲಿ ಯೋಗಮಂಟಪ ನಿರ್ಮಿಸಿಕೊಡುತ್ತಾನೆ. ಶಾಂತೇಶ್ವರರು ಅಲ್ಲಿ ನೆಲೆಸುತ್ತಾರೆ. ಜನರು 'ಅಡವಿಸ್ವಾಮಿ'ಗಳೆಂದೂ ಕರೆಯಲಾರಂಭಿಸಿ, 'ಅಡವೀಮಠ'ವೆಂದು ಪ್ರಸಿದ್ಧವಾಯಿತು.

ಕರಸ್ಥಲದ ಶ್ರೀ ನಾಗಲಿಂಗಸ್ವಾಮಿಗಳು ಮದ್ದಾನೇಶ್ವರರೊಂದಿಗೇ ಈ ಪ್ರಾಂತದಲ್ಲಿ ಸಂಚರಿಸುತ್ತಾ ಗುಂಡ್ಲುಪೇಟೆ ಬಳಿಯ ಮಂಚಹಳ್ಳಿ ಬೆಟ್ಟಕ್ಕೆ ಬರುತ್ತಾರೆ. ದಟ್ಟಕಾಡಿನಲ್ಲಿ ಕರಡಿಯ ಕಣ್ಣುಬೇನೆಯನ್ನು, ಹುಲಿಯ ಕರುಳುಬೇನೆಯನ್ನು ಹೋಗಲಾಡಿಸಿ ಗುಣಮುಖ ಆಗುವಂತೆ ಮಾಡುತ್ತಾರೆ. ನಾಗಲಿಂಗಸ್ವಾಮಿಗಳು ಮುಂದೆ ಸಂಚರಿಸದೇ ಅಲ್ಲಿಯೇ ಉಳಿದುಬಿಡುತ್ತಾರೆ. ಅನೇಕ ಪವಾಡ ಮಾಡುತ್ತಾರೆ. ಶಾಂತವೀರಯ್ಯ ಎಂಬುವವರಿಂದ ಗುರುದೀಕ್ಷೆ ಪಡೆಯಬೇಕೆಂದು ಆಶಿಸಿದ ನಾಗಲಿಂಗಸ್ವಾಮಿ ಅವರ ಶಿಷ್ಯರಾಗುತ್ತಾರೆ. ಗುರುದೀಕ್ಷೆ ನೀಡುವ ದಿನ ತನ್ನ ಕರಸ್ಥಲದಲ್ಲಿಯೇ ಲಿಂಗವು ಬೇರೂರಿರುವುದನ್ನು ಎಲ್ಲರಿಗೂ ತೋರಿಸುತ್ತಾರೆ. ಅಂದಿನಿಂದ ಕರಸ್ಥಲ ನಾಗಲಿಂಗಸ್ವಾಮಿಗಳೆಂದು ಹೆಸರು ಬರುತ್ತದೆ. ತನ್ನ ಗುರು ಶಾಂತವೀರಯ್ಯನವರೊಂದಿಗೆ ಸಂಚರಿಸುತ್ತಾ ಶ್ರೀಶೈಲಕ್ಕೆ ಹೊರಟು ಹೋಗುತ್ತಾರೆ. ೧೬೫೦ ರಲ್ಲಿದ್ದ ರುದ್ರಕವಿ ಎಂಬಾತನು "ಕರಸ್ಥಲ ನಾಗಲಿಂಗ ಚರಿತ್ರೆ" ಎಂಬ ಕಾವ್ಯ ಬರೆದಿದ್ದು ಅದರಲ್ಲಿ ನಾಗಲಿಂಗಸ್ವಾಮಿ ಬಗ್ಗೆ ಕಥಾನಕ ದೊರೆಯುತ್ತದೆ. ಸ್ವತ: ಶ್ರೀ ನಾಗಲಿಂಗಸ್ವಾಮಿಗಳು 'ಕರಸ್ಥಲನಾಗಿದೇವ ತ್ರಿಪದಿ', 'ಅಕ್ಷರ ಚೌಪದ', 'ಮಡಿವಾಳಯ್ಯನ ತಾರಾವಳಿ' ಎನ್ನುವ ವಚನ ಮತ್ತು ಹಾಡುಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ.

**ಸಾಲೂರು ಮಠ:** ಇದನ್ನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿಗೆ ಸೇರಿದ ಸಾಲೂರಿನಿಂದ ಬಂದ ಸ್ವಾಮಿಗಳೊಬ್ಬರು ಸ್ಥಾಪಿಸಿದರೆಂದು ಹೇಳುತ್ತಾರೆ. ನಡುಮಲೆಯ ಕ್ಷೇತ್ರದಲ್ಲಿ ಮಾದೇಶ್ವರ ಗದ್ದುಗೆಯಷ್ಟೇ ಸಾಲೂರು ಮಠವೂ ಪ್ರಮುಖವಾದುದಾಗಿದೆ. ಕೊಳ್ಳೇಗಾಲ ತಾಲೂಕಿಗೆ ಸೇರಿದ ಈ ಮಠಕ್ಕೆ ಮಾದೇಶ್ವರನಿಗೆ ಪೂಜೆ ಸಲ್ಲಿಸಿದವರೂ ಬಂದು ಸಂದರ್ಶಿಸುತ್ತಾರೆ. ಮಾದೇಶ್ವರ ದೇವಾಲಯವನ್ನು ಸರ್ಕಾರ ೧೯೫೦ರಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ಅಲ್ಲಿಯವರೆಗೂ ಸಾಲೂರು ಮಠದ ಸ್ವಾಮಿಗಳೇ ಅದನ್ನು ನಿರ್ವಹಿಸುತ್ತಿದ್ದರು.

ಹಾಗೆಯೇ ಈ ಗುರುಪರಂಪರೆಯಲ್ಲಿ ಬರುವ ಶ್ರೀ ಕೆಂಪನಂಜಸ್ವಾಮಿಗಳು, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಮಾದೇಶ್ವರ ದೇವಾಲಯವನ್ನು (ಗದ್ದಿಗೆ) ಅಭಿವೃದ್ಧಿಪಡಿಸಿದ್ದರು. ೧೯೫೦ರಲ್ಲಿ ಶ್ರೀ ಮುದ್ದುವೀರಸ್ವಾಮಿಗಳ ಕಾಲದಲ್ಲಿ ಸರ್ಕಾರದ ವಶವಾಯಿತು. ಮಾದೇಶ್ವರ ದೇವಾಲಯಕ್ಕೆ ೧೮೪೨ ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆದೇಶದಂತೆ ಧರ್ಮದರ್ಶಿ ನೇಮಕವಾದರೂ ಈ ಮಠಾಧೀಶರು ಎರಡನ್ನೂ ಸಮಭಾವದಿಂದ ಕಂಡು ಸೇವೆ ಸಲ್ಲಿಸುತ್ತಿದ್ದರು. ಮಾದೇಶ್ವರ ಆಲಯದವರೂ ಕೂಡ ಮಠದ ಶ್ರೀಗಳವರನ್ನು ಸಾಂಪ್ರದಾಯಕ ರೀತಿಯಲ್ಲಿ ಕರೆದೊಯ್ದು ಅವರ ಸಮ್ಮುಖದಲ್ಲೇ ಪೂಜಾ ಕೈಂಕರ್ಯ ನಡೆಸುವ ರಿವಾಜು ಹೊಂದಿದ್ದು, ಮಾದೇಶ್ವರ ಲಿಂಗಕ್ಕೆ ಪ್ರಸಾದ ನೈವೇದ್ಯ ಮಾಡುವ ಸಮಯದಲ್ಲಿ ಸಾಲೂರು ಮಠದ ಶ್ರೀಗಳು ಅಲ್ಲಿಯೇ ಪ್ರಸಾದ ಸ್ವೀಕರಿಸುತ್ತಿದ್ದಾರೆಂದು, ಅಷ್ಟರಮಟ್ಟಿಗೆ ಎರಡಕ್ಕೂ ಅವಿನಾಭಾವ ಸಂಬಂಧವಿತ್ತು ಎನ್ನುತ್ತಾರೆ.

ಚಾಮರಾಜನಗರ ತಾಲೂಕಿನಲ್ಲಿ ಅನೇಕ ವೀರಶೈವ ಮಠಗಳ ಉಲ್ಲೇಖ ಕಂಡು ಬರುತ್ತವೆ. ಚಂದ್ರಣಿಮಠ ಕಂಚಿತೆಲುಗಾಣ್ಯದ ಮಠ, ವಾಣಿಜ್ಯಪುರಿಮಠ, ಕೆಂಬಾಳು ಮಠ, ಹಾಗೂ ಮಹಾಲಿಂಗಿಮಠ (ಚಾಮರಾಜನಗರ ೨೯೨) ಉಮ್ಮತ್ತೂರಿನ ಉಪ್ಪರಿಗೆಯ ಮಠಕ್ಕೆ 'ನಿರಾಸಿಮಠ' ಎಂಬ ಹೆಸರಿತ್ತೆಂದು ತಿಳಿದುಬರುತ್ತದೆ (ಚಾಮರಾಜನಗರ ೨೨೯) ಮಲೆಮಹದೇಶ್ವರ (೧೩೫೦–೧೪೩೫) ಹರದನಹಳ್ಳಿ ಮಠದ ಎಡೆಯೂರು ಸಿದ್ದಲಿಂಗೇಶ್ವರರು, ಮುಪ್ಪಿನ ಷಡಕ್ಷರಿ ಮತ್ತು ನಿಜಗುಣ ಶಿವಯೋಗಿ (೧೫ನೇ ಶತಮಾನದಲ್ಲಿದ್ದವರು) ಮಠಗಳಿವೆ. ಕೊಳ್ಳೇಗಾಲದಲ್ಲಿ ಸ್ವತಂತ್ರವಾದ ರಾಮಕೃಷ್ಣ ಮಠ ಇದೆ. ೧೯೬೪ರಲ್ಲಿ ನಿರ್ಮಲಾನಂದ ಸ್ವಾಮೀಜಿಯವರು ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ಥಾಪಿಸಿದ ವಿಶ್ವಶಾಂತಿ ನಿಕೇತನ ಎಂಬ ಆಶ್ರಮಗಳಿವೆ.

## ಜಾತಿ ಮತ್ತು ಬುಡಕಟ್ಟುಗಳು

ಜಾತಿ ಎಂಬುದು ಒಂದು ವಿಶಿಷ್ಟ ವ್ಯವಸ್ಥೆ. ಈ ಕೌತುಕಮಯ ವ್ಯವಸ್ಥೆಯ ಹುಟ್ಟು ಜಟಿಲ ವಿಚಾರವಾಗಿದೆ. ಅತ್ಯಂತ ಪ್ರಾಚೀನ ಹಿಂದು ದಾಖಲೆಗಳಾದ ವೇದಗಳಲ್ಲಿ ಸ್ಪಷ್ಟವಾಗಿ ಸಮಾಜವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ ಬಗ್ಗೆ ಉಲ್ಲೇಖಗಳು ಕಾಣ ಸಿಗುತ್ತವೆ. ಮೈಸೂರು ಜನಗಣತಿ ವರದಿ, ೧೮೯೧, ಜಾತಿ ಪದ್ದತಿ ಕುರಿತು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದೆ.

"ಪೂರ್ವದಿಂದಲೂ ಇದ್ದ ವ್ಯತ್ಯಾಸಗಳ ಕುರಿತಾಗಿ ವೇದದಲ್ಲಿ ದೊರಕುವ ಕನಿಷ್ಠ ಪ್ರಮಾಣದ ಆಧಾರವು ಮನಸ್ಸನ್ನು ತತ್ತರಗೊಳಿಸುವಷ್ಟು ಅಸಂಖ್ಯಾತ ಶಾಖೋಪಶಾಖೆಗಳು ಮತ್ತು ಸೇರ್ಪಡೆಗಳನ್ನು ವಿವರಿಸಲು ಸಮರ್ಥವಾಗಿಲ್ಲ. ಅದು ಒಂದು ಜಾತಿ ಅಥವಾ ಉಪ–ಪಂಗಡದ ಸಾಮಾಜಿಕ ವ್ಯವಹಾರವು ಮತ್ತೊಂದರೊಡನೆ ಸಂಪೂರ್ಣವಾಗಿ ಭಿನ್ನವಾಗಿರುವುದಕ್ಕೆ ತೃಪ್ತಿಯಾಗುವಷ್ಟು ಕಾರಣಗಳನ್ನು ಸಹ ನೀಡುವುದಿಲ್ಲ. ವೇದೋತ್ತರ ಕಾಲದ ಪುರಾಣಗಳೇ ಮುಂತಾದ ಸಾಹಿತ್ಯ ಕೃತಿಗಳಲ್ಲಿ ಹೊಸ ಜಾತಿಗಳು ಮತ್ತು ಒಳ ಪಂಗಡಗಳು ಬೆಳೆದು ಬಂದ ರೀತಿಯನ್ನು ಹೀಗೆ ವಿವರಿಸಲಾಗಿದೆ.

(೧) ವಿವಿಧ ಜನಾಂಗಗಳ ಮತ್ತು ಪ್ರತ್ಯೇಕ ವೈದಿಕ ವರ್ಗಗಳ ನಡುವಿನ ಜಾತಿ ಸಂಕರ

(೨) ವಿವಿಧ ರೀತಿಯ ಉದ್ಯೋಗಗಳು

(೩) ನಂಬಿಕೆಯಲ್ಲಿನ ಭೇದಗಳು,

(೪) ವೈಯಕ್ತಿಕ ಸ್ವಭಾವ ವೈಚಿತ್ರ್ಯಗಳು ಮತ್ತು

(೫) ಬೇರೆ ಬೇರೆ ಆಹಾರ ಮತ್ತು ವಾಸಸ್ಥಾನದ ಭೌಗೋಳಿಕ ವಿಭಾಗಗಳು.

ಅದೇ ವರದಿಯು ಮುಂದುವರೆದು ಹೇಳುವುದೇನೆಂದರೆ, "ಆಧುನಿಕ ಹಿಂದೂ ಜಾತಿ ಪದ್ಧತಿಯು ಜನಾಂಗ ಮತ್ತು ಉದ್ಯೋಗ ಮಾದರಿಯನ್ನೇ ಬಹು ಮಟ್ಟಿಗೆ ಆಧರಿಸಿಕೊಂಡಿದೆ. ಮೂಲತಃ ಪ್ರತಿಯೊಂದು ಜನರ ಗುಂಪಿಗೆ ಹಂಚಿಕೊಡಲಾದ ವಿಶೇಷ ಕರ್ತವ್ಯ ಮತ್ತು ಉದ್ಯೋಗಗಳು ಅವರಿಗೆ ತದನಂತರ ಅಂಟಿಕೊಂಡ ಹೆಸರನ್ನು ನೀಡಿದವೆನ್ನಬಹುದು; ಕ್ಷತ್ರಿಯರು ಸೈನಿಕ ಉದ್ಯೋಗದವರು; ಮತ್ತು ಉಳಿದವರೂ ಇದೇ ರೀತಿ ಬೇರೆ ಬೇರೆ ಉದ್ಯೋಗಗಳಲ್ಲಿರುವವರು. ಕಾಲ ಕ್ರಮೇಣ ಸಂಬಂಧಿಸಿದ ಜನಾಂಗಗಳ ವರ್ಣ ಅಥವಾ ಬಣ್ಣವು ಭಿನ್ನತೆ ಅಥವಾ ಅಂತರವನ್ನು ತೋರಿಸುವ ಒಂದು ಹೊಸ ಮೂಲಾಂಶವಾಗಿ ಹೊರಹೊಮ್ಮಿತು; ಏಕೆಂದರೆ, "ವರ್ಣ' ಎಂಬುದು ಸಂಸ್ಕೃತ ಭಾಷೆಯಲ್ಲಿ ಜಾತಿಗೆ ಪರ್ಯಾಯ ಪದವಾಗಿ ಬಳಕೆಯಲ್ಲಿದೆ. ಬಹುಶ: ಮೂಲ ಆರ್ಯರು ಚದುರಿಹೋಗಿ ತಮ್ಮ ಸ್ವಭಾವಸಿದ್ದವಾದ ಮೇಲ್ಮೆಗಳನ್ನು ಉಳಿಸಿಕೊಳ್ಳುವ ಕಾಳಜಿಯ ನಡುವೆಯೇ ಕಪ್ಪು ವರ್ಣೀಯ ಜನರುಗಳೊಡನೆ ಸಂಪರ್ಕಕ್ಕೆ ಬಂದ ಬಹಳ ನಂತರದ ಕಾಲಕ್ಕೆ ಇದು ಅನ್ವಯಿಸುತ್ತದೆ. ಹೀಗಾಗಿ ಈಗ ನಾವು ಕಾಣುತ್ತಿರುವ ಜಾತಿಯು ಕುಲ ಭೇದಗಳು ಮತ್ತು ವ್ಯಾಪಾರಿ ಸಂಘಟನೆಗಳ ಸಂಯೋಗ ಫಲವಾಗಿದೆ"

ಜಾತಿಗಳ ಸ್ಥಾನಮಾನವು ವಿಧವಿಧವಾದ ವಿಚಾರಗಳ ಸಂಬಂಧ ಬದಲಾಗುತ್ತದೆಂದು ಕೆಲವು ಬಾರಿ ಗಮನಿಸಲಾಗಿದೆ. ವಿಧವಾ ಮರುವಿವಾಹ; ಮೀನುಗಾರಿಕೆ, ಬೇಟೆ,ನೇಯ್ಗೆ ಮುಂತಾದ ವೃತ್ತಿ ವಿಶಿಷ್ಟತೆಗಳು; ನೆಲೆ, ಮುಂತಾದವು. ಅನುವಂಶೀಯ ವೃತ್ತಿಗಳು ಜಾತಿಪದ್ಧತಿಯ ಅಂತರವನ್ನು ತೋರಿಸುವ ಒಂದು ಲಕ್ಷಣವಾಗಿ ಈಗೇನೂ ಕಾಣುವುದಿಲ್ಲ. ಬ್ರಿಟಿಷರ ಆಡಳಿತ ಮತ್ತು ನಂತರದ ಕಾಲದ ಆಧುನಿಕ ಬದಲಾವಣೆಗಳು, ವೃತ್ತಿಯ ಆಯ್ಕೆ ಸಂಬಂಧ ಅನಿರ್ಬಂಧಿತ ಸ್ವಾತಂತ್ರ್ಯ ಮತ್ತು ಮುಕ್ತ ಅವಕಾಶ ಇವು ಜಾತಿ ಪದ್ಧತಿಯ ವೃತ್ತಿ ಲಕ್ಷಣಗಳನ್ನು ಬಹಳವಾಗಿ ಮಾರ್ಪಡಿಸಿಬಿಟ್ಟಿವೆ. ಉದಾಹರಣೆಗೆ, ಬ್ರಾಹ್ಮಣರು, ಪೌರೋಹಿತ್ಯ ವೃತ್ತಿಯವರೆನ್ನುವುದು ತಾತ್ವಿಕವಾಗಿ ಮಾತ್ರ ಸರಿ. ಅವರ ಏಕೈಕ ವೃತ್ತಿಯಾಗಿ ಅದು ಈಗೇನೂ ಉಳಿದುಕೊಂಡಿಲ್ಲ. ಇದೇ ರೀತಿ, ಯೋಧ ವೃತ್ತಿಯು ಸಾಕಷ್ಟು ಹಿಂದಿನಿಂದಲೇ ಕೇವಲ ಕ್ಷತ್ರಿಯರಿಗೇ ಮೀಸಲಾದ ವೃತ್ತಿಯಾಗಿ ಉಳಿದಿಲ್ಲ; ವೈಶ್ಯ ಶೆಟ್ಟಿಯು ಈಗ ತಾನೊಬ್ಬನೇ ವ್ಯಾಪಾರಿ ಎನ್ನುವಂತಿಲ್ಲ ಅಥವಾ ಚಮ್ಮಾರ ಮಾತ್ರವೇ ತೊಗಲು ವ್ಯಾಪಾರಿಯಾಗಿ ಉಳಿದಿಲ್ಲ.

ಅನೇಕ ಕುಲ, ಅಲೆಮಾರಿ ಗುಂಪುಗಳು, ತಮ್ಮದೇ ಆದ ಉಪಭಾಷೆ, ರೀತಿನೀತಿ, ಸಂಸ್ಕೃತಿ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆ, ಬದುಕಿನ ಶೈಲಿ ಹೊಂದಿದ್ದು ಯಾವುದೇ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವವರನ್ನು ಬುಡಕಟ್ಟು ಜನಾಂಗ ಎಂದು ಪರಿಗಣಿಸಬಹುದು. ಇವರು ಇತರರಿಗಿನ್ನ ಭಿನ್ನವಾಗಿದ್ದು ಆಧುನಿಕ ಜಗತ್ತಿನಿಂದ ಪ್ರತ್ಯೇಕವಾಗಿರುವವರಾಗಿರುತ್ತಾರೆ.

ಈ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅಂತರ್ಗತವಾಗಿರುವ ಪ್ರತಿಯೊಂದು ಮುಖ್ಯ ಜಾತಿ ಮತ್ತು ಬುಡಕಟ್ಟಿಗೆ ಸಂಬಂಧಿಸಿದ ಪ್ರಮುಖ ಸಾಮಾಜಿಕ, ಉದ್ಯೋಗಿಕ ವೈಲಕ್ಷಣಗಳನ್ನು ವಿವರಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ. ಹೆಚ್ಚಿನ ವಿವರಗಳಿಗೆ ಹೋಗದೆ ಜಾತಿ ಜಾತಿಗಳ ನಡುವಿನ ಭಿನ್ನತೆಯನ್ನು ತೋರಿಸುವ ಮೂಲಕ ರಾಜ್ಯದ ಉಳಿದ ಜಿಲ್ಲೆಗಳು ಮತ್ತು ನೆರೆ ರಾಜ್ಯಗಳಲ್ಲಿ ಕಂಡುಬರುವ ಅನುರೂಪದ ಜಾತಿಗಳೊಡನೆ ಓದುಗರು ಇಲ್ಲಿಯ ಜಾತಿಗಳನ್ನು ಗುರ್ತಿಸುವ ಅಥವಾ ಹೋಲಿಸಿ ನೋಡುವ ಅವಕಾಶವನ್ನು ಕಲ್ಪಿಸಲು ಯತ್ನಿಸಲಾಗಿದೆ. ಈ ವಿಷಯದ ಪ್ರಾಮುಖ್ಯತೆ ಮತ್ತು ವಿಸ್ತಾರವನ್ನು ಗಮನಿಸಿದಾಗ ಜಾತಿ ವಿಷಯಕವಾಗಿ ಮಾಡುವ ಯಾವುದೇ ಹೇಳಿಕೆಯನ್ನು ಸಂಪೂರ್ಣ ಸತ್ಯವೆಂದು ಸ್ವೀಕರಿಸಲಾಗುವುದಿಲ್ಲ ಮತ್ತು ಸ್ಪಷ್ಟ ಸಂಗತಿಗಳ ನಡುವಿನ ಸಂಬಂಧಗಳು ಭಿನ್ನತೆಯ ಅನೇಕ ಛಾಯೆಗಳನ್ನು ವ್ಯಕ್ತಪಡಿಸುತ್ತವೆಂಬುದನ್ನು ಒಪ್ಪಿಕೊಳ್ಳಲೇಬೇಕು.

**ಅಗಸ:** ಬಹುತೇಕ ಕನ್ನಡ ಭಾಷಿಕರಾದ ಅಗಸರು ಕರ್ನಾಟಕದ ಸಾಂಪ್ರದಾಯಿಕ ಮಡಿವಾಳರು. 'ಮಡಿವಾಳ'ಎಂದರೆ ನೀರಿನಿಂದ ತೊಳೆದು ಶುಚಿಗೊಳಿಸುವ (ವಸ್ತ್ರ ಇತ್ಯಾದಿ) ವ್ಯಕ್ತಿ. ತಮಿಳು ಭಾಷಿಕ ಅಗಸರನ್ನು 'ವಣ್ಣನ್' ಎಂದೂ ತೆಲುಗು ಭಾಷಿಕ ಅಗಸರನ್ನು ನಕಲ ಅಥವಾ ಚಕಲ ಎಂದೂ ಹಿಂದಿಯಲ್ಲಿ ದೋಬಿ ಎಂದೂ ಕರೆಯುವರು. ಚಾಮರಾಜನಗರ ಜಿಲ್ಲೆಯ ಅಗಸರು ಬಹುತೇಕ ಕನ್ನಡ ಭಾಷಿಕರೇ ಆಗಿದ್ದಾರೆ. ಅನೇಕ ಕುಲ, ಬೆಡಗುಗಳಿದ್ದು ಒಂದೇ ಕುಲದಲ್ಲಿ ವಿವಾಹ ಸಂಬಂಧವೇರ್ಪಡಲು ಆಸ್ಪದ ನೀಡುವುದಿಲ್ಲ. ವಿವಾಹ ಕಾಲದಲ್ಲಿ ತೆರ(ಕನ್ಯಾ ಶುಲ್ಕ) ಪಡೆಯುವ ಪದ್ಧತಿ ಇವರಲ್ಲಿದೆ. ವಿಧವಾ ವಿವಾಹಕ್ಕೆ ವಿರೋಧವಿಲ್ಲ. ವಿಚ್ಛೇದನಗಳೂ ರೂಢಿಯಲ್ಲಿವೆ.

ಅನೇಕ ವ್ಯವಹಾರಗಳಲ್ಲಿ ಇವರ ಪುರೋಹಿತರು ಜಂಗಮರು ಅಥವಾ ಇವರದೇ ಜಾತಿ ಮುಂಖಂಡರಾಗಿರುತ್ತಾರೆ; ಆದರೆ ಕೆಲವರು ಬ್ರಾಹ್ಮಣ ಪುರೋಹಿತರನ್ನು ಅವಲಂಬಿಸಿರುವುದು ಅಪರೂಪವೇನಲ್ಲ. ಇವರ ಸಾಂಪ್ರದಾಯಿಕ ಕಾಯಕ ಬಟ್ಟೆಗಳನ್ನು ಶುಚಿಗೊಳಿಸುವುದೇ ಆಗಿದ್ದರೂ, ಈಗ ಅನೇಕರು ಕೃಷಿಕರಾಗಿರುತ್ತಾರೆ ಅಥವಾ ಎರಡೂ ಕಾಯಕಗಳಲ್ಲಿ ಇರುತ್ತಾರೆ. ಹಬ್ಬ ಹರಿದಿನಗಳಲ್ಲಿ ಇವರು ಪತ್ತು, ದೀವಟಿಗೆ (ಪಂಜು) ಹಿಡಿಯುವ ಸೇವೆ ಸಲ್ಲಿಸುತ್ತಾರೆ ಮತ್ತು ಪೂರ್ವದಲ್ಲಿ ಗಣ್ಯ ವ್ಯಕ್ತಿಗಳಿಗೆ ಪಂಜು ಹಿಡಿದುಕೊಂಡು ದಾರಿ ತೋರಿಸುವ ಕೆಲಸವನ್ನೂ ಮಾಡುತ್ತಿದ್ದರು. ವಿವಾಹ, ದೇವರ ಉತ್ಸವಗಳಲ್ಲಿ ನಡೆಮುಡಿ ಹಾಸುವ (ಮಡಿ ಬಟ್ಟೆ ಹಾಸುವ ಹಾಗೂ ಪತ್ತು ಹಿಡಿಯುವ ಕೆಲಸ ಮಾಡುತ್ತಿದ್ದರು. ಅಗಸರಲ್ಲಿ ಶೈವ ಮತ್ತು ವೈಷ್ಣವ ಗುಂಪುಗಳೆರಡೂ ಇವೆ. ಗ್ರಾಮದೇವತೆಗಳು, ತಿರುಪತಿ ವೆಂಕಟರಮಣ ಸ್ವಾಮಿ, ನರಸಿಂಹಸ್ವಾಮಿ ಮುಂತಾದ ದೇವರಿಗೆ ಇವರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ವಿಷ್ಣುವಿನ ಪತ್ನಿಯಾದ ಲಕ್ಷ್ಮಿದೇವಿ ಇವರ ಮುಖ್ಯ ದೇವತೆ. ಗೌರಿ ಹಬ್ಬದ ಕಾಲಕ್ಕೆ (ಆಗಸ್ಟ್–ಸೆಪ್ಟೆಂಬರ್) ಪೂಜೆಗೊಳ್ಳುವ ಭೂಮಿ ದೇವರು ಇವರ ಕುಲದೈವವಾಗಿದೆ. ಇದರ ನಂತರ, ಇವರು ಉಬ್ಬೆ ಪೂಜೆ (ಒಗೆಯ ಬೇಕಾದ ಬಟ್ಟೆಗಳನ್ನು ನೆನೆಹಾಕಿಡುವ ಬಾನಿ ಅಥವಾ ತೊಟ್ಟಿ) ಮಾಡುವರು. ಅಗಸರು ಪಾರಂಪರಿಕ ೧೮ ಪಣದ ಬಲಗೈ ವಿಭಾಗದೊಡನೆ ತಮ್ಮನ್ನು ಗುರ್ತಿಸಿಕೊಳ್ಳುತ್ತಾರೆ. ಜಾತಿ ಪಂಚಾಯಿತಿ ವ್ಯವಸ್ಥೆ ಇದೆ. ಸಾಮಾನ್ಯವಾಗಿ ಮೃತರನ್ನು ಹೂಳುತ್ತಾರೆ. ಇತ್ತೀಚಿನ ಕೆಲವು ದಶಕಗಳವರೆಗೂ ಅಗಸರು ಬಾರಾ ಬಲೂತಿ ಅಥವಾ ಅಯ್ಯಂಗಡಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಅನುವಂಶಿಕ ಗ್ರಾಮ ಸೇವಕರ ವರ್ಗದಲ್ಲಿ ಒಬ್ಬರಾಗಿದ್ದರು.

**ಅರಸು:** ಅರಸುಗಳು ಬ್ರಹ್ಮ ಕ್ಷತ್ರಿಯ ಜಾತಿಯ ರಾಜಪಿಂಡೆ ಶಾಖೆಗೆ ಸೇರಿದವರೆಂದು ನಂಬಲಾಗಿದೆ. ಇವರಲ್ಲಿ ಮೂರು ವಿಭಾಗಗಳಿವೆ–ಶುದ್ಧ ಅರಸು (ಆಳುವ ವರ್ಗ), ಕುಮಾರಪಟ್ಟ ಮತ್ತು ಬಡವ. ಈ ಜಾತಿಯ ಹುಟ್ಟನ್ನು ದ್ವಾರಕೆಯಿಂದ ಬಂದ ವಿಜಯ ಮತ್ತು ಕೃಷ್ಣ ಹೆಸರಿನ ಇಬ್ಬರು ಯಾದವ ರಾಜಕುಮಾರರಿಗೆ ಆರೋಪಿಸಲಾಗಿದೆ. ಇವರ ಆಗಮನಕ್ಕೂ (ಕ್ರಿ.ಶ. ೧೩೯೯) ಪೂರ್ವದಲ್ಲಿಯೇ ಮೈಸೂರು ಪಟ್ಟಣ ಪ್ರದೇಶದ ಸುತ್ತಮುತ್ತ ಅನೇಕ ಅರಸು ಕುಲಗಳಿದ್ದವೆಂದು ತಿಳಿಯಲಾಗಿದೆ.

ಮೈಸೂರು ಅರಸರ ಜ್ಞಾತಿ ಮನೆತನಗಳು ಮೂರು ಶಾಖೆಗಳಲ್ಲಿ ಹಂಚಿಹೋಗಿದ್ದವು; ಯದುರಾಯನ ತಮ್ಮನಾಗಿದ್ದ ಕೃಷ್ಣರಾಯನಿಂದ ಆರಂಭವಾದ ಕಾರುಗಳ್ಳಿ ಮನೆತನ; ಯದುರಾಯನ ಎರಡನೇ ಮಗನನ್ನು ದತ್ತು ತೆಗೆದುಕೊಂಡಿದ್ದ ಕೆಂಚಲಗೋಡು ಮನೆತನ; ಮುಪ್ಪಿನ ತಿಮ್ಮರಾಯನಿಂದ ಆರಂಭವಾದ ಹೇಮನಹಳ್ಳಿ ಮನೆತನ; ಮತ್ತು ಒಂದರೊಡನೊಂದು ಅನ್ಯೋನ್ಯ ಸಂಬಂಧ ಹೊಂದಿದ್ದ ಇನ್ನೂ ಕೆಲವು ಮನೆತನಗಳು.

ಮಹಾರಾಜ ಚಿಕ್ಕದೇವರಾಜ ಒಡೆಯರ (ಕ್ರಿ.ಶ ೧೬೭೪-೧೭೦೪) ಕಾಲದಿಂದೀಚೆಗೆ ಅರಸುಗಳು ವಿಶಾಲವಾದ ಎರಡು ಶಾಖೆಗಳಲ್ಲಿ ವಿಂಗಡಿಸಲ್ಪಟ್ಟಿದ್ದಾರೆ, ಅವೆಂದರೆ, (೧) ಅನಾದಿಯಾಗಿ ಪರಿಶುದ್ಧತೆಯಿಂದ ಹೊಂದಿ ಬಂದ ಸಂಬಂಧಗಳುಳ್ಳ ಹದಿಮೂರು ಮನೆತನದ ಅರಸುಗಳು ಮತ್ತು (೨) ಗ್ರಾಮಾಂತರದಲ್ಲಿ ತಮ್ಮ ಅರಸುಗಳ ಸಂಪ್ರದಾಯದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಡೆದ ಹದಿನೆಂಟು ಮನೆತನದ ಅರಸುಗಳು.

ಈ ಶಾಖೆಗಳನ್ನು ವ್ಯವಸ್ಥೆಗೊಳಿಸಿದ ಚಿಕ್ಕದೇವರಾಜ ಒಡೆಯರು ಅರಸುಗಳಲ್ಲಿ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವ ಬಗ್ಗೆ ನಿಬಂಧನೆಯೊಂದನ್ನು ಜಾರಿಗೊಳಿಸಿದರು. ಅದೇನೆಂದರೆ, ಹದಿಮೂರು ಮನೆತನದ ಅರಸುಗಳು ಈ ಹದಿಮೂರು ಮನೆತನದಲ್ಲಿಯೇ ಹೆಣ್ಣು ಕೊಟ್ಟು ತಂದು ಮಾಡಬೇಕು; ಮತ್ತು ಹದಿನೆಂಟು ಮನೆತನದ ಅರಸುಗಳು ಹದಿನೆಂಟು ಮನೆತನದಲ್ಲಿಯೇ ಹೆಣ್ಣು ಕೊಟ್ಟು ತಂದು ಮಾಡಬೇಕು; ಆದರೆ, ಹದಿನೆಂಟು ಮನೆತನದ ಹೆಣ್ಣು ಮಕ್ಕಳನ್ನು ಹದಿಮೂರು ಮನೆತನದ ಅರಸುಗಳು ೨-೩ನೆಯ ಮದುವೆಗೆ ತರಬಹುದು.

ಅರಸುಗಳ ಮಾತೃಭಾಷೆ ಕನ್ನಡ. ಚಾಮರಾಜನಗರ ಜಿಲ್ಲೆ ಕುರಿತಂತೆ ಹೇಳುವುದಾದರೆ ಇವರು ಮೂಗೂರು, ಯಳಂದೂರು, ಕೊತ್ತೆಗಾಲ ಮುಂತಾದೆಡೆ ಹೆಚ್ಚಾಗಿ ಕಂಡುಬರುತ್ತಾರೆ. ಇವರ ಗೋತ್ರಗಳಲ್ಲಿ ಮುಖ್ಯವಾದವೆಂದರೆ, ಭಾರದ್ವಾಜ, ಕಶ್ಯಪ, ವಸಿಷ್ಠ, ಸಾಂಖ್ಯಾಯನ, ಗೌತಮ ಮುಂತಾದವು. ಇವರು ತಮ್ಮ ಬಾಲಕರಿಗೆ ಉಪನಯನ ಸಂಸ್ಕಾರವನ್ನು ನೆರವೇರಿಸುತ್ತಾರೆ ಮತ್ತು ಯಜ್ಞೋಪವೀತ ಧಾರಣೆ ಮಾಡುತ್ತಾರೆ. ಇವರು ವೈದಿಕ ಕರ್ಮಗಳನ್ನು ನಿಷ್ಠೆಯಿಂದ ನಡೆಸುತ್ತಾರೆ. ವಿವಾಹ ವಿಧಿಗಳು ನಡೆಯುವಾಗ ವರನು ಒಂದು ಕತ್ತಿ ಅಥವಾ ಕಠಾರಿಯನ್ನು ಕೊನೆಯವರೆಗೂ ತನ್ನೊಡನೆ ಇಟ್ಟುಕೊಂಡಿರುತ್ತಾನೆ. ವಿಧವಾ ವಿವಾಹಕ್ಕೆ ಇವರಲ್ಲಿ ಸಮ್ಮತಿಯಿಲ್ಲ. ಸುಮಾರು ಒಂದು ಶತಮಾನದಿಂದ ಬಾಲ್ಯ ವಿವಾಹ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇದಿಸಿದ್ದಾರೆ. ಅವರವರ ಮನೆಯ ಆಚಾರವಿಧಿಗಳನ್ನು ನೆರವೇರಿಸಲು ಅರಸುಗಳು ಬ್ರಾಹ್ಮಣ ಪುರೋಹಿತರನ್ನು ನೇಮಕ ಮಾಡಿಕೊಳ್ಳುವರು. ಮೃತರನ್ನು ಹೂಳುತ್ತಾರೆ. ೧೦ದಿನ ಸೂತಕ ಇರುತ್ತದೆ. ೧೨ನೇ ದಿನ ಶ್ರಾದ್ಧ ಮಾಡಿ ನಂತರ ಪ್ರತಿವರ್ಷ ವಾರ್ಷಿಕ ಶ್ರಾದ್ಧ ಆಚರಿಸುತ್ತಾರೆ. ಅರಸುಗಳಲ್ಲಿ ಶೈವ ವೈಷ್ಣವ, ಕೆಲವೊಮ್ಮೆ ಜೈನ ಪಂಗಡಗಳು ಇವೆಯಾದರೂ ಅವು ಪರಸ್ಪರ ವೈವಾಹಿಕ ಸಂಬಂಧಕ್ಕೆ ಅಡ್ಡಿಯಾಗಿಲ್ಲ. ಅವರು ಆಚರಿಸುವ ಅತ್ಯಂತ ಮುಖ್ಯವಾದ ಹಬ್ಬವೆಂದರೆ ಮಹಾನವಮಿ ಅಥವಾ ದಸರಾ. ಮಹಾನವಮಿ ಹಬ್ಬದ ಆಚರಣೆಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅರಸು ಜನಾಂಗವು ಆಚರಿಸಿಕೊಂಡು ಬರುತ್ತಿರುವ ಇನ್ನುಳಿದ ಹಬ್ಬಗಳೆಂದರೆ ಮಹಾತುರಮ್ಮನ ಹಬ್ಬ, ಮಾಸ್ತಮ್ಮ ಹಬ್ಬ, ಮತ್ತು ಮೂಗೂರು ತಿಬ್ಬಾದೇವಿ ಹಬ್ಬ. ಬೊಪ್ಪಗೌಡನಪುರದ ಮಠವನ್ನು ಅರಸು ಜನಾಂಗದವರೇ ನಿರ್ವಹಿಸುತ್ತಾರೆ ಮತ್ತು ಮಂಟೇಸ್ವಾಮಿ ಪಂಥದ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಗದ್ದುಗೆಗಳನ್ನು ಬಹಳ ಪೂಜ್ಯ ಭಾವನೆಯಿಂದ ಕಾಣುತ್ತಾರೆ.

**ಈಡಿಗ:** ಈಡಿಗರನ್ನು ಜಿಲ್ಲೆಯಲ್ಲಿ ಹಳೇಪೈಕರು ಎಂದೂ ಕರೆಯುವುದುಂಟು. ಇವರ ಪಾರಂಪರಿಕ ಉದ್ಯೋಗಗಳೆಂದರೆ ಕೃಷಿ, ಕೃಷಿ ಕಾರ್ಮಿಕ, ವ್ಯಾಪಾರ, ಸರ್ಕಾರಿ ಮತ್ತು ಇತರೆ ಸೇವೆಗಳು. ಇವರು ಮೂಲತ: ತೆಲುಗು ಪ್ರದೇಶದಿಂದ ಬಂದ ವಲಸಿಗರೆಂದು ಹೇಳುತ್ತಾರೆ. ಸಗೋತ್ರ ವಿವಾಹದ ಇವರ ಎರಡು ಗುಂಪುಗಳೆಂದರೆ (೧) ಮಡ್ಡಿ ಅಥವಾ ಸಾದಾ ಅಥವಾ ಊರು ಈಡಿಗರು, ಮತ್ತು (೨) ಬೆಲ್ಲದ ಅಥವಾ ಏಣಿ ಅಥವಾ ಕಾಡು ಈಡಿಗರು. ಎರಡು ಭಿನ್ನಗೋತ್ರ ವಿವಾಹದ ಗುಂಪುಗಳೆಂದರೆ ಸಾಸ್ಮೆಯವರು ಮತ್ತು ಬೋದೆಯರವರು. ಮಡ್ಡಿ

ಅಥವಾ ಸಾದ ಈಡಿಗರಲ್ಲಿ ಏಳು ಮನೆಯವರು, ಮುವ್ವತ್ತು ಮನೆಯವರು, ಮತ್ತು ಅರವತ್ತು ಮನೆಯವರು ಎಂಬ ಶಾಖೆಗಳಿವೆ. ದಂಡು ಈಡಿಗರು ಎಂಬ ಒಂದು ಶಾಖೆಯೂ ಉಂಟು. ಸಾಸ್ಮೆಯವರು ಎಂಬ ಶಾಖೆಯಲ್ಲಿ ಕಾರುಣ್ಯ ಮತ್ತು ವಾತ್ಸಲ್ಯ ಎಂಬ ಎರಡು ಗೋತ್ರಗಳಿವೆ; ಬೋದೆಯರವರು ಎಂಬ ಶಾಖೆಯಲ್ಲಿ ಕೌಂಡಿನ್ಯ ಮತ್ತು ಕಮಂಡಲ ಎಂಬ ಎರಡು ಗೋತ್ರಗಳಿವೆ. ಭಿನ್ನ ಗೋತ್ರ ವಿವಾಹದ ಗುಂಪುಗಳಾದ ಸಾಸ್ಮೆಯವರು ಮತ್ತು ಬೋದೆಯರವರು ಕ್ರಮವಾಗಿ ವಿಷ್ಣು ಮತ್ತು ಶಿವನ ಆರಾಧಕರು. ಈಡಿಗರಲ್ಲಿ ಕನ್ಯಾ ಶುಲ್ಕ ಪದ್ಧತಿ ರೂಡಿಯಲ್ಲಿದೆ. ವಿಧವಾ ಮರುವಿವಾಹಕ್ಕೆ ಅನುಮತಿ ನಿರಾಕರಿಸುವುದಿಲ್ಲವಾದರೂ ಆ ಬಗ್ಗೆ ಆದರಣೆ ಕಡಿಮೆ. ಪತಿಯನ್ನು ಜಾತಿಯಿಂದ ಹೊರಗೆ ಹಾಕಿದ ಸಂದರ್ಭದಲ್ಲಿ ಪತ್ನಿಯು ವಿವಾಹ ವಿಚ್ಛೇದನ ಪಡೆದುಕೊಳ್ಳಬಹುದು ಮತ್ತು ವ್ಯಭಿಚಾರಿಣಿಯಾದ ಪತ್ನಿಯಿಂದ ಆಕೆಯ ಪತಿಯು ವಿವಾಹ ವಿಚ್ಛೇದನ ಪಡೆದುಕೊಳ್ಳಬಹುದು.

ಈಡಿಗರು ಬಲಗೈ ಅಥವಾ ೧೮–ಪಣದ ಪಕ್ಷದವರು. ಇವರು ಪೂರ್ವಿಕರಿಗೆ ಮಹಾಲಯ ಅಮವಾಸ್ಯೆಯ ಮಾರನೇ ದಿನ ಮತ್ತು ಹೊಸ ವರ್ಷದ ಪ್ರಾರಂಭದ ದಿನ ಎಡೆ ಅರ್ಪಿಸುತ್ತಾರೆ, ಆದರೆ ಯಾವುದೇ ವಾರ್ಷಿಕ ಶ್ರಾದ್ಧ ಕರ್ಮಗಳನ್ನೂ ಮಾಡುವುದಿಲ್ಲ. ಇವರು ಬಹುತೇಕ ಮಾಂಸಹಾರಿಗಳು. ನಂದಿ ಅಥವಾ ಬಸವನ ಬಗ್ಗೆ ವಿಶೇಷ ಪೂಜ್ಯತಾ ಭಾವ ಇರುವ ಕಾರಣ ಮದ್ಯವನ್ನೊಯ್ಯಲು ಎಂದಿಗೂ ಅದನ್ನು ಬಳಸುತ್ತಿರಲಿಲ್ಲ. ಬ್ರಾಹ್ಮಣರು ಇವರ ಪುರೋಹಿತರು. ಹಬ್ಬ ಹರಿದಿನಗಳು ಹಾಗೂ ಮದುವೆ ಮುಂತಾದ ಆಚರಣೆಗಳಲ್ಲಿ ಅವರ ಸೇವೆಯನ್ನು ಪಡೆದುಕೊಳ್ಳುವ ರೂಢಿ ಇದೆ. ಸತ್ತವರನ್ನು ಹೂಳುವ ಪದ್ಧತಿ ಇದೆ. ಸಾವು ಸಂಭವಿಸಿದ ಮನೆಯಲ್ಲಿ ಪುಣ್ಯಾಹವಾಚನ ಮಾಡಿ ಶುದ್ಧಿಗೊಳಿಸಲು ಕೂಡ ಬ್ರಾಹ್ಮಣ ಪುರೋಹಿತರನ್ನು ಕರೆಯುತ್ತಾರೆ. ಶಿವ ಮತ್ತು ವಿಷ್ಣು ಇವರಲ್ಲದೆ ಈಡಿಗರು ಮುನೇಶ್ವರ, ಮಾರಿಯಮ್ಮ ಮತ್ತು ದುರ್ಗಾ ಪೂಜೆಯನ್ನು ಮಾಡುವರು. ಸೋಮವಾರದಂದು ಪೂಜೆಗೊಳ್ಳುವ ಕಾಟಮ್ಮ ದೇವಿ ಮತ್ತು ಮಂಗಳವಾರ ಹಾಗೂ ಶುಕ್ರವಾರಗಳಂದು ಪೂಜೆಗೊಳ್ಳುವ ಯಲ್ಲಮ್ಮ ಇವರ ವಿಶೇಷ ದೇವತೆಗಳು.

**ಉಪ್ಪಾರ:** ಚಾಮರಾಜನಗರ ಜಿಲ್ಲೆಯಲ್ಲಿ ಉಪ್ಪಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರ ಸಾಂಪ್ರದಾಯಿಕ ಉದ್ಯೋಗವೆಂದರೆ ಉಪ್ಪನ್ನು ತಯಾರಿಸುವುದಾಗಿತ್ತು. ಆದರೆ ಈಗಿನ ದಿನಗಳಲ್ಲಿ ಈ ಉದ್ಯೋಗವು ಸಂಪೂರ್ಣವಾಗಿ ನಶಿಸಿದೆ ಎಂದೇ ತಿಳಿಯಬಹುದು. ಇವರ ಈಗಿನ ಉದ್ಯೋಗಗಳೆಂದರೆ ಕೃಷಿ ಮಾಡುವುದು ಮತ್ತು ಕೃಷಿ ಕಾರ್ಮಿಕರಾಗಿರುವುದು; ಅನೇಕರು ಕೈಗಾರಿಕೆಗಳಲ್ಲಿ ಮತ್ತು ಸಾರ್ವಜನಿಕ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮನೆಕಟ್ಟುವುದು, ಕೆರೆ ಕಾಲುವೆಗಳ ನಿರ್ಮಾಣದಲ್ಲಿ ದುಡಿಯುವುದು ಮತ್ತು ವ್ಯಾಪಾರ ಮಾಡುವುದು ಕೂಡ ಉಂಟು. ಇವರನ್ನು ಮೇಲು ಸಕ್ಕರೆಯವರು, ಭಗೀರಥ ವಂಶದವರು, ಸಗರ ವಂಶದವರು, ಕರೇಬಂಡಿಯವರು ಎಂದೆಲ್ಲಾ ಕರೆಯುವರು. ಉಪ್ಪಾರ ಅಥವಾ ಉಪ್ಪಲಿಗರಲ್ಲಿ ತೆಲುಗು ಮತ್ತು ಕನ್ನಡ ಮಾತನಾಡುವ ಪ್ರತ್ಯೇಕ ಪಂಗಡಗಳಿದ್ದು ಕನ್ನಡ ಮಾತನ್ನಾಡುವವರ ಸಂಖ್ಯೆಯೇ ಅಧಿಕವಾಗಿದೆ. ಕೆಲವರು ಅವರ ಸಾಂಪ್ರದಾಯಿಕ ಉದ್ಯೋಗದ ಮೇಲಿಂದಲೇ ಗುರ್ತಿಸಿಕೊಳ್ಳುವರು: ಗಾರೆ ಉಪ್ಪಾರ, ಸುಣ್ಣ ಉಪ್ಪಾರ. ಭಿನ್ನ ಗೋತ್ರ ವಿವಾಹದ ಶಾಖೆಗಳನ್ನು ಕುಲ ಅಥವಾ ಬೆಡಗು ಎಂದೆನ್ನುವರು ಮತ್ತು ಇವುಗಳನ್ನು ಯಾವುದಾದರೊಂದು ಗಿಡ, ಪ್ರಾಣಿ ಅಥವಾ ಇನ್ನಾವುದಾದರೂ ಪದಾರ್ಥದ ಮೇಲಿಂದ ಹೆಸರಿಸಿರುವರು. ಬೇರೆ ಇಂತಹ ಬೆಡಗುಗಳಿರುವ ಜಾತಿಯವರಂತೆ ಉಪ್ಪಾರರು ಕೂಡ ಯಾವ ಪದಾರ್ಥದ ಹೆಸರಿನ ಬೆಡಗುಗಳಿಗೆ ಸೇರಿರುವಂತೆ ಗುರ್ತಿಸಿಕೊಳ್ಳುತ್ತಾರೋ ಅಂತಹ ಪದಾರ್ಥ ಅಥವಾ ಪ್ರಾಣಿಗಳನ್ನು ಕೊಲ್ಲುವುದಾಗಲೀ, ಕತ್ತರಿಸುವುದಾಗಲೀ, ತಿನ್ನುವುದಾಗಲೀ ಅಥವಾ ಇನ್ನಾವುದೇ ರೀತಿಯಲ್ಲಿ ಉಪಯೋಗಿಸುವುದಾಗಲೀ

ಮಾಡುವಂತಿಲ್ಲ. ಸಾಮಾಜಿಕವಾಗಿ ಮೇಲೇರುವ ಯತ್ನದಲ್ಲಿ ಯಶಸ್ವಿಯಾದವರು ತಮ್ಮನ್ನು ಬಣಜಿಗರೆಂದು ಕರೆದುಕೊಳ್ಳುತ್ತಾರೆ. ಇವರಲ್ಲಿರುವ ಒಂದು ವರ್ಗದವರು ಜನಿವಾರವನ್ನು ಹಾಕಿಕೊಳ್ಳುವ ಕಾರಣದಿಂದ “ಜನಿವಾರದ ಉಪ್ಪಾರ”ರೆಂದೇ ಕರೆಯಲ್ಪಡುತ್ತಾರೆ.

ವಿವಾಹ ಕಾಲದಲ್ಲಿ ಕನ್ಯಾ ಶುಲ್ಕ ನೀಡುವ ರೂಢಿ ಇವರಲ್ಲಿದೆ. ವಿಧವಾ ಮರುವಿವಾಹ ಮತ್ತು ವಿವಾಹ ವಿಚ್ಛೇದನ ಎರಡೂ ಪದ್ಧತಿಗಳಿಗೆ ಅನುಮತಿ ಉಂಟು. ಸತ್ತವರನ್ನು ಸಾಮಾನ್ಯವಾಗಿ ಹೂಳುವರು. ಶ್ರಾದ್ಧಕರ್ಮಗಳನ್ನು ಇವರು ಮಾಡುವುದಿಲ್ಲವಾದರೂ ಮಹಾಲಯ ಅಮವಾಸ್ಯೆಯಂದು ಗತಿಸಿರುವ ಎಲ್ಲಾ ಪೂರ್ವಜರ ಹೆಸರು ಹೇಳಿ ಕಳಸ ಪೂಜೆ ಮಾಡಿ ಬ್ರಾಹ್ಮಣರು, ಸಾತಾನಿಗಳು ಮತ್ತು ಜಂಗಮರಿಗೆ “ಸ್ವಯಂಪಾಕ” ನೀಡುವರು. ಬಹುತೇಕ ಉಪ್ಪಾರರು ವೈಷ್ಣವರಾಗಿದ್ದು ಇವರ ಕುಲದೇವರು ಚನ್ನಕೇಶವ. ಗ್ರಾಮ ದೇವತೆಗಳನ್ನು ಪೂಜಿಸುವ ಪದ್ಧತಿಯೂ ಇವರಲ್ಲಿದೆ. ಸಾತಾನಿಗಳು ಉಪ್ಪಾರರ ಮನೆಗಳಲ್ಲಿ ನಡೆಸುವ ಧಾರ್ಮಿಕ ವಿಧಿಗಳನ್ನು ನೆರವೇರಿಸುವರು. ಉಪ್ಪಾರರು ಸಾಮಾನ್ಯವಾಗಿ ತಿರುಪತಿ, ಕದರಿ ಮತ್ತು ನಂಜನಗೂಡು ಮುಂತಾದ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಹೋಗುವರು. ತಮ್ಮ ಹೆಸರಿನ ಜೊತೆ ಇವರು ಉಪಯೋಗಿಸುವ ಜಾತಿ ಸೂಚಕ ಪ್ರತ್ಯಯವೆಂದರೆ ಸೆಟ್ಟಿ ಮತ್ತು ಗೌಡ.

**ಒಕ್ಕಲಿಗ:** ಒಕ್ಕಲಿಗರು ರಾಜ್ಯದ ಪ್ರಬಲವಾದ ಕೃಷಿ ವರ್ಗವಾಗಿದ್ದಾರೆ. ಚಾಮರಾಜನಗರ ಜಿಲ್ಲೆಯಾದ್ಯಂತ ಇವರು ಹರಡಿಕೊಂಡಿದ್ದಾರೆ. ಒಕ್ಕು–ಒಕ್ಕಲು–ಒಕ್ಕಲುತನದಿಂದ ಒಕ್ಕಲಿಗರು ಪದ ಬಂದಿದೆ. ಬಹುತೇಕ ಎಲ್ಲ ಉದ್ಯೋಗಗಳಲ್ಲಿಯೂ ಕಂಡುಬರುತ್ತಾರಾದರೂ ವ್ಯವಸಾಯವೇ ಇವರ ಮುಖ್ಯ ಉದ್ಯೋಗವಾಗಿದೆ. ಗಂಗಡಿಕಾರ, ಕುಂಚಿಟಿಗ, ಹಳ್ಳಿಕಾರ, ಉಪ್ಪಿನ ಕೊಳಗ, ಹಾಲು ಒಕ್ಕಲಿಗ, ಮೊರಸು, ನಾಮಧಾರಿ, ಸಾದ, ರೆಡ್ಡಿ, ಬಂಟ ಮುಂತಾದ ಪಂಗಡಗಳಿವೆ. ಪ್ರತಿಯೊಂದರಲ್ಲಿಯೂ ಅನೇಕ ಕುಲ ಅಥವಾ ಬೆಡಗುಗಳಿವೆ. ಚಾಮರಾಜನಗರ ಜಿಲ್ಲೆಯ ಒಕ್ಕಲಿಗರಲ್ಲಿ ಗಂಗಡಿಕಾರರೇ ಬಹು ಸಂಖ್ಯಾತರು. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಂಡು ಬರುವ ವೆಲ್ಲಾಳ ಗೌಂಡರು ಮೂಲತಃ ತಮಿಳುನಾಡಿನಿಂದ ಬಂದವರಾಗಿದ್ದು ಕನ್ನಡ ಮಾತನಾಡುವ ಗಂಗಡಿಕಾರರನ್ನೇ ಬಹುತೇಕ ಹೋಲುತ್ತಾರೆ. ಗಂಗ ರಾಜ ವಂಶದವರು ಮೂಲತಃ ವೆಲ್ಲಾಳ ಒಕ್ಕಲಿಗ ವರ್ಗಕ್ಕೆ ಸೇರಿದವರಾಗಿದ್ದರು. ಅವರು ದಕ್ಷಿಣ ಕರ್ನಾಟಕದ ಅನೇಕ ಭಾಗಗಳನ್ನು ಕ್ರಿ.ಶ ನಾಲ್ಕನೇ ಶತಮಾನದಿಂದ ಪ್ರಾರಂಭಿಸಿ ಎಂಟನೇ ಶತಮಾನದವರೆಗೂ ಆಳಿದ ದಾಖಲೆಯಿದೆ. ಹಲವಾರು ಬಾರಿ ಇವರು ತಮ್ಮನ್ನು ‘ಜಾಹ್ನವಿಯ ಕುಲ’ಕ್ಕೆ ಸೇರಿದವರೆಂದು ಘೋಷಿಸಿಕೊಂಡಿದ್ದಾರೆ. ಈ ವಂಶದ ಪ್ರಥಮ ದೊರೆ ಕೊಂಗುಣಿವರ್ಮನು. ಕ್ರಿ.ಶ. ೧೧೪೯ನೇ ವರ್ಷದ ಒಂದು ಶಾಸನ(ಗುಂಡ್ಲುಪೇಟೆ ೫೭)ವು ಕೊಂಗುಣಿ ಗವುಂಡ’ ಎಂಬ ಹೆಸರಿನ ಉಲ್ಲೇಖ ಮಾಡುತ್ತದೆ. ಇನ್ನೊಂದು ಶಾಸನ (ಚಾಮರಾಜ ನಗರ ೧೨೩) ‘ಕೊಂಗುಣಿಗರ ಕಲ್ಲಾವುಂಡ’ ಎಂಬ ಉಲ್ಲೇಖವನ್ನು ಮಾಡುತ್ತದೆ. ಗಂಗಡಿಕಾರ ಎಂಬ ಪದದ ಅರ್ಥ ‘ಗಂಗವಾಡಿಕಾರ’ ಅಥವಾ ಗಂಗವಂಶದವರು ಆಳುತ್ತಿದ್ದ ಪ್ರದೇಶವಾದ ಗಂಗವಾಡಿಯವನು ಎಂದಾಗುತ್ತದೆ.

ಗಂಗಡಿಕಾರ ಒಕ್ಕಲಿಗರಲ್ಲಿರುವ ಎರಡು ಪ್ರಮುಖ ಭಿನ್ನ ಗೋತ್ರ ವಿವಾಹದ ಶಾಖೆಗಳೆಂದರೆ ಪೆಟ್ಟಿಗೆಯವರು ಮತ್ತು ಬುಜ್ಜಣಿಗೆಯವರು. ವಿವಾಹದ ಸಮಯದಲ್ಲಿ ಬಿದಿರಿನ ಪೆಟ್ಟಿಗೆಯೊಂದರಲ್ಲಿ ಅಗತ್ಯ ಪದಾರ್ಥಗಳನ್ನು ಇರಿಸಿಕೊಂಡು ಹೋಗುವವರನ್ನು ಪೆಟ್ಟಿಗೆಯವರೆಂದೂ, ಅದೇ ವಸ್ತುಗಳನ್ನು ಮುಚ್ಚಿದ ಬುಟ್ಟಿಯೊಂದರಲ್ಲಿ ಇರಿಸಿಕೊಂಡು ಹೋಗುವವರನ್ನು ಬುಜ್ಜಣಿಗೆಯವರೆದೂ ಕರೆಯುವರು. ಹಿಂದಿನ ಕಾಲದಲ್ಲಿ ಬಾಲ್ಯ ವಿವಾಹ

ಪದ್ಧತಿ ಹೆಚ್ಚು ಗೌರವಯುತವಾದುದೆಂಬ ಭಾವನೆಯಿಂದ ವ್ಯವಹರಿಸುತ್ತಿದ್ದರು. ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನಕ್ಕೆ ಇವರಲ್ಲಿ ವಿರೋಧವಿಲ್ಲ. ಶಿವ ಮತ್ತು ವಿಷ್ಣುವನ್ನು ಮಾತ್ರವೇ ಅಲ್ಲದೆ ಅನೇಕ ದೇವದೇವತೆಯರನ್ನು ಮತ್ತು ಗ್ರಾಮದೇವತೆಗಳನ್ನು ಇವರು ಪೂಜಿಸುವರು. ಮದುವೆಗಳು ಮತ್ತು ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರ ನೆರವಿನಿಂದ ಆಚರಿಸುವರು. ಎಲ್ಲ ಪಂಗಡದವರು ಅವರವರ ಸಂಪ್ರದಾಯದಂತೆ ನಡೆದುಕೊಳ್ಳುವರು ಶ್ರಾವಣ ಮತ್ತು ಕಾರ್ತಿಕ ಮಾಸದಲ್ಲಿ ಮಾಂಸಾಹಾರ ನಿಷಿದ್ದ. ಕೆಲವು ಕಡೆ ದೇವರಿಗೆ ತಳಿಗೆ ನೀಡುವ (ಮಾಂಸಾಹಾರ) ಪದ್ಧತಿ ಇದೆ. ವಿವಾಹ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ತೆರ ಪದ್ಧತಿ ಇದೆ. ಹುಟ್ಟು-ಸಾವುಗಳಲ್ಲಿ ಸೂತಕ ಆಚರಣೆ ಇದೆ. ಬಹುತೇಕ ಸತ್ತವರನ್ನು ಹೂಳುವ ಪದ್ಧತಿ ಇದೆ. ತಿಥಿ ಮಾಡುತ್ತಾರೆ. ಪ್ರತೀ ವರ್ಷ ಮಹಾಲಯ ಅಮಾವಾಸ್ಯೆ ಅಥವಾ ಗೌರಿಹಬ್ಬದಲ್ಲಿ ಹಿರಿಯರಿಗೆ ಎಡೆ ಇಡುತ್ತಾರೆ. ಶೈವ ಮತ್ತು ವೈಷ್ಣವ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಈ ವರ್ಗದವರಲ್ಲಿ ಬಹುತೇಕರ ಕುಲದೇವರೆಂದರೆ ಚುಂಚನಗಿರಿಯ ಭೈರೇದೇವರು ಮತ್ತು ಶಿರಾ ತಾಲೂಕಿನ ಪಟ್ಟನಾಯಕನ ಹಳ್ಳಿಯ ಗುರುಗುಂಡ ಮಠ. ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಮಠ ರಾಜ್ಯಾದ್ಯಂತ ಹರಡಿರುವ ತನ್ನ ಶಾಖಾ ಮಠಗಳ ಜಾಲದ ಮುಖಾಂತರ ಸಮಸ್ತ ಒಕ್ಕಲಿಗ ಜನಾಂಗದವರಲ್ಲಿ ಆಧ್ಯಾತ್ಮಿಕ ಜ್ಞಾನ ಹರಡಲು ಮತ್ತು ಶೈಕ್ಷಣಿಕ ಹಾಗು ಸಾಮಾಜಿಕ ಏಳ್ಗೆಯನ್ನುಂಟು ಮಾಡಲು ಶ್ರಮಿಸುತ್ತಿದೆ. ಒಕ್ಕಲಿಗರು ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿನ ಪ್ರಬಲ ವರ್ಗದವರಾಗಿದ್ದಾರೆ.

**ಕುರುಬ:** ಜಿಲ್ಲೆಯಲ್ಲಿ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ಪಾರಂಪರಿಕ ಉದ್ಯೋಗಗಳೆಂದರೆ ಕುರಿ ಸಾಕುವುದು ಮತ್ತು ಉಣ್ಣೆಯಿಂದ ಕಂಬಳಿ ನೇಯುವುದು. ಕುರುಬರಲ್ಲಿ ಹೆಚ್ಚಿನವರು ಈಗ ಕೃಷಿಯನ್ನೇ ಅವಲಂಬಿಸಿದ್ದಾರೆ. ಜಿಲ್ಲೆಯ ಕುರುಬರ ಮಾತೃ ಭಾಷೆ ಕನ್ನಡ. ಮೂರು ಸಗೋತ್ರ ವಿವಾಹದ ಪಂಗಡಗಳಿವೆ. ಹಾಲು, ಹಂಡೆ ಮತ್ತು ಕಂಬಳಿ ಕುರುಬರು. ಇವರಲ್ಲಿ ಅತ್ಯಂತ ದೊಡ್ಡ ಮತ್ತು ಮುಖ್ಯವಾದ ಪಂಗಡವೆಂದರೆ ಹಾಲು ಕುರುಬರು. ಇವರು ಮದ್ಯಪಾನ ಮಾಡುವುದಿಲ್ಲ. ಇವರಲ್ಲಿಯೂ ಮೂರು ಮುಖ್ಯವಾದ ಉಪ ಪಂಗಡಗಳಿದ್ದು ಅವರು ಯಾವಯಾವ ದಿನಗಳಂದು ದೇವರ ಪೂಜೆ ಮಾಡುವರೋ ಆ ದಿನಗಳ ಹೆಸರುಗಳಿಂದಲೇ ಕರೆಯಲ್ಪಡುತ್ತಾರೆ. ಸೋಮವಾರದವರು, ಬೃಹಸ್ಪತಿ ವಾರದವರು ಮತ್ತು ಆದಿತ್ಯವಾರದವರು. ಬಿದಿರಿನ ಅಂಡೆಯಲ್ಲಿ ತಮ್ಮ ಕುರಿಗಳ ಹಾಲನ್ನು ಸಂಗ್ರಹಿಸಿಕೊಳ್ಳುತ್ತಿದ್ದ ಕಾರಣ ಅಂಡೆ ಕುರುಬರಿಗೆ ಆ ಹೆಸರೇ ಬಂದಿದೆ. ಹೆಸರೇ ಹೇಳುವಂತೆ ಕಂಬಳಿ ಕುರುಬರು ಒರಟು ಉಣ್ಣೆಯ ಕಂಬಳಿಗಳನ್ನು ನೇಯುವವರು. ಈ ಮೂರು ಪಂಗಡಗಳನ್ನು ಮತ್ತೆ ಕೆಲವು ಭಿನ್ನ ಬೆಡಗುಗಳನ್ನಾಗಿ ವಿಭಜಿಸಲಾಗಿದೆ. ಈ ಬೆಡಗುಗಳನ್ನು ಮರ, ಗಿಡ, ಪ್ರಾಣಿ ಮುಂತಾದವುಗಳ ಮೇಲಿಂದ ಕರೆಯುವರು. ಇಂತಹ ಮರಗಿಡ ಮತ್ತು ಪ್ರಾಣಿಗಳ ಬಗೆಗೆ ಸಂಬಂಧಿಸಿದ ಬೆಡಗುಗಳ ಬಗ್ಗೆ ಜನರು ಪೂಜ್ಯ ಭಾವನೆಗಳನ್ನು ಪ್ರದರ್ಶಿಸುತ್ತಾರೆ.

ಇವರಲ್ಲಿ ಉನ್ನತ ಸಾಮಾಜಿಕ ಸ್ಥಾನಮಾನ ಹೊಂದಿರುವ ಯಾವುದೇ ಪ್ರತ್ಯೇಕ ಪಂಗಡವೇನಿಲ್ಲ. ಆದರೂ ಜಾತಿ ಪುರೋಹಿತರನ್ನು ನೇಮಕ ಮಾಡಿಕೊಳ್ಳುವ ಸಾಮಂತಿ ಬೆಡಗಿನವರನ್ನು ಉಳಿದವರು ಹೆಚ್ಚಿನ ಗೌರವದಿಂದ ಕಾಣುವರು. ಈ ಬೆಡಗಿನವರು ಮಾಂಸಾಹಾರ ಅಥವಾ ಮದ್ಯಪಾನ ಮಾಡುವುದಿಲ್ಲ; ಲಿಂಗಧಾರಣೆ ಮಾಡುತ್ತಾರೆ, ಮತ್ತು ಇತರರೊಡನೆ ಸಹಪಂಕ್ತಿ ಭೋಜನ ಮಾಡುವುದಿಲ್ಲ. ಇವರು ಸಾಮಾನ್ಯವಾಗಿ ಆನೆ ಮತ್ತು ಗಾಳಿ ಬೆಡಗಿನವರ ಮನೆಗಳಿಂದ ಮಾತ್ರ ಕನ್ಯೆಯರನ್ನು ವಿವಾಹ ಮಾಡಿಕೊಳ್ಳುವರು. ಕುರುಬರಲ್ಲಿ ರೇವಣಯ್ಯನೆಂದು ಕರೆಸಿಕೊಳ್ಳುವ ಪೂಜಾರಿ ಇದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವನ ಅನುಪಸ್ಥಿತಿಯಲ್ಲಿ

ಬ್ರಾಹ್ಮಣ ಪುರೋಹಿತನನ್ನು ಆಹ್ವಾನಿಸುವರು. ಕನ್ಯಾಶುಲ್ಕ ಪದ್ಧತಿ ಮತ್ತು ವಿಧವಾ ಮರುವಿವಾಹ ಎರಡೂ ಬಳಕೆಯಲ್ಲಿವೆ. ಹಿಂದಿನ ದಿನಗಳಲ್ಲಿ ಬಸವಿಯರನ್ನು ಬಿಡುವ ಸಂಪ್ರದಾಯ ಕೆಲವು ಸ್ಥಳಗಳಲ್ಲಿತ್ತು. ಕುರುಬರು ಯಾವುದೇ ರೀತಿಯ ಶ್ರಾದ್ಧಕರ್ಮಗಳನ್ನು ಮಾಡುವುದಿಲ್ಲವಾದರೂ ಮಹಾಲಯ ಅಮಾವಾಸ್ಯೆಯ ನಂತರದ ಮೊದಲ ದಿನ (ಶುಕ್ಲ ಪ್ರತಿಪತ್) ಮತ್ತು ಹೊಸ ವರ್ಷದ ದಿನ ಎಲ್ಲ ಪೂರ್ವಜರನ್ನೂ ಆರಾಧಿಸುವರು.

ಕುರುಬರು, ಉತ್ತಮವಾಗಿ ವ್ಯವಸ್ಥೆಗೊಂಡಿರುವ ಒಂದು ಸಮುದಾಯ. ಇಡೀ ಜಾತಿಯನ್ನು ಅನೇಕ ಪ್ರಾದೇಶಿಕ ಭಾಗಗಳಾಗಿ ವಿಂಗಡಿಸಲಾಗಿದ್ದು ಪ್ರತಿಯೊಂದಕ್ಕೂ ಓರ್ವ ಗೌಡ ಅಥವಾ ಮುಖಂಡನಿರುತ್ತಾನೆ. ಇಂತಹ ಅನೇಕ ಗೌಡರ ಮೇಲೆ ಅಧಿಕಾರ ಹೊಂದಿರುವ ಮುಖಂಡನನ್ನು ನಾಡ ಗೌಡ ಎಂದು ಸಂಬೋಧಿಸುತ್ತಾರೆ. ಕೆಲವು ಕುರುಬರು ಲಿಂಗಾಯತ ಇಲ್ಲವೇ ಬ್ರಾಹ್ಮಣ ಪುರೋಹಿತರನ್ನು ಮಂಗಳ ಕಾರ್ಯಗಳ ಆಚರಣೆ ವೇಳೆ ಆಹ್ವಾನಿಸುವರು. ಶೈವ ಪಂಥೀಯರಾದರೂ ಕುರುಬರು ಎಲ್ಲ ಹಿಂದೂ ದೇವರುಗಳನ್ನೂ ಪೂಜಿಸುವರು. ಇವರ ಕುಲ ದೇವರು ಬೀರ ಅಥವಾ ವೀರನೆಂದು ಕರೆಯಲ್ಪಡುವ ಶಿವ. ಇನ್ನುಳಿದ ದೇವಾನುದೇವತೆಗಳೆಂದರೆ ಮೈಲಾರ, ಬತ್ಯಪ್ಪ, ಇರಚಿಕ್ಕಪ್ಪ, ಬೂದಲಪ್ಪಮ, ಕರಕುರಪ್ಪ, ಸಿದ್ದರಾಮೇಶ್ವರ, ಯಲ್ಲಮ್ಮ, ಲಕ್ಷ್ಮಿದೇವಿ ಇತ್ಯಾದಿ. ಇವರು ಕಾಲಕಾಲಕ್ಕೆ ವ್ಯವಸ್ಥೆ ಮಾಡುವ ಧಾರ್ಮಿಕ ಉತ್ಸವಗಳಲ್ಲಿ ಮೈಲಾರನ ಭಕ್ತರಾದ ಗೊರವರು ಅವರ ವಿಶೇಷ ಉಡುಪುಗಳೊಂದಿಗೆ ತಲೆಗೆ ಕರಡಿ ಚರ್ಮದುಡುಗೆ ಧರಿಸಿ, ಕವಡೆ ಪೋಣಿಸಿದ ಹುಲಿ ಚರ್ಮವನ್ನು ಎದೆಗೆ ಕಟ್ಟಿ ಹೆಗಲಿಗೆ ಕರಿಕಂಬಳಿ ಹಾಕಿ ಡಮರುಗ ಹಿಡಿದು ಬರುತ್ತಾರೆ. ಇವರನ್ನು ಗೊರವರು ಎಂದೂ ಸಹ ಕರೆಯುವರು. ಡೊಳ್ಳು ಬಾರಿಸುವುದು, ಪೂಜಿಸುವುದೂ ಸಹ ಉಂಟು. ಬೀರೇದೇವರ ಕುಣಿತ ತುಂಬಾ ಪ್ರಸಿದ್ಧಿ. ಕುರುಬರು ಸತ್ತವರನ್ನು ದಕ್ಷಿಣ ದಿಕ್ಕಿನತ್ತ ತಲೆ ಬರುವಂತೆ ಇರಿಸಿ ಹೂಳುತ್ತಾರೆ, ಆದರೆ ರೇವಣಯ್ಯ ಅಥವಾ ವೊಡೆಯರು ಎಂದು ಕರೆಯಲ್ಪಡುವ ಅವರ ಜಾತಿ ಪುರೋಹಿತರನ್ನು ಮಾತ್ರ ಲಿಂಗಾಯತರ ಪದ್ಧತಿಯಂತೆ ಹೂಳುತ್ತಾರೆ. ಇವರ ಪ್ರಮುಖ ಯಾತ್ರಾ ಸ್ಥಳವೆಂದರೆ ಬಳ್ಳಾರಿ ಜಿಲ್ಲೆಯಲ್ಲಿರುವ ಮೈಲಾರ. ಇವರು ತಮ್ಮದೇ ಆದ ಕನಕಗುರು ಪೀಠ ಎಂಬ ಮಠವೊಂದನ್ನು ಕಾಗಿನೆಲೆಯಲ್ಲಿ ಸ್ಥಾಪಿಸಿಕೊಂಡಿದ್ದಾರೆ.

**ಕುಂಬಾರ:** ಮಣ್ಣಿನಿಂದ ಮಡಕೆ–ಕುಡಿಕೆ ಮತ್ತು ನಾಡಹೆಂಚುಗಳನ್ನು ತಯಾರಿಸುವ ಕಾಯಕದಲ್ಲಿರುವವರೇ ಕುಂಬಾರರು. 'ಕುಂಭಕಾರ' ಎಂಬ ಸಂಸ್ಕೃತ ಪದದಿಂದ ಕುಂಬಾರ ಎಂಬ ಪದ ಉತ್ಪನ್ನವಾಗಿದೆ. ಇವರಲ್ಲಿ ಮೂರು ಮುಖ್ಯ ಶಾಖೆಗಳಿವೆ: [೧] ತೆಲುಗು ಕುಂಬಾರರು ಅಥವಾ ಸಜ್ಜನ ಕುಂಬಾರರು, [೨] ಲಿಂಗಾಯತ ಕುಂಬಾರರು, ಮತ್ತು [೩] ಕನ್ನಡ ಕುಂಬಾರರು, ಇಷ್ಟೇ ಅಲ್ಲದೆ, ಕುಡಿಪೈತಗುಂಬಾರ, ಬೈಲುಗುಂಬಾರ ಮೊದಲಾದ ಪಂಗಡಗಳಿವೆ. ಜಿಲ್ಲೆಯಲ್ಲಿ ತಮಿಳು ಕುಂಬಾರರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ.

ಗುಂಡಯ್ಯ ಅಥವಾ ಗುಂಡಬ್ರಹ್ಮ ಇವರ ಕುಲಪುರುಷನೆನ್ನಲಾಗಿದ್ದು ಇವರ ಒಂದು ಪಂಗಡವನ್ನು 'ಗುಂಡಭಕ್ತರು' ಎಂದು ಕರೆಯುವರು. ಇನ್ನೊಂದು ಪಂಗಡದವರು ಶಾಲಿವಾಹನನ ವಂಶಜರೆಂದು ನಂಬುತ್ತಾರೆ. ಜಿಲ್ಲೆಯ ಕುಂಬಾರರಲ್ಲಿ ಕನ್ನಡ ಭಾಷಿಕರೇ ಅಧಿಕ. ಇವರಲ್ಲಿ ವಿವಾಹ ಮಾಡಿಕೊಳ್ಳುವ ಅನೇಕ ಭಿನ್ನಕುಲಗಳಿವೆ. ಈ ಕುಲಗಳನ್ನು ಅನೇಕ ಭೌತಿಕ ಪದಾರ್ಥಗಳ ಮೇಲಿಂದ ಹೆಸರಿಸಲಾಗುತ್ತದೆ. ಉದಾ: ಕಸ್ತೂರಿ, ನಾಗರ, ಸಂಪಿಗೆ ಇತ್ಯಾದಿ. ಕುಂಬಾರರು ಶಿವ ಮತ್ತು ವಿಷ್ಣುವಿನ ಆರಾಧಕರು; ಜೊತೆಗೆ ಅನೇಕ ಸ್ಥಳೀಯ ದೇವತೆಗಳನ್ನು ಪೂಜಿಸುವರು. ಕಳಶದ ರೂಪದಲ್ಲಿ ಪೂಜೆಗೊಳ್ಳುವ ಕುಂಭೇಶ್ವರ ಇವರ ವಿಶೇಷ ಆದರಕ್ಕೆ ಪಾತ್ರನಾಗಿರುವ ದೇವರು. ವಿಧವಾ ಮರು ವಿವಾಹಕ್ಕೆ ಇವರಲ್ಲಿ ಅಷ್ಟೇನು ಒಲವು ಕಾಣದು. ವಿವಾಹ ವಿಚ್ಛೇಧನಕ್ಕೆ ವಿರೋಧವಿದೆ. ಕುಂಬಾರರು ಸತ್ತವರನ್ನು ಮಲಗಿರುವ ಭಂಗಿಯಲ್ಲಿ ಹೂಳುತ್ತಾರೆ,

ಮಹಾಲಯ ಅಮಾವಾಸ್ಯೆಯ ನಂತರದ ಮೊದಲನೇ ದಿನದಂದು ಎಲ್ಲಾ ಪೂರ್ವಜರನ್ನೂ ಉದ್ದೇಶಿಸಿ ಎಡೆಯನ್ನು ನೀಡುವರು. ಲಿಂಗಾಯತ ಕುಂಬಾರರನ್ನು ಹೊರತುಪಡಿಸಿ ಉಳಿದವರು ಬ್ರಾಹ್ಮಣರಿಗೆ ಅಕ್ಕಿ ಮತ್ತು ಸ್ವಲ್ಪ ಹಣವನ್ನು ದಾನರೂಪದಲ್ಲಿ ನೀಡುವರು. ಜನನ ಮತ್ತು ಮರಣ ಕಾಲಗಳೆರಡರಲ್ಲೂ ಹತ್ತು ದಿನಗಳು ಸೂತಕವನ್ನಾಚರಿಸುವರು. ಇವರ ಸಾಂಪ್ರದಾಯಿಕ ಉದ್ಯೋಗವಾದ ಮಡಕೆ ಮತ್ತು ಹೆಂಚುಗಳ ತಯಾರಿಕೆಗೆ ಅನೇಕ ದಶಕಗಳಿಂದ ಯಂತ್ರಗಳಲ್ಲಿ ತಯಾರಾದ ಅಗ್ಗದ ಬೆಲೆಯ ಅಲ್ಯೂಮಿನಿಯಂ, ಸ್ಟೈನ್ಲೆಸ್ ಸ್ಟೀಲ್ ಮತ್ತು ಪ್ಲಾಸ್ಟಿಕ್ ಪಾತ್ರೆ, ತಟ್ಟೆ, ಲೋಟ, ಬಾನೆ ಮುಂತಾದವು ನೀಡುತ್ತಿರುವ ಪೈಪೋಟಿ ಮಾರಕವಾಗಿದೆ. ಮಂಗಳೂರು ಹೆಂಚು ಮತ್ತು ಕಲ್ನಾರು, ಸಿಮೆಂಟ್ ಹೊದಿಕೆಗಳು ನಾಡ ಹೆಂಚು ತಯಾರಿಕೆಗೆ ನೀಡುತ್ತಿರುವ ಪೈಪೋಟಿಯಿಂದ ಕುಂಬಾರರು ಸಾಂಪ್ರದಾಯಿಕ ವೃತ್ತಿಯನ್ನು ಭಾರಿ ಸಂಖ್ಯೆಯಲ್ಲಿ ತ್ಯಜಿಸಿ ಕೃಷಿ ಮತ್ತು ಇತರೆ ಉದ್ಯೋಗಗಳಿಗೆ ಸೇರುವಂತೆ ಆಗಿದೆ. ಪರಸ್ಪರ ಜಾತಿ ಜಗಳಗಳನ್ನು ಮುಖಂಡರು ತೀರ್ಮಾನಿಸುತ್ತಾರೆ.

**ನಾಯಿಂದ:** ನಾಯಿಂದರು ಸಾಂಪ್ರದಾಯಿಕ ಕ್ಷೌರಿಕರಷ್ಟೇ ಅಲ್ಲ, ವೃತ್ತಿನಿರತ ಸಂಗೀತಗಾರರೂ ಹೌದು. ಕನ್ನಡದಲ್ಲಿ ಇವರನ್ನು 'ಕೆಲಸಿ' ಎಂದೂ ಕರೆಯುವುದುಂಟು; 'ಕೆಲಸಿಗ' ಇನ್ನೊಂದು ಸಮಾನಾರ್ಥಕ ಪದ. ಹಿಂದೂಸ್ಥಾನಿಯಲ್ಲಿ ಇವರನ್ನು 'ಹಜಾಮ' ಎನ್ನುವರು; ತಮಿಳಿನಲ್ಲಿ 'ಅಂಬತ್ತನ್' ಎಂದೂ ತೆಲುಗಿನಲ್ಲಿ 'ಮಂಗಳ' ಎಂದೂ ಕರೆಯುವರು. ಸಂಸ್ಕೃತ ಭಾಷೆಯಲ್ಲಿ ಇವರನ್ನು'ನಾಪಿತ' ಮತ್ತು 'ಕ್ಷೌರಿಕ'ಎಂದು ಸಂಬೋಧಿಸುವರು; 'ನಯನಜ ಕ್ಷತ್ರಿಯ', 'ನವಿ' ಮತ್ತು 'ಸವಿತ' ಸಮಾನಾರ್ಥಕ ಪದಗಳು. ನಾಯಿಂದರು ೧೮ – ಫಣಗಳ ಬಣಕ್ಕೆ ಸೇರಿದವರು. ಈ ಜಾತಿಯ ಎರಡು ಪ್ರಮುಖ ಪಂಗಡಗಳೆಂದರೆ ತೆಲುಗು ಮತ್ತು ಕನ್ನಡ ಭಾಷಿಕರವು. ಕನ್ನಡ ಪಂಗಡದ ಸ್ವಗೋತ್ರ ಶಾಖೆಗಳೆಂದರೆ ಮೊರಸು, ಉಪ್ಪಿನ ಮತ್ತು ಶೀಲವಂತ [ಕೊನೆಯಲ್ಲಿ ಹೆಸರಿಸಿರುವವರು ಲಿಂಗಾಯತರು]; ತೆಲುಗು ಪಂಗಡದ ಸ್ವಗೋತ್ರ ಶಾಖೆಗಳೆಂದರೆ ನಡಿಗರು, ರಡ್ಡಿಭೂಮಿ, ಗುಂಡ್ಲಜಗತ ಮತ್ತು ಕುಡಿಪೈತ (Kudipaita). ತೆಲುಗು ಪಂಗಡದ ಭಿನ್ನಗೋತ್ರ ಶಾಖೆಗಳನ್ನು ಗಿಡಗಳು, ಹೂಗಳು, ಪ್ರಾಣಿಗಳು ಮತ್ತು ಇತರ ಪದಾರ್ಥಗಳ ಮೇಲಿಂದ ಹೆಸರಿಸಲಾಗಿದೆ. ಇವುಗಳನ್ನು ಕೊಲ್ಲುವುದಾಗಲೀ, ಕತ್ತರಿಸುವುದಾಗಲೀ ಅಥವಾ ಉಪಯೋಗಿಸುವುದಾಗಲೀ ಇವರಲ್ಲಿ ನಿಷಿದ್ಧ. ಕನ್ನಡ ಶಾಖೆಯವರಲ್ಲಿ ೨೫ ಗೋತ್ರಗಳಿದ್ದು ಅವುಗಳನ್ನು ಪ್ರತಿಯೊಂದರಲ್ಲಿಯೂ ಐದು ಗೋತ್ರಗಳಿರುವ ಐದು ಗುಂಪುಗಳನ್ನಾಗಿ ಕ್ರಮಪಡಿಸಲಾಗಿದ್ದು, ಒಂದು ಗುಂಪಿನವರು ಅದೇ ಗುಂಪಿನವರೊಡನೆ ವಿವಾಹ ಸಂಬಂಧ ಬೆಳೆಸುವಂತಿಲ್ಲ. ವಿಧವಾ ಮರುವಿವಾಹಕ್ಕೆ ಹೆಚ್ಚಿನ ಶಾಖೆಗಳವರ ಬೆಂಬಲವಿದೆಯಾದರೂ ಕೆಲವರು ಅದನ್ನು ಒಪ್ಪುವುದಿಲ್ಲ. ನಾಯಿಂದರು ವೃತ್ತಿ ನಿರತ ವಾದ್ಯ ಸಂಗೀತಗಾರರು. ವಿವಾಹ ಮೊದಲಾದ ಶುಭಸಮಾರಂಭಗಳಲ್ಲಿ ನಾದಸ್ವರ ನುಡಿಸುವರು. ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಇವರು ಸಣ್ಣ ಪುಟ್ಟ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತಿದ್ದುದುಂಟು, ಆದರೆ ಈಗ ಹಾಗಿಲ್ಲ. ಹಿಂದೆ ನಾಯಿಂದ ಸ್ತ್ರೀಯರು ಹಳ್ಳಿಗಳಲ್ಲಿ ಸೂಲಗಿತ್ತಿಯ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೆ ಈ ಸೇವೆಯನ್ನು ಈಗಿನ ದಿನಗಳಲ್ಲಿ ಯಾರೂ ನಿರೀಕ್ಷಿಸುವುದಿಲ್ಲ. ಈಗಲೂ ಸಹ ನಾಯಿಂದ ಜಾತಿಯಲ್ಲಿ ಬಹುಸಂಖ್ಯಾತರು ತಮ್ಮ ಸಾಂಪ್ರದಾಯಿಕ ಉದ್ಯೋಗವಾದ ಕ್ಷೌರ ಮಾಡುವುದನ್ನೇ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ; ಜೊತೆಗೆ, ಚೂಡಾಕರ್ಮ, ಉಪನಯನ ಮತ್ತು ಮದುವೆ ಮುಂತಾದ ಧಾರ್ಮಿಕ ಮತ್ತು ಸಾಮಾಜಿಕ ಸಮಾರಂಭಗಳಲ್ಲಿ ಮತ್ತು ದೇವಾಲಯಗಳಲ್ಲಿ ವಾದ್ಯ ನುಡಿಸುವುದರ ಜೊತೆಗೆ ಇತರೆ ಪಾತ್ರಗಳನ್ನು ನಿರ್ವಹಿಸುವರು. ಇವರಲ್ಲನೇಕರು ಕೃಷಿ ಮತ್ತು ಇತರೆ ರಂಗಗಳಲ್ಲಿಯೂ ಇದ್ದಾರೆ.

ವಿಷ್ಣು ಮತ್ತು ಶಿವ ಇಬ್ಬರನ್ನೂ ಪೂಜಿಸುವುದರ ಜೊತೆಗೆ, ಇವರು ಪೂಜಿಸುವ ದೇವತೆಗಳೆಂದರೆ ಗಂಗಮ್ಮ, ಮಾರಮ್ಮ, ಸಿದ್ದವೀರಮ್ಮ ಮತ್ತು ಅಕ್ಕಗಾರು (ಅರಣ್ಯ ಅಥವಾ ವೃಕ್ಷ ದೇವತೆಗಳು). ಸತ್ತವರನ್ನು

ಇವರು ಮಲಗಿರುವ ಭಂಗಿಯಲ್ಲಿ ಹೂಳುವರು ಮತ್ತು ಹತ್ತು ದಿನಗಳ ಕಾಲ ಸೂತಕವನ್ನಾಚರಿಸುವರು; ವಾರ್ಷಿಕ ಶ್ರಾದ್ಧವನ್ನು ಮಾಡುವುದಿಲ್ಲ; ಆದರೆ, ಮೃತರಾಗಿರುವ ಪೂರ್ವಜರ ನೆನಪಿನಲ್ಲಿ ಮಹಾಲಯ ಅಥವಾ ಪಕ್ಷಮಾಸದಲ್ಲಿ ಕಳಸ ಪೂಜೆ ಮಾಡುವರು. ಇವರು ಮಾಂಸಾಹಾರಿಗಳು. ಓರ್ವ ಯಜಮಾನ ಸಭಾಪತಿಯಾಗಿ ನಡೆಸುವ ಹಲವಾರು ಕಟ್ಟೆಮನೆಗಳಿದ್ದು, ಅವುಗಳಲ್ಲಿ ನಾಲ್ಕೈದು ಕಟ್ಟೆ ಮನೆಗಳಿಗೊಬ್ಬರಂತೆ ಪ್ರಧಾನ ಸೆಟ್ಟಿ ಇರುತ್ತಾರೆ.

**ನೇಯ್ಗೆಯವರು (ನೇಕಾರರು):** ರೇಷ್ಮೆ ಮತ್ತು ಹತ್ತಿ ಬಟ್ಟೆಗಳನ್ನು ಕೈಮಗ್ಗದಿಂದ ನೇಯುವ ಸಾಂಪ್ರದಾಯಿಕ ಉದ್ಯೋಗದಲ್ಲಿ ತೊಡಗಿರುವವರೇ ನೇಯ್ಗೆಯವರು. ಇವರಲ್ಲಿ ಪರಿಚಿತವಾದ ಕೆಲವು ಶಾಖೆಗಳಿವೆ: ಬಿಳಿ ಮಗ್ಗ, ದೇವಾಂಗ, ಝುತ್ರಿ, ಪಟ್ಟೇಗಾರ, ಸಾಲರೆ ಸೌರಾಷ್ಟ್ರ (ಪಟ್ನೂಲ್ಕರ್), ಸೇನಿಗ ಮತ್ತು ತೊಗಟ. ಈ ಶಾಖೆಗಳು ಪರಸ್ಪರ ಸಂಪೂರ್ಣ ಭಿನ್ನವಾಗಿದ್ದು ವಿವಾಹ ಸಂಬಂಧಗಳನ್ನು ಹೊಂದುವಂತಿಲ್ಲ.

ಬಿಳಿ ಮಗ್ಗ ಶಾಖೆಯವರು ಬಿಳಿ ಬಟ್ಟೆಗಳನ್ನು ನೇಯುವವರು. ಇವರನ್ನು ಕುರುವಿನ ಶೆಟ್ಟಿ ಎಂದೂ ಕರೆಯುವರು. ಇವರ ಮಾತೃಭಾಷೆ ಕನ್ನಡ. ಇವರಲ್ಲಿ ಲಿಂಗಾಯತ ಮತ್ತು ಲಿಂಗಾಯತೇತರ ಎಂಬ ಎರಡು ಬಣಗಳಿವೆ. ಈ ಎರಡು ಬಣಗಳು ಪರಸ್ಪರ ವಿವಾಹ ಸಂಬಂಧಗಳನ್ನು ಬೆಳೆಸುವುದಿಲ್ಲ. ಇವರಲ್ಲಿ ೬೬ ಭಿನ್ನ ಗೋತ್ರಗಳಿದ್ದು ಎರಡು ದೊಡ್ಡ ಗುಂಪುಗಳಲ್ಲಿ ಸಂಘಟಿತರಾಗಿದ್ದಾರೆ. ಪ್ರತಿಯೊಂದು ಗುಂಪಿನಲ್ಲಿಯೂ ೩೩ ಗೋತ್ರಗಳಿದ್ದು ಕ್ರಮವಾಗಿ ಶಿವ ಮತ್ತು ಪಾರ್ವತಿ (ಅಥವಾ ಪುರುಷ ಮತ್ತು ಸ್ತ್ರೀ) ಹೆಸರಿನಿಂದ ಗುರ್ತಿಸಲ್ಪಡುತ್ತಾರೆ; ಮತ್ತು ಒಂದೇ ಹೆಸರಿರುವ ಮನೆತನದವರ ನಡುವೆ ವಿವಾಹ ಸಂಬಂಧ ಏರ್ಪಡುವಂತಿಲ್ಲ. ಬಹುತೇಕ ಗೋತ್ರಗಳನ್ನು ಗಿಡ, ಪ್ರಾಣಿ, ಉಪಕರಣ ಮುಂತಾದವುಗಳ ಹೆಸರಿನಿಂದ ಗುರ್ತಿಸುವರು. ಯಾವ ವಸ್ತುವಿನ ಹೆಸರಿನಿಂದ ಒಂದು ಗುಂಪು ತನ್ನನ್ನು ಗುರ್ತಿಸಿಕೊಳ್ಳುವುದೋ ಅಂತಹ ವಸ್ತುವನ್ನು ಯಾವುದೇ ರೀತಿಯಿಂದ ಅವರು ಹಾನಿ ಮಾಡುವುದಿಲ್ಲ. ಹಿಂದೆ ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿದ್ದು, ಕನ್ಯಾ ಶುಲ್ಕ ನೀಡುವ ಪರಿಪಾಠವೂ ಇತ್ತು. ವಿಧವಾವಿವಾಹಕ್ಕೆ ಸಮ್ಮತಿ ಉಂಟು. ಸತ್ತವರನ್ನು ಸಾಮಾನ್ಯವಾಗಿ ಹೂಳುವರು. ಪತ್ನಿ ವ್ಯಭಿಚಾರಿಣಿಯಾಗಿ ಪ್ರವರ್ತಿಸಿದರೆ ಮಾತ್ರ ವಿವಾಹ ವಿಚ್ಛೇದನಕ್ಕೆ ಕೋರಿಕೆ ಸಲ್ಲಿಸಬಹುದಾಗಿತ್ತು. ಲಿಂಗಾಯತ ಬಣದವರು ಮಾಂಸಾಹಾರ ಮತ್ತು ಮದ್ಯಪಾನದಿಂದ ದೂರವಿರುತ್ತಾರೆ. ನೇಯ್ಗೆಯವರು ಗ್ರಾಮ ದೇವತೆಗಳನ್ನು ಪೂಜಿಸುವರು. ಇವರ ಪೋಷಕ ದೇವರೆಂದರೆ ಸಂಗಮೇಶ್ವರ, ಲಿಂಗಾಯತೇತರ ಬಣದವರು ಧಾರ್ಮಿಕ ಮತ್ತು ಮತಾಚಾರ ವಿಧಿಗಳನ್ನಾಚರಿಸಲು ಬ್ರಾಹ್ಮಣ ಪುರೋಹಿತರನ್ನು ಕರೆಯುತ್ತಾರೆ. ದೇವಾಂಗ ಶಾಖೆಯ ಬಗ್ಗೆ ಒಂದು ಪ್ರತ್ಯೇಕ ಉಪಶೀರ್ಷಿಕೆಯಡಿ ವಿವರವನ್ನು ನೀಡಲಾಗಿದೆ. ಜಿಲ್ಲೆ ಯಲ್ಲಿ ಅತಿ ವಿರಳ ಜನಸಂಖ್ಯೆ ಇರುವ ಶಾಖೆ ಅಥವಾ ಬಣಗಳ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುತ್ತಿಲ್ಲ.

**ದರ್ಜಿ:** ದರ್ಜಿ ಎಂಬುದು ವೃತ್ತಿ ಸೂಚಕ ಹೆಸರಾಗಿದ್ದು, ಇದರಲ್ಲಿ ಸಿಂಪಿ, ರಂಗಾರೆ, ಭಾವಸಾರ ಕ್ಷತ್ರಿಯ, ಚಿಪ್ಪಿಗ, ಮತ್ತು ನಾಮದೇವ, ಸಿಂಪಿ ಸಮಾಜದವರೆಲ್ಲರೂ ಸೇರುತ್ತಾರೆ. ಇವರಲ್ಲಿ ಹೆಚ್ಚಿನ ಸಂಖ್ಯೆಯವರು ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಬಟ್ಟೆ ವ್ಯಾಪಾರವನ್ನೇ ಇನ್ನೂ ಅನುಸರಿಸುತ್ತಿದ್ದಾರೆ. ಇವರಲ್ಲನೇಕರು ಇನ್ನಿತರೆ ಉದ್ಯೋಗವನ್ನೂ ಮಾಡುತ್ತಾರೆ. ಇವರು ಬಹಳ ಹಿಂದೆ ಮಹಾರಾಷ್ಟ್ರದಿಂದ ವಲಸೆ ಬಂದವರಾಗಿದ್ದು ಮನೆಯಲ್ಲಿ ಮರಾಠಿ ಭಾಷೆಯನ್ನಾಡುತ್ತಾರೆ. ಇವರಲ್ಲಿ ಜಾತಿ ಪಂಚಾಯತಿಗಳಿವೆ. ಇವರು ಆರಾಧಿಸುವ ದೇವಾನುದೇವತೆಗಳೆಂದರೆ ವಿಠೋಬಾ, ಜ್ಯೋತಿಬಾ, ಖಂಡೋಬಾ, ಭವಾನಿ (ತುಳಜಾಪುರದ ಅಂಬಾಭವಾನಿ)

ಮತ್ತು ಯಲ್ಲಮ್ಮ. ಇವರಲ್ಲಿ 'ವಾರ್ಕರಿ' ಪಂಥವು ಜನಪ್ರಿಯವಾಗಿದ್ದು, ಇವರು ಏಕಾದಶಿಯನ್ನು ಕಟ್ಟುನಿಟ್ಟಾಗಿ ಪಾಲಿಸುವರು. ಸಾಮಾನ್ಯವಾಗಿ ಹಿಂದೂಗಳು ಆಚರಿಸುವ ಎಲ್ಲ ಹಬ್ಬಗಳನ್ನು ಇವರು ಆಚರಿಸುವರಾದರೂ, ದಸರಾ ಆಚರಣೆಗೆ ಹೆಚ್ಚಿನ ಮಹತ್ವ ನೀಡುವರು. ಸತ್ತವರನ್ನು ಹೂಳುವ ಅಥವಾ ಸುಡುವ ಎರಡೂ ಪದ್ದತಿ ಇವರಲ್ಲಿದ್ದು, ಜ್ಞಾತಿಗಳು ಹತ್ತು ದಿನಗಳ ಕಾಲ ಸೂತಕವನ್ನು ಆಚರಿಸುವರು. ಇವರಲ್ಲಿ ಪುರುಷರು ಯಜ್ಞೋಪವೀತವನ್ನು ಧರಿಸುವರು. ವಿಧವಾ ಮರು ವಿವಾಹಕ್ಕಾಗಲೀ ಅಥವಾ ವಿವಾಹ ವಿಚ್ಛೇದನಕ್ಕಾಗಲೀ ಇವರಲ್ಲಿ ಹೆಚ್ಚಿನ ವಿರೋಧವಿಲ್ಲ. ಇವರಲ್ಲಿ ಮಾಂಸಾಹಾರ ರೂಢಿಯಲ್ಲಿದೆ.

**ದೇವಾಂಗ:** ಸಂಸ್ಕೃತ ಮೂಲದ ಪದದ ಇದರ ಅರ್ಥ 'ದೇವರ ಶರೀರ' ಎಂದಾಗುತ್ತದೆ. ಒಂದು ಐತಿಹ್ಯದ ಪ್ರಕಾರ ದೇವಾನುದೇವತೆಗಳಲ್ಲದೇ ಮಾನವರಿಗೂ ಬೇಕಾದ ಬಟ್ಟೆಯನ್ನು ನೇಯುವುದಕ್ಕಾಗಿ ಮಹಾದೇವನು ದೇವಾಂಗ ಋಷಿಯನ್ನು ಸೃಷ್ಟಿಸಿದನು. ಆ ಋಷಿಯ ಸಂತತಿಯವರೇ ಇಂದಿನ ದೇವಾಂಗ ಜನಾಂಗದವರು ಎಂದು ನಂಬಲಾಗಿದೆ, ಇವರ ಸಾಂಪ್ರದಾಯಿಕ ಉದ್ಯೋಗ ನೇಯ್ಗೆಯಾದರೂ, ಈಗ ಇವರು ಕೃಷಿ, ವ್ಯಾಪಾರ ಮತ್ತು ವಿವಿಧ ಸೇವಾ ರಂಗಗಳಲ್ಲಿಯೂ ಕಂಡು ಬರುವ ಇವರು, ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ತಾಲೂಕುಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ದೇವಾಂಗ ಹೆಸರಿನಡಿಯಲ್ಲಿ ಬರುವ ಉಪ ಪಂಗಡಗಳೆಂದರೆ 'ದೇವಾಂಗ ಶೆಟ್ಟಿಗಾರ; ಹಟ್ಕಾರ, ಹಟ್ಗಾರ, ಕೋಷ್ಠಿ, ಮತ್ತು ಜುಲಾಹಿ. ಕುಲದಲ್ಲಿಯೇ ವಿವಾಹ ಸಂಬಂಧ ಬೆಳೆಸುವ ಪದ್ಧತಿಯಿರುವ ಎರಡು ಭಾಷಿಕ ವರ್ಗಗಳು ಇವರಲ್ಲಿವೆ-ಕನ್ನಡ ದೇವಾಂಗ ಮತ್ತು ತೆಲುಗು ದೇವಾಂಗ. ಪುನಃ ಕನ್ನಡ ದೇವಾಂಗದವರನ್ನು 'ಶೀರ್ಯದವರು' ಮತ್ತು 'ಹದಿನೆಂಟು ಮನೆಯವರು' ಎಂದು ವಿಭಜಿಸಲಾಗಿದೆ. ಇವರಲ್ಲಿರುವ ಭಿನ್ನ ಗೋತ್ರ ವಿವಾಹ ಪದ್ಧತಿ ಇರುವ ಅಂಬಲಿ, ಅರಿವಿನ, ಬಣ್ಣ, ಬಳೆ, ಬೆಳ್ಳಿ, ಬೆಣ್ಣೆ, ಕಡಗ, ಮಂಡೆ, ಮಚ್ಚೆ, ದಬ್ಬೆ, ಇತ್ಯಾದಿ ಹೆಸರಿನ ಬೆಡಗುಗಳಿವೆ. ತೆಲುಗು ಮಾತನಾಡುವ ದೇವಾಂಗದವರಲ್ಲಿ ಇರುವ ಭಿನ್ನ ಗೋತ್ರ ವಿವಾಹ ಪದ್ಧತಿಯಲ್ಲಿ ಅನುಸರಿಸುವ ಬೆಡಗುಗಳೆಂದರೆ ಬಂಡಿ, ಬಂತ, ಚಿಮಲ, ಒಂಟಿ, ಗೋದುನ ಇತ್ಯಾದಿ. ತೆಲುಗು ದೇವಾಂಗದವರು ಸಸ್ಯಾಹಾರಿಗಳಾದರೆ ಕನ್ನಡ ದೇವಾಂಗದವರು ಮಾಂಸಾಹಾರಿಗಳು. ಜನನ ಮತ್ತು ಮರಣ ಸಂಭವಿಸಿದಾಗ ದೇವಾಂಗದವರು ಹತ್ತು ದಿನಗಳ ಸೂತಕ ಆಚರಿಸುವರು. ಇವರಲ್ಲಿ ಶೈವರೇ ಅಧಿಕ ಸಂಖ್ಯೆಯಲ್ಲಿ ಇರುವರಾದರೂ, ಕೆಲವರು ವಿಷ್ಣುವಿನ ಆರಾಧಕರಾಗಿದ್ದಾರೆ. ಇವರು ಪೂಜೆ ಮಾಡುವ ಇನ್ನುಳಿದ ದೇವದೇವತೆಗಳೆಂದರೆ ರಾಮಲಿಂಗ, ಮುನೇಶ್ವರ, ಮಾರಿಯಮ್ಮ ಬನಶಂಕರಿ (ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಬನಶಂಕರಿ) ಮತ್ತು ಚೌಡೇಶ್ವರಿ. ಹಂಪೆಯಲ್ಲಿರುವ ಗಾಯತ್ರಿಪೀಠದ ಅಧಿಪತಿಯೇ ಇವರ ಗುರು. ದೇವಾಂಗದವರು ಸತ್ತವರನ್ನು ಹೂಳುತ್ತಾರೆ, ಆದರೆ ಅವರಲ್ಲಿರುವ ನಾಮಧಾರಿಗಳು ಸತ್ತವರನ್ನು ಚಿತೆಯಲ್ಲಿಟ್ಟು ಸುಡುತ್ತಾರೆ. ಇವರು ಸಾವು ಸಂಭವಿಸಿದ ಪ್ರಥಮ ವರ್ಷದ ಎಲ್ಲಾ ತಿಂಗಳುಗಳಲ್ಲಿಯೂ 'ಮಾಸಿಕ' ಶ್ರಾದ್ಧವನ್ನು ನೆರವೇರಿಸುವರಲ್ಲದೆ, ವಾರ್ಷಿಕ ಶ್ರಾದ್ಧ ಕರ್ಮವನ್ನೂ ಮಾಡುತ್ತಾರೆ. ಇವರ 'ಕಟ್ಟೆಮನೆ'ಗಳಲ್ಲಿ ಯಜಮಾನರು ಅಥವಾ ಸೆಟ್ಟಿಗಳು ಸಭಾಪತಿಗಳಾಗಿರುತ್ತಾರೆ, ಆದರೆ ಇವುಗಳ ಅಧಿಕಾರ ವ್ಯಾಪ್ತಿ ಮಿತವಾದುದು. ಕೊಳ್ಳೇಗಾಲದಲ್ಲಿ ೧೯೨೧, ೧೯೬೨ ಮತ್ತು ೧೯೮೧ರಲ್ಲಿ ಆಚರಿಸಲಾಗಿದೆ ಎನ್ನಲಾದ ಕಟ್ಟಿ ಹಬ್ಬವನ್ನು ಅಪರೂಪಕ್ಕೆ ಆಚರಿಸುವರು.

**ಪಾಂಚಾಳ(ವಿಶ್ವಕರ್ಮ):** ಇವರಲ್ಲಿ ಪರಂಪರಾಗತ ಕಲಾಕೌಶಲ್ಯಕ್ಕೆ ಪ್ರಸಿದ್ಧರಾಗಿರುವ ಐದು ವರ್ಗಗಳಿವೆ ೧) ಚಿನ್ನ-ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿಗರು, (೨) ಕಂಚು-ಹಿತ್ತಾಳೆ ಕೆಲಸ ಮಾಡುವ ಕಂಚುಗಾರ, (೩) ಮರದ ಕೆಲಸ ಮಾಡುವ ಬಡಗಿ, (೪) ಶಿಲ್ಪಿ ಮತ್ತು (೫) ಕಮ್ಮಾರ. ಇವರಲ್ಲನೇಕರು ಈಗ ಕೃಷಿ,

ಕೈಗಾರಿಕೆ, ಮತ್ತು ಸರ್ಕಾರಿ ಸೇವೆ ಮುಂತಾದ ರಂಗಗಳಲ್ಲಿಯೂ ಇದ್ದಾರೆ. ಇವರಲ್ಲಿ ಕೆಲವರು ಲಿಂಗಧಾರಣೆ ಮಾಡುವರಾದರೂ ಲಿಂಗಾಯತರೊಡನೆ ಸೇರುವುದಿಲ್ಲ. ಈ ಐದೂ ವರ್ಗಗಳನ್ನು ಸಾಮಾನ್ಯವಾಗಿ 'ಪಾಂಚಾಳ' ಎಂಬ ಒಂದೇ ಹೆಸರಿನಿಂದ ಕರೆಯುವರಾದರೂ ಅವರವರಲ್ಲಿ ಸ್ವಲ್ಪ ಭಿನ್ನತೆ ಇದೆ ಎನ್ನಬಹುದು. ಈ ಭಿನ್ನತೆ ಅಥವಾ ವ್ಯತ್ಯಾಸಗಳು ಭಾಷೆ ಮತ್ತು ವಾಸಸ್ಥಾನಗಳಿಂದ ಬಂದಿರುವಂತೆ ಕಾಣುತ್ತವೆ. ಇವರು ಯಜ್ಞೋಪವೀತಧಾರಿಗಳಾಗಿದ್ದು, ತಮ್ಮದೇ ಆದ ಪುರೋಹಿತರನ್ನು ಹೊಂದಿರುತ್ತಾರೆ. ಆದರೂ ಕೆಲವೊಮ್ಮೆ ಇವರ ಧಾರ್ಮಿಕಾಚರಣೆಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುವರು. ಹಿಂದೆ ಬಾಲ್ಯ ವಿವಾಹಪದ್ಧತಿ ರೂಢಿಯಲ್ಲಿತ್ತು, ಆದರೆ ಈಗ ಇಲ್ಲ. ಈ ಜಾತಿ ಬಹಳ ವ್ಯವಸ್ಥಿತವಾದುದಾಗಿದೆ. ಇದರ ಐದು ವರ್ಗಗಳವರೂ ಪರಸ್ಪರ ವಿವಾಹ ಸಂಬಂಧ ಬೆಳೆಸುವರು; ಆದರೆ ಅಕ್ಕಸಾಲಿಗರು ಕಮ್ಮಾರರೊಡನೆ ವಿವಾಹ ಸಂಬಂಧಕ್ಕೆ ಉತ್ಸುಕರಾಗಿರುವುದಿಲ್ಲ ಎನ್ನಲಾಗಿದೆ. ವಿಶ್ವಬ್ರಹ್ಮನ ಐದು ಮುಖಗಳಿಂದ ಹುಟ್ಟಿದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಋಷಿಗಳ ಮಕ್ಕಳಾದ ಸನಕ, ಸನಂದನ, ಅಹಭೂಪನ, ಪ್ರಾತ್ನಸ ಮತ್ತು ಸುವರ್ಣ ಮುಂತಾದವರು ಪಾಂಚಾಳರ ಗೋತ್ರಕಾರರೆಂದೂ ಇವರಿಂದ ಮುಂದೆ ೧೨೫ ಗೋತ್ರಗಳು ಹುಟ್ಟಿದವೆಂದೂ ಹೇಳುವರು. ಇವರಲ್ಲಿ ಕೆಲವರು ಯಂತ್ರ-ಮಂತ್ರ ಕಲಿತಿರುತ್ತಾರೆ. ಸತ್ತವರನ್ನು ದಹಿಸುವರು. ಇವರ ಮಾತೃಭಾಷೆ ಸಾಮಾನ್ಯವಾಗಿ ಕನ್ನಡ, ಆದರೆ ಕೆಲವರು ತಮಿಳು, ತೆಲುಗು, ತುಳು ಮುಂತಾದ ಭಾಷೆಗಳನ್ನಾಡುವುದೂ ಇದೆ. ಇವರ ವಿವಾಹಗಳಲ್ಲಿ ಕನ್ಯಾಶುಲ್ಕ ನೀಡುವ ರೂಢಿ ಇದೆ. ಇವರಲ್ಲಿ ಅನೇಕರು ಶೈವರಾಗಿದ್ದು ಕಾಳಿಕಾದೇವಿ, ಇವರ ಕುಲದೇವತೆ. ಇವರು ಗಣೇಶನನ್ನು ಪೂಜಿಸುವರು. ಇವರ ಆರಾಧ್ಯ ದೇವತೆಯೆಂದರೆ ಕಾಮಾಕ್ಷಿ ಅಮ್ಮ. ಇವರು ೯-ಪಣ ಬಣದಲ್ಲಿ ಮೊದಲಿಗರು. ಅಕ್ಕಸಾಲಿಗರನ್ನು ಉಳಿದ ಪಾಂಚಾಳ ವರ್ಗದವರು ಕುಲದ ಪ್ರಮುಖರೆಂದು ಮಾನ್ಯ ಮಾಡುತ್ತಾರೆ. ಇವರು ಮೈಸೂರು ನಗರದ ರಾಮಾನುಜ ರಸ್ತೆಯಲ್ಲಿರುವ ನಾಗಲಿಂಗಸ್ವಾಮಿ ಮಠಕ್ಕೆ ನಡೆದುಕೊಳ್ಳುವರು.

**ಮಾದಿಗರು:** ತಮಿಳು ನಾಡಿನ ಚಕ್ಕಿಲಿಯನಜಾತಿಗೆ ಅನುರೂಪವಾದ ಜಾತಿಯನ್ನೇ ಇಲ್ಲಿ ಮಾದಿಗರೆಂದು ಕರೆಯುವರು. ಇವರು ೯-ಪಣ ಅಥವಾ ಎಡಗೈ ಬಣದವರಲ್ಲಿ ಕೊನೆಯವರಾಗಿರುತ್ತಾರೆ. ಕೆಲವೊಮ್ಮೆ ಇವರು ತಮ್ಮನ್ನು ಮಾತಂಗ [ಮತಂಗ ಋಷಿಯ ಸಂತಾನ] ರೆಂದು ಹೇಳಿಕೊಳ್ಳುವುದೂ ಉಂಟು; ಮತ್ತೆ ಕೆಲವರು ಶ್ರೀರಾಮನ ಭಕ್ತ ಮತ್ತು ಬೆಂಬಲಿಗ ಜಾಂಬವಂತನ ಸಂತತಿಯವರು ತಾವೆಂದು ತಿಳಿಯುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಈ ಜಾತಿಯ ಜನರು ವಿರಳವಾಗಿದ್ದಾರೆ.

ಇವರ ಪಾರಂಪರಿಕ ಕಸುಬೆಂದರೆ ಚರ್ಮದ ಕೆಲಸಗಳನ್ನು ಮಾಡುವುದೇ ಆಗಿದೆ. ಇತ್ತೀಚೆಗೆ ಈ ಉದ್ಯೋಗವನ್ನೇ ನೆಚ್ಚಿಕೊಂಡು ಬದುಕುತ್ತಿರುವವರ ಸಂಖ್ಯೆ ಬಹಳವಾಗಿ ಕ್ಷೀಣಿಸಿದೆ. ಕೃಷಿಕರು, ಕೃಷಿ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಿಂದಿನ ಕಾಲದಲ್ಲಿ 'ಬಾರಾಬಲೂತಿ' ಅಥವಾ 'ಅಯ್ಯಂಗಡಿ' ಎಂದು ಕರೆಯುತ್ತಿದ್ದ ಪಾರಂಪರಿಕ ಗ್ರಾಮ ಸೇವಕರ ಗುಂಪಿನಲ್ಲಿ ಅನುವಂಶಿಕ ತೋಟಿ ಅಥವಾ ತಳವಾರರಾಗಿ ಸೇವೆ ಸಲ್ಲಿಸುತ್ತಿದ್ದವರಲ್ಲಿ ಈ ಜಾತಿಯವರೂ ಇರುತ್ತಿದ್ದರು. ಹಿಂದಿನ ಮದ್ರಾಸ್ ಪ್ರಾಂತದ ದಕ್ಷಿಣ ಭಾಗದಿಂದ ವಲಸೆ ಬಂದು ಇಲ್ಲಿ ನೆಲೆಸಿರುವ ಈ ಜಾತಿಯ ಜನರು ತಮಿಳನ್ನು ಮಾತನಾಡುತ್ತಾರೆ; ಇವರ ಸಂಖ್ಯೆ ತುಂಬಾ ಕಡಿಮೆ ಇದೆ.ಪರಸ್ಪರ ವಿವಾಹ ಸಂಬಂಧ ಬೆಳೆಸದ ಕನ್ನಡ ಮತ್ತು ತೆಲುಗು ಭಾಷಿಕರಲ್ಲಿ ಮೂರು ಸಗೋತ್ರ ಪಂಗಡಗಳಿವೆ.

[೧] ತಣಿಗೆ ಬುವ್ವದವರು ; [೨] ಹೆಡಿಗೆ ಬುವ್ವದವರು ಅಥವಾ ಗಂಪ ಬುವ್ವನವಾಳ್ಳು; ಮತ್ತು [೩] ಮೊರ ಬುವ್ವದವರು.

ಮೇಲಿನ ಗುಂಪುಗಳ ಹೆಸರು ಬಂದಿರುವುದು ಈ ಜಾತಿಯ ವಧೂವರರು ಮದುವೆ ವೇಳೆ ಮಾಡುವ ಊಟವನ್ನು ಯಾವುದರಲ್ಲಿ ಹಾಕಿ ತಿನ್ನುತ್ತಾರೆಂಬುದರ ಮೇಲೆ ತಣಿಗೆ, ಹೆಡಿಗೆ, ಅಥವಾ ಒಂದು ಮೊರ. ಗಮನಿಸಬೇಕಾದ ಇನ್ನೂ ಎರಡು ಪಂಗಡಗಳು ಇವರಲ್ಲಿವೆ, ಇವುಗಳಲ್ಲೊಂದು ಜಾಂಬವ ಮತ್ತೊಂದು ಪಕ್ಕಲು. ಹಿಂದಿನ ಕಾಲದಲ್ಲಿ ಪಕ್ಕಲು ಪಂಗಡದವರು ಮಾದಿಗರ ಅನುವಂಶಿಕ ಜೀತದಾಳು [ಹಳೆಮಕ್ಕಳು] ಗಳಾಗಿದ್ದರು. ಮತ್ತು ಅವರಿಂದ ಜಾತಿಭ್ರಷ್ಟರೆಂದು ಪರಿಗಣಿಸಲ್ಪಟ್ಟಿದ್ದರು. ಜಾಂಬವ ಪಂಗಡದ ಸದಸ್ಯರನ್ನು ಮಾದಿಗರು ತಮ್ಮ ಗುರುಗಳೆಂದು ಮಾನ್ಯ ಮಾಡುತ್ತಾರೆ. ಇವರು ತಮ್ಮ ಹೆಸರಿನ ಮುಂದೆ 'ಮುನಿ' ಎಂಬ ಅಂತ್ಯ ಪ್ರತ್ಯಯವನ್ನು ಸೇರಿಸಿಕೊಳ್ಳುತ್ತಾರೆ. ಉದಾ:ರುದ್ರಮುನಿ, ಇವರು ಲಿಂಗವನ್ನು ಧರಿಸುವುದಲ್ಲದೆ ಹಣೆಯ ಮೇಲೆ ವಿಭೂತಿ ಅಥವಾ ಶ್ರೀಗಂಧದ ಸರಿಯನ್ನು ಬಳಿದುಕೊಳ್ಳುತ್ತಾರೆ. ಜಾಂಬವರು ಉಳಿದ ಮಾದಿಗ ಪಂಗಡಗಳು ಅಥವಾ ಶಾಖೆಯವರಿಂದ ಹೆಣ್ಣನ್ನು ತರುವರಾದರೂ, ತಮ್ಮ ಪಂಗಡದ ಹೆಣ್ಣನ್ನು ಅವರಿಗೆ ಕೊಡುವುದಿಲ್ಲ.

ಮಾದಿಗರಲ್ಲಿ ಅನೇಕ ಭಿನ್ನಗೋತ್ರ ಕುಲಗಳಿದ್ದು ಅವುಗಳನ್ನು ವೃಕ್ಷಗಳು ಅಥವಾ ಪ್ರಾಣಿಗಳ ಹೆಸರುಗಳಿಂದ ಗುರ್ತಿಸುತ್ತಾರೆ. ಕನ್ಯಾ ಶುಲ್ಕಪದ್ಧತಿ ರೂಢಿಯಲ್ಲಿದೆ. ವಿಧವಾ ಮರು ವಿವಾಹಕ್ಕೆ ಅನುಮತಿ ಇದೆ ಮತ್ತು ಆಚರಣೆಯಲ್ಲಿಯೂ ಇದೆ. ವ್ಯಭಿಚಾರದ ಪ್ರಸಂಗಗಳಲ್ಲಿ ವಿವಾಹ ವಿಚ್ಛೇದನಕ್ಕೆ ಮುಂದಾಗಬಹುದು. ಸತ್ತವರನ್ನು ಹೂಳುತ್ತಾರೆ ಮತ್ತು ಹತ್ತು ದಿನಗಳವರೆಗೆ ಜ್ಞಾತಿಗಳು ಸೂತಕವನ್ನು ಆಚರಿಸುತ್ತಾರೆ; ಆದರೆ, ಯಾವುದೇ ರೀತಿಯ ಶ್ರಾದ್ಧ ವಿಧಿಗಳನ್ನೂ ಇವರು ಆಚರಿಸುವುದಿಲ್ಲ. ಇವರು ಪೂಜಿಸುವ ದೇವತೆಗಳೆಂದರೆ ಮಾರಿಯಮ್ಮ, ಅಕ್ಕಯಮ್ಮ, ಕಾಳಮ್ಮ, ಚೌಡಮ್ಮ ದುರ್ಗಮ್ಮ, ಗಂಗಮ್ಮ, ಮತ್ತು ಯಲ್ಲಮ್ಮ. ಇವರ ಪೋಷಕ ಸಂತನೆಂದರೆ ಬಸವೇಶ್ವರರ ಸಮಕಾಲೀನನಾಗಿದ್ದ ಹರಳಪ್ಪ. ಪ್ರತಿಯೊಂದು ಮಾದಿಗ ಹಟ್ಟಿಯಲ್ಲಿಯೂ ಮಾರಮ್ಮನಿಗೆ ಮೀಸಲಾದ ಗುಡಿಯೊಂದಿರುವುದು. ವಾಡಿಕೆಯಾಗಿದೆ. ಯುಗಾದಿ, ವಿನಾಯಕ ಚತುರ್ಥಿ ಮತ್ತು ಮಹಾಲಯ ಅಮಾವಾಸ್ಯೆ ನಂತರದ ಪಾಡ್ಯ [ಶುಕ್ಲಪಕ್ಷ] ದಂದು ಹಬ್ಬವನ್ನು ಆಚರಿಸುತ್ತಾರೆ. ಆ ದಿನಗಳಂದು ಕುಟುಂಬದವರೆಲ್ಲಾ ದೇವಸ್ಥಾನಕ್ಕೆ ಭೇಟಿ ನೀಡಿ ತಮ್ಮ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಇವರ ದೇವಾಲಯಗಳಲ್ಲಿ ಪೂಜಾರಿಯ ಪೂಜಾ ಕೈಂಕರ್ಯಗಳನ್ನು ನಡೆಸುವ ತಪ್ಪಟ್ಟಿಗನೇ ಇವರ ಪುರೋಹಿತನೂ ಹೌದು. ಮಾದಿಗರಲ್ಲಿ ಕೆಲವರು ವೈಷ್ಣವ ಪಂಥವನ್ನಂಗೀಕರಿಸಿದ್ದಾರೆ. ಈ ಜಾತಿಯ ಮಾಚಲಾರು ಎಂದು ಕರೆಯಲ್ಪಡುವ ಯಾಚಕರನ್ನು ಮದುವೆ ಸಮಾರಂಭಗಳಿಗೆ ಆಹ್ವಾನಿಸಿ ನಿರ್ದಿಷ್ಟ ಸಂಭಾವನೆಯನ್ನು ನೀಡುವ ಪರಿಪಾಠವಿದೆ. ಇವರ ಜಾತಿ ಪಂಚಾಯತಿಯಾದ 'ಕಟ್ಟೆಮನೆ'ಗಳಲ್ಲಿ ದೊಡ್ಡ ಯಜಮಾನರೇ ಸಭಾಪತಿಗಳಾಗಿರುತ್ತಾರೆ. ಮಾಂಸಾಹಾರಿಗಳಾದ ಮಾದಿಗರು ಅನೇಕ ರೀತಿಯ ಪ್ರಾಣಿಗಳ ಮಾಂಸವನ್ನು ತಿನ್ನುವರು. ಗ್ರಾಮಗಳಲ್ಲಿ ತಮಟೆ, ಡೋಲು ಬಾರಿಸುವರು.

**ಮೊದಲಿಯಾರರು:** ಮೊದಲಿಯಾರರು ಒಂದು ಮುಖ್ಯ ಕೃಷಿಕ ಜಾತಿ. ಇವರು ಈ ಜಿಲ್ಲೆಗೆ ವಲಸೆ ಬಂದಿದ್ದು ವೆಲ್ಲಾಳ ಗುಂಪಿಗೆ ಸೇರುತ್ತಾರೆಂದು ಹೇಳುತ್ತಾರೆ. ಮನೆಯಲ್ಲಿ ತಮಿಳು ಮಾತನಾಡುವವರಾದರೂ ಕನ್ನಡವನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಕೈಗಾರಿಕೆಗಳಲ್ಲಿ ಸಾಮಾನ್ಯವಾಗಿ ಕುಶಲಕರ್ಮಿಗಳಾಗಿ ಇವರು ಕಾರ್ಯನಿರ್ವಹಿಸುವರು; ಉಳಿದ ಉದ್ಯೋಗಗಳೆಂದರೆ ವ್ಯಾಪಾರ, ಗಣಿಗಾರಿಕೆ ಮತ್ತು ಸರ್ಕಾರಿ ಸೇವೆ. ಇವರಲ್ಲಿ ಬಹಳ ಮಂದಿ ಉತ್ತಮ ವಿದ್ಯಾಭ್ಯಾಸ ಮಾಡಿದ್ದು ಸರ್ಕಾರದ ಇಲಾಖೆಗಳಲ್ಲಿ ಇದ್ದಾರೆ. ವ್ಯಾಪಾರಿಗಳಾಗಿ, ಅಂಗಡಿ

ವ್ಯಾಪಾರಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಇವರಲ್ಲಿ ಬಹು ಸಂಖ್ಯಾತರು ಇನ್ನೂ ಭೂ ಒಡೆತನವಿರುವ ಕೃಷಿಕರಾಗಿಯೇ ಇದ್ದಾರೆ. ಇವರ ಧಾರ್ಮಿಕ ಕಾರ್ಯಗಳಲ್ಲಿ ಬ್ರಾಹ್ಮಣರು ಪುರೋಹಿತರಾಗಿರುತ್ತಾರೆ. ಇವರಲ್ಲಿ ವೈಷ್ಣವ ಮತ್ತು ಶೈವ ಪಂಥೀಯರೀರ್ವರೂ ಇದ್ದಾರೆ. ಇವರಲ್ಲಿ ಸತ್ತವರನ್ನು ದಹಿಸುವ ಪದ್ಧತಿ ಇದೆಯಾದರೂ ಸತ್ತ ವ್ಯಕ್ತಿ ಮೊದಲೇ ಇಚ್ಚಿಸಿದ್ದಲ್ಲಿ ಕುಳಿತ ಭಂಗಿಯಲ್ಲಿ ಹೂಳುವ ಪದ್ದತಿಯನ್ನು ಪಾಲಿಸುವರು. ಗತಿಸಿದ ವ್ಯಕ್ತಿಗಳಿಗೆ ಶ್ರಾದ್ಧವನ್ನು ಮಾಡುವ ರೂಢಿ ಇವರಲ್ಲಿದೆ. ಇವರು ಮಾಂಸಾಹಾರಿಗಳು. ಇವರಲ್ಲಿ ಜಾತಿ ಪಂಚಾಯತಿ ಇದ್ದು ಮುಖ್ಯಸ್ಥನು ಸಭಾಪತಿಯಾಗಿ ಜಾತಿಯೊಳಗಿನವರ ಸಮಸ್ಯೆಗಳು ಮತ್ತು ಜಗಳಗಳನ್ನು ಪರಿಹರಿಸುವನು.

**ಬಣಜಿಗ (ಬಲಿಜ):** ಬಣಜಿಗರು ಒಂದು ವ್ಯಾಪಾರಿ ಜನಾಂಗ. ಈ ಪದ ಸಂಸ್ಕೃತ ಭಾಷೆಯ 'ವಣಿಕ' ದಿಂದ ಬಂದಿದೆ. ಇವರಲ್ಲಿ ಕನ್ನಡ ಮತ್ತು ತೆಲುಗು ಈ ಎರಡೂ ಭಾಷೆಗಳನ್ನಾಡುವ ಜನರಿದ್ದಾರೆ. ತಮ್ಮ ಪಾರಂಪರಿಕ ವೃತ್ತಿಯ ಜೊತೆಗೇ ಇವರಲ್ಲನೇಕರು ಕೃಷಿ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಾ ಮನೆ ಮನೆಗೂ ಬಳೆ, ಮಣಿಸರ, ವೀಳ್ಯದೆಲೆ, ಹೂಗಳೇ ಮುಂತಾದ ಸಾಮಾಗ್ರಿಗಳನ್ನು ಒಯ್ದು ಮಾರುತ್ತಿದ್ದರು. ಇವರ ಉಪ ಪಂಗಡವೊಂದನ್ನು ತಮಿಳಿನಲ್ಲಿ ವಳ್ಳೆಯಾರ್ ಅಥವಾ ವಳ(ಬಳೆ) ಚೆಟ್ಟಿ ಎಂದೂ, ಕನ್ನಡದಲ್ಲಿ ಬಳೆಶೆಟ್ಟಿ ಎಂದೂ ಕರೆಯುವರು. ತೆಲುಗ ಚೆಟ್ಟಿ ಎಂಬುದು ಬಲಿಜ ಚೆಟ್ಟಿ ಎಂಬುದರ ಪರ್ಯಾಯ ಪದವಾಗಿದೆ. ದಾಸಬಣಜಿಗರು ಮೊದಲು ಜೈನ ಕ್ಷತ್ರಿಯರಾಗಿದ್ದು, ನಂತರ ರಾಮಾನುಜಾಚಾರ್ಯರ ದಾಸವಾಣಿಯಿಂದ ಪ್ರೇರಿತರಾಗಿ ಶ್ರೀವೈಷ್ಣವ ಮತಾವಲಂಬಿಗಳಾದರೆಂದು ಹೇಳಲಾಗುತ್ತದೆ. ಬಲಿಜರಲ್ಲಿ ಅನೇಕ ಉಪಜಾತಿಗಳಿದ್ದು ಅವರುಗಳ ನಡುವೆ ವೈವಾಹಿಕ ಸಂಬಂಧವಾಗಲೀ ಸಹಪಂಕ್ತಿ ಭೋಜನವಾಗಲೀ ಇರುವುದಿಲ್ಲ. ಇವರ ಉಪ ಪಂಗಡಗಳಾದ ಬಳೆಗಾರ(ಬಳೆಗಳನ್ನು ಮಾಡುವವರು), ದೇವಾಡಿಗ ಅಥವಾ ಬಣ್ಣಗಾರರು ಮಾಂಸ ತಿನ್ನುವುದಿಲ್ಲ ಮತ್ತು ಮದ್ಯಪಾನ ಮಾಡುವುದಿಲ್ಲ. ತೆಲುಗು ಬಣಜಿಗರಲ್ಲಿ ಶೈವರು ಮತ್ತು ವೈಷ್ಣವರೀರ್ವರೂ ಕಂಡುಬರುತ್ತಾರೆ. ಅವರು ಯಜ್ಞೋಪವೀತ ಧರಿಸುವುದಿಲ್ಲ ಮತ್ತು ವೈದಿಕ ಶಾಸ್ತ್ರ ವಿಧಿಗಳನ್ನು ಪಾಲಿಸುವುದಿಲ್ಲ. ಇವರು ಸತ್ತವರನ್ನು ಹೂಳುವರು. ಬ್ರಾಹ್ಮಣ ಪುರೋಹಿತರು ಧಾರ್ಮಿಕ ವಿಧಿಗಳನ್ನು ನಡೆಸುವರು. ಬಣಜಿಗರಲ್ಲಿ ಕಂಡುಬರುವ ವರ್ಗಗಳೆಂದರೆ, ಎಲೆ ಬಣಜಿಗ, ದಾಸ ಬಣಜಿಗ, ದೂದಿ ಬಣಜಿಗ, ಉಪ್ಪು ಬಣಜಿಗ, ಸೆಟ್ಟಿ ಬಣಜಿಗ, ಪೂವಲು ಬಣಜಿಗ, ನಾಯಡು ಬಣಜಿಗ, ಜಿದಿ ಬಣಜಿಗ ಇತ್ಯಾದಿ.

**ಬೆಸ್ತ:** ಬೆಸ್ತರು ಸಾಂಪ್ರದಾಯಿಕ ಮೀನುಗಾರರು. ಇವರು ತಮ್ಮನ್ನು ಪವಿತ್ರ ಗಂಗಾಮಾತೆ[ನದಿ]ಯ ಮಕ್ಕಳೆಂದು ತಿಳಿಯುತ್ತಾರೆ. ಇವರನ್ನು ತೊರೆಯ, ಅಂಬಿಗ ಮತ್ತು ಪರಿವಾರ ಎಂದೂ ಕರೆಯುವರು. ಕನ್ನಡದ ಪದವಾದ 'ಬಿಸಾಡು' ಎಂಬುದರಿಂದ ಈ ಜಾತಿಯ ಹೆಸರನ್ನು ಪಡೆಯಲಾಗಿದೆ. ತೆಲುಗು ಮಾತನಾಡುವ ಬೆಸ್ತರನ್ನು ಬೋಯಿಗಳೆಂದು ಕರೆಯುತ್ತಾರೆ. ಬೆಸ್ತರ ಮುಖ್ಯವಾದ ಉದ್ಯೋಗಗಳೆಂದರೆ ಮೀನು ಹಿಡಿಯುವುದು, ಭಟ್ಟಿಯಲ್ಲಿ ಸುಣ್ಣ ತಯಾರಿಸುವುದು, ವ್ಯಾಪಾರ ಮತ್ತು ಕೃಷಿ. ಹಿಂದಿನ ಕಾಲದಲ್ಲಿ ಇವರನ್ನು ಪಲ್ಲಕ್ಕಿ ಹೊರುವ ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಹದಿನೆಂಟು ಫಣದ ಪಕ್ಷಕ್ಕೆ ಸೇರಿರುವ ಇವರು ಒಂಬತ್ತು ಪಣದವರೊಡನೆ ಸಹ ಪಂಕ್ತಿ ಭೋಜನ ಮಾಡುವುದಿಲ್ಲ. ಈ ಕೆಳಕಾಣಿಸಿರುವ ಕುಲ ಅಥವಾ ಭಿನ್ನ ಗೋತ್ರ ವಿವಾಹದ ವರ್ಗಗಳು ಬೆಸ್ತ ಜನಾಂಗದಲ್ಲಿವೆ. ಚಿನ್ನ, ಬೆಳ್ಳಿ, ಸೂರ್ಯ, ಚಂದ್ರ, ದೇವಿ, ಸೂತ, ಮುಗಿಲು, ಬಾಸಿಂಗ, ಮುತ್ತು, ರತ್ನ, ಕಸ್ತೂರಿ, ಹವಳ ಮತ್ತು ಮಲ್ಲಿಗೆ, ಇತ್ಯಾದಿ. ಹಿಂದೆ ಬಸವಿಯರನ್ನು ಬಿಡುವ ಪದ್ಧತಿ ಇವರಲ್ಲಿತ್ತು. ವಿವಾಹದ ಸಮಯದಲ್ಲಿ ಕನ್ಯಾಶುಲ್ಕವನ್ನು ಪಡೆದುಕೊಳ್ಳುವ ಪರಿಪಾಠವೂ ಇವರಲ್ಲಿತ್ತು. ಪತ್ನಿಯು ವ್ಯಭಿಚಾರಿಣಿ ಎಂದಾದರೆ ಪತಿಯು ವಿವಾಹ ವಿಚ್ಛೇದನವನ್ನು ಪಡೆಯಬಹುದು. ವಿಧವಾ ವಿವಾಹಕ್ಕೂ ಇವರ

ಸಮ್ಮತಿ ಇದೆ. ಮಾವನ ಮನೆಯಲ್ಲಿಯೇ ವಾಸಿಸುವ ಅಳಿಯನು ಮಾವನ ಆಸ್ತಿಗೆ ವಾರಸುದಾರನಾಗುವ ಹಕ್ಕನ್ನು ಪಡೆಯುತ್ತಾನೆ. ಮೃತ ಪೂರ್ವಿಕರಿಗೆ ಕಾಲಕಾಲಕ್ಕೆ ಶ್ರಾದ್ಧ ಕರ್ಮಗಳನ್ನು ಇವರು ಮಾಡುವುದಿಲ್ಲ; ಆದರೆ, ಮೃತ ವ್ಯಕ್ತಿಗಳನ್ನು ತೃಪ್ತಿಪಡಿಸಲು ಮಹಾಲಯ ಅಮಾವಾಸ್ಯೆ ಕಾಲದಲ್ಲಿ ಬಾಳೆ ಎಲೆಯೊಂದರಲ್ಲಿ ಆಹಾರ ಪದಾರ್ಥಗಳು ಮತ್ತು ದಕ್ಷಿಣೆಯನ್ನು ಇಟ್ಟು ಪುರೋಹಿತನಿಗೆ ದಾನ ಮಾಡುವರು. ಜೊತೆಗೆ, ದಾಸಯ್ಯ ಮುಂತಾದ ಧಾರ್ಮಿಕ ಯಾಚಕರಿಗೆ ಆಹಾರ ಇತ್ಯಾದಿ ದಾನ ನೀಡುವರು.

ಬೆಸ್ತರಲ್ಲಿ ಶೈವರು ಮತ್ತು ವೈಷ್ಣವರು ಇದ್ದಾರೆ. ಶೈವ ಜೋಗಿಗಳು ಚುಂಚನಗಿರಿ (ಮಂಡ್ಯ ಜಿಲ್ಲೆ) ಯ ಭೈರೇದೇವರನ್ನು ಪೂಜಿಸುವರು. ವೈಷ್ಣವ ದಾಸರು ಬಿಳಿಗಿರಿರಂಗನ ಬೆಟ್ಟದ ರಂಗನಾಥನನ್ನು ಪೂಜಿಸುವರು. ತೊಳಸಮ್ಮ, ಮಾರಮ್ಮ, ಉತ್ತನಹಳ್ಳಿಯಮ್ಮ, ಪಾತಾಳಮ್ಮ, ಕಾಳಮ್ಮ, ಯಲ್ಲಮ್ಮ ಮುಂತಾದ ದೇವತೆಗಳ ಆರಾಧನೆಯನ್ನೂ ಇವರು ಮಾಡುತ್ತಾರೆ. ಈ ಜಾತಿಯ ಪೂಜಾರಿಗಳು ತಮ್ಮ ದೇವತೆಗಳಿಗೆಂದು ಕಟ್ಟಿರುವ ದೇಗುಲಗಳಲ್ಲಿ ನಿಯಮಿತವಾಗಿ ಪೂಜಾ ಕೈಂಕರ್ಯಗಳನ್ನು ನಡೆಸುತ್ತಾರೆ.

**ಬ್ರಾಹ್ಮಣರು:** ಬ್ರಾಹ್ಮಣರಲ್ಲಿ ಎರಡು ಮುಖ್ಯ ವಿಭಾಗಗಳಿವೆ; ವಿಂದ್ಯಪರ್ವತದ ಆಚೆಗಿನ ಪ್ರದೇಶದಿಂದ ಬಂದಿರುವರೆನ್ನಲಾದವರನ್ನು **'ಪಂಚಗೌಡ'** ಎಂತಲೂ ಅದರ ದಕ್ಷಿಣದಲ್ಲಿಯೇ ವಾಸಿಸುತ್ತಾ ಬಂದಿರುವವರನ್ನು **'ಪಂಚದ್ರಾವಿಡ'** ಎಂತಲೂ ಪರಿಗಣಿಸಲಾಗಿದೆ. ಪಂಚಗೌಡ ವಿಭಾಗದಲ್ಲಿ ಮಹಾರಾಷ್ಟ್ರ, ಆಂಧ್ರ, ದ್ರಾವಿಡ, ಕರ್ನಾಟಕ ಮತ್ತು ಗುಜರಾತಿ ವರ್ಗಗಳಿವೆ. ಈ ಎಲ್ಲ ಶಾಖೆಗಳ ಹೆಸರುಗಳು ಅವರುಗಳು ಅನೇಕ ಶತಮಾನಗಳ ಹಿಂದೆ ನೆಲೆಸಿದ್ದ ಪ್ರದೇಶಗಳ ಹೆಸರುಗಳಿದಲೇ ಬಂದವುಗಳಾಗಿವೆ. ಪಂಚಗೌಡ ವಿಭಾಗದ ಮೊದಲ ಮೂರು ಶಾಖೆಗಳು ಮತ್ತು ಪಂಚದ್ರಾವಿಡ ವಿಭಾಗದ ಐದನೇ ಶಾಖೆಗೆ ಸೇರಿದವರು ಚಾಮರಾಜನಗರ ಜಿಲ್ಲೆಯಲ್ಲಿ ಬಹಳ ವಿರಳವಾಗಿ ಕಂಡುಬರುತ್ತಾರೆ. ಪಂಚದ್ರಾವಿಡ ವಿಭಾಗದ ಮೊದಲ ನಾಲ್ಕು ಶಾಖೆಗಳ ಬ್ರಾಹ್ಮಣರು ಈ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿರುತ್ತಾರೆ. ಈ ನಾಲ್ಕು ಶಾಖೆಗಳಲ್ಲಿ ಕರ್ನಾಟಕ ಶಾಖೆಯ ಬ್ರಾಹ್ಮಣರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ವಿವಿಧ ಶಾಖೆಗಳ ನಡುವೆ ವೈವಾಹಿಕ ಸಂಬಂಧ ಏರ್ಪಡುತ್ತಿದ್ದುದು ಬಹಳ ಅಪರೂಪ. ಈ ಎಲ್ಲ ಶಾಖೆಯವರೂ ತಮ್ಮ ಮೂಲ ಭಾಷೆಗಳಿಗೇ ನಿಷ್ಠರಾಗಿದ್ದಾರೆ. ಇಡೀ ಬ್ರಾಹ್ಮಣ ವರ್ಗವನ್ನು ಅನೇಕ ಗೋತ್ರಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಏಳು ಪ್ರಧಾನ ಋಷಿಗಳನ್ನು (ಸಪ್ತರ್ಷಿ) ಬ್ರಾಹ್ಮಣರ ಮೂಲ ಗೋತ್ರ ಕರ್ತರೆಂದು ನಂಬಲಾಗಿದೆ. ಈ ಏಳು ಗೋತ್ರಗಳಿಂದ ಶಾಖೋಪಶಾಖೆಗಳಂತೆ ಅನೇಕ ಹೊಸ ಗೋತ್ರಗಳು ಕಾಲಕ್ರಮೇಣ ಕಾಣಿಸಿಕೊಂಡಿವೆ. ಹಿಂದಿನ ಮೈಸೂರು ಸಂಸ್ಥಾನವೊಂದರಲ್ಲಿಯೇ ೬೯ ಗೋತ್ರಗಳನ್ನು ಗುರ್ತಿಸಲಾಗಿತ್ತು. ಪ್ರತೀ ಬ್ರಾಹ್ಮಣ ಕುಟುಂಬದ ಗೋತ್ರ ಪರಂಪರೆಯನ್ನು (ಪುರಾತನ ವಂಶಾನುಕ್ರಮ) ಪ್ರವರ ಎಂದೆನ್ನುವರು. ಒಂದೇ ಗೋತ್ರ ಮತ್ತು ಪ್ರವರವುಳ್ಳ (ಸಗೋತ್ರ) ಓರ್ವ ಪುರುಷ ಮತ್ತು ಸ್ತ್ರೀ ನಡುವೆ ವಿವಾಹ ಸಂಬಂಧ ಏರ್ಪಡುವಂತಿಲ್ಲ. ಗೋತ್ರವನ್ನು ಸಂಪೂರ್ಣವಾಗಿ ಪುರುಷ ಪರಂಪರೆಯ ಪ್ರಕಾರವೇ ಗುರ್ತಿಸಲಾಗುತ್ತದೆ; ವಿವಾಹದ ನಂತರ ಆ ಸ್ತ್ರೀ ತನ್ನ ಪತಿಯ ಮನೆಯ ಗೋತ್ರಕ್ಕೇ ಸೇರುತ್ತಾಳೆ. ಈ ಕೆಳಗಿನ ಗೋತ್ರಗಳ ಅನುಯಾಯಿಗಳು ಅನುಕ್ರಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ ಎನ್ನಲಾಗಿದೆ:

| | |
|---|---|
| ಭಾರದ್ವಾಜ | ಗೌತಮ |
| ಕಶ್ಯಪ | ಜಮದಗ್ನಿ |
| ವಿಶ್ವಾಮಿತ್ರ | ಅಂಗೀರಸ |
| ವಶಿಷ್ಠ | ವಾಧುಲ |
| ಶ್ರೀವತ್ಸ | ಶಾಂಡಿಲ್ಯ |

| | |
|---|---|
| ಆತ್ರೇಯ | ಮೌದ್ಗಲ್ಯ |
| ಕೌಶಿಕ | ಮೌನ ಭಾರ್ಗವ |
| ಕೌಂಡಿನ್ಯ | ಗಾರ್ಗ್ಯಾಯನ |
| ಹಾರೀತ | ಶತಮರ್ಶಣ |

ಗೋತ್ರ ಮಾತ್ರವೇ ಅಲ್ಲದೆ ಪ್ರತೀ ಬ್ರಾಹ್ಮಣ ಕುಟುಂಬವೂ ಯಾವುದಾದರೊಂದು ವೈದಿಕ ಶಾಖೆ ಮತ್ತು ಸೂತ್ರಕ್ಕೆ ಸೇರಿರುವಂತೆ ಗಣಿಸಲ್ಪಡುತ್ತಾರೆ. ಇವು ಅವರು ನಡೆಸುವ ಪೂಜೆ, ಯಜ್ಞಗಳು ಮತ್ತು ಬೇರೆ ಕರ್ಮಾನುಷ್ಠಾನಕ್ಕೆ ಸಂಬಂಧಿಸಿರುತ್ತವೆ. ವೈದಿಕ ಶಾಖೆಗಳೆಂದರೆ ಋಗ್ವೇದೀಯ, ಯಜುರ್ವೇದೀಯ, ಸಾಮವೇದೀಯ ಮತ್ತು ಅಥರ್ವವೇದೀಯ. ಪ್ರತಿಯೊಂದು ವೈದಿಕ ಶಾಖೆಯವರೂ ಒಂದೋ ಆಪಸ್ತಂಭ ಸೂತ್ರಕ್ಕೆ ಸೇರಿದವರಾಗಿರಬೇಕು ಇಲ್ಲ ಅಶ್ವಲಾಯನ ಸೂತ್ರಕ್ಕೆ ಸೇರಿದವರಾಗಿರಬೇಕು.

ಚಾಮರಾಜನಗರ ಜಿಲ್ಲೆಯಲ್ಲಿರುವ ಬ್ರಾಹ್ಮಣರು, ಕರ್ನಾಟಕದ ಉಳಿದ ಜಿಲ್ಲೆಗಳ ಬ್ರಾಹ್ಮಣರಂತೆ, ಮೂರು ಪಂಥಗಳಲ್ಲಿ ಒಂದರೊಡನೆ ಗುರ್ತಿಸಲ್ಪಡುತ್ತಾರೆ: ಸ್ಮಾರ್ತ, ಮಾಧ್ವ ಮತ್ತು ಶ್ರೀ ವೈಷ್ಣವ. 'ಸ್ಮೃತಿ'ಯಿಂದ ಸ್ಮಾರ್ತರ ಹೆಸರು ಬಂದಿದೆ. ಸ್ಮೃತಿ ಅಥವಾ ಧರ್ಮ ಶಾಸ್ತ್ರಗಳು ಮನು, ಯಾಜ್ಞವಲ್ಕ್ಯ, ಪರಾಶರ, ನಾರದ ಮುಂತಾದ ಋಷಿ ಮುನಿಗಳಿಂದ ಸೂತ್ರ ರೂಪದಲ್ಲಿ ವ್ಯಕ್ತಗೊಳಿಸಲ್ಪಟ್ಟ ಗ್ರಂಥಗಳಾಗಿವೆ. ಸಮಾಜ ನ್ಯಾಯ ಶಾಸ್ತ್ರವೆಂದು ಅವುಗಳನ್ನು ಪರಿಗಣಿಸಲಾಗಿದೆ. ಸ್ಮಾರ್ತರು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಓಂಕಾರವೆಂಬ ಗೂಢಾರ್ಥವುಳ್ಳ ಅಕ್ಷರವನ್ನಾಗಿ ಪೂಜಿಸುತ್ತಾರೆ. ತ್ರಿಮೂರ್ತಿಗಳನ್ನು ಸಮಾನ ಸ್ಥಾನಮಾನವುಳ್ಳವರೆಂಬುದಾಗಿ ಒಪ್ಪಿಕೊಳ್ಳುವ ಸ್ಮಾರ್ತರು ಶಿವನನ್ನು ತಮ್ಮ ಮುಖ್ಯವಾದ ದೇವರೆಂದು ಮಾನ್ಯ ಮಾಡುತ್ತಾರೆ. ಇವರು ಅದ್ವೈತ ಸಿದ್ಧಾಂತದಲ್ಲಿ ನಂಬಿಕೆ ಉಳ್ಳವರು. ಸ್ಮಾರ್ತ ಪಂಥವನ್ನು ಆಚಾರ್ಯ ಶ್ರೀ ಶಂಕರರು (ಕ್ರಿ.ಶ ೭೮೮-೮೨೦) ಸ್ಥಾಪಿಸಿದರು ಮತ್ತು ಶೃಂಗೇರಿ ಮಠಾಧಿಪತಿ ಸ್ಮಾರ್ತರ ಗುರುಗಳಾಗಿದ್ದಾರೆ. ಶ್ರೀವೈಷ್ಣವ ಪಂಥವನ್ನು ಶ್ರೀ ರಾಮಾನುಜಾಚಾರ್ಯರು ಕ್ರಿ.ಶ ೧೨ನೆಯ ಶತಮಾನದಲ್ಲಿ ಸ್ಥಾಪಿಸಿದರು. ಇವರು ಬೋಧಿಸಿದ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಪರಮಾತ್ಮ ಅಥವಾ ಬ್ರಹ್ಮವು 'ಚಿತ್' 'ಅಚಿತ್' ಎಂಬ ಎರಡು ವಿಶೇಷಣಗಳನ್ನುಳ್ಳದ್ದು. ಈ ವಿಶಿಷ್ಟವಾದ, ವಿಶೇಷಣಗಳಿಂದ ಕೂಡಿದ ಬ್ರಹ್ಮವು ಏಕಮೇವಾದ್ವಿತೀಯವಾಗಿದೆ. ಶ್ರೀ ಮಧ್ವಾಚಾರ್ಯರ (೧೩ನೇ ಶತಮಾನ) ಅನುಯಾಯಿಗಳನ್ನು ದ್ವೈತಿಗಳೆಂದು ಕರೆಯುವರು. ಜೀವ ಜಗತ್ತು, ಪರಮಾತ್ಮ ಇವರೊಳಗೆ ಇಹ ಮತ್ತು ಪರಗಳಲ್ಲಿ ಪಾರಮಾರ್ಥಿಕ ಭೇದವಿದೆ ಎಂಬುದೇ ಇವರ ಸಿದ್ಧಾಂತ.

ಮೇಲಿನ ಮೂರೂ ಪಂಥಗಳು ಎರಡೆರಡು ಉಪಪಂಥಗಳನ್ನು ಹೊಂದಿವೆ. ಸ್ಮಾರ್ತರಲ್ಲಿ ಅಚ್ಚ ಸ್ಮಾರ್ತ ಮತ್ತು ಭಾಗವತ ಸಂಪ್ರದಾಯ; ಮಾಧ್ವರಲ್ಲಿ ವ್ಯಾಸಕೂಟ ಮತ್ತು ದಾಸಕೂಟ; ಮತ್ತು ಶ್ರೀವೈಷ್ಣವರಲ್ಲಿ ತೆಂಗಲೈ ಮತ್ತು ವಡಗಲೈ. ಸಾಮಾನ್ಯವಾಗಿ ಶ್ರೀವೈಷ್ಣವರು ತಮಿಳು ಭಾಷಿಕರು; ಆದರೆ, ತೆಲುಗು ಭಾಷಿಕ ಶ್ರೀವೈಷ್ಣವರೂ ಇರುವುದುಂಟು.

ಶ್ರೀವೈಷ್ಣವರಲ್ಲಿ ಕಂಡುಬರುವ ಉಪಶಾಖೆಗಳೆಂದರೆ ಭಟ್ಟರಾಚಾರ್ಯ, ಮಂಡ್ಯತ್ತಾರ್, ಮತ್ತು ಹೆಬ್ಬಾರ್ ಇತ್ಯಾದಿ. ಸ್ಮಾರ್ತ ಮತ್ತು ಮಾಧ್ವರಲ್ಲಿಯೂ ಅನೇಕ ಉಪಶಾಖೆಗಳಿವೆ. ಸ್ಮಾರ್ತ ಉಪಶಾಖೆಗಳೆಂದರೆ, ಹೊಯ್ಸಳ ಕರ್ನಾಟಕ, ಸೀರ್ನಾಡು, ಬಡಗನಾಡು, ಬಬ್ಬೂರುಕಮ್ಮೆ, ಉಲುಚುಕಮ್ಮೆ, ಸಂಕೇತಿ, ಮೂಗೂರು ಅಥವಾ ಹಳೇ ಕರ್ನಾಟಕ, ಮುರಿಕನಾಡು, ವೇಳನಾಡು, ಪ್ರಥಮ ಶಾಖೆ, ಇತ್ಯಾದಿ. ಮಾಧ್ವ ಉಪಶಾಖೆಗಳೆಂದರೆ, ಬಡಗನಾಡು, ಅರವೇಲು, ಅರವತ್ತು ಒಕ್ಕಲು, ದೇಶಸ್ಥ ಇತ್ಯಾದಿ.

ಈ ಪ್ರತಿಯೊಂದು ಉಪಶಾಖೆಯಲ್ಲಿಯೂ ಪುರೋಹಿತ ವೃತ್ತಿ ಮತ್ತು ದಯಾಧರ್ಮದಿಂದ ಜೀವಿಸುವ ವೈದಿಕರೆಂದು ಕರೆಯಲಾಗುವ ಒಂದು ಭಾಗ ಮತ್ತು ಲೌಕಿಕರೆಂಬ ಇನ್ನೊಂದು ಭಾಗ ಇರುತ್ತವೆ. ಆದರೆ ಈ ಭೇದವು ಹೆಚ್ಚುಕಡಿಮೆ ವೈಯುಕ್ತಿಕವಾದುದು. ಏಕೆಂದರೆ, ಒಂದೇ ಕುಟುಂಬದ ಬೇರೆ ಬೇರೆ ಸದಸ್ಯರಲ್ಲಿ ಕೆಲವರು ವೈದಿಕ ಬ್ರಾಹ್ಮಣರಾಗಿರಬಹುದು ಅಥವಾ ಲೌಕಿಕ ಬ್ರಾಹ್ಮಣರಾಗಿರಬಹುದು. ಅವರವರ ಇಚ್ಛಾನುಸಾರವಾಗಿ. ಈಗೀಗ ಈ ಭೇದವು ಮಾಯವಾಗುತ್ತಿದೆ. ಹೊಸ ಜೀವನ ಶೈಲಿ ಮತ್ತು ವೈದಿಕ ವೃತ್ತಿಯಿಂದ ಜೀವನ ಮಾಡಲು ಸಾಕಷ್ಟು ದ್ರವ್ಯ ಸಂಪಾದನೆಯಾಗದಿರುವುದೇ ಇದಕ್ಕೆ ಕಾರಣ. ಪಾರಂಪರಿಕ ಪುರೋಹಿತ ವೃತ್ತಿ ಮತ್ತು ವೈದಿಕ ಸಾಹಿತ್ಯ ಬೋಧನೆಯಿಂದ ಜೀವನ ಸಾಗಿಸುತ್ತಿರುವ ಬ್ರಾಹ್ಮಣರ ಸಂಖ್ಯೆ ಇತ್ತೀಚಿನ ದಶಕಗಳಲ್ಲಿ ಬಹಳವಾಗಿ ಕ್ಷೀಣಿಸಿದೆ.

ಎಲ್ಲ ಬ್ರಾಹ್ಮಣರು ಸಂಸ್ಕಾರ ಕ್ರಿಯೆಗಳಿಗೆ ಒಳಗಾಗಬೇಕೆಂಬ ಕಟ್ಟಳೆಯಿದೆ. ಸಂಸ್ಕಾರವೆಂದರೆ, ಕೆಲವು ನಿರ್ದಿಷ್ಟವಾದ ಕ್ರಮದ ಕರ್ಮದಿಂದ ಜೀವಿಯ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಏಳ್ಗೆಗೆ ಅನುಕೂಲವಾಗುವಂತೆ ದೇಹವನ್ನು ಪವಿತ್ರಗೊಳಿಸುವ ಕ್ರಿಯೆ. ಶಾಸ್ತ್ರಗ್ರಂಥಗಳಲ್ಲಿ ೫೨ ಸಂಸ್ಕಾರಗಳನ್ನು ಹೇಳಲಾಗಿದೆ. ಅವುಗಳಲ್ಲಿ ಮುಖ್ಯವಾದ ಹದಿನಾರನ್ನು ಷೋಡಶ ಸಂಸ್ಕಾರಗಳೆನ್ನುವರು. (೧) ಗರ್ಭದಾನ (೨) ಪುಂಸವನ (೩) ಸೀಮಂತೋನ್ನಯನ (೪)ಜಾತಕರ್ಮ, (೫)ನಾಮಕರಣ, (೬) ಉಪನಿಷ್ಕ್ರಮಣ, (೭) ಅನ್ನಪ್ರಾಶನ, (೮)ಚೂಡಾಕರ್ಮ, (೯)ಕರ್ಣವೇಧ, (೧೦)ವಿದ್ಯಾರಂಭ, (೧೧)ಉಪನಯನ, (೧೨) ವೇದಾರಂಭ, (೧೩)ಕೇಶಾಂತ, (೧೪)ಸಮಾವರ್ತನ, (೧೫)ವಿವಾಹ, (೧೬)ಅಂತ್ಯೇಷಿ. ಇವುಗಳಲ್ಲಿ ಕೆಲವು ಸಂಸ್ಕಾರಗಳನ್ನು ಬ್ರಾಹ್ಮಣರು ಮಾತ್ರವೇ ಅಲ್ಲದೆ ಉಳಿದ ಹಿಂದೂ ಜಾತಿಗಳ ಜನರೂ ಮಾಡಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಬ್ರಾಹ್ಮಣರು 'ಬ್ರಹ್ಮ' ವಿವಾಹ ವಿಧಿ, ಸಾಲಂಕೃತ ಕನ್ಯಾದಾನವನ್ನು ಅನುಸರಿಸುತ್ತಾರೆ. ಈ ವಿವಾಹ ಪದ್ಧತಿಯಲ್ಲಿ ಪಾಣಿಗ್ರಹಣ, ಲಾಜಹೋಮ, ಸಪ್ತಪದಿ, ಸ್ಥಳಿಪಾಕ ಇತ್ಯಾದಿ ವಿಸ್ತಾರವಾದ ಅನೇಕ ಧಾರ್ಮಿಕ ವಿಧಿಗಳು ಮತ್ತು ಆಚರಣೆಗಳು ಇರುತ್ತವೆ.

ಕೆಲವೇ ದಶಕಗಳ ಹಿಂದೆ ಭಯಾನಕ ಪ್ರಮಾಣ ತಲುಪಿದ್ದ ವಿವಾಹ ಕಾಲದಲ್ಲಿ ನೀಡುವ ವರದಕ್ಷಿಣೆ ಪದ್ಧತಿ, ಈಗ ಅಂತಹ ಪ್ರಮುಖ ಸಮಸ್ಯೆಯಾಗುಳಿದಿಲ್ಲ. ಸ್ವಮತಸ್ಥರಲ್ಲಿ ಮತ್ತು ಉಪಶಾಖೆಗಳ ನಡುವೆ ಪರಸ್ಪರ ವಿವಾಹ ಸಂಬಂಧ ಬೆಳೆಸಲು ಬೆಂಬಲ ವ್ಯಕ್ತವಾಗುತ್ತಿದೆ. ಅದೇ ರೀತಿ, ಅನ್ಯ ಭಾಷಿಕ ಬ್ರಾಹ್ಮಣರೊಡನೆ ವಿವಾಹ ಸಂಬಂಧ ಬೆಳೆಸಲೂ ವಿರೋಧ ಕಂಡುಬರುತ್ತಿಲ್ಲ. ವಿವಾಹ ವಿಚ್ಛೇದನಕ್ಕೆ ಈಗಲೂ ಸಾಕಷ್ಟು ವಿರೋಧವಿದೆಯಾದರೂ ಬಲವಾದ ಮತ್ತು ನಿವಾರಿಸಲಾಗದ ಕಾರಣಗಳಿದ್ದಲ್ಲಿ ತೆಗೆದುಕೊಳ್ಳಬಹುದಾಗಿದೆ. ವಿಧವಾ ಮರುವಿವಾಹಕ್ಕೆ ಬ್ರಾಹ್ಮಣರಲ್ಲಿ ಇನ್ನೂ ಏಕಾನುಮತವಿಲ್ಲ. ಇನ್ನುಳಿದಂತೆ ವಿಧವೆಯರ ಜೀವನ ಶೈಲಿ ಮತ್ತು ಸ್ಥಾನಮಾನಗಳಲ್ಲಿ ಹಿಂದಿಗಿಂತ ಸಾಕಷ್ಟು ಸುಧಾರಣೆಯಾಗಿದೆ.

ಬ್ರಾಹ್ಮಣರು ಶವವನ್ನು ಚಿತೆಯಲ್ಲಿಟ್ಟು ದಹಿಸುತ್ತಾರೆ. ಜ್ಞಾತಿಗಳು ಹತ್ತು ದಿನಗಳ ಕಾಲ ಸೂತಕವನ್ನು ಆಚರಿಸುತ್ತಾರೆ. ಮರಣಾನಂತರ ದೇಹ ತ್ಯಜಿಸಿ ಹೊರಹೋಗುವ ಆತ್ಮವು ಯಮಲೋಕದಲ್ಲಿ ಹೊಸ ದೇಹ ದೊರಕಿಸಿಕೊಂಡು ಅಲ್ಲಿಂದ ಪಿತೃ ಲೋಕಕ್ಕೆ ತೆರಳಲು ಅನುಕೂಲವಾಗಲೆಂಬ ಉದ್ದಿಶ್ಯದಿಂದ ಶ್ರಾದ್ಧಕರ್ಮಗಳನ್ನು ನಡೆಸಲಾಗುತ್ತದೆ. ಮರಣಾನಂತರ ನಡೆಸುವ ಅಂತ್ಯೇಷ್ಟಿ ಸಂಸ್ಕಾರವು ಹದಿನಾಲ್ಕು ದಿನಗಳಲ್ಲಿ ಪೂರ್ಣಗೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದ ವಿಧಿಬದ್ಧ ಆಚರಣೆಗಳನ್ನು ಆ ವ್ಯಕ್ತಿ ಮರಣಿಸಿದ ಮೂರು, ಐದು, ಏಳು, ಒಂಬತ್ತು

ಮತ್ತು ಹನ್ನೆರಡನೇ ದಿನಗಳಂದು ನಡೆಸುತ್ತಾರೆ. ಹದಿಮೂರನೇ ದಿನದಂದು ಮಾಸಿಕವನ್ನಾಚರಿಸಿ ಹದಿನಾಲ್ಕನೇ ದಿನ ಆಚರಣೆಯನ್ನು ಮುಗಿಸಿ ಬಂಧುಬಾಂಧವರಿಗೆ ಭೋಜನ ಮಾಡಿಸುತ್ತಾರೆ. ಇದಾದ ನಂತರ ಪ್ರತೀ ತಿಂಗಳೂ, ಮಾಸಿಕ ಶ್ರಾದ್ಧವನ್ನು ಮಾಡುತ್ತಿದ್ದು, ವರ್ಷದ ಕೊನೆಯಲ್ಲಿ ಪ್ರಥಮ ವರ್ಷದ ಶ್ರಾದ್ಧವನ್ನು ಆಚರಿಸುತ್ತಾರೆ. ಇದಾದ ನಂತರ ಶ್ರಾದ್ಧಕರ್ತನು ಜೀವಂತ ಇರುವವರೆಗೆ ಪ್ರತಿ ವರ್ಷವೂ 'ವಾರ್ಷಿಕ ಶ್ರಾದ್ಧ' ವನ್ನು ಆಚರಿಸಬೇಕು. ಅರ್ಘ್ಯ, ಹವನ, ಬ್ರಾಹ್ಮಣ ಭೋಜನ, ಪಿಂಡ ಪ್ರಧಾನ, ವಿಕಿರ, ದಕ್ಷಿಣೆ, ತರ್ಪಣ ಇವು ಶ್ರಾದ್ಧಾಂಗಗಳು. ನಿಮಂತ್ರಣ ಮಾಡಿದ ಬ್ರಾಹ್ಮಣರನ್ನು ಪೂಜಿಸಿ ಅವರಲ್ಲಿ ಮೂರು ತಲೆಮಾರಿನ ಗತಿಸಿದ ಪಿತೃಗಳನ್ನು ಆವಾಹಿಸಿ ಭೋಜನದಿಂದ ತೃಪ್ತಿಪಡಿಸುವುದು ಇದರಲ್ಲಿ ಸೇರಿದೆ. ದರ್ಭೆ, ಎಳ್ಳು, ಶ್ರಾದ್ಧದಲ್ಲಿ ಬಳಸುವ ಪ್ರಮುಖ ವಸ್ತುಗಳು. ಶ್ರಾದ್ಧಕಾಲದಲ್ಲಿ ಪಿತೃಗಳು ಬಂದು ಉಪಸ್ಥಿತರಿದ್ದು ಹರಸಿ ಆರೋಗ್ಯ, ಐಶ್ವರ್ಯ, ಮಕ್ಕಳು, ಭೋಗ ಭಾಗ್ಯಗಳನ್ನು ದಯಪಾಲಿಸುತ್ತಾರೆ ಎಂದು ನಂಬುವರು. ನಿತ್ಯ, ನೈಮಿತ್ತಿಕ, ಕಾಮ್ಯ, ಸಪಿಂಡ, ಪಾರ್ವಣ, ಯಾತ್ರಾ ಮುಂತಾದ ಹನ್ನೆರಡು ವಿಧದ ಶ್ರಾದ್ಧಗಳಿವೆ.

ಬದಲಾವಣೆಯ ಹೊಸ ಒಲವು ಏನೇ ಇದ್ದರೂ, ಬ್ರಾಹ್ಮಣರು ತಮ್ಮ ಪಾರಂಪರಿಕ ವೃತ್ತಿಗಳಾದ ವೇದಾಧ್ಯಯನ ಮತ್ತು ಬೋಧನೆ, ಹೋಮಹವನ, ಯಜ್ಞಾದಿಗಳ ಆಚರಣೆ ಮುಂತಾದವನ್ನು ಇನ್ನೂ ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಆದರೆ ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ಅವರು ಜೀವನೋಪಾಯಕ್ಕಾಗಿ ಶಿಕ್ಷಣ ಪಡೆದು ಹೊಸಹೊಸ ಉದ್ಯೋಗಗಳು, ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಸೇವಾರಂಗಗಳಲ್ಲಿ ಉತ್ಸಾಹದಿಂದ ಕಂಡುಬರುತ್ತಿದ್ದಾರೆ. ವಿದೇಶಗಳಲ್ಲಿ ಉದ್ಯೋಗ ಕೈಗೊಳ್ಳುವವರಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

**ಗಾಣಿಗರು:** ಗಾಣಿಗರ ಸಾಂಪ್ರದಾಯಿಕ ಉದ್ಯೋಗವೆಂದರೆ ಗಾಣದಿಂದ ಎಣ್ಣೆ ತಯಾರಿಸುವುದು. ಆಧುನಿಕ ಎಣ್ಣೆ ಗಿರಣಿಗಳ ಆಗಮನಾನಂತರ, ಕ್ರಮೇಣ ಗಾಣದಿಂದ ಎಣ್ಣೆ ಹಿಂಡುವ ಉದ್ಯೋಗ ಹೆಚ್ಚುಕಡಿಮೆ ಮಾಯವಾಗಿದೆ. ಈಗ ಜೀವನ ನಿರ್ವಹಣೆಗಾಗಿ ಗಾಣಿಗರು ಕೃಷಿ ಮತ್ತು ಇತರೆ ಬೇರೆ ಬೇರೆ ನೌಕರಿ ಹಿಡಿದಿದ್ದಾರೆ. ವಾಸಸ್ಥಳ ಮತ್ತು ವಿಶೇಷ ಪದ್ಧತಿಗಳ ಆಧಾರದ ಮೇಲೆ ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವುದುಂಟು. ಯಾರು ಅವರ ಕಲ್ಲಿನ ಎಣ್ಣೆ ಗಾಣಗಳಿಗೆ ಜೋಡಿ ಎತ್ತುಗಳನ್ನು ಹೂಡುತ್ತಿದ್ದರೋ ಅವರನ್ನು 'ಹೆಗ್ಗಾಣಿಗ' ಎಂದು ಕರೆದರೆ, ಮರದ ಎಣ್ಣೆ ಗಾಣಗಳಲ್ಲಿ ಕೆಲಸ ಮಾಡುವವರನ್ನು 'ಕಿರುಗಾಣಿಗ' ಎಂದು ಕರೆಯುತ್ತಾರೆ. ಒಂದೇ ಎತ್ತನ್ನು ಗಾಣಕ್ಕೆ ಹೂಡುತ್ತಿದ್ದವರನ್ನು 'ಒಂಟಿಎತ್ತು ಗಾಣಿಗ' ಎಂದು ಕರೆಯುತ್ತಾರೆ. ಈ ಬೇರೆ ಬೇರೆ ಗಾಣಿಗ ಪಂಗಡಗಳ ನಡುವೆ ಸಹಪಂಕ್ತಿ ಭೋಜನವಾಗಲೀ ವಿವಾಹ ಸಂಬಂಧವಾಗಲೀ ಸಾಧ್ಯವಿರಲಿಲ್ಲ. ಇಡೀ ಗಾಣಿಗ ಸಮುದಾಯವನ್ನು ಒಟ್ಟಾಗಿ 'ಜೋತಿಪಣ' ಅಥವಾ 'ಜೋತಿನಾಗರ' ಎಂದು ಕರೆಯುವುದೂ ಉಂಟು. ಹಿಂದೆ ಇಡೀ ಸಮಾಜಕ್ಕೆ ಅವರು ದೀಪಗಳನ್ನು ಉರಿಸಲು ಬೇಕಾದ ತೈಲವನ್ನು ತಯಾರಿಸಿ ಸರಬರಾಜು ಮಾಡುತ್ತಿದ್ದುದೇ ಇದಕ್ಕೆ ಕಾರಣವೆನ್ನಲಾಗಿದೆ. ಇವರು ೯-ಫಣ ವಿಭಾಗಕ್ಕೆ ಸೇರಿದವರಾಗಿದ್ದು ನಗರ್ತರೊಡನೆ ಅದರ ಮುಂದಾಳತ್ವ ವಹಿಸುತ್ತಿದ್ದರು. ಗಾಣಿಗರಲ್ಲಿ ಶೈವರು ಮತ್ತು ವೈಷ್ಣವರೂ ಇರುತ್ತಾರೆ. ಇವರಲ್ಲಿನ 'ಸಜ್ಜನ' ಎಂಬ ಗುಂಪಿನವರು ಲಿಂಗಧಾರಣೆ ಮಾಡುತ್ತಾರೆ ಮತ್ತು ಇನ್ನುಳಿದ ಗಾಣಿಗ ಪಂಗಡದವರೊಡನೆ ಯಾವುದೇ ರೀತಿಯ ಸಾಮಾಜಿಕ ವ್ಯವಹಾರಗಳನ್ನು ಇಟ್ಟುಕೊಳ್ಳುವುದಿಲ್ಲ. ಈ ಪಂಗಡದವರು ಸಸ್ಯಾಹಾರಿಗಳು. ಶೈವ ಗಾಣಿಗರು ಜಂಗಮರು ಮತ್ತು ಲಿಂಗ ಬಣಜಿಗರನ್ನು ತಮ್ಮ ಗುರುಗಳೆಂದು ಭಾವಿಸುತ್ತಾರೆ. ಉಳಿದವರು ಶ್ರೀವೈಷ್ಣವ ಬ್ರಾಹ್ಮಣ ಪುರೋಹಿತರನ್ನು ಧಾರ್ಮಿಕ ವಿಧಿಗಳ ಆಚರಣೆ ಸಂಬಂಧ ಕರೆಯುತ್ತಾರೆ. ಇವರಲ್ಲಿ

ವಿಧವಾ ಮರುವಿವಾಹಕ್ಕೆ ಇನ್ನೂ ಹೆಚ್ಚಿನ ಬೆಂಬಲ ವ್ಯಕ್ತವಾಗುತ್ತಿಲ್ಲ. ಮಹಾನವಮಿ ಹಬ್ಬ ಮುಖ್ಯವಾದುದು. ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದೆ. ಧರ್ಮಸ್ಥಳ, ಮಹದೇಶ್ವರ ಬೆಟ್ಟ ಮುಂತಾದವು ಇವರ ಯಾತ್ರಾಸ್ಥಳಗಳು.

**ಜಟ್ಟಿ:** ಜಟ್ಟಿಗಳು ವೃತ್ತಿ ನಿರತ ಮಲ್ಲರು ಮತ್ತು ಅಂಗಸಾಧನೆಯಲ್ಲಿ ಪ್ರವೀಣರು. ಚಾಮರಾಜನಗರ ಮತ್ತು ನೆರೆಯ ಮೈಸೂರು ಜಿಲ್ಲೆಯಲ್ಲಿ ಇವರ ಸಂಖ್ಯಾ ಬಾಹುಳ್ಯವಿದೆ. 'ಮಲ್ಲ ಕ್ಷತ್ರಿಯ' ಅಥವಾ 'ಚಾಣೂರ ಮಲ್ಲ'ರೆಂದು ಕರೆದುಕೊಳ್ಳುವ ಇವರು ತಮ್ಮ ಹೆಸರಿನ ಮುಂದೆ ಜಟ್ಟಿ ಎಂಬ ಅಂತ್ಯ ಪ್ರತ್ಯಯವನ್ನು ಸೇರಿಸಿಕೊಂಡಿರುತ್ತಾರೆ. ಮೂಲತಃ ದೆಹಲಿ ಮತ್ತು ಮಥುರಾ ಪ್ರದೇಶದಿಂದ ಬಂದಿರುವುದಾಗಿ ಸಾಧಿಸುವ ಇವರು ಮಲ್ಲು ಎಂಬ ಒಂದು ಇಂಡೋ-ಆರ್ಯನ್ ಉಪಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿರುವ ಶಾಖೆಗಳೆಂದರೆ ದೊಡ್ಡ ಗುಂಪು ಮತ್ತು ಸಣ್ಣಗುಂಪು. ಇದರ ಜೊತೆಗೆ, ಶ್ರೀರಂಗಪಟ್ಟಣ ಮತ್ತು ಮೈಸೂರು ಗುಂಪುಗಳೆಂಬ ಮತ್ತೆರಡು ಉಪ-ಶಾಖೆಗಳು ಇವೆ. ತಮ್ಮ ಬಾಲಕರಿಗೆ ಉಪನಯನ ಸಂಸ್ಕಾರವನ್ನು ನಡೆಸುವ ಇವರು ಯಜ್ಞೋಪವೀತಧಾರಣೆಯನ್ನು ಮಾಡುತ್ತಾರೆ. ಈ ಎಲ್ಲ ಗುಂಪುಗಳ ನಡುವೆ ಸಹಪಂಕ್ತಿ ಭೋಜನ ಮತ್ತು ವಿವಾಹ ಸಂಬಂಧ ಉಂಟು. ಬ್ರಾಹ್ಮಣರಂತೆ ಗೋತ್ರಗಳಿರುವ ಇವರ ಮನೆತನದ ಹೆಸರುಗಳನ್ನೂ ಇಟ್ಟುಕೊಳ್ಳುತ್ತಾರೆ-ತಿಪುರವಾಂಡ್ಲು, ಐರಾವತವಾಂಡ್ಲು, ನಾಕವಾಂಡ್ಲು, ಇತ್ಯಾದಿ. ವೈದಿಕ ವಿಧಿಗಳಂತೆ ವಿವಾಹ ಮಾಡುವರು. ಎಲ್ಲ ಹಿಂದೂ ದೇವಾನುದೇವತೆಗಳನ್ನೂ ಇವರು ಪೂಜಿಸುವರಾದರೂ, ನಿಂಬುಜಾದೇವಿ ಬಗ್ಗೆ ವಿಶೇಷ ಒಲವುಳ್ಳವರಾಗಿದ್ದಾರೆ. ಇವರ ಎಲ್ಲ ಧಾರ್ಮಿಕ ವಿಧಿಗಳೂ ಸ್ಮಾರ್ತ ಬ್ರಾಹ್ಮಣ ಪುರೋಹಿತರಿಂದಲೇ ನಡೆಸಲ್ಪಡುತ್ತವೆ. ಶ್ರಾವಣ ಮಾಸದ ಹುಣ್ಣಿಮೆಯಂದು ಇವರು ಮಟ್ಟಿ ಪೂಜೆ (ಕುಸ್ತಿ ಮಾಡುವ ಅಂಗಳ) ನಡೆಸುವರು. ಇವರಲ್ಲಿ ಸತ್ತವರನ್ನು ಚಿತೆಯಲ್ಲಿಟ್ಟು ಸುಡುವ ಪದ್ಧತಿ ಇದೆ. ವೈದಿಕ ರೀತಿಯಲ್ಲಿ ಶ್ರಾದ್ಧಕರ್ಮಗಳನ್ನು ನೆರವೇರಿಸುವರು. ಇವರ ಸಾಂಪ್ರದಾಯಿಕ ವೃತ್ತಿ ಕುಸ್ತಿ ಅಥವಾ ಮಲ್ಲ ಯುದ್ಧ ಮಾಡುವುದಾಗಿತ್ತು. ಜೊತೆಗೆ ತಾಲೀಂಖಾನೆಗಳಲ್ಲಿ ಕುಸ್ತಿ ಪಟುಗಳು ಮತ್ತು ಅಂಗಸಾಧನೆ ಮಾಡುವವರಿಗೆ ತರಬೇತಿ ನೀಡುತ್ತಲೂ ಇದ್ದರು. ಹಿಂದೆ ಇದಕ್ಕೆ ಇದ್ದ ರಾಜಾಶ್ರಯ ಮತ್ತು ಸಾರ್ವಜನಿಕ ಸಹಾಯ ಕೈತಪ್ಪಿ ಹೋಗಿರುವ ಕಾರಣ ಈಗ ಕೃಷಿ ವ್ಯಾಪಾರ, ಕೈಗಾರಿಕೆ, ಸರ್ಕಾರಿ ಸೇವೆ ಮುಂತಾದ ರಂಗಗಳಲ್ಲಿ ದುಡಿಯುತ್ತಿದ್ದಾರೆ.

**ಲಿಂಗಾಯತರು:** ಈ ಸಮುದಾಯದವರು ರಾಜ್ಯಾದ್ಯಂತ ಹರಡಿಕೊಂಡಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರು ಕೃಷಿ, ವಾಣಿಜ್ಯ, ಸರ್ಕಾರಿ ಸೇವೆ ಮತ್ತು ಅನೇಕ ಬೇರೆ ಬೇರೆ ಕಸುಬುಗಳು ಮತ್ತು ಸೇವೆಗಳು, ಮುಂತಾದ ಎಲ್ಲ ವೃತ್ತಿಗಳಲ್ಲಿಯೂ ಇದ್ದಾರೆ. ಲಿಂಗಾಯತ ಪದವು ಕೇವಲ ಒಂದೇ ಜಾತಿಗೆ ಸೀಮಿತವಾಗಿರದೇ ಅನೇಕ ಜಾತಿಗಳ ಸಮೂಹಕ್ಕೆ ನೀಡಲಾಗಿರುವ ಹೆಸರು ಎನ್ನುವುದೇ ಸೂಕ್ತ. ಇದು ಜನಪ್ರಿಯ ಹೆಸರಾದರೂ ಈ ಜಾತಿಯ ಜನರು ತಮ್ಮನ್ನು ವೀರಶೈವರು, ಶಿವಭಕ್ತರು ಅಥವಾ ಶಿವಾಚಾರದವರು ಎಂದು ಕರೆದುಕೊಳ್ಳುತ್ತಾರೆ.

ಇವರಲ್ಲಿ ವಿರಕ್ತ ಪರಂಪರೆ ಮತ್ತು ಜಗದ್ಗುರು ಪರಂಪರೆಗಳಿವೆ. ವೀರಶೈವ ಧರ್ಮವು ಶೈವಧರ್ಮದ ಅನೇಕ ಶಾಖೆಗಳಲ್ಲೊಂದಾಗಿದೆ. ಕಾಶ್ಮೀರ ಶೈವ ಸಿದ್ಧಾಂತದಂತೆ ವೀರಶೈವ ಸಿದ್ಧಾಂತಕ್ಕೂ ಇಪ್ಪತ್ತೆಂಟು ಶೈವಾಗಮಗಳೇ ಮೂಲವೆಂದು ಅನೇಕರ ಅಭಿಪ್ರಾಯ. ಆದರೆ, ಪ್ರೊಫೆಸರ್ ಎಸ್.ಎಸ್. ಬಸವನಾಳ,

ಎಸ್.ಸಿ. ನಂದಿಮಠ ಮುಂತಾದ ವಿದ್ವಾಂಸರ ಪ್ರಕಾರ ವಚನ ರಾಶಿಯೇ ವೀರಶೈವ ಮತದ ಮೂಲಾಧಾರ. ಬಸವೇಶ್ವರನು ಪೂರ್ವದಲ್ಲಿಯೇ ಇದ್ದ ವೀರಶೈವ ಮತವನ್ನು ಸುಧಾರಿಸಿ ಪುನರುಜ್ಜೀವನಗೊಳಿಸಿ ಅದಕ್ಕೆ ಹೊಸ ಆಯಾಮವನ್ನು ಕೊಟ್ಟನು.

ಲಿಂಗಾಯತ ಮತವನ್ನು ಬಹಳ ಹಿಂದಿನಿಂದ ಅನೇಕ ಜಾತಿಗಳವರು ಒಪ್ಪಿಕೊಂಡಿದ್ದಾರೆ. ಒಂದಲ್ಲ ಒಂದು ಕಾಲದಲ್ಲಿ ಇದರ ಪ್ರಭಾವಕ್ಕೆ ಸಿಲುಕಿದವರಲ್ಲಿ ಅಗಸರು, ಆರಾಧ್ಯರು, ಬಜಂತ್ರಿಗಳು, ಬಳೆಗಾರರು, ಬಣಜಿಗರು, ಬಣಕಾರರು, ಬಿಳಿಮಗ್ಗದವರು, ಗಾಣಿಗರು, ನೇಯ್ಗೆಯವರು, ಹೂಗಾರರು, ಹೆಳವರು, ಕುರುಬರು, ಕುಂಬಾರರು ಕುಂಚಿಟಿಗರು, ಕುರುಹಿನ ಶೆಟ್ಟಿಯವರು, ಪಾಂಚಾಳರು, ನೊಣಬರು, ಸಾದರು, ಶೀಲವಂತರು, ಉಪ್ಪಾರರು, ಮುಂತಾದವರಿದ್ದಾರೆ. ಈ ಜಾತಿಗಳ ಎಲ್ಲ ಶಾಖೆಯವರೂ ಲಿಂಗಾಯತ ಮತದ ಪ್ರಭಾವಕ್ಕೆ ಒಳಗಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಲಿಂಗಾಯತ ಶಾಖೆಗಳವರು ಲಿಂಗಾಯತರಲ್ಲದ ಶಾಖೆಗಳಿಂದ ಹೆಣ್ಣು ತರುವವರಾದರೂ ಲಿಂಗಧಾರಣೆ ಸಂಸ್ಕಾರವನ್ನು ನೆರವೇರಿಸಿದ ನಂತರವೇ ವಿವಾಹ ನಡೆಸುವರು. ಸಾಮಾನ್ಯವಾಗಿ ಲಿಂಗಾಯತ ಕನ್ಯೆಯರನ್ನು ಲಿಂಗಾಯತರಲ್ಲದ ಜಾತಿ ಅಥವಾ ಶಾಖೆಗಳವರಿಗೆ ಕೊಡುವುದಿಲ್ಲ. ಲಿಂಗಾಯತ ಮತವನ್ನು ಅಂಗೀಕರಿಸಿರುವ ಜಾತಿ ಅಥವಾ ಶಾಖೆಯವರು ಸಾಮಾನ್ಯವಾಗಿ ತಮ್ಮ ವಾಡಿಕೆಯ ರೂಢಿ ರಿವಾಜುಗಳನ್ನೇ ಅನುಸರಿಸುವರು. ಇದಕ್ಕೆ ಕೆಲವು ಅಪವಾದಗಳಿವೆ. ಇವುಗಳೆಂದರೆ ಲಿಂಗಾಯತ ಮದುವೆಗಳನ್ನು ಓರ್ವ ಜಂಗಮನು ಮಾತ್ರ ನಡೆಸಿಕೊಡಬೇಕು; ಇಂತಹ ಶಾಖೆಗಳಿಗೆ ಸೇರಿದ ವ್ಯಕ್ತಿಯೊಬ್ಬ ಮೃತನಾದಲ್ಲಿ ಅವನನ್ನು ಲಿಂಗಾಯತ ಸಂಪ್ರದಾಯದಂತೆ ಕುಳಿತಿರುವ ಭಂಗಿಯಲ್ಲಷ್ಟೇ ಹೂಳಬೇಕು. ೧೧ನೇ ದಿನ ಶಿವಗಣಾರಾಧನೆ ಮಾಡುತ್ತಾರೆ. ಮೂಲ ಜಾತಿಯ ಶಾಖೆಗಳವರು ಬಳಸುವ ಜಾತಿ/ವೃತ್ತಿ ಸೂಚಕ ಅಂತ್ಯ ಪ್ರತ್ಯಯಗಳನ್ನೇ ಲಿಂಗಾಯತರಾಗಿರುವ ಶಾಖೆಗಳವರೂ ಇಟ್ಟುಕೊಳ್ಳುವರು. ಎಡೆಯೂರು ಸಿದ್ದಲಿಂಗೇಶ್ವರ, ರೇವಣ್ಣ ಸಿದ್ದೇಶ್ವರ, ಶ್ರೀಶೈಲ ಮಲ್ಲಿಕಾರ್ಜುನನಿಗೆ ನಡೆದುಕೊಳ್ಳುತ್ತಾರೆ. ಇವರ ಆರಾಧ್ಯದೈವ ಶಿವ. ಚಾಮರಾಜನಗರ ಜಿಲ್ಲೆಯಲ್ಲಿ ಲಿಂಗಾಯತರು ಗಣನೀಯ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳಲ್ಲಿ ಇವರ ಸಾಂದ್ರತೆ ಜಾಸ್ತಿ ಇದೆ.

**ವೈಶ್ಯರು:** ಸಾಂಪ್ರದಾಯಕ ವ್ಯಾಪಾರಿಗಳಾದ ಇವರನ್ನು 'ಕೋಮಟಿ' ಅಥವಾ 'ಕೋಮಟಿಗ'ಎಂದೂ ಕರೆಯುವುದುಂಟು. ದಕ್ಷಿಣ ಭಾರತದ ವ್ಯಾಪಾರಿ ವರ್ಗವಾದ ಚೆಟ್ಟಿ ಅಥವಾ ಚೆಟ್ಟಿಯಾರ್ ಇದೇ ಜಾತಿಗೆ ಸೇರಿದ ಇನ್ನೊಂದು ಗುಂಪು. ಚಾಮರಾಜನಗರ ಜಿಲ್ಲೆಯಲ್ಲಿ ವೈಶ್ಯರು ಗಣನೀಯ ಸಂಖ್ಯೆಯಲ್ಲಿದ್ದಾರೆ. ತಮ್ಮ ಹೆಸರಿನ ಮುಂದೆ 'ಶೆಟ್ಟಿ' ಎಂಬ ಪ್ರತ್ಯಯವನ್ನು ಸಾಮಾನ್ಯವಾಗಿ ಸೇರಿಸಿಕೊಳ್ಳುವ ಇವರು ತಮ್ಮನ್ನು 'ಆರ್ಯವೈಶ್ಯ' ಎಂದೂ ಹೇಳಿಕೊಳ್ಳುತ್ತಾರೆ. ಇವರ ಮಾತೃಭಾಷೆ ತೆಲುಗಾದರೂ ಕನ್ನಡ ಭಾಷೆಯನ್ನು ಸರ್ವರೂ ಬಲ್ಲರು. ಇವರಲ್ಲಿ ಮೂರು ಮುಖ್ಯ ಸ್ವಗೋತ್ರ ವಿವಾಹ ಗುಂಪುಗಳಿವೆ. ಅವುಗಳೆಂದರೆ ಗರವ, ತುಪ್ಪದ ಮತ್ತು ವಾರಣಿಕ; ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುವ ಗುಂಪೆಂದರೆ ಗರವ ಎನ್ನಲಾಗಿದೆ. ಮೂಲತಃ ಇವರಲ್ಲಿ ೧೦೨ ಗೋತ್ರಗಳಿದ್ದುವಂತೆ. ಅವನ್ನು ಯಾವುದಾದರೊಂದು ಗಿಡ, ವೃಕ್ಷ, ಅಥವಾ ಧಾನ್ಯದ ಹೆಸರಿನಿಂದ ಸ್ವತಂತ್ರವಾಗಿ ಗುರ್ತಿಸುತ್ತಿದ್ದರು. ಅವರವರ ಗೋತ್ರದ ಹೆಸರುಗಳಿರುವ ವಸ್ತುಗಳನ್ನು ತಿನ್ನುವುದಾಗಲೀ ಅಥವಾ ಬೇರಾವುದೇ ಉಪಯೋಗ ಮಾಡಿಕೊಳ್ಳುವುದಾಗಲೀ ಸಲ್ಲದು. ವೈಶ್ಯರು ಸಸ್ಯಾಹಾರಿಗಳಾಗಿದ್ದು ವೈದಿಕ ಸಂಸ್ಕಾರಗಳು ಮತ್ತು ಕರ್ಮಾಚರಣೆಗಳನ್ನು ನಿಷ್ಠೆಯಿಂದ ನಡೆಸುವರು. ವೈಶ್ಯ ಕುಲದವರೇ ಆದ ಪುರೋಹಿತರಿರುವರಾದರೂ ಅನೇಕರು ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರ ನೆರವಿನಿಂದ ನಡೆಸುವರು. ವೈದಿಕ ವಿಧಿಗಳ ಪ್ರಕಾರವಾಗಿಯೇ ಇವರು ಸತ್ತವರನ್ನು ಅಗ್ನಿಸಂಸ್ಕಾರ ಮಾಡುವರು. ಈ ಜಾತಿಯ

ಪ್ರಧಾನ ಮತ್ತು ಪೋಷಕ ದೇವದೇವಿಯರೆಂದರೆ ನಗರೇಶ್ವರ ಮತ್ತು ಕನ್ಯಕಾ ಪರಮೇಶ್ವರಿ. ಹಿಂದೂಗಳು ಆಚರಿಸುವ ಬಹುತೇಕ ಹಬ್ಬಗಳನ್ನು ಇವರೂ ಆಚರಿಸುವರು. ವೈಶಾಖ ಶುಕ್ಲ ಪಕ್ಷದ ದಶಮಿಯಂದು ಬರುವ ವಾಸವಿ ಜಯಂತಿಯನ್ನು ಅತ್ಯುತ್ಸಾಹದಿಂದ ಆಚರಿಸುವರು. 'ಯಜಮಾನ'ರು ಸಭಾಪತಿಯಾಗಿರುವ ಇವರ ಜಾತಿ ಸಭೆಗಳಿಗೆ ಜಾತಿಯ ನೀತಿ ನಿಯಮಗಳ ಉಲ್ಲಂಘನೆ ಮುಂತಾದ ಅಂತರಂಗದ ವಿವಾದಗಳನ್ನು ವಿಚಾರಿಸಿ ತೀರ್ಪು ನೀಡುವ ಅಧಿಕಾರವಿದೆ.

**ಸಾತಾನಿ:** ಜಿಲ್ಲೆಯಲ್ಲಿ ಬಹಳ ವಿರಳವಾಗಿ ಕಂಡು ಬರುವ ಶ್ರೀವೈಷ್ಣವ ದೇವಾಲಯಗಳಲ್ಲಿ ಪರಿಚಾರಕರಾಗಿ ಮತ್ತು ಅರ್ಚಕರಾಗಿರುವ ಜನರೇ ಸಾತಾನಿಗಳು. ಇವರನ್ನು ಶ್ರೀವೈಷ್ಣವರೆಂದೂ ಕರೆಯುತ್ತಾರೆ. ಇವರ ಇನ್ನೊಂದು ಮುಖ್ಯ ಉದ್ಯೋಗವೆಂದರೆ ವ್ಯವಸಾಯ. ದೇವಾಲಯಗಳಲ್ಲಿ ಸೇವೆ ಸಲ್ಲಿಸಲು ರಾಮಾನುಜಾಚಾರ್ಯರು ವೈಷ್ಣವರಲ್ಲಿ ಎರಡು ವರ್ಗಗಳನ್ನು ಮಾಡಿದರು; ಅವೆಂದರೆ ಸತ್ತಿನವನ್ ಮತ್ತು ಸತ್ತದವನ್. ಹೀಗಾಗಿ ಸಾತಾನಿ ಎಂಬುದು ವೈಷ್ಣವ ಪಂಥಕ್ಕೆ ಸೇರುವ ಒಂದು ವೃತ್ತಿ ಗುಂಪು, ಸಾತಾನಿಗಳು ತೆಂಗಲೈ ಶ್ರೀವೈಷ್ಣವರು. ಇವರಲ್ಲಿ ಕಂಡು ಬರುವ ಉಪಶಾಖೆಗಳೆಂದರೆ ಖಾದ್ರಿ ವೈಷ್ಣವ, ನಟಚಾರಮೂರ್ತಿ, ಪ್ರಥಮ ವೈಷ್ಣವ, ಸಮೆರಾಯ ಅಥವಾ ಸಮೊಗಿ, ಸಂಕುರ, ಸೂರಿ, ಸತ್ತಧವ, ತೆಲುಗು ಸಾತಾನಿ ಮತ್ತು ವೆಂಕಟಾಪುರದ. ಇವರನ್ನು ದಾಸನಂಬಿಗಳು ಎಂದೂ ಕರೆಯುವುದುಂಟು. ಇವರ ಜಾತಿ ನಿಯಮಗಳ ಪ್ರಕಾರ ವಿಧವಾ ಮರು ವಿವಾಹವು ನಿಷೇಧಿಸಲ್ಪಟ್ಟಿದೆ. ಇವರು ಸಂಸ್ಕೃತ ಭಾಷೆಯಲ್ಲಿರುವ ವೇದಗಳಿಗಾಗಲೀ ಅಥವಾ ಅದರಲ್ಲಿ ಹೇಳಲಾಗಿರುವ ಕರ್ಮಾಚರಣೆಗಳಿಗಾಗಲೀ ಮಹತ್ವ ನೀಡುವುದಿಲ್ಲ, ಆದರೆ ೧೨ ವೈಷ್ಣವ ಸಂತರು ಅಥವಾ ಆಳ್ವಾರರುಗಳು ತಮಿಳು ಭಾಷೆಯಲ್ಲಿ ರಚಿಸಿರುವ ನಾಲಯಿರ ಪ್ರಬಂಧಮ್ [ನಾಲ್ಕು ಸಹಸ್ರ ಸ್ತೋತ್ರಗಳ ಗ್ರಂಥ] ವನ್ನು ತಮ್ಮ ಪವಿತ್ರ ಗ್ರಂಥವೆಂಬುದಾಗಿ ಭಯಭಕ್ತಿಯಿಂದ ಕಾಣುತ್ತಾರೆ. ಕಾಡುಗೊಲ್ಲ, ಉಪ್ಪಾರ, ತೆಲುಗು ಬಣಜಿಗ, ವಕ್ಕಲಿಗ, ರಾಚವಾರು. ಹೊಲೆಯ ಮತ್ತು ಇನ್ನಿತರ ಜಾತಿಯವರಿಗೆ ಸಾತಾನಿಗಳು ಗುರುಗಳಾಗಿ ವರ್ತಿಸುತ್ತಾರೆ. ಸಾತಾನಿಗಳು ಮೇಲುಕೋಟೆ, ತಿರುಪತಿ, ಶ್ರೀರಂಗಂ ಮುಂತಾದ ಸ್ಥಳಗಳಲ್ಲಿರುವ ಶ್ರೀವೈಷ್ಣವ ಗುರುಗಳಿಗೆ ಗೌರವಾರ್ಪಣೆ ಮಾಡುತ್ತಾರೆ. ಸಾಮಾನ್ಯವಾಗಿ ಸತ್ತವರಿಗೆ ಅಗ್ನಿ ಸಂಸ್ಕಾರ ಮಾಡುತ್ತಾರೆ ಮತ್ತು ೧೧ ದಿನಗಳ ಕಾಲ ಸೂತಕವನ್ನಾಚರಿಸುತ್ತಾರೆ. ಸತ್ತ ವ್ಯಕ್ತಿಗಳಿಗೆ ವಾರ್ಷಿಕ ಶ್ರಾದ್ಧ ಮಾಡುವುದಲ್ಲದೆ ಮಹಾಲಯ ಅಮಾವಾಸ್ಯೆ ಅಥವಾ ಪಿತೃ ಪಕ್ಷದಲ್ಲಿ ಶ್ರಾದ್ಧಕರ್ಮಗಳನ್ನು ಮಾಡಿ ಗತಿಸಿದ ಪೂರ್ವಜರನ್ನು ತೃಪ್ತಿಪಡಿಸುತ್ತಾರೆ. ಇವರು ತಮ್ಮೆಲ್ಲ ಸಾಮಾಜಿಕ ಮತ್ತು ಧಾರ್ಮಿಕ ರೂಢಿ ಮತ್ತು ಆಚರಣೆಗಳಲ್ಲಿ ಶ್ರೀವೈಷ್ಣವ ಬ್ರಾಹ್ಮಣರ ತೆಂಗಲೈ ಪಂಥದವರನ್ನೇ ಹೆಚ್ಚಾಗಿ ಅನುಸರಿಸುತ್ತಾರೆ.

**ಹೊಲೆಯರು:** ಜಿಲ್ಲೆಯಾದ್ಯಂತ ಕಂಡು ಬರುವ ಹೊಲೆಯರು ಬಲಗೈ ಅಥವಾ ೧೮-ಜಾತಿಗಳ ಪಣ ಅಥವಾ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಇವರು ತಮ್ಮನ್ನು ಆದಿ - ಕರ್ನಾಟಕರು ಎಂದು ಕರೆದುಕೊಳ್ಳುತ್ತಾರೆ. ಇವರ ಸಾಂಪ್ರದಾಯಿಕ ಉದ್ಯೋಗವೆಂದರೆ ಕೃಷಿ ಕಾರ್ಮಿಕರಾಗಿರುವುದು. ಹಿಂದಿನ ಕಾಲದಲ್ಲಿ ಚಾಲ್ತಿಯಲ್ಲಿದ್ದ ಬಾರಾಬಲೂತಿ ಪದ್ಧತಿಯಡಿಯಲ್ಲಿ ಇವರು ಗ್ರಾಮದ ಕಾವಲುಗಾರರಾಗಿದ್ದರು ಎಂದು ತಿಳಿಯಲಾಗುತ್ತದೆ. ರಾಜ್ಯದಲ್ಲಿರುವವರಲ್ಲಿ ಕನ್ನಡ, ತಮಿಳು, ತೆಲುಗು ಮತ್ತು ಮರಾಠಿ ಮಾತನಾಡುವ ವರ್ಗಗಳಿವೆ. ಈ ಜಾತಿಯನ್ನು ಕೆಲವು ಪಂಗಡಗಳನ್ನಾಗಿ ವಿಭಜಿಸಿದ್ದು ಭಾಷೆ, ವೃತ್ತಿ, ಅಥವಾ ವಾಸಸ್ಥಾನ ಅಥವಾ ಇವುಗಳಲ್ಲಿ ಎರಡು ಅಥವಾ ಹೆಚ್ಚಿನ ಅಂಶಗಳ ಆಧಾರದ ಮೇಲೆ ಈ ಪಂಗಡಗಳಾಗಿರುತ್ತವೆ. ಈ ಎಲ್ಲ ಪಂಗಡ ಅಥವಾ ಗುಂಪುಗಳು ಸ್ವಗೋತ್ರ ವಿವಾಹದವುಗಳಾಗಿವೆ. ಕನ್ನಡ ಮಾತನಾಡುವ ಗುಂಪುಗಳಲ್ಲಿ ಸೇರಿರುವವರೆಂದರೆ ಗಂಗಡಿಕಾರ, ಮೊರಸು, ದಾಸ, ಮಗ್ಗ [ನೇಕಾರರು], ಮತ್ತು ಹಗ್ಗ [ಹಗ್ಗ ಹೊಸೆಯುವವರು]; ತೆಲುಗು ಮಾತನಾಡುವ

ಗುಂಪುಗಳಲ್ಲಿ ಪಾಕಿನಾಟಿ(ಕಿ), ಚಿಂತಲು, ಗುಂಡ್ಲುಜಾಗತಿ, ರಾಂಪಲು, ಪಶುಪಸರೆ, ಮತ್ತು ಗುಂಡ್ಲುಜಾಗತಿ ಸಾವು ಗುಂಪುಗಳಿವೆ; ಮತ್ತು, ತಮಿಳು ಮಾತನಾಡುವವರಲ್ಲಿ ಕೊಂಗ, ದ್ರ್ಯಾವಲ್, ಮಸ್ತಿಕರು, ಗೊಗ್ಲ, ಮತ್ತು ಕುದರೆ ಗುಂಪುಗಳಿವೆ. ಗಂಗಡಿಕಾರ ಹೊಲೆಯರನ್ನು ಎಲ್ಲರಿಗಿಂತ ಮೇಲ್ತರಗತಿಯವರೆಂದು ಭಾವಿಸುತ್ತಾರೆ. ಇವರಲ್ಲಿ ಅನೇಕ ಭಿನ್ನಗೋತ್ರ ಕುಲಗಳಿವೆ. ಉದಾ: ಅತ್ತಿಕುಲ, ಆನೆಕುಲ, ಆಲೆಕುಲ, ಇತ್ಯಾದಿ. ಹಿಂದೆ ಇವರಲ್ಲಿ ವಿವಾಹವಾಗದಿರುವ ಹುಡುಗಿಯರನ್ನು ಬಿಳಿಗಿರಿರಂಗ ಅಥವಾ ಸಿದ್ದಪ್ಪಾಜಿ ದೇವಾಲಯಗಳಿಗೆ ಸಮರ್ಪಿಸುವ ರೂಢಿ ಇತ್ತು. ಇವರಲ್ಲಿ ಕನ್ಯಾಶುಲ್ಕ ನೀಡುವ ಪದ್ಧತಿ ಇದೆ ಮತ್ತು ವಿಧವಾ ಮರು ವಿವಾಹಕ್ಕೆ ವಿರೋಧವಿಲ್ಲ, ವ್ಯಭಿಚಾರ ಅಥವಾ ಬೇರಾವುದಾದರೂ ನ್ಯಾಯಸಮ್ಮತವಾದ ಕಾರಣಗಳಿಗೆ ವಿವಾಹ ವಿಚ್ಛೇದನ ಪಡೆದುಕೊಳ್ಳಲು ಸಾಧ್ಯ. ಶೈವ ಮತ್ತು ವೈಷ್ಣವ ಪಂಗಡಗಳೆರಡೂ ಇವರಲ್ಲಿವೆ. ಇವರು ಭೈರೇದೇವರನ್ನು ಆರಾಧಿಸುತ್ತಾರೆ. ಇವರು ಪೂಜೆಮಾಡುವ ದೇವತೆಗಳೆಂದರೆ ಮಾರಿಯಮ್ಮ ಸಂಗಮ್ಮ, ಮಾಸ್ತಮ್ಮ, ಮಣೆಗಮ್ಮ, ಹಿಂಡಮ್ಮ, ಮುತ್ಯಾಲಮ್ಮ, ಪಟಾಲಮ್ಮ, ಇತ್ಯಾದಿ, ಶೈವ ಹೊಲೆಯರು ನಂಜುಂಡೇಶ್ವರ, ಸಿದ್ದಪ್ಪಾಜಿ ಮುಂತಾದವರನ್ನು ತಮ್ಮಡಿ ಎನ್ನುತ್ತಾರೆ. ವಿಷ್ಣುವಿನ ಭಕ್ತರಾದ ದಾಸ ಜನರು ಹಣೆಯ ಮೇಲೆ ನಾಮವನ್ನು ಧರಿಸುತ್ತಾರೆ. ಸಾತಾನಿಗಳು ಇವರ ಪುರೋಹಿತರು. ಇವರಲ್ಲಿರುವ ಸಂಚಾರಿ ಧಾರ್ಮಿಕ ಯಾಚಕರನ್ನು ದಾಸ, ಜೋಗಿ, ದೇವರಗುಡ್ಡ, ಬಿಡಿ ಮನುಷ್ಯ, ಅಥವಾ ನೀಲಗಾರ ಮುಂತಾಗಿ ಸಂಬೋಧಿಸುವರು. ಸಾತಾನಿಗಳು ಮಾತ್ರವೇ ಅಲ್ಲದೆ ಒಮ್ಮೊಮ್ಮೆ ಓರ್ವ ಲಿಂಗಾಯಿತ ಅಥವಾ ವೈಷ್ಣವ ಪಂಥದ ತಿರುಕುಲ ದಾಸ ಇವರ ಪುರೋಹಿತರಾಗಿ ವರ್ತಿಸುವುದುಂಟು. ಸತ್ತವರನ್ನು ದಕ್ಷಿಣದಿಕ್ಕಿಗೆ ತಲೆಮಾಡಿ ಹೂಳುವರು. ಆದರೆ ಬಹಳ ವಯಸ್ಸಾಗಿ ಮೃತರಾದವರನ್ನು ದಹಿಸುವುದೂ ಉಂಟು. ಯಾವುದೇ ಶ್ರಾದ್ಧಕರ್ಮಗಳನ್ನೂ ಇವರು ಆಚರಿಸುವುದಿಲ್ಲ. ಗೊತ್ತುಗಾರ ಎಂದು ಕರೆಯಲಾಗುವ ಮುಖಂಡನು ಸಭಾಪತಿಯಾಗಿರುವ ಕಾತಿ ಸಭೆ ಇವರಲ್ಲಿದೆ.

### ಬುಡಕಟ್ಟುಗಳು

ಚಾಮರಾಜನಗರ ಜಿಲ್ಲೆ ವೈವಿಧ್ಯತೆಯಿಂದ ಕೂಡಿದ ಜಿಲ್ಲೆ. ಸಂಸ್ಕೃತಿ, ಹೋರಾಟ, ಜನಪದ ಕಾವ್ಯಗಳ ಕಣಜವನ್ನೇ ಹೊಂದಿದೆ. ಜೀವವೈವಿಧ್ಯತೆಯಿಂದ ಕೂಡಿದ್ದು, ತಮಿಳುನಾಡಿನ ಗಡಿಭಾಗದಲ್ಲಿ ಹರಡಿಕೊಂಡಿರುವ ಕಾಡಿನಲ್ಲಿ ಮಾನವ ವಿಕಾಸ ಜೀವನದ ಆಗರವೋ ಎಂಬಂತೆ ಬುಡಕಟ್ಟು ಸಂಸ್ಕೃತಿ ನಿಚ್ಚಳವಾಗಿ ನೆಲೆಗೊಂಡಿದೆ. ಇಲ್ಲಿನ ಮೂಲ ನಿವಾಸಿ ಬದುಕಿನ ಹಂದರಗಳು, ಜನಪದರ ಕಾವ್ಯ ಪರಂಪರೆ ಬುಡಕಟ್ಟು ಸಮುದಾಯವನ್ನು ಜೀವಂತವಿರಿಸಿದೆ. ನಗರ ಮತ್ತು ಗ್ರಾಮ ಸಂಸ್ಕೃತಿಯನ್ನು ಮೀರಿದ, ಭಿನ್ನವಾದ ಸಂಸ್ಕೃತಿಯೊಂದು ಕಾಡಿನಲ್ಲಿ ಉಸಿರಾಡುತ್ತಿದೆ ಎಂದರೆ ಅದು ಬುಡಕಟ್ಟು ಸಮುದಾಯದ ಮೂಲ ಆಶಯ–ಬದುಕು. ತಮ್ಮದೇ ಆದಂತಹ ಆಚಾರ–ವಿಚಾರ, ಭಾಷೆ,ವ್ಯವಹರಣೆ, ಬದುಕಿನ ಶೈಲಿ, ನಂಬಿದ ಮೌಲ್ಯ ಅನುಸರಿಸುವ ಸಂಪ್ರದಾಯ, ಪದ್ಧತಿಗಳು, ಇಟ್ಟುಕೊಂಡ ಆಶಯಗಳು, ಸಾಮಾಜಿಕ ರೀತಿ–ನೀತಿಗಳು. ಅವರದೇ ಆದ ಸಾಹಿತ್ಯ ಕಲೆ, ಸಂಸ್ಕೃತಿ ಮುಂತಾದವನ್ನೆಲ್ಲಾ ಅಡಗಿಸಿಕೊಂಡಿರುವ ಈ ಮೂಲನಿವಾಸಿಗಳನ್ನು ಬುಡಕಟ್ಟು ಜನಾಂಗ ಎಂದು ಕರೆಯಲಾಗುತ್ತದೆ. ಇವರು ಸಾಮಾನ್ಯವಾಗಿ ಜನಸಮುದಾಯದ ಮುಖ್ಯವಾಹಿನಿಯಲ್ಲಿ ಬೆರೆಯುವುದಿಲ್ಲ. ಹುಟ್ಟು, ವಿವಾಹ ಮತ್ತು ಸಾವುಗಳಲ್ಲಿ ತಮ್ಮದೇ ಆದ ಸಂಪ್ರದಾಯದಂತೆ ಆಚರಿಸುತ್ತಾರೆ.

ತಮ್ಮ ಸಂಸ್ಕೃತಿ, ಪರಂಪರೆಯನ್ನು ಮೂಲ ರೂಪದಲ್ಲಿ ಉಳಿಸಿಕೊಳ್ಳಲು ಹೆಣಗುತ್ತಿರುತ್ತಾರೆ. ಇತ್ತೀಚೆಗೆ ವಿಶ್ವವಿದ್ಯಾಲಯಗಳು, ಜನಪದ ಸಾಹಿತ್ಯ ಸಂಗ್ರಹದ ಮೂಲಕ, ಬುಡಕಟ್ಟು ಜನಾಂಗದ ನಾಯಕನನ್ನು ಅಥವಾ ದೈವಪುರುಷನನ್ನು ಕುರಿತ ಮಹಾಕಾವ್ಯಗಳನ್ನು ಅಧ್ಯಯನ ಮಾಡುವ ಮೂಲಕ ಅವರ ಸಂಸ್ಕೃತಿಯನ್ನು ವಿಶ್ಲೇಷಣೆ ಮಾಡುತ್ತಿವೆ. ಅಂತಹ ಕಾವ್ಯಗಳಲ್ಲಿ ಪ್ರಮುಖವಾದುವೆಂದರೆ, ಮಂಟೇಸ್ವಾಮಿ, ಮಲೆಮಾದೇಶ್ವರ ಮುಂತಾದವು.

ಚಾಮರಾಜನಗರ ಜಿಲ್ಲೆಯಲ್ಲಿ ಸೋಲಿಗರು, ಕಂಪಣಬೇಡರು ಮತ್ತು ಲಂಬಾಣಿ ಸಮುದಾಯ, ಮುಂತಾದವರನ್ನು ಬುಡಕಟ್ಟು ಜನಾಂಗವೆಂದು ಗುರುತಿಸಲಾಗಿದೆ. ಬಿಳಿಗಿರಿರಂಗನಬೆಟ್ಟದಲ್ಲಿ ಸೋಲಿಗ, ಬೆಟ್ಟ ಕುರುಬ, ಜೇನುಕುರುಬ ಮುಂತಾದ ಬುಡಕಟ್ಟು ಜನಾಂಗಗಳಿವೆ. ಬುಡಕಟ್ಟು ಜನರ ನಂಬಿಕೆ, ಸಂಪ್ರದಾಯ, ಜೀವನಕ್ರಮಗಳೇ ಬೇರೆ. ಇವರು ನಂಬಿಕೆ ಮತ್ತು ಆಚರಣೆಗಳಲ್ಲಿ ಬಲವಾದ ಶ್ರದ್ಧೆಯುಳ್ಳವರು. ಇವರಿಗೆ ಪಾರಂಪರಿಕ ಜ್ಞಾನ ಅಪಾರವಾಗಿರುತ್ತದೆ. ಸೋಲಿಗರ ಒಬ್ಬ ಹುಡುಗ ನೂರೈವತ್ತು ಔಷಧಿ ಸಸ್ಯಗಳನ್ನು, ನೂರಾರು ಪ್ರಾಣಿ (ಜೀವ ವೈವಿಧ್ಯ)ಗಳನ್ನು ಸಹ ಗುರುತಿಸಬಲ್ಲ ಎನ್ನಲಾಗುತ್ತದೆ. ಚಾಮರಾಜನಗರ ಪ್ರದೇಶ ಬಹುದೊಡ್ಡ ಅರಣ್ಯ ಸಂಪತ್ತಿನಿಂದ ಕೂಡಿದ್ದು ಪ್ರಾಕೃತಿಕವಾಗಿ ದೊರೆಯುವ ಸಸ್ಯಸಂಪತ್ತು, ಔಷಧಿ, ವನಸ್ಪತಿ, ಮುಂತಾದ ಕಿರು ಉತ್ಪತ್ತಿಗಳು ಇವರ ಬದುಕಿನ ಮಾರ್ಗವಾಗಿವೆ. ಇವರಿಗೆ ಹಣದ ಪರಿಕಲ್ಪನೆ, ಹಣದ ವ್ಯವಹಾರ, ಭಿಕ್ಷೆ ಬೇಡುವುದು, ಕಳ್ಳತನ ಮುಂತಾದವು ತಿಳಿದಿಲ್ಲ. ಕರ್ನಾಟಕದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆ ಬಿಟ್ಟರೆ ಚಾಮರಾಜನಗರ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಸಮೂಹವಿದೆ. ಮಲೆಮಹದೇಶ್ವರ ಬೆಟ್ಟದಿಂದಾಚೆ ಕರ್ನಾಟಕದ ಗಡಿಭಾಗದ ತಮಿಳುನಾಡಿನ ಸರಹದ್ದಿನಲ್ಲಿ ಬೇಡಕಂಪಣ ಎಂಬ ಕನ್ನಡಿಗ ಬುಡಕಟ್ಟು ಜನ ವಾಸಿಸುತ್ತಿದ್ದಾರೆ. ಇತ್ತೀಚೆಗೆ ಈ ಬುಡಕಟ್ಟು ಸಮೂಹವನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ನಿರಂತರ ಪ್ರಯತ್ನ ಮಾಡುತ್ತಿವೆ. ಅರಣ್ಯದ ಕಿರು ಉತ್ಪನ್ನಗಳನ್ನವಲಂಬಿಸಿ ಬದುಕುತ್ತಿದ್ದ ಇವರಿಗೆ ಪರ್ಯಾಯ ಉದ್ಯೋಗಾವಕಾಶ, ಬ್ಯಾಂಕ್ ಸಾಲದ ಮೂಲಕ ಸ್ವಾವಲಂಬನೆ, ಶಿಕ್ಷಣ, ಸರ್ಕಾರದಿಂದ ಅನೇಕ ರೀತಿಯ ನೆರವು ಒದಗಿಸಲಾಗುತ್ತಿದೆ. ಆದರೆ ಈ ಬುಡಕಟ್ಟು ಜನರು ಅರಣ್ಯದ ಕಿರುಉತ್ಪನ್ನ ಬಿಟ್ಟರೆ ಬೇರೇನನ್ನು ಅರಿಯರು. ಇದರಿಂದಾಗಿ ಅವರ ಸ್ಥಿತಿ ಸುಧಾರಣೆಯಾಗುತ್ತಿಲ್ಲ ಎನ್ನುತ್ತಾರೆ. ಬಿಳಿಗಿರಿರಂಗನ ಬೆಟ್ಟದಲ್ಲಿರುವ ವಿವೇಕಾನಂದ ಗಿರಿಜನ ಶಾಲೆಯಲ್ಲಿ ಬುಡಕಟ್ಟು ಜನಾಂಗದ ನೂರಾರು ಮಕ್ಕಳು ಕಲಿಯುತ್ತಿದ್ದಾರೆ. ಹಾಗೆ ಕಲಿತು ಉನ್ನತಾಭ್ಯಾಸ ಮಾಡಿದ ಒಂದೆರಡು ಉದಾಹರಣೆಗಳೂ ಇವೆ. ಅವರಲ್ಲಿ ಜಡೇಗೌಡ ಎಂಬುವವರು ಕಾಲೇಜು ಅಧ್ಯಾಪಕರಿದ್ದು, ಸಮೂಹದ ಕೆಲವರನ್ನು ಓದಿಸಲು ದತ್ತು ಪಡೆದಿದ್ದಾರೆ.

ಈಗ ಬುಡಕಟ್ಟು ಜನರ ಪರಿಸ್ಥಿತಿ ಸುಧಾರಿಸುತ್ತಿದ್ದು, ಶಿಕ್ಷಣದಿಂದ ಅನೇಕ ಸುಧಾರಣೆ, ಪರಿವರ್ತನೆಗಳಾಗುತ್ತಿವೆ. ಆದರೂ ಅವರಿಗೆ ಶಿಕ್ಷಣದಿಂದ ಉದ್ಯೋಗ, ಜೀವನ ನಿರ್ವಹಣೆಗಾಗಿ ಕೈಗೆಟಕುವ ಕೆಲಸ ಕಾರ್ಯಗಳು ದೊರಕಿ ಸ್ವಾವಲಂಬನೆ ಸಾಧ್ಯವಾಗಬೇಕು. ಕಿರುಅರಣ್ಯ ಉತ್ಪಾದನೆಯೇ ಇವರ ಜೀವಾಳವಾಗಿರುವುದರಿಂದ ಅರಣ್ಯದಿಂದ ಇವರನ್ನು ವಲಸೆ ಎಬ್ಬಿಸುವುದರಿಂದ ತೊಂದರೆಯಾಗುತ್ತದೆ ಎಂಬುದು ಹಲವರ ಅಭಿಪ್ರಾಯ.

ಬಿಳಿಗಿರಿರಂಗನ ಬೆಟ್ಟದಲ್ಲಿರುವ ಗಂಗಾಧರೇಶ್ವರ ದೇವಸ್ಥಾನದಿಂದ ಸುಮಾರು ೧೦ ಕಿ.ಮೀ ದೂರದಲ್ಲಿ ಭಾರ್ಗವೀ ನದಿ ಕಣಿವೆಯಲ್ಲಿ ಹರಿಯುತ್ತದೆ. ಪರಶುರಾಮನು ಮಾತೃಹತ್ಯಾ ದೋಷ ಪರಿಹಾರಕ್ಕಾಗಿ ಈ ಪರ್ವತದ ಮೇಲೆ ತಪಸ್ಸನ್ನಾಚರಿಸಿ ವಿರಜಾನದಿಯ ನೀರಿನಿಂದ ಶ್ರೀ ಬಿಳಿಗಿರಿರಂಗನ ಪಾದಗಳನ್ನು ತೊಳೆದಿದ್ದರಿಂದ ಆ ನೀರಿನಿಂದಲೇ ಒಂದು ಪುಣ್ಯ ನದಿ ಉದ್ಭವಿಸಿದ್ದಾಗಿಯೂ ಇದನ್ನೇ ಭಾರ್ಗವಿ ನದಿ ಎಂದು ಕರೆಯಲಾಯಿತೆಂದು ಹೇಳುತ್ತಾರೆ. ಈ ನದಿಯ ತೀರದಲ್ಲಿ ಅನೇಕ ಮುನಿಪುಂಗವರು ತಪಸ್ಸನ್ನಾಚರಿಸಿದ್ದು ಈ ಸ್ಥಳದಲ್ಲಿ ದೊಡ್ಡಸಂಪಿಗೆ ವೃಕ್ಷವಿದೆ. ಇದರಲ್ಲಿ ಮೂರು ದೊಡ್ಡಕೊಂಬೆಗಳಿದ್ದು ಅವು ಬ್ರಹ್ಮ, ವಿಷ್ಣು, ಮಹೇಶ್ವರರ ಸಂಕೇತ ಎಂದು ತಿಳಿಯಲಾಗಿದೆ. ಇದು ಸೋಲಿಗರ ಪ್ರಮುಖ ಆರಾಧ್ಯದೇವತೆ. ೩೪ ಮೀಟರ್ ಎತ್ತರವಿದ್ದು, ೨೪ ಮೀಟರ್ ಸುತ್ತಳತೆಯ ಬೃಹತ್ ಮರಕ್ಕೆ ಸುಮಾರು ೬೦೦ ವರ್ಷಗಳಾಗಿರಬಹುದು. ಏಪ್ರಿಲ್ ತಿಂಗಳಲ್ಲಿ ಕೆಂಪು, ಹಳದಿ ಮಿಶ್ರಿತ ಬಣ್ಣದ ಹೂ ಬಿಡುತ್ತವೆ. ಈ ಮರದ ಕೆಳಗೆ ದಟ್ಟವಾದ ನೆರಳಿದ್ದು

ಕಾಂಡದ ಸುತ್ತ ಸುಮಾರು ೨೦೦ಕ್ಕೂ ಹೆಚ್ಚು ಶಿವಲಿಂಗಗಳಿವೆ. ಶಿವರಾತ್ರಿ ಹಬ್ಬದಂದು ಸೋಲಿಗರು ಪೂಜೆ ಮಾಡುತ್ತಾರೆ. ಬೆಂಕಿ ಹಾಕಿ ರಾತ್ರಿ ಎಲ್ಲಾ ಕುಣಿಯುತ್ತಾರೆ. ಬೈರಮ್ಮ, ಮಾರಮ್ಮ, ಯಲ್ಲಮ್ಮ, ಮುದಗಿರಿಯಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಸೋಲಿಗರ ಕರೆಗೆ ಓಗೊಟ್ಟ ಬಿಳಿಗಿರಿರಂಗಸ್ವಾಮಿ ಈ ಪ್ರದೇಶದಲ್ಲಿ ನೆಲೆಸಿದ್ದಾನೆಂದು ಪ್ರತೀತಿ. ಹಾಗೂ ಸೋಲಿಗರ ಹುಡುಗಿ ಕುಸುಮಾಲೆಯನ್ನು ವಿವಾಹವಾದ್ದರಿಂದ ಸೋಲಿಗರೆಲ್ಲಾ ಬಿಳಿಗಿರಿರಂಗನನ್ನು 'ರಂಗಭಾವ'ನೆಂದು ಕರೆಯುತ್ತಾರೆ. ಇದಕ್ಕೆ ಹಿನ್ನೆಲೆಯಾಗಿ ಒಂದು ಜಾನಪದ ರಮ್ಯಕತೆ ಇರುವುದನ್ನು ಕಾಣಬಹುದು (ಸೋಲಿಗರ ಐತಿಹಾಸ ಪು.೬೮೬) 'ಹೊನ್ನುಹೊಳೆ.'

ಬಿಳಿಗಿರಿರಂಗನಬೆಟ್ಟ ಪರಿಸರದಿಂದ ಸ್ಥಾನಾಂತರಗೊಂಡ ಇವರು ಅದೇ ಪರಿಸರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಸರ್ಕಾರ ಇವರಿಗೆ ಪುನರ್ವಸತಿ ಕಲ್ಪಿಸಿದೆ. ವ್ಯವಸಾಯ, ಕೂಲಿ, ಮೀನು ಹಿಡಿಯುವುದು, ಜೇನು ಸಂಗ್ರಹ, ಮುಂತಾದವುಗಳನ್ನು ಜೀವನೋಪಾಯಕ್ಕೆ ಅವಲಂಬಿಸಿದ್ದಾರೆ. ಕೆಲವರಿಗೆ ಸರ್ಕಾರ ಭೂಮಿ ನೀಡಿದ್ದು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಕೆಲವು ಸೋಲಿಗ ಮಹಿಳೆಯರು ಬಳೆ, ಕರಿಮಣಿ, ಪಿನ್ನು, ಟೇಪು, ಸೂಜಿ, ದಾರ ಮುಂತಾದವುಗಳನ್ನು ಗ್ರಾಮಗಳಲ್ಲಿ ಮನೆಮನೆಗೆ ಹೋಗಿ ಮಾರಾಟ ಮಾಡುತ್ತಾರೆ. ಗಂಡಸರು, ಬೀಗ–ರಿಪೇರಿ, ಫೋಟೋಗಳಿಗೆ ಕಟ್ಟು, ಗಾಜು ಹಾಕುವುದು, ಬಿಡುವಿನ ವೇಳೆಯಲ್ಲಿ ಸಣ್ಣಪುಟ್ಟ ಪ್ರಾಣಿ ಬೇಟೆಯಾಡುವುದು ಮುಂತಾದ ಕೆಲಸ ಮಾಡುವರು. ಹಳೆಗನ್ನಡಕ್ಕೆ ಸಮೀಪವಾದ ತಮ್ಮದೇ ಆದ ವಿಶಿಷ್ಟ ಉಪಭಾಷೆಯನ್ನಾಡುತ್ತಾರೆ.

ಇವರಲ್ಲಿ ಉರಳಿ, ಮಲೆ, ಗಿಡು, ಉರುಬತ್ತಿ, ಮತ್ತು ಬುರಡೆ ಸೋಲಿಗರೆಂಬ ಐದು ಗುಂಪುಗಳಿವೆ. ಉರಳಿಸೋಲಿಗರು, ಚಾಮರಾಜನಗರ ತಾಲೂಕಿನಲ್ಲಿಯೂ, ಮಲೆಸೋಲಿಗರು ಮಲೆಮಹದೇಶ್ವರ ಬೆಟ್ಟಗಳಲ್ಲಿಯೂ, ಬುರಡೆಸೋಲಿಗರು ಕೊಳ್ಳೇಗಾಲ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಕಾಡುಸೋಲಿಗರು ಬೆಟ್ಟಗಳಲ್ಲಿ, ಕಾಡುಗಳಲ್ಲಿ ವಾಸಮಾಡುತ್ತಾರೆ. ಇವರು ಬಯಲು ಪ್ರದೇಶದ ಜನರಿಗಾಗಿ ಕೆಲಸ ಮಾಡುತ್ತಾರೆ. ಸೋಲಿಗರಲ್ಲಿರುವ ಭಿನ್ನಗೋತ್ರ ವಿವಾಹದ ಕುಲಗಳೆಂದರೆ ಆಲೂರುಕುಲ, ಜಂಗಲೂರು, ಬೇಲಿಯೋರು, ಸುರೆನ, ತೆನೆರು ಮುಂತಾದ ೧೨ ಕುಲಗಳಿದ್ದು, ಒಂದೇ ಕುಲದವರೊಡನೆ ವಿವಾಹವಾಗುವಂತಿಲ್ಲ. ಇವರ ಮದುವೆ ಸಂಪ್ರದಾಯಗಳು ಸರಳವಾದವು. ತೆರ (ಕನ್ಯಾಶುಲ್ಕ) ನೀಡುವ ಪದ್ಧತಿ ಇದೆ. ಗಂಡಿನ ಕಡೆಯವರೇ ಹೆಣ್ಣು ಹುಡುಕುತ್ತಾರೆ. ವಧುವಿನ ಮನೆಯಲ್ಲಿ ರಾತ್ರಿ ವೇಳೆ ಮದುವೆಯ ವಿಧಿಗಳನ್ನು ನೆರವೇರಿಸುತ್ತಾರೆ. ಕುಲದ ಮುಖಂಡನೇ ಪುರೋಹಿತನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಇವರು ಬಿದಿರಿನ ಹಂದರದ ಮೇಲೆ ಬಾಳೆಎಲೆಗಳನ್ನು ಮುಚ್ಚಿ ಕಟ್ಟಿರುವ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಪ್ರತಿಯೊಂದು ನೆಲೆಗೂ ಒಬ್ಬ ಮುಖಂಡನಿರುತ್ತಾನೆ. ಸಾಮಾನ್ಯವಾಗಿ ಸತ್ತವರನ್ನು ಎಡಬದಿಗೆ ಹೊರಳಿರುವಂತೆ ಮಲಗಿಸಿ ತಲೆ ದಕ್ಷಿಣಕ್ಕಿರುವಂತೆ ಹೂಳುತ್ತಾರೆ.

ಸಾಂಪ್ರದಾಯಿಕ ಹೇಳಿಕೆಯಂತೆ, ಇವರಿಗೆ ಒಬ್ಬ ರಾಜನಿದ್ದ. ಯುದ್ಧದಲ್ಲಿ ಸೋತು ಜೀವರಕ್ಷಣೆಗಾಗಿ ಪರಿವಾರದೊಡನೆ ಕಾಡಿಗೆ ಓಡಿಹೋದಾಗ, ಇವರು ಜೀವನೋಪಾಯಕ್ಕಾಗಿ ಸೋಲಲ ಹಂಬಿನ ಗೆಡ್ಡೆಯನ್ನು ತಿಂದು ಜೀವಿಸುತ್ತಿದ್ದರು. ಸೋಲಲ ಹಂಬನ್ನು ಆಶ್ರಯಿಸಿದ್ದರಿಂದ ಇವರನ್ನು 'ಸೋಲಿಗ'ರೆಂದು ಕರೆಯಲಾಯಿತು.

ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಬೊಂಬೆಗಳನ್ನು ಮಾಡಿ ಅವಕ್ಕೆ ಜೀವ ತುಂಬುತ್ತಾರೆ. ಒಂದು ನೀಲಯ್ಯನಾಯಿತು. ಇನ್ನೊಂದು ಸಂಕಮ್ಮನಾಯಿತು. ಇವರಿಂದ ಮುಂದೆ ವಂಶ ಬೆಳೆಯಿತು. ಸಂಕವ್ವಳಿಗೆ ಮಕ್ಕಳಾಗದ ನೋವನ್ನು ನೀಗಲು ಮಾದೇಶ್ವರನು ಮಕ್ಕಳಾಗುವ ಫಲ ನೀಡುತ್ತಾನೆ ಹಾಗೂ ಆ ಮಕ್ಕಳನ್ನು ಮಾದೇಶ್ವರನ ಗುಡ್ಡರನ್ನಾಗಿ ಮಾಡಲು ವಚನ ಪಡೆದು ಹೋಗುತ್ತಾನೆ. ಆಕೆಯ ಗಂಡ ಕೋಪಿಷ್ಟ. ಹೆಂಡತಿಯ ಮಾತನ್ನು ನಂಬದೇ, ಅನುಮಾನಿಸಿ ಕುದಿಯುವ ಎಣ್ಣೆಯಲ್ಲಿ ಕೈಯಿಡಿಸುವ, ಕುದಿಯುವ ಸುಣ್ಣದ ನೀರಿಗೆ ಹಾಕುವ, ಅವಳ ಮೇಲೆ ಭಾರವಾರ ಗುಂಡು ಉರುಳಿಸುವಂತಹ ಪರೀಕ್ಷೆಗಳಿಗೆ ಒಡ್ಡುತ್ತಾನೆ. ಆದರೂ ಸಾಯದೇ ಎಲ್ಲಾ ಪರೀಕ್ಷೆಗಳಲ್ಲಿಯೂ ಗೆಲ್ಲುತ್ತಾಳೆ. ಇವರಿಗೆ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಎರಡು ಗಂಡುಮಕ್ಕಳಾಗಿ ಮಾದೇಶ್ವರನಿಗೆ ಒಪ್ಪಿಸಲ್ಪಡುತ್ತಾರೆ. ಇವರಲ್ಲಿ ಕಾರಯ್ಯ ಧಾರ್ಮಿಕ ಶಿಕ್ಷಣ ಪಡೆದರೂ, ಧರ್ಮಕ್ಕೆ ಅನುಸಾರವಾಗಿ ನಡೆಯದೇ ಮಾಂಸಾಹಾರಿಯಾಗುವವನು. ಸಮಾಜ ಅವನನ್ನು ಬಹಿಷ್ಕರಿಸಿದಾಗ ನಡುಮಲೆಯನ್ನು ಬಿಟ್ಟು ದೂರದ ಬಿಳಿಗಿರಿ ರಂಗನ ಬೆಟ್ಟದಲ್ಲಿ ನೆಲೆಸುತ್ತಾನೆ. ಈತನೇ ತಮ್ಮ ಮೂಲಸ್ಥನೆಂದು ಸೋಲಿಗರು ಅಂಗೀಕರಿಸುತ್ತಾರೆ ಎಂಬುದಾಗಿ ಐತಿಹ್ಯವಿದೆ.

**ಬೆಟ್ಟಕುರುಬ:** ಹಾಡಿಗಳಲ್ಲಿ ವಾಸಿಸುವ ಇವರು ಈ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಸ್ವಲ್ಪಮಟ್ಟಿಗೆ ಹಾಗೂ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಇವರಲ್ಲಿ ಬಕಲವಾಡಿಯವರು ಮತ್ತು ಕಪಲಾಡಿಯವರು ಎಂಬ ಎರಡು ವರ್ಗಗಳಿದ್ದು ದೇವರುಗಳ ಒಕ್ಕಲಾಧರಿಸಿ, ಕುಮಾರದೇವರ ಒಕ್ಕಲು, ಮಾರಮ್ಮನ ಒಕ್ಕಲು, ಹನುಮಂತನ ಒಕ್ಕಲು, ಮಾದೇಶ್ವರನ ಒಕ್ಕಲು, ಬೊಮ್ಮದೇವರ ಒಕ್ಕಲು, ಚಿಕ್ಕಮ್ಮದೇವರ ಒಕ್ಕಲು ಇತ್ಯಾದಿಗಳಿವೆ. ಆ ಒಕ್ಕಲುಗಳ ನಡುವೆ ವಿವಾಹ ಸಂಬಂಧಗಳಿರುತ್ತವೆ. ಇವರ ಸಾಂಪ್ರದಾಯಕ ವೃತ್ತಿ ಎಂದರೆ ಬಿದಿರಿನಕೆಲಸ, ಬಿದಿರಿನಿಂದ ಬುಟ್ಟಿ, ಮೊರ ಮುಂತಾದವುಗಳನ್ನು ಹೆಣೆದು ಮಾರಾಟಮಾಡುತ್ತಾರೆ. ವ್ಯವಸಾಯ, ಅರಣ್ಯೋತ್ಪನ್ನಗಳನ್ನು ಅವಲಂಬಿಸಿದ್ದಾರೆ. ಇವರು ವಾಸಿಸುವ ಸ್ಥಳಕ್ಕೆ 'ಹಾಡಿ' ಎಂಬ ಹೆಸರಿದ್ದು, ಪ್ರತಿಯೊಂದು ಹಾಡಿಗೂ ಒಬ್ಬೊಬ್ಬ ಮುಖಂಡನಿರುತ್ತಾನೆ. ಇದು ಅನುವಂಶಿಕವಾಗಿರುತ್ತದೆ. ಇವರು ವಾಸಿಸುವ ಗುಡಿಸಲುಗಳುಳ್ಳ ಹಾಡಿಯ ನಡುವೆ ವೃತ್ತಾಕಾರದ 'ಅಂಬಾಲ'ಎಂಬ ಚಾವಡಿ ಇರುತ್ತದೆ. ಇದು ಪವಿತ್ರ ಸಾರ್ವಜನಿಕ ಸ್ಥಳವಾಗಿದ್ದು, ಹಬ್ಬಗಳು, ಸಮಾಜೋ-ಧಾರ್ಮಿಕ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ. 'ಅಂಬಾಲ'ದಲ್ಲಿ ಅಗ್ನಿಯನ್ನು ಹಾಕಿದ್ದು ಅದು ಯಾವಾಗಲೂ ನಂದದೇ ಸದಾ ಉರಿಯುತ್ತಿರುತ್ತದೆ. ಎಲ್ಲಾ ಸಾಮಾಜಿಕ ಸಮ್ಮಿಲನಗಳು, ಹಬ್ಬಗಳು, ನ್ಯಾಯ ಪಂಚಾಯಿತಿಗಳೂ ಇಲ್ಲಿಯೇ ನಡೆಯುವುದು. ಒಬ್ಬ ಮುದುಕ ಮತ್ತು ಒಬ್ಬ ಅವಿವಾಹಿತ ಹುಡುಗ ರಾತ್ರಿವೇಳೆ ಅಲ್ಲಿ ಮಲಗುತ್ತಾರೆ.

ಮದುವೆಗಳು ಒಂದು ದಿನದಲ್ಲಿ ಮುಗಿದುಹೋಗುತ್ತವೆ. ತೆರ ಹಾಗೂ ತಾಳಿ ಕಟ್ಟುವ ಪದ್ಧತಿ ಇಲ್ಲ. ಗ್ರಾಮದ ಐದು ಜನ ಮುಖ್ಯಸ್ಥರು ವಿವಾಹ ವಿಧಿ ನಡೆಸುತ್ತಾರೆ. ಈ ಜನಾಂಗ ತಮಿಳು ಶೈಲಿಯ ಕನ್ನಡ ಮಾತನಾಡುತ್ತಾರೆ. ಇವರು ದೇವರು (ಆತ್ಮ) ಮತ್ತು ದೆವ್ವದ ಪರಿಕಲ್ಪನೆಯನ್ನು ನಂಬುತ್ತಾರೆ. ದೇವರ ಗುಡ್ಡರು ದೇವರ ಹಾಡುಗಳನ್ನು ಹಾಡುತ್ತಾ ಮೈಮೇಲೆ ಆವಾಹಿಸಿಕೊಂಡು ಔಷಧ ನೀಡುವವರಂತೆ ವರ್ತಿಸುವರು. ಹಿರೀಕರ ಹಬ್ಬ (ಹಿರಿಯರ) ಇವರ ಬಹುಮುಖ್ಯವಾದ ಹಬ್ಬ. ರಾಗಿಮುದ್ದೆ, ಅಂಬಲಿ, ಸೊಪ್ಪು ಸದೆಗಳು ಇವರ ಆಹಾರ. ಮೃತರನ್ನು ಅವರಿಗೆ ಸೇರಿದ ಬಟ್ಟೆ ಬರೆ ಮುಂತಾದವುಗಳೊಂದಿಗೆ ಹೂಳುತ್ತಾರೆ. ಬಿದಿರುಗಳನ್ನು ಸೀಳಿ ತಡಿಕೆಯನ್ನು ಗೋಡೆಯಂತೆ ಬಳಸಿ ಮೇಲ್ಛಾವಣಿಗೆ ಹುಲ್ಲನ್ನು ಹೊದಿಸಿರುತ್ತಾರೆ. ಗಂಡಸರು ಅಂಗಿ ಚಡ್ಡಿಯನ್ನು ಮಹಿಳೆಯರು ಸೀರೆಯ ತುಂಡನ್ನು ಕುತ್ತಿಗೆಯಿಂದ ಎದೆಭಾಗಕ್ಕೆ ಸುತ್ತಿದಂತೆ ಸೊಂಟಕ್ಕೆ ಕಟ್ಟಿಕೊಂಡಿರುತ್ತಾರೆ. ಇವರು ಇನ್ನೂ ಆಧುನಿಕ ಜಗತ್ತಿಗೆ ಹೊಂದಿಕೊಂಡಿಲ್ಲ.

**ಜೇನುಕುರುಬರು:** ಒಂದು ಪ್ರಾಚೀನ ಬುಡಕಟ್ಟು ಜನಾಂಗವಾದ ಜೇನುಕುರುಬರು ಈ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕನ್ನಡದ ಉಪಭಾಷೆಯೊಂದನ್ನು ಇವರು ಆಡುತ್ತಾರೆ. ಇವರಲ್ಲಿ ಕುಲ, ಬೆಡಗು ಕಂಡುಬರುವುದಿಲ್ಲ. ಹುಡುಗಿ ಮೈನೆರೆದಾಗ ೧೨ ರಿಂದ ೩೦ ದಿವಸಗಳವರೆಗೆ ಗುಡಿಸಲೊಂದರಲ್ಲಿ ಪ್ರತ್ಯೇಕವಾಗಿ ಇಟ್ಟಿರುತ್ತಾರೆ. 'ತೆರ' ಅಥವಾ ಕನ್ಯಾಶುಲ್ಕ ಪದ್ಧತಿ ಇವರಲ್ಲಿದೆ. ನಿರ್ದಿಷ್ಟ ಅಳತೆಯಲ್ಲಿ ಅಕ್ಕಿ ಮತ್ತು ರಾಗಿ ಕೊಡುವುದು ಕಡ್ಡಾಯ. ವಿವಾಹವು ಸಾಮಾನ್ಯವಾಗಿ ವರನ ಮನೆಯಲ್ಲಿ ನೆರವೇರಿಸಲ್ಪಡುತ್ತದೆ. ವಿವಾಹ ವಿಧಿಗಳನ್ನು ನಡೆಸಲು ಓರ್ವ ಜಂಗಮ ಅಥವಾ ಪುರೋಹಿತನನ್ನು ಆಹ್ವಾನಿಸುತ್ತಾರೆ. ಬೀರೇದೇವರು, ಕಲ್ಲೂರಪ್ಪ, ಮಹದೇಶ್ವರ ಮತ್ತು ಇತರೆ ದೇವರುಗಳನ್ನು ಪೂಜಿಸುತ್ತಾರೆ. ಯುಗಾದಿ, ಗಣೇಶ ಚತುರ್ಥಿ, ಶಿವರಾತ್ರಿ, ದಸರಾ ಹಾಗೂ ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಶವವನ್ನು ಶವವಾಹನದಲ್ಲಿಟ್ಟು ಒಯ್ದು, ಕುಳಿತಿರುವ ಭಂಗಿಯಲ್ಲಿ ತಲೆಯನ್ನು ದಕ್ಷಿಣ ದಿಕ್ಕಿನತ್ತ ಇಟ್ಟು ಹೂಳುವರು. ಸಾವು ಸಂಭವಿಸಿದಾಗ ಇವರು ಮೂರರಿಂದ ಹನ್ನೊಂದು ದಿವಸಗಳ ಕಾಲ ಸೂತಕವನ್ನಾಚರಿಸುತ್ತಾರೆ. ಗೌರವಾನ್ವಿತ ಮತ್ತು ವಯೋವೃದ್ಧನೊಬ್ಬ ಮೃತನಾದಲ್ಲಿ ಶವವನ್ನು ಸುಡುವ ಪದ್ಧತಿಯನ್ನು ಅನುಸರಿಸುತ್ತಾರೆ. ಬೀರೇದೇವರು, ಮಹದೇಶ್ವರ ಮುಂತಾದ ದೇವರುಗಳ ಗೌರವಾರ್ಥ ದೇವರಗುಡ್ಡ ಪದ್ಧತಿಯನ್ನು ಹೊಂದಿದ್ದಾರೆ.

**ಬಂಜಾರರು (ಲಂಬಾಣಿಗಳು):** ಮೂಲತಃ ರಾಜಾಸ್ತಾನದವರಾದ ಇವರು ಭಾರತದಾದ್ಯಂತ ಇದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಉತ್ತರ ಕರ್ನಾಟಕದಿಂದ ಬಂದವರೆಂದು ಹೇಳಲಾಗುವ ಬಂಜಾರರ ಸಂಖ್ಯೆ ಅಷ್ಟೇನೂ ಹೆಚ್ಚಾಗಿಲ್ಲ. ಇರುವವರಲ್ಲಿ ಕೃಷಿಕರು, ಕೃಷಿ ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳೇ ಅಧಿಕ. ಸ್ಥಳೀಯವಾಗಿ ಇವರನ್ನು ಸುಕಾಲಿ, ಸುಕಾಲಿಗ ಮತ್ತು ಲಮಾಣಿ, ವಂಜಾರ ಎಂಬ ಹೆಸರುಗಳಿಂದಲೂ ಕರೆಯುವುದುಂಟು. ಇದೊಂದು ಜಾತಿ ಸೂಚಕವಾಗಿರದೇ ಕುಲವೃತ್ತಿ ಸೂಚಕವಾಗಿದೆ. ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನದಲ್ಲಿ ಬಂಜಾರರು, ಮರಾಠ, ನಿಜಾಮ ಮತ್ತು ಇನ್ನಿತರರ ಸೇನೆಗಳ ಹಿಂದೆ ಸರಕು ಹೊರುವ ಎತ್ತುಗಳೊಡನೆ ಸಾಗುತ್ತಾ ಅಕ್ಕಿ, ಹುರಳಿ, ಉಪ್ಪು, ಹುಲ್ಲು, ಮುಂತಾದ ಸಾಮಗ್ರಿಗಳನ್ನು ಪೂರೈಸುತ್ತಿದ್ದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಮಾತ್ರವಲ್ಲದೆ ಅವರ ವಿರೋಧಿಗಳಾಗಿದ್ದ ಬ್ರಿಟಿಷರು ಕೂಡ ಯುದ್ಧ ಕಾಲದಲ್ಲಿ ಬಂಜಾರರ ಸರಬರಾಜಿನ ಮೇಲೆ ಸಾಕಷ್ಟು ಅವಲಂಬನೆ ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಬಂಜಾರರಲ್ಲಿ ಬಹುತೇಕರು ಹೆಚ್ಚು ಕಡಿಮೆ ಅಲೆಮಾರಿಗಳಾಗಿದ್ದು, ಧಾನ್ಯಗಳು ಮತ್ತು ಉಪ್ಪನ್ನು ಸಾಗಿಸುವುದನ್ನೇ ಮುಖ್ಯ ಕಾಯಕವನ್ನಾಗಿ ಮಾಡಿಕೊಂಡಿದ್ದರು. ವ್ಯಾಪಾರಕ್ಕಾಗಿ ಗುಂಪು ಗುಂಪಾಗಿ ವಲಸೆ ಹೋಗುತ್ತಿದ್ದರು. ಆಗ ತಾತ್ಕಾಲಿಕವಾಗಿ ಉಳಿದುಕೊಳ್ಳಲು ತಾಂಡಾ ಕಟ್ಟಿಕೊಳ್ಳುತ್ತಿದ್ದರು. ಈಗಲೂ ಸಹ ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿರದಿದ್ದಾಗ ಇವರು ಸೌದೆಯನ್ನು ಸಂಗ್ರಹಿಸುತ್ತಾರೆ ಮತ್ತು ಬಂಜಾರ ಸ್ತ್ರೀಯರು ಅದನ್ನು ತಲೆ ಮೇಲೆ ಹೊತ್ತೊಯ್ದು ಮಾರುತ್ತಾರೆ. ಗ್ರಾಮೀಣ ಪ್ರದೇಶದ ಬಂಜಾರರು ತಾಂಡಾಗಳೆಂದು ಕರೆಯಲಾಗುವ ಗುಡಿಸಲುಗಳ ಗುಂಪುಗಳಲ್ಲಿ ವಾಸಿಸುತ್ತಾರೆ. ತಾಂಡಾದ ಯಜಮಾನ ಅಥವಾ ನಾಯ್ಕನು ಹಿಂದೆ ತನ್ನ ಜನರಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುತ್ತಿದ್ದನು. ಪ್ರೌಢದೆಶೆ ತಲುಪಿದ ನಂತರವಷ್ಟೇ ಹುಡುಗಿಯ ವಿವಾಹ ಇವರಲ್ಲಿ ಜರುಗುವ ರೂಢಿ ಇದೆ, ಮತ್ತು ಕನ್ಯಾ ಶುಲ್ಕ ಪಡೆಯುವ ಪರಿಪಾಠವೂ ಇವರಲ್ಲಿದೆ. ವಿಧವಾ ವಿವಾಹವಾಗಲೀ ಬಹುಪತ್ನಿತ್ವವಾಗಲೀ ಇವರಲ್ಲಿ ಪ್ರತಿಬಂಧಿಸಲ್ಪಟ್ಟಿಲ್ಲ. ನಾಗರೀಕತೆ ಬೆಳೆದಂತೆಲ್ಲಾ ವೃತ್ತಿ ಬದಲಾದರೂ ಇವರು ತಮ್ಮ ಆಚಾರ, ವಿಚಾರ, ಸಂಸ್ಕೃತಿ, ಉಡುಪು, ಸಂಪ್ರದಾಯ ಬದಲಿಸಿಕೊಂಡಿಲ್ಲ. ಬಂಜಾರ ಹೆಂಗಸರು ಒಂದು ತೆರನಾದ ವಿಶಿಷ್ಟ ಉಡುಗೆಯನ್ನು ತೊಡುವರು ಮತ್ತು ಕವಡೆಗಳು ಮತ್ತು ಬಳೆಗಳನ್ನು ಧಾರಾಳವಾಗಿ ಧರಿಸಿ ಅಲಂಕರಿಸಿಕೊಳ್ಳುವರು. ಲಂಬಾಣಿಗರು ವೈಷ್ಣವರು ಮತ್ತು ಕೃಷ್ಣನ ಆರಾಧಕರು. ಇವರು ವನದೇವತೆಯಾದ ಬನಶಂಕರಿ, ಬಸವ, ತುಳಜಾಭವಾನಿ, ಬಾಲಾಜಿ

ಮತ್ತು ಇತರೆ ದೇವತೆಗಳನ್ನು ಪೂಜಿಸುವರು. ಗೋಸಾಯಿಗಳು, ತಮ್ಮ ಗುರುಗಳು ಮತ್ತು ಪುರೋಹಿತರೆಂದರೆ ಲಂಬಾಣಿಗಳು ಗೌರವದಿಂದ ಕಾಣುವರು. ಇವರ ಪೋಷಕ ಸಂತರೆಂದರೆ ಸೇವಯ ಭಯ್ಯ, ಮಿಟ್ಟು ಭಯ್ಯ ಮತ್ತು ಭಜನ್ ನಾಯಕ. ಬಂಜಾರ ಸ್ತ್ರೀಯರು ನಾಗರಸಿ, ಅಸವೇರಿ, ಖೋಗರಸಿ ಮತ್ತು ಪಿಬ್ಬಲ ದೇವಿಯರನ್ನು ಆರಾಧಿಸುವರು. ಬಂಜಾರರು ಆಚರಿಸುವ ಮುಖ್ಯವಾದ ಹಬ್ಬಗಳೆಂದರೆ ಗೌರಿ, ದಸರಾ, ದೀಪಾವಳಿ ಮತ್ತು ಹೋಳಿ. ಸತ್ತವರನ್ನು ಚಿತೆಯಲ್ಲಿಟ್ಟು ದಹಿಸುವ ಪದ್ಧತಿಯಿದೆ. ಇವರು ವಾಸ ಮಾಡುವ ತಾಂಡಾಗಳನ್ನು ಈಗ ಕಂದಾಯ ಗ್ರಾಮಗಳೆಂದು ಮಾನ್ಯ ಮಾಡಲಾಗಿದೆ.

**ಬೇಡರು:** ಬೇಡ ಪದವು ಸಂಸ್ಕೃತ ಮೂಲದ 'ವ್ಯಾಧ' ಎಂಬುದರ ಅಶುದ್ಧ ರೂಪವಾಗಿದ್ದು ಬೇಟೆಗಾರ ಎಂಬ ಅರ್ಥವನ್ನು ಕೊಡುತ್ತದೆ. ಆದಿಕವಿ, ಋಷಿ ವಾಲ್ಮೀಕಿ ಬೇಡರವನಾಗಿದ್ದ ಕಾರಣದಿಂದ ಇವರು ತಮ್ಮನ್ನು ವಾಲ್ಮೀಕಿ ಮತಸ್ಥರೆಂದು ಕರೆದುಕೊಳ್ಳುತ್ತಾರೆ. ಮೂಲತಃ ಬೇಟೆಗಾರರಾಗಿದ್ದ ಇವರು ಕಾಲಕ್ರಮೇಣ ಕೃಷಿಕ್ಷೇತ್ರ, ಸರ್ಕಾರಿ ಸೇವೆ ಮುಂತಾದವುಗಳಲ್ಲಿ ದುಡಿಯಲಾರಂಭಿಸಿದರು. ಇವರನ್ನು ತೆಲುಗಿನಲ್ಲಿ ಬೋಯ ಅಥವಾ ಬೋಯಿ ಎಂದೂ ಮರಾಠಿಯಲ್ಲಿ ರಾಮೋಷಿಗಳೆಂದೂ, ಕನ್ನಡದಲ್ಲಿ ಬೇಡ ಅಥವಾ ಬೇಡರ್ ಎಂದೂ ಕರೆಯುವರು. ತಮಿಳಿನಲ್ಲಿ ಇದರ ಸಮಾನಾರ್ಥಕ ಪದವೆಂದರೆ ವೇದನ್. ಮೂಲತಃ ಇವರು ತೆಲುಗು ಭಾಷಿಕರೆ ಆಗಿದ್ದು ಕರ್ನಾಟಕದ ಜಿಲ್ಲೆಗಳಲ್ಲಿ ದೀರ್ಘ ಕಾಲದಿಂದ ವಾಸಿಸುತ್ತಾ ಬಂದವರು. ಕನ್ನಡವನ್ನೇ ತಮ್ಮ ಮಾತೃಭಾಷೆಯನ್ನಾಗಿ ಸ್ವೀಕರಿಸಿದ್ದಾರೆ. ಈ ಜಾತಿಯ ಗೋತ್ರಗಳೆಂದರೆ, ಊರು, ಮ್ಯಾಸ, ಗುಡ್ಲು, ಮರೆಮ್ಮ, ಹಾಲು ಮತ್ತು ಮೊಂಡ. ಊರು ಬೇಡರೇ ಇವರಲ್ಲಿ ಬಹು ಸಂಖ್ಯಾತರು. ಊರು ಬೇಡರು ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ವಾಸಿಸುವ ಕಾರಣದಿಂದಾಗಿ ಈ ಹೆಸರನ್ನು ಪಡೆದಿರುತ್ತಾರೆ. ಹಿಂದೊಮ್ಮೆ ಅಲೆಮಾರಿಗಳಾಗಿದ್ದ ಮೊಂಡ ಬೇಡರು ಭಿಕ್ಷಾಟನೆಯಿಂದ ಜೀವಿಸುತ್ತಿದ್ದರು. ತಾತ್ಕಾಲಿಕ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಗುಡ್ಲು ಬೇಡರು ಇವರಲ್ಲಿ ಒಂದು ಕನಿಷ್ಠದರ್ಜೆಗೆ ಸೇರಿದವರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ವಾಸ ಸ್ಥಳ, ಉದ್ಯೋಗಗಳು ಮತ್ತು ಬದುಕಿನ ವಿಧಾನ ಮುಂತಾದವುಗಳಲ್ಲಿ ಅನೇಕ ಬದಲಾವಣೆಗಳು ಬೇಡ ಜನಾಂಗದವರಲ್ಲಿ ಕಂಡು ಬಂದಿದೆ. ಇವರನ್ನು ನಾಯ್ಕ, ವಾಲ್ಮೀಕಿ, ಮತ್ತು ತಳವಾರ, ನಾಯಕಮಕ್ಕಳು ಎಂದು ಗುರುತಿಸಲಾಗುತ್ತದೆ.

ಅನೇಕ ಭಿನ್ನಗೋತ್ರ ವಿವಾಹದ ವರ್ಗಗಳಾಗಿ ಈ ಜಾತಿಯನ್ನು ವಿಂಗಡಿಸಲಾಗಿದ್ದರೂ ಇವರ ಸಮಗ್ರತೆಯನ್ನು ಅತ್ಯಂತ ಎಚ್ಚರಿಕೆಯಿಂದ ಕಾಯ್ದು ಕೊಳ್ಳುವರು. ಇವರಲ್ಲಿ ಬಾಲ್ಯವಿವಾಹ ಪದ್ಧತಿ ಇಲ್ಲ. ಕನ್ಯಾಶುಲ್ಕವನ್ನು ನೀಡುವ ಪರಿಪಾಠವಿದೆ. ವಿಧವಾ ವಿವಾಹಕ್ಕೆ ಮಾನ್ಯತೆಯಿದೆ ಮತ್ತು ಸಾಮಾನ್ಯ ಆಚರಣೆಯಲ್ಲಿಯೂ ಇದೆ. ಜಾತಿಭ್ರಷ್ಟತೆ ಮತ್ತು ವ್ಯಭಿಚಾರ ವಿವಾಹವಿಚ್ಛೇದನಕ್ಕೆ ಕಾರಣಗಳಾಗಿವೆ. ಈ ಜಾತಿಯಲ್ಲಿ ಹಿಂದೆ ಬಸವಿಯರನ್ನು ಬಿಡುವ ಪದ್ಧತಿ ಇತ್ತು. ಇಂತಹ ಸ್ತ್ರೀಯರ ಮಕ್ಕಳನ್ನು ಕ್ರಮಬದ್ಧ ಸಂತಾನವೆಂದೇ ಪರಿಗಣಿಸುತ್ತಿದ್ದರಲ್ಲದೆ ಅಜ್ಜನ ಆಸ್ತಿಯಲ್ಲಿ ಒಂದು ಪಾಲನ್ನು ನೀಡುತ್ತಿದ್ದರು. ಬೇಡರು ಯಾವುದೇ ಶ್ರಾದ್ಧಕಾರ್ಯವನ್ನು ನಡೆಸುವುದಿಲ್ಲ. ಶ್ರೀವೈಷ್ಣವ ಬ್ರಾಹ್ಮಣನೋರ್ವನಿಂದ ಚಕ್ರಾಂಕಿತವನ್ನು ಹಾಕಿಸಿಕೊಂಡು ತೀರ್ಥಪ್ರಸಾದವನ್ನು ಸ್ವೀಕರಿಸುತ್ತಾರೆ. ಬೇಡರಲ್ಲಿ ಕೆಲವರು ಶೈವರೂ ಇರಬಹುದು. ಬೇಡ ಜನಾಂಗದ ಆರಾಧ್ಯ ದೇವತೆಗಳೆಂದರೆ ಗಂಗಮ್ಮ, ಮಾರಮ್ಮ, ಕಾವಲಮ್ಮ, ಲಕ್ಕಮ್ಮ, ದುರ್ಗಮ್ಮ ಮತ್ತು ಚೆಲಾಪುರಮ್ಮ. ಬೇರೆ ಕೆಲವು ಜಾತಿಯವರಂತೆ ಇವರೂ ಸಹ ವೃಕ್ಷಗಳಲ್ಲಿ ಇರುವ ಸಂತನೋರ್ವನ ಆತ್ಮವೆಂದು ನಂಬಲಾದ ಮುನೀಶ್ವರನನ್ನು ಪೂಜಿಸುವರು. ಇವರು ಆರಾಧಿಸುವ ದೇವರುಗಳೆಂದರೆ ಹನುಮಂತ, ಈಶ್ವರ ಮತ್ತು ವೆಂಕಟರಮಣ. ಇವರು ಭೇಟಿ ನೀಡುವ ತೀರ್ಥ ಕ್ಷೇತ್ರಗಳೆಂದರೆ ನಂಜನಗೂಡು ಮತ್ತು ತಿರುಪತಿ. ಇತ್ತೀಚೆಗೆ ಬೇಡರು ತಮ್ಮದೇ ಒಂದು ಮಠವನ್ನು ಸ್ಥಾಪಿಸಿಕೊಂಡಿದ್ದಾರೆ.

## ಸಾಮಾಜಿಕ ಜೀವನ

ಸಾಮಾಜಿಕ ಜೀವನ ಅಥವಾ ಕೌಟುಂಬಿಕ ಜೀವನ ಪದ್ಧತಿಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಸಹಜ. ಅಲ್ಲಿನ ಬದುಕು, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಪರಂಪರೆ, ಧಾರ್ಮಿಕತೆ ಮುಂತಾದವುಗಳ ಹಿನ್ನೆಲೆಯಿಂದ ಕೂಡಿರುತ್ತದೆ. ಪಟ್ಟಣ ಮತ್ತು ಗ್ರಾಮೀಣ ಜನಜೀವನಕ್ಕೆ ಅಂತಹ ವ್ಯತ್ಯಾಸವೇನೂ ಕಂಡು ಬರುವುದಿಲ್ಲ. ಜಾಗತೀಕರಣ ಮತ್ತು ಉದಾರೀಕರಣದ ಕಾರಣದಿಂದ ವ್ಯತ್ಯಾಸದ ಅಂತರ ಕಡಿಮೆಯಾಗಿರುವುದು ಕಂಡು ಬರುತ್ತದೆ.

ಜಿಲ್ಲೆಯಲ್ಲಿ ಮುಖ್ಯ ಆಹಾರ ಬೆಳೆಗಳು ಭತ್ತ, ರಾಗಿ, ಜೋಳ, ಸಜ್ಜೆ ಮುಸುಕಿನ ಜೋಳ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುವುದರಿಂದ ಮುದ್ದೆ, ಅನ್ನ ರೊಟ್ಟಿ ಪ್ರಮುಖ ಆಹಾರವಾಗಿದೆ. ಕಬ್ಬು, ಹತ್ತಿ, ರೇಷ್ಮೆ, ನೆಲಗಡಲೆ, ಸೂರ್ಯಕಾಂತಿ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ಸ್ವಲ್ಪ ಮಟ್ಟಿಗಾದರೂ ಆರ್ಥಿಕ ಸುಧಾರಣೆ ಕಾಣಬಹುದು. ದನಕರು, ಎಮ್ಮೆ, ಕುರಿ, ಮೇಕೆ, ಹಂದಿ, ಕೋಳಿಸಾಕಣೆ, ಮೀನುಸಾಕಣೆ, ಪಶುಪಾಲನೆ ಕೂಡ ಜೀವನದ ಒಂದು ಭಾಗವಾಗಿದೆ. ಬಿಳಿಗಿರಿರಂಗನ ಬೆಟ್ಟದ ಕಾನನದಲ್ಲಿ ಬುಡಕಟ್ಟು ಜನಾಂಗವಿದ್ದು ಅವರನ್ನು ಆಧುನಿಕ ಬದುಕಿಗೆ ಒಗ್ಗಿಸುವ ಯತ್ನ ಮಾಡಲಾಗುತ್ತಿದೆ. ಸಮೃದ್ಧ ಜಾನಪದ ಸಾಹಿತ್ಯ ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ. ಎಲ್ಲ ಜಿಲ್ಲೆಗಳಂತೆ ಈ ಜಿಲ್ಲೆಯೂ ಸಾರಿಗೆ ಸಂಪರ್ಕ, ಪ್ರವಾಸೋದ್ಯಮ, ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹಂತ ಹಂತವಾಗಿ ಹೆಜ್ಜೆ ಹಾಕುತ್ತಿದೆ. ರೇಷ್ಮೆನೂಲು ತೆಗೆಯುವ, ರೇಷ್ಮೆ ಉದ್ಯಮ ಕೊಳ್ಳೆಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳಲ್ಲಿನ ಹೆಚ್ಚಿನ ಸಂಖ್ಯೆಯ ಜನಾಂಗದವರ ಏಳಿಗೆಗೆ ಕಾರಣವಾಗಿದೆ. ಜಿಲ್ಲೆಯ ವಿವಿಧ ಜನವರ್ಗಗಳ ನಂಬಿಕೆ ಕುಟುಂಬ ವ್ಯವಸ್ಥೆ, ಸಂಪ್ರದಾಯ ಸಂಸ್ಕೃತಿ ಜೀವನ ವಿಧಾನಗಳನ್ನು ಸ್ಥೂಲವಾಗಿ ಈ ರೀತಿ ನೋಡಬಹುದಾಗಿದೆ.

## ಅವಿಭಕ್ತ ಕುಟುಂಬ ಪದ್ಧತಿ

ವ್ಯಕ್ತಿಗಿಂತ ಕುಟುಂಬವನ್ನೇ ಸಾಮಾಜಿಕ ವ್ಯವಸ್ಥೆಯ ಘಟಕವನ್ನಾಗಿ ನೋಡುವ ರೂಢಿ ಬಹಳ ಹಿಂದಿನಿಂದಲೇ ಇತ್ತು. ಪ್ರದೇಶವೊಂದರ ಜನ ಬಾಹುಳ್ಯವನ್ನು ತಲೆಗಳ ಲೆಕ್ಕದಲ್ಲಿ ಅಂದಾಜು ಮಾಡದೆ ಕುಟುಂಬಗಳ ಸಂಖ್ಯಾನುಸಾರ ಮಾಡುತ್ತಿದ್ದರು. ದೇಶದ ಬೇರೆಬೇರೆ ಭಾಗಗಳಲ್ಲಿದ್ದಂತೆ ಚಾಮರಾಜನಗರ ಜಿಲ್ಲೆಯಲ್ಲಿ ಕೂಡ ಸಾಂಪ್ರದಾಯಿಕ ಕುಟುಂಬ ಪದ್ಧತಿಯೆಂದರೆ ಅವಿಭಕ್ತ ಕುಟುಂಬ ಪದ್ಧತಿಯೇ ಆಗಿತ್ತು. ಮನುಧರ್ಮ ಶಾಸ್ತ್ರ ರಚನೆಯ ಕಾಲಕ್ಕಾಗಲೇ ಅವಿಭಕ್ತ ಕುಟಂಬ ಪದ್ಧತಿಯು ನೆಲೆಯೂರಿತ್ತು. ಆದರೆ ಸುಮಾರು ೧೧ನೇ ಶತಮಾನದ ಅವಧಿಯಲ್ಲಿ ವಿಜ್ಞಾನೇಶ್ವರನು ಬರೆದ 'ಮಿತಾಕ್ಷರ' ಎಂಬ ಕೃತಿಯಲ್ಲಿ ಅವಿಭಕ್ತ ಕುಟುಂಬ ಪದ್ಧತಿಯ ಕಾನೂನು ಚೌಕಟ್ಟನ್ನು ಸ್ಪಷ್ಟಪಡಿಸಲಾಗಿದೆ. ವಿಜ್ಞಾನೇಶ್ವರನು ತನಗಿಂತ ಹಿಂದಿನ ಅನೇಕ ಶತಮಾನಗಳ ದೀರ್ಘ ಅವಧಿಯಲ್ಲಿ ಬೆಳೆದು ಬಂದಿದ್ದ ಸಂಪ್ರದಾಯಗಳನ್ನು ಸೂತ್ರ ರೂಪದಲ್ಲಿ ವ್ಯಕ್ತಗೊಳಿಸಿರುತ್ತಾನೆ. ಅಂದಿನಿಂದ ಇಂದಿನವರೆಗೂ ಹಿಂದೂಗಳು 'ಮಿತಾಕ್ಷರ'ದಲ್ಲಿ ನಿರ್ದಿಷ್ಟಪಡಿಸಿರುವ ನಿಯಮಗಳನ್ನೇ ಕುಟುಂಬದ ಸದಸ್ಯರುಗಳ ನಡುವಿನ ಹಕ್ಕುಗಳು ಮತ್ತು ಕರ್ತವ್ಯಗಳ ನಿರ್ವಹಣೆ ಸಂಬಂಧ ಅನುಸರಿಸುತ್ತಾ ಬಂದಿದ್ದಾರೆ. 'ಮಿತಾಕ್ಷರ' ಸಂಪ್ರದಾಯದ ಪ್ರಕಾರ ಕುಟುಂಬದ ಯಜಮಾನನು ಬದುಕಿರುವಾಗಲೇ ಗಂಡು ಮಕ್ಕಳು ಮತ್ತು ಮೊಮ್ಮಗಂದಿರು ಕುಟುಂಬದ ಆಸ್ತಿಯಲ್ಲಿ ಪಾಲು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. 'ಮಿತಾಕ್ಷರ' ಮತ್ತು ಬಂಗಾಳ ಮತ್ತು ಅಸ್ಸಾಂ ಪ್ರದೇಶಗಳಲ್ಲಿ ಪ್ರಚಲಿತವಿರುವ 'ದಾಯಭಾಗ' ಎಂಬ ಎರಡೂ ಸಂಪ್ರದಾಯಗಳು ಯಜಮಾನನು ಕುಟುಂಬದ ಪರವಾಗಿ ಕೇವಲ ಓರ್ವ

ಧರ್ಮದರ್ಶಿ ಮತ್ತು ಪಾರುಪತ್ಯಗಾರನಾಗಿರುತ್ತಾನೆ ; ತನ್ನ ಸಂತತಿಯವರನ್ನು ಬಡವರನ್ನಾಗಿಸುವ ರೀತಿಯಲ್ಲಿ ಆಸ್ತಿಯನ್ನು ಬೇರಾರಿಗೂ ನೀಡುವ ಹಕ್ಕನ್ನು ಹೊಂದಿರುವುದಿಲ್ಲ ಎಂದು ಒಪ್ಪುತ್ತವೆ. ಗಂಡು ಸಂತತಿ ಇಲ್ಲದ ಮಹಿಳೆ ನ್ಯಾಯ ರೀತಿಯಲ್ಲಿ ಹಕ್ಕುದಾರಳಾಗಿರುತ್ತಾಳೆಂದು 'ಮಿತಾಕ್ಷರ' ಸಂಪ್ರದಾಯವು ಮಾನ್ಯಮಾಡುತ್ತದೆ.

ಇತ್ತೀಚಿನ ದಶಕಗಳಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ತೀವ್ರಗತಿಯಲ್ಲಿ ಇಳಿಮುಖವಾಗಿದೆ; ಗ್ರಾಮೀಣ ಪ್ರದೇಶಗಳೂ ಈ ಪ್ರವೃತ್ತಿಯಿಂದ ಹೊರಗೇನೂ ಉಳಿದಿಲ್ಲ. ಇದಕ್ಕೆ ಕಾರಣಗಳು ಅನೇಕ : [೧] ನಗರೀಕರಣ ಮತ್ತು ಕೈಗಾರಿಕೀರಣದಿಂದಾಗಿ ಅವಿಭಕ್ತ ಕುಟಂಬಗಳ ಸದಸ್ಯರು ನಗರ ಪ್ರದೇಶಗಳಿಗೆ ಉದ್ಯೋಗ ಮಾಡಲು ಹೋಗಿ ಅಲ್ಲಿಯೇ ತಮ್ಮ ಹೆಂಡತಿ ಮಕ್ಕಳೊಂದಿಗೆ ನೆಲೆಸುವ ಪ್ರವೃತ್ತಿ; [೨] ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸುವ ಪ್ರವೃತ್ತಿಯಿಂದಾಗಿ ಚಿಕ್ಕ ಕುಟುಂಬಗಳೇ [ಪತಿ, ಪತ್ನಿ ಮತ್ತು ಒಂದೋ ಎರಡೋ ಮಕ್ಕಳು] ಆದರ್ಶ ಎನಿಸಿಕೊಳ್ಳುತ್ತಿವೆ; [೩] ಹೆಚ್ಚೆಚ್ಚು ಆಸ್ತಿ ಮಾಡುವ ಗೀಳು ಮತ್ತು ತಮ್ಮ ಮಕ್ಕಳಿಗೇ ಅದನ್ನು ಅನುಭವಿಸುವ ಹಕ್ಕು ಮತ್ತು ಅವಕಾಶಗಳಿರಬೇಕೆನ್ನುವ ಅಭಿಲಾಷೆ; [೪] ವಿದ್ಯಾ ಪ್ರಸಾರ, ಸುಲಭ ಮತ್ತು ಆರಾಮದಾಯಕ ಸಾರಿಗೆ ಸಂಪರ್ಕಗಳ ಬೆಳವಣಿಗೆ; ಮತ್ತು, [೫] ಸ್ವಾರ್ಥ ಸಾಧನೆ, ಅಸಹನೆ, ಮತ್ತು ಸ್ವೇಚ್ಛಾ ಪ್ರವೃತ್ತಿ, ಇತ್ಯಾದಿ.

**ವಿವಾಹ**

ಹಿಂದೂಗಳಲ್ಲಿ ವಿವಾಹವು ಒಂದು ಸಂಸ್ಕಾರ. ಓರ್ವ ಹಿಂದುವಿನ ಜೀವನದಲ್ಲಿ ಇದು ಅಗತ್ಯವೇಕೆಂದರೆ, ಪತ್ನಿಯೋರ್ವಳಿಲ್ಲದೆ ಅವನು ಗೃಹಸ್ಥಾಶ್ರಮದ ಹಂತವನ್ನು ಪ್ರವೇಶಿಸಲಾರ. ಮನುವಿನ ಮಾತುಗಳಲ್ಲಿ ಹೇಳುವುದಾದರೆ, ಜನನ ಮತ್ತು ಮರಣ ವರ್ತುಲದಿಂದ ಪಾರಾಗಲು ಓರ್ವ ವ್ಯಕ್ತಿಯು ಮಮಕಾರ ಮತ್ತು ನಿರ್ಲಿಪ್ತತೆ, ಭೋಗ ಮತ್ತು ವಿರಕ್ತಿ, ಅಹಂಪ್ರತಿಪಾದ್ಯತೆ ಮತ್ತು ಅಹಂ ನಿರಾಕರಣೆ ಎಲ್ಲವನ್ನೂ ತನ್ನ ಜೀವನದಲ್ಲಿ ಒಂದಾಗಿಸಿಕೊಳ್ಳುವ ಮೂಲಕ ತನು, ಮನ ಮತ್ತು ಆತ್ಮವನ್ನು ಪರಿಶುದ್ಧಗೊಳಿಸಿಕೊಳ್ಳಬೇಕು. ಹಿಂದೂಗಳಲ್ಲಿ ವಿವಾಹವು ಒಂದು ಒಪ್ಪಂದವಲ್ಲ. ವಿವಾಹ ಮಾಡಿಕೊಂಡು ಸಂತಾನವನ್ನು ಪಡೆದು ಪತ್ನೀ ಸಮೇತ ಗೃಹಸ್ಥಾಶ್ರಮ ಯೋಗ್ಯವಾದ ಸ್ಮಾರಕ ಮತ್ತು ಶ್ರೌತಕರ್ಮಗಳನ್ನು ಮಾಡಿ ಇಹ ಪರಗಳೆಡರಲ್ಲಿಯೂ ಸೌಖ್ಯವನ್ನು ಪಡೆದು ಬ್ರಹ್ಮ ಸಾಯುಜ್ಯವನ್ನು ಹೊಂದುವುದೇ ವಿವಾಹ ಸಂಸ್ಕಾರದ ಗುರಿ.

ಕುಲದೊಳಗೆ ಅಥವಾ ಕುಲದಿಂದ ಹೊರಗೆ ಹೀಗೆ ಎರಡೂ ರೀತಿಯ ವಿವಾಹ ಸಂಬಂಧವು ಹಿಂದೂಗಳಲ್ಲಿ ರೂಢಿಯಲ್ಲಿದೆ. ವಿವಾಹವು ವ್ಯಕ್ತಿಯೋರ್ವನ ಜಾತಿ ಅಥವಾ ಕುಲದೊಳಗೆ ಮಾತ್ರ ನಡೆಯಬೇಕು. ಇದಕ್ಕೆ ಕೆಲವು ಅಪವಾದಗಳುಂಟು. ಅನುಲೋಮ ಪದ್ಧತಿಯಲ್ಲಿ ಕೆಳಜಾತಿಯ ಹೆಣ್ಣು ಮೇಲ್ಜಾತಿಯ ಪುರುಷನನ್ನು ವಿವಾಹವಾಗಬಹುದು. ಇದೇ ರೀತಿ, ಪ್ರತಿಲೋಮ ಪದ್ಧತಿಯಲ್ಲಿ ಮೇಲ್ಜಾತಿಯ ಹೆಣ್ಣು ಕೆಳಜಾತಿಯ ಪುರುಷನನ್ನು ವಿವಾಹವಾಗಬಹುದು.

ಎರಡನೆಯ ಪದ್ಧತಿಯ ಯಾವ್ಯಾವ ಪಂಗಡಗಳ ನಡುವೆ ವಿವಾಹ ಸಂಬಂಧ ಸಲ್ಲದು ಎಂಬುದನ್ನು ಗೊತ್ತುಪಡಿಸುತ್ತದೆ. ಸಪಿಂಡ ಮತ್ತು ಸಗೋತ್ರ ವಿವಾಹ ಸಂಬಂಧಗಳು ನಿಷೇಧಿಸಲ್ಪಟ್ಟಿವೆ.

ಹಿಂದೂ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಎಂಟು ವಿಧವಾದ ವಿವಾಹಗಳನ್ನು ಮಾನ್ಯ ಮಾಡಲಾಗಿದೆ. ಅವುಗಳೆಂದರೆ, ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಗಾಂಧರ್ವ, ಅಸುರ, ರಾಕ್ಷಸ ಮತ್ತು ಪೈಶಾಚ. ಮೊದಲು ಹೇಳಿರುವ ನಾಲ್ಕು ರೀತಿಯ ವಿವಾಹಗಳನ್ನು ಮಾತ್ರವೇ ಶುದ್ಧ ನ್ಯಾಯ ಸಮ್ಮತವೆಂದು ತಿಳಿಯಲಾಗಿತ್ತು. ಆರ್ಯರು ಮತ್ತು ಆರ್ಯರಲ್ಲದವರ ನಡುವೆ ಬೆಳೆದ ಸಂಪರ್ಕ, ವಿದೇಶೀಯರ ಆಕ್ರಮಣ ಮತ್ತು ನೆಲೆಸುವಿಕೆ

ಮುಂತಾದ ಕಾರಣಗಳಿಂದಾಗಿ ಉದ್ಭವಿಸಿದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ಕಾಲಕಾಲಕ್ಕೆ ಹಿಂದೂ ಶಾಸ್ತ್ರಕಾರರು ಬೇರೆ ವಿಧವಾದ ವಿವಾಹಗಳನ್ನು ಮಾನ್ಯ ಮಾಡಿದರು. ಮುಖ್ಯವಾಗಿ ವಧುವಿನ ಖರೀದಿ, ಅಪಹರಣ ಮತ್ತು ಪಲಾಯನ ಮುಂತಾದ ವಿಧಾನಗಳ ಮೂಲಕ ಮಾಡಿಕೊಳ್ಳುತ್ತಿದ್ದ ವಿವಾಹಗಳನ್ನು ಅವರು ಮಾನ್ಯ ಮಾಡಿದರು. ಸ್ತ್ರೀಯರಿಗೆ ಇದರಿಂದ ಆಗುತ್ತಿದ್ದ ಮಾನಸಿಕ ಕಿರುಕುಳವನ್ನು ತಪ್ಪಿಸಿ ಪತ್ನಿಯ ಸ್ಥಾನಮಾನವನ್ನು ಶಾಸನಾತ್ಮಕವಾಗಿ ಅವರಿಗೆ ದೊರಕಿಸಲು ಇದು ಅನುವು ಮಾಡಿಕೊಟ್ಟಿತು.

ವಧೂ ವರರ ಶೋಧ ಈಗ ಹಿಂದಿನಷ್ಟು ಕಷ್ಟ ಕಾರ್ಯವಾಗುಳಿದಿಲ್ಲ. ಹಿಂದಿನಂತೆಯೇ ಬಂಧುಮಿತ್ರರ ಸಹಾಯ ಪಡೆದುಕೊಳ್ಳುವ ಪರಿಪಾಠ ಮುಂದುವರೆದಿದೆಯಾದರೂ ಅದರ ಜೊತೆಗೇ ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ, ದೇವಾಲಯ, ಮಠ ಮತ್ತು ಜಾತಿ ಸಂಘಟನೆಗಳಲ್ಲಿ ನೋಂದಣಿ ಮಾಡುವ ಮತ್ತು ವಧೂ ವರರ ಮೇಳ [ಸಾಮಾನ್ಯವಾಗಿ ಜಾತಿವಾರು]ಗಳಲ್ಲಿ ಭಾಗವಹಿಸುವ ನವೀನ ಪದ್ಧತಿಗಳೂ ಆಚರಣೆಗೆ ಬಂದಿವೆ. ಸ್ವಲ್ಪ ಮಟ್ಟಿಗೆ ಪ್ರೇಮವಿವಾಹ, ಅಂತರ್ಜಾತೀಯ ಮತ್ತು ಅಂತರ್ಧರ್ಮೀಯ ವಿವಾಹಗಳೂ ನಡೆಯುವುದುಂಟು. ಇಂತಹ ವಿವಾಹಗಳನ್ನು ನೋಂದಣಿ ಮಾಡುವ ಪದ್ಧತಿ ಅನೇಕ ದಶಕಗಳಿಂದ ಇದೆ. ಸ್ತ್ರೀ ಪುರುಷರ ಲಿಂಗಾನುಪಾತದಲ್ಲಿ ಆಗುತ್ತಿರುವ ಏರುಪೇರುಗಳಿಂದಾಗಿ ಹುಡುಗಿಯರು ಮದುವೆಗೆ ದೊರಕುವುದು ಹಿಂದಿನಷ್ಟು ಸುಲಭವಲ್ಲ ಎಂಬ ಅಭಿಪ್ರಾಯವಿದೆ. ಸರ್ಕಾರಿ ಹುದ್ದೆಯಲ್ಲಿರುವ ಅಥವಾ ಬೇರೆ ಹೆಚ್ಚು ಆದಾಯ ತರುವ ನಗರವಾಸಿ ವರನನ್ನೇ ಹೆಚ್ಚು ಇಷ್ಟಪಡುವ ಪ್ರವೃತ್ತಿ ಗ್ರಾಮೀಣ ಪ್ರದೇಶದ ಹುಡುಗಿಯರಲ್ಲಿಯೂ ಬಲವಾಗುತ್ತಿದೆ ಇಷ್ಟಾದರೂ ವರದಕ್ಷಿಣೆ ವರೋಪಚಾರದ ಹೆಸರಿನಲ್ಲಿ ಕನ್ಯಾಪಿತೃಗಳ ಶೋಷಣೆ ಮುಂದುವರೆದಿದೆ. ಶ್ರೀಮಂತರನ್ನು ಅನುಕರಿಸುವ ಮಧ್ಯಮ ವರ್ಗದ ಜನರ ಪ್ರವೃತ್ತಿಯಿಂದಾಗಿ ವೈಭವೋಪೇತ ದುಬಾರಿ ಬಾಡಿಗೆಯ ಕಲ್ಯಾಣ ಮಹಲುಗಳಲ್ಲಿ ಮದುವೆಗಳನ್ನು ಮಾಡುವುದು ಸರ್ವೇಸಾಮಾನ್ಯವಾಗುತ್ತಿದೆ.

ಹಿಂದೂಗಳಲ್ಲಿ ಕನ್ಯಾದಾನದ ಆಚರಣೆ ಇದೆ. ಕೆಲವು ಜಾತಿಗಳಲ್ಲಿ ಗಂಡಿನವರೇ ಹೆಣ್ಣನ್ನು ಹುಡುಕುತ್ತಾರೆ. ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ವಿವಾಹ ನಡೆಯುತ್ತದೆ. ಕೆಲವರಲ್ಲಿ ಗಂಡಿನ ಮನೆಯಲ್ಲಿ ನಡೆಯುತ್ತದೆ. ಇತ್ತೀಚೆಗೆ ದೇವಸ್ಥಾನ, ಛತ್ರ, ಮಠ ಮುಂತಾದ ಕಡೆ ನಡೆಯುತ್ತವೆ. ಇತ್ತೀಚೆಗಂತೂ ಆಧುನಿಕ ರೀತಿಯ ಕಲ್ಯಾಣ ಮಂಟಪಗಳಲ್ಲಿ ಅದ್ಧೂರಿಯಾಗಿ ಮದುವೆ ಮಾಡುವ ಮನೋಭಾವ ಹೆಚ್ಚಾಗಿದೆ. ಒಂದೇ ಕುಲ ಅಥವಾ ಗೋತ್ರಗಳಲ್ಲಿ ವಿವಾಹ ನಿಷಿದ್ಧ. ಹಿಂದೆ ೪–೫ ದಿನಗಳ ಕಾಲ ನಡೆಯುತ್ತಿದ್ದ ವಿವಾಹ, ೩ ದಿನಕ್ಕೆ ಇಳಿದು, ಈಗ ಒಂದು ದಿನಕ್ಕೆ ಬಂದು ನಿಂತಿದೆ. ಹಿಂದಿನ ಕಾಲದಲ್ಲಿ ಹುಡುಗಿ ಮೈನೆರೆಯುವುದಕ್ಕೆ ಮುನ್ನವೇ ಮದುವೆ ಮಾಡುವ ಸಂಪ್ರದಾಯವಿತ್ತು. ಜ್ಯೋತಿಷಿಗಳನ್ನು ಸಂಪರ್ಕಿಸಿ ಗಂಡು ಹೆಣ್ಣುಗಳ ಹೆಸರು ಬಲ, ಜಾತಕ ಮುಂತಾದವುಗಳನ್ನಾಧರಿಸಿ ವಿವಾಹ ನಿಗಧಿಗೊಳಿಸುತ್ತಿದ್ದರು. ಈ ಹಿಂದೆ ಜಾತಿ, ಉಪಜಾತಿಗಳ ನಡುವೆಯೇ ವಿವಾಹ ಏರ್ಪಡುತ್ತಿದ್ದು ಈಗ ಅದು ಸಡಿಲವಾಗಿದೆ.

ವಿವಾಹದಲ್ಲಿ ಸಾಮಾನ್ಯ ಪದ್ದತಿಯಲ್ಲಿ ಬಹುತೇಕರು ೧೨ ಕಂಬಗಳ ಚಪ್ಪರ ಹಾಕಿರುತ್ತಾರೆ. ನಡುವೆ 'ಹಾಲುಗಂಬ' ಅಥವಾ 'ಧಾರೆಕಂಬ' ಇರುತ್ತದೆ. ಅದು ಕಳ್ಳಿ ಗಿಡದ ರೆಂಬೆಯಾಗಿದ್ದು, ಅರಿಶಿಣದಲ್ಲಿ ಅದ್ದಿದ ಚೂರು ಬಟ್ಟೆಯಲ್ಲಿ ಪಂಚಧಾನ್ಯ (ಅವರೆ, ತೊಗರಿ, ಹುರುಳಿ, ಕಡಲೆ, ಅಲಸಂದೆ) ಗಳನ್ನು ಕಟ್ಟಿ ಅದನ್ನು ಕಂಬಕ್ಕೆ ಕಟ್ಟುತ್ತಾರೆ. ಹಾಲುಗಂಬ ಮದುವೆ ಮಂಟಪದಲ್ಲಿರುತ್ತದೆ.

ಲಿಂಗಾಯತರಲ್ಲಿ ಪಂಚಕಲಶ ಹೂಡುವುದು ಅರಿಶಿಣಧಾರಣೆ, ಅಕ್ಷತೆ ಮುಂತಾದವುಗಳನ್ನು ಆಚರಿಸುತ್ತಾರೆ. ವೀರಭದ್ರನ ಕುಲದವರಾದವರು ವಿವಾಹಕ್ಕೆ ಮುನ್ನ 'ಗುಗ್ಗುಳ ಸೇವೆ' ಮಾಡುವರು. (ಕಳಶಗಳಲ್ಲಿ ಹಾಲು, ಧೂಪ, ನೈವೇದ್ಯ ಮುಂತಾದವುಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ದೇವರಿಗೆ ಅರ್ಪಿಸುವುದು) ಮತ್ತಿತರ ವಿಧಿ ವಿಧಾನಗಳು ಎಂದಿನಂತೆ ಇರುತ್ತವೆ.

ಇತ್ತೀಚೆಗೆ ಸಂಘಸಂಸ್ಥೆಗಳು, ಮಠಮಾನ್ಯಗಳು ಕೆಲವು ವ್ಯಕ್ತಿಗಳು ಸಾಮೂಹಿಕ ವಿವಾಹಗಳನ್ನೇರ್ಪಡಿಸುವ ಪರಂಪರೆ ಬೆಳೆದಿದ್ದು, ಇದರಿಂದ ಬಡವರಿಗೆ ತುಂಬಾ ಅನುಕೂಲಕರ. ಹಾಗೂ ವಿವಾಹವೆಚ್ಚವನ್ನು ಕಡಿಮೆ ಮಾಡುವ ದಿಸೆಯಲ್ಲಿ ಸ್ವಾಗತಾರ್ಹ. ಸರಳವಿವಾಹಗಳು, ಪ್ರೇಮವಿವಾಹಗಳು, ಅಂತರ-ಜಾತೀಯ ವಿವಾಹಗಳೂ ಕೂಡ ಏರ್ಪಡುತ್ತಿರುವುದು ಸಾಮಾಜಿಕ ಹಿತದೃಷ್ಟಿಯಿಂದ ಅತ್ಯುತ್ತಮ ಕಾರ್ಯ. ಪರಿಶಿಷ್ಟ ಜಾತಿಯವರನ್ನು ಇತರೆ ಜಾತಿಯವರು ವಿವಾಹವಾದಲ್ಲಿ ಸರ್ಕಾರದಿಂದ ₹ ೨೫,೦೦೦ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಇತರೆ ಜಾತಿಗಳು, ಉಪಜಾತಿ, ಬುಡಕಟ್ಟು ಜನಾಂಗದವರಲ್ಲಿ ತಮ್ಮ ತಮ್ಮ ಪರಂಪರೆ ಮತ್ತು ಆಚರಣೆಗಳಂತೆ, ಸ್ವಲ್ಪ ಭಿನ್ನವಾದ ಆಚರಣೆಗಳಿರುವುದನ್ನು ಕಾಣಬಹುದು.

ಮುಸ್ಲಿಮ್ ಜನಾಂಗದಲ್ಲಿ ಸಗೋತ್ರ ವಿವಾಹ (ಪಿತೃ ವಂಶೀಯ ಸಂಬಂಧದಲ್ಲಿ) ಪದ್ಧತಿ ಇದ್ದು, ವಿವಾಹ ಒಂದು ಒಪ್ಪಂದವಾಗಿರುತ್ತದೆ. ಗಂಡು – ಹೆಣ್ಣಿನ ಒಪ್ಪಿಗೆ ಪಡೆಯಲಾಗುತ್ತದೆ. ಮದುವೆ ದಿನ ಗಂಡಿಗೆ ಹೂಮಾಲೆಗಳಿಂದ ಮುಖ ಮುಚ್ಚುವಂತೆ ಅಲಂಕರಿಸಿರುತ್ತಾರೆ. ವಿವಾಹ ವಿಧಿ ನೆರವೇರಿಸುವ ಖಾಜಿಯು ಹೆಣ್ಣಿನ ಕಡೆಯವರೊಬ್ಬರು, ಗಂಡಿನ ಕಡೆಯವರೊಬ್ಬರು ಮತ್ತು ಒಬ್ಬ ವಕೀಲ ಇವರ ಸಮ್ಮುಖದಲ್ಲಿ ವಧು-ವರರ ಒಪ್ಪಿಗೆ (ಕಬೂಲ್) ಪಡೆದು, ಅದಕ್ಕಾಗಿ ಇಟ್ಟಿರುವ ದಫ್ತರ್ ಪುಸ್ತಕದಲ್ಲಿ ದಾಖಲು ಮಾಡಿ ಇವರ ಸಹಿ ಪಡೆಯುತ್ತಾರೆ. ವರನು ವಧುವಿಗೆ ಉಡುಗೊರೆ ಕೊಡುತ್ತಾನೆ. ಇದನ್ನು 'ಮೆಹರ್' ಎನ್ನುವರು. ಖಾಜಿ ವಿವಾಹ ವಿಧಿ ಓದಿ ಹೇಳುತ್ತಾನೆ. (ನಿಖಾ) ಇವರೂ ಸಹ ಕರಿಮಣಿಯನ್ನು ಬಳಸುವರು. ಕರಿಮಣಿಯನ್ನು ವಿವಾಹಿತ ಹಿರಿಯ ಮಹಿಳೆ ಅಥವಾ ವಧುವಿನ ತಾಯಿ ವಧುವಿಗೆ ಕಟ್ಟುತ್ತಾಳೆ. ಮದುವೆಯಾದ ನಂತರ ಹೆಣ್ಣನ್ನು ಗಂಡಿನ ಮನೆಗೆ ಕರೆದುಕೊಂಡು ಹೋಗಿ ಔತಣ (ವಲೀಮ) ಏರ್ಪಡಿಸುತ್ತಾರೆ. ವಿವಾಹದ ಮೊದಲನೇ ಶುಕ್ರವಾರ ವರನು ವಧುವಿನ ಮನೆಗೆ ಔತಣಕ್ಕೆ ಹೋಗುತ್ತಾನೆ. ನಂತರ ನಾಲ್ಕು ಶುಕ್ರವಾರ ಹತ್ತಿರದ ಸಂಬಂಧಿಕರ ಮನೆಗಳಲ್ಲಿ ಔತಣ ಏರ್ಪಡಿಸುತ್ತಾರೆ. ಇದನ್ನು 'ಚಾರ್ ಜುಮುಗೀಸ್' ಎನ್ನುತ್ತಾರೆ.

ಕ್ರೈಸ್ಥರಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸೇರಿ ಮಾತುಕತೆ ನಡೆಸಿ ವಿವಾಹ ನಿಷ್ಕರ್ಷೆ ಮಾಡುತ್ತಾರೆ. ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ನಿಶ್ಚಿತಾರ್ಥ ಏರ್ಪಡಿಸಿ ಪರಸ್ಪರ ಉಂಗುರ ಬದಲಿಸಿಕೊಳ್ಳುತ್ತಾರೆ. ಭೋಜನ ಏರ್ಪಡಿಸಿರುತ್ತಾರೆ. ಯಾರಾದರೂ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಮುಂದೆ ಏನಾದರೂ ಸಮಸ್ಯೆಗಳುಂಟಾಗದಿರಲಿ ಎಂದು ಮೂರು ಭಾನುವಾರಗಳು ಚರ್ಚಿನಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಪಾದ್ರಿಯು ಎಲ್ಲಾ ವಿವರಗಳೊಂದಿಗೆ ಪ್ರಕಟಿಸುತ್ತಾರೆ. ಗಂಡಿನ ಕಡೆಯ ಪ್ಯಾರಿಷ್ ಚರ್ಚಿನಲ್ಲಿ ಮದುವೆಯನ್ನು ಪಾದ್ರಿಗಳು ವಿಧಿ ವಿಧಾನಗಳನ್ನನುಸರಿಸಿ ನೆರವೇರಿಸುವರು. ಮತ್ತೆ ಉಂಗುರ ಬದಲಿಸಿಕೊಳ್ಳುವ ಪದ್ದತಿ ಹಿಂದೆ ಇತ್ತು. ಈಗ ಮಂಗಳ ಸೂತ್ರವನ್ನು ಕಟ್ಟುವ ಪದ್ದತಿ ರೂಢಿಗೆ ಬಂದಿದೆ. ವಿವಾಹದ ರಿಜಿಸ್ಟರಿನಲ್ಲಿ

ಸಾಕ್ಷಿದಾರರೊಂದಿಗೆ ವಧುವರರು ಸಹಿಮಾಡುವರು. ಕೊನೆಯಲ್ಲಿ ವಿವಾಹ ಭೋಜನ ಮತ್ತು ಸಂಗೀತ ಕಾರ್ಯಕ್ರಮವಿರುತ್ತದೆ.

ವಿವಾಹವು ಒಂದು ಪವಿತ್ರ ಬಂಧವಾಗಿದ್ದು ಹಿಂದೂಗಳಲ್ಲಿ ಸಾಮಾನ್ಯವಾಗಿ ವಿವಾಹ ವಿಚ್ಛೇದನಗಳಿರುವುದಿಲ್ಲ. ಆದರೆ ಇತ್ತೀಚೆಗೆ ಗಣನೀಯವಾಗಿ ಹೆಚ್ಚುತ್ತಿದೆ. ಜಾತಿ ಧರ್ಮಕ್ಕನುಗುಣವಾಗಿ ವಿಚ್ಛೇದನದ ಸ್ವರೂಪಗಳಿದ್ದು, ಕಟ್ಟೆಮನೆ ಅಥವಾ ಮುಖ್ಯಸ್ಥ ಅಂತಹ ಪ್ರಕರಣಗಳನ್ನು ತೀರ್ಮಾನಿಸುತ್ತಿದ್ದ. ವಿಚ್ಛೇದಿತ ಮಹಿಳೆ ಮರುವಿವಾಹವಾದರೆ ತೆರ ಹಿಂದಿರುಗಿಸಬೇಕಿತ್ತು. ಮುಸ್ಲಿಮರಲ್ಲಿ ಇದನ್ನು 'ತಲಾಖ್' ಎಂದು ಕರೆಯುತ್ತಾರೆ. ಗಂಡನು ತನ್ನ ಪತ್ನಿಯನ್ನು ವಿಚ್ಛೇದನದ ಮೂಲಕ ಬಿಡುಗಡೆ ಮಾಡಲು ಕುರ್–ಆನ್ ಪ್ರಕಾರ ಸಾಧ್ಯವಿದೆ. ದುರ್ನಡತೆ ವಿನಃ ತಲಾಖ್ ನೀಡಬಾರದು.

ಭಾರತ ಸರ್ಕಾರದ ವಿವಾಹ ಕಾಯ್ದೆಯಂತೆ ಎಲ್ಲಾ ವಿವಾಹಗಳೂ ಕಡ್ಡಾಯವಾಗಿ ನೋಂದಣಿಯಾಗಬೇಕು. ಇದು ಇನ್ನೂ ಜನಮನ್ನಣೆಗೆ ಒಳಗಾಗಿಲ್ಲ. ವಿಧವಾ ಪುನರ್ವಿವಾಹ ಹಿಂದೆಯೂ ಕೆಲವು ಜನಾಂಗಗಳಲ್ಲಿ 'ಕೂಡಿಕೆ' ಮುಂತಾದ ರೀತಿಯಲ್ಲಿತ್ತು. ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಮಕ್ಕಳಿಲ್ಲದವರು ದತ್ತು ಪಡೆಯಲೂ ಸಹ ಕಾನೂನಿನಲ್ಲಿ ಅವಕಾಶವಿದೆ.

ಸೋಲಿಗರಲ್ಲಿ ಮೊದಲ ದಿನ 'ಶಾಸ್ತ್ರದ ನೀರು ತರುವ' ಶಾಸ್ತ್ರಾಚರಣೆ ಇದೆ. ಮೂರು ಜನ ಹೆಣ್ಣುಮಕ್ಕಳು ಗಡಿಗೆ ಹಾಗೂ ಕಳಸದ ಸಹಿತ ವಾದ್ಯ ಹಾಗೂ ನಡೆಮುಡಿಯ ಮೇಲೆ ಹರಿಯುವ ಜಲಧಿಗೆ ಹೋಗಿ ಕಳಸ ಪೂಜಿಸಿ ಹೊಸ ಗಡಿಗೆಗಳಲ್ಲಿ ನೀರು ತೆಗೆದುಕೊಂಡು ಬಂದಂತೆಯೇ ಹಿಂದಿರುಗುವರು. ರಾತ್ರಿ ಪೂಜೆಯಾದ ಮೇಲೆ ಕುಲದ ಐದು ಜನರಿಗೂ ಉಳಿದವರಿಗೂ ಊಟವಿರುತ್ತದೆ. ಹೆಣ್ಣು ಗಂಡಿಗೆ ಅರಿಶಿಣ ನೀರು ಮಾಡಿ ಹಳ್ಳದಿಂದ ತಂದ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಇದನ್ನು ಬಯಲು ಸೀಮೆಯವರ 'ದೇವರ ಊಟದ ದಿನ'ದಂತೆಯೇ 'ದೇವರು– ತರುವ ದಿನ' ಎಂದು ಕರೆಯುವರು. ಎರಡನೆಯ ದಿನ ಗಂಡು ಮರೆವಣಿಗೆಯಲ್ಲಿ ಹೆಣ್ಣಿನ ಮನೆಗೆ ಬರುವುದು. ಇದನ್ನು 'ದಿಬ್ಬಣ' ಎನ್ನುವರು. ಗಂಡಿನವರು ಹೆಣ್ಣಿಗೆ ಸೀರೆ, ಕುಪ್ಪಸ, ತಾಳಿ ಇಷ್ಟನ್ನು ಹೆಣ್ಣಿನ ಕಡೆಯವರಿಗೆ ಕೊಡುತ್ತಾರೆ. ಕುಲದ ಐವರು ಅದನ್ನು ತೆಗೆದುಕೊಂಡು ಹೆಣ್ಣಿನ ಮನೆಯೊಳಗೆ ಬಂದಾಗ ಹೆಣ್ಣಿನ ಕಡೆಯವರು ರಾಗಿ ಹಿಟ್ಟಿನ ಚೂರುಗಳನ್ನು ಅವರ ಮೈಮೇಲೆ ಎರಚುವರು. ಮೈಗೆಲ್ಲಾ ಹಿಟ್ಟುಮೆತ್ತಿಕೊಂಡು ಈಚೆ ಬಂದ ಇವರನ್ನು ಕಂಡು ಎಲ್ಲರೂ ನಗಾಡುವರು. ನಂತರ ಒಂದು ವಿಶಿಷ್ಟ ಶಾಸ್ತ್ರ ಮಾಡುತ್ತಾರೆ. ಗಂಡನ್ನು ಹೆಣ್ಣಿನ ಮನೆ ತುಂಬಿಸುವುದು. ಇದನ್ನು ಗಂಡಿನ ಸೋದರ ಮಾವ ನೆರವೇರಿಸುವನು. ಹೆಣ್ಣಿನ ಕಡೆಯವರು ಒಂದು ಗೊಟ್ಟ (ಬಿದಿರಿನಿಂದ ಮಾಡಿದ ದಪ್ಪ ಕೊಳವೆ) ದಲ್ಲಿ ಸಗಣಿ ನೀರು ತುಂಬಿ ಬಾಗಿಲು ಹಾಕಿ ಅದರ ಹಿಂದೆ ಗೊಟ್ಟವನ್ನು ಇಟ್ಟು ಒಳಗಡೆಯಿಂದ ಹೆಣ್ಣಿನವರು ಭದ್ರವಾಗಿ ಹಿಡಿದಿರುತ್ತಾರೆ. ಗಂಡು ಮತ್ತು ಅವರ ಸೋದರಮಾವ ಬಂದು ಬಾಗಿಲುಕಡೆಗೆ ಹಿಂದು ಮುಂದಾಗಿ ಹೋಗಿ ಬಾಗಿಲ ಹತ್ತಿರ ನಿಂತು ತಮ್ಮ ಕಾಲಿನಿಂದ ಹಿಂದಿನ ಬಾಗಿಲಿಗೆ ಒದೆಯಬೇಕು. ಗಂಡು ಶಕ್ತಿಶಾಲಿಯಾಗಿದ್ದರೆ ಬಾಗಿಲ ಹಿಂದೆ ಇಟ್ಟಿದ್ದ ಬಿದಿರಿನ ಗೊಟ್ಟ ಕೆಳಗುರುಳಿ ಸಗಣಿ ನೀರು ಚೆಲ್ಲುತ್ತದೆ. ಆಗ ಬಾಗಿಲು ತೆಗೆಯಲ್ಪಡುತ್ತದೆ. ಇಲ್ಲವಾದರೆ 'ಗಂಡು ಸೋತು, ಹೆಣ್ಣು ಗೆದ್ದಿತು' ಎಂದು ಹಾಸ್ಯ ಮಾಡುವರು. ಧಾರೆ ಎರೆಯುವ ಶಾಸ್ತ್ರದಲ್ಲಿ ಈ ಭಾಗದ ಸೋಲಿಗರಲ್ಲಿ ಪುರೋಹಿತರ ಪಾತ್ರ ಇರುವುದಿಲ್ಲ. ಬದಲಾಗಿ ಗಂಡು–ಹೆಣ್ಣುಗಳ ಸೋದರ ಮಾವ ಪ್ರಮುಖ

ಪಾತ್ರವಹಿಸುವರು. ಗಂಡಿನ ಸೋದರಮಾವ ಗಂಡನ್ನು ಎತ್ತಿಕೊಂಡು ಹಸೆಯಮೇಲೆ ನಿಲ್ಲಿಸುತ್ತಾನೆ. ಹೆಣ್ಣಿನ ಸೋದರಮಾವ ಹೆಣ್ಣನ್ನು ಎತ್ತಿತಂದು ಗಂಡಿನ ಬಲಭಾಗಕ್ಕೆ ಹಸೆಯ ಮೇಲೆ ನಿಲ್ಲಿಸುತ್ತಾನೆ. ಐದು ಜನ ಕುಲಸ್ತರು ಸೇರಿ ಹೆಣ್ಣಿನ ಕಿರುಬೆರಳನ್ನು ಗಂಡಿನ ಕಿರುಬೆರಳಿನಿಂದ ಹಿಡಿಸುವರು. ಐದು ಮಂದಿ ಕುಲಸ್ಥರು ತಾಳಿಯನ್ನು ಹೆಣ್ಣಿನ ಕೊರಳಿಗೆ ಕಟ್ಟುವರು. ಹೆಣ್ಣು ಹಾಗೂ ಗಂಡಿನ ಕೈಗೆ ಪತ್ರೆ ನೀಡಿ ಹಾಲು ತುಪ್ಪ ಬಿಡುವರು. ಹೆಗ್ಗಡದೇವನ ಕೋಟೆ ಸೋಲಿಗರಲ್ಲಿ ಪುರೋಹಿತರು ಗಂಡಿನ ಕೈಯಿಂದ ತಾಳಿಕಟ್ಟಿಸುವ ರೂಢಿಇದೆ. ಮಹದೇಶ್ವರ ಬೆಟ್ಟದ ಸೋಲಿಗರಲ್ಲಿ ಹೆಣ್ಣು ಗಂಡಿನ ಸೋದರ ಮಾವಂದಿರು ಮೊದಲು ಧಾರೆ ಎರೆಯುತ್ತಾರೆ. ಧಾರೆ ಎರೆಯುವ ಸಂದರ್ಭದಲ್ಲಿ ಕೆಲವರು 'ಸೋಬಕ್ಕಿ ಸೋಬಾನ' ಎಂಬುದಾಗಿ ಹೇಳುತ್ತಾರೆ. ಹಾಗೂ ಸೋಬಾನೆ ಪದವನ್ನು ಹಾಡುವರು. ಒಟ್ಟು ಐದು ಶಾಸ್ತ್ರಗಳನ್ನು ಹೇಳಿ ಎಲ್ಲರೂ ಹಾಲುತುಪ್ಪ ಬಿಟ್ಟು ಗಂಡು ಹೆಣ್ಣುಗಳ ಕೈ ಬಿಡಿಸುತ್ತಾರೆ. ಅನಂತರ ಗಂಡು ಹೆಣ್ಣನ್ನು ಗಂಡಿನ ಮನೆಗೆ ಕರೆತರುತ್ತಾರೆ. ಇವರು ಗಂಡು ಹೆಣ್ಣುಗಳ ಅಲಂಕಾರಕ್ಕೆ ಕಣಿಗಿಲೆ ಹೂವನ್ನು ಬಳಸುವರು.

## ಶವಸಂಸ್ಕಾರ ಪದ್ಧತಿ

ಹಿಂದೂಗಳಲ್ಲಿ ಸತ್ತವರನ್ನು ಅವರವರ ಜಾತಿಯ ಪದ್ಧತಿಗೆ ಅನುಗುಣವಾಗಿ ಹೂಳುವುದು, ಸುಡುವುದರ (ದಹನ) ಮೂಲಕ ಸಂಸ್ಕಾರ ಮಾಡಲಾಗುತ್ತದೆ. ಬ್ರಾಹ್ಮಣ, ವೈಶ್ಯ ಮುಂತಾದವರಲ್ಲಿ ಏಕರೀತಿಯ ಸಂಸ್ಕಾರ ಪದ್ದತಿ ಇದೆ. ಕೆಲವರನ್ನು ಅಂದರೆ ತುಂಬಾ ವಯಸ್ಸಾದ ವ್ಯಕ್ತಿಯನ್ನು, ಕ್ಷಯ, ಕುಷ್ಠ ಮುಂತಾದ ರೋಗಗಳಿಂದ ಸತ್ತವರನ್ನು ಕಾಡು ಪ್ರಾಣಿಗಳಿಂದ ಆಕ್ರಮಣಕ್ಕೆ ಒಳಗಾಗಿ ಸತ್ತವರನ್ನು; ಗರ್ಭಿಣಿ ಸತ್ತರೆ ಅವರನ್ನು ದಹನ ಮಾಡುವರು. ಕೆಲವು ಜಾತಿಗಳಲ್ಲಿ 'ಕಲ್ಲುಸೇವೆ' ಎಂಬ ಪದ್ದತಿ ಇದ್ದು, ಸೂಕ್ತವಾದ ಜಾಗ ಆಯ್ಕೆ ಮಾಡಿ ಅಲ್ಲಿ ಶವ ಇಟ್ಟು ಸುತ್ತಲೂ ಕಲ್ಲುಗಳನ್ನಿಟ್ಟು ಗುಡ್ಡೆಯಂತೆ ಮಾಡುವರು. ಮಾಡುವಾಗ ಶವದ ತಲೆಯನ್ನು ದಕ್ಷಿಣ ದಿಕ್ಕಿಗೆ ತಿರುಗಿಸಿಟ್ಟಿರುತ್ತಾರೆ. ಕೆಲವರು ಮುಖ ಮೇಲೆ ಮಾಡಿಯೂ, ಇನ್ನು ಕೆಲವರು ಮುಖ ಅಡಿಮಾಡಿಯೂ ಇಡುತ್ತಾರೆ. ಲಿಂಗಾಯತರಲ್ಲಿ ಕುಳಿತ ಭಂಗಿಯಲ್ಲಿ ಸಮಾಧಿ ಮಾಡುವರು, ಸಮಾಧಿ ಮೇಲೆ ಕಲ್ಲನ್ನು ಅಥವಾ ಬೃಂದಾವನ, ಗದ್ದಿಗೆ ನಿರ್ಮಿಸುವುದು ರೂಢಿಯಲ್ಲಿದೆ.

ಸಾವು ಸಂಭವಿಸಿದ ಮನೆಯ ಮುಂದೆ ಬೆಂಕಿ ಹಾಕಿರುತ್ತಾರೆ. ಶವಕ್ಕೆ ಬಿಸಿ ನೀರಿನಿಂದ ಸ್ನಾನ ಮಾಡಿಸಿ ಹೊಸಬಟ್ಟೆ ಧರಿಸಿ ಅಲಂಕರಿಸುತ್ತಾರೆ. ಒಂದು ಮಡಕೆಯಲ್ಲಿ ಅನ್ನ ಬೇಯಿಸುತ್ತಾರೆ. ಶವದ ಬಾಯಿಗೆ ಎಲೆ ಅಡಿಕೆ ಕುಟ್ಟಿ ತಾಂಬೂಲ ಇಡುತ್ತಾರೆ. ಸಾಮಾನ್ಯವಾಗಿ ಹಿರಿಯ ಮಗ ಸಂಸ್ಕಾರ ಮಾಡುವ ಪದ್ದತಿ ಇದೆ. ಅನ್ನ ಮಾಡಿದ ಮಡಕೆಯನ್ನು ಮತ್ತು ಬೆಂಕಿಯನ್ನು ಹಿಡಿದುಕೊಂಡು ಶವಯಾತ್ರೆಯ ಮುಂಭಾಗದಲ್ಲಿರುತ್ತಾನೆ. ಸ್ಮಶಾನದಲ್ಲಿ ಮೃತನ ಹಿರಿಯಮಗ ಅನ್ನದ ಮಡಕೆಯನ್ನು ಹೆಗಲಲ್ಲಿ ಹೊತ್ತು ಶವದ ಸುತ್ತ ಮೂರು ಸುತ್ತು ಬಂದು ಮಡಕೆಯನ್ನು ಒಡೆದುಹಾಕುವರು. ಇದನ್ನು 'ತಲೆಕೊಳು' ಎನ್ನುವರು. ಶವವನ್ನು ಗುಂಡಿಯೊಳಗೆ ಸಾವಿಗೆ ದೇವರೆನಿಸಿದ ಯಮನ ದಿಕ್ಕಿಗೆ ಅಂದರೆ ದಕ್ಷಿಣ ದಿಕ್ಕಿಗೆ ತಲೆಯಿಟ್ಟು ಮಲಗಿಸುವರು. ಹಾಗೂ ಸಂಸ್ಕಾರ ಮಾಡಿದ ವ್ಯಕ್ತಿ ತಲೆ ಬೋಳಿಸಿಕೊಳ್ಳುತ್ತಾನೆ. ಬೊಗಸೆಯಲ್ಲಿ ಭೂಮಿಯಿಂದ ಮಣ್ಣು ತೆಗೆದು ಶವದ ಮೇಲೆ ಎರಚುತ್ತಾನೆ. ಅವರ ಕುಟುಂಬದವರು ಹಾಗೂ ಸಂಬಧಿಕರೂ ಹಾಗೇ ಮಾಡುವರು. ಶವದ ಗುಂಡಿಯ ತುಂಬಾ ಮಣ್ಣು ಮುಚ್ಚಿ ಸಮಾಧಿ ತರಹ ಗುಡ್ಡೆ ಮಾಡಿ ಅದರ ಮೇಲೆ ತುಂಬೆ ಹೂ ಅಥವಾ ತುಳಸಿ ಗಿಡವನ್ನು ನೆಡುವರು. (ಹೆಂಗಸರಿಗೆ ತುಳಸಿ, ಗಂಡಸರಿಗೆ ತುಂಬೆ) ನಂತರ ಮಣ್ಣಿನ ಮಡಕೆಯಲ್ಲಿ ನೀರುತುಂಬಿ, ಒಂದುಕಡೆ ಕುಕ್ಕಿ ತೂತು ಮಾಡಿ ಹೊತ್ತುಕೊಂಡು ಸಮಾಧಿ ಸುತ್ತ ಪ್ರದಕ್ಷಿಣೆ ಬರುವರು. ನಂತರ ಅದನ್ನು ಬೀಳಿಸಿ ಒಡೆದುಹಾಕುವರು.

ಮುಸ್ಲಿಮರಲ್ಲಿ ಶವಕ್ಕೆ ಸ್ನಾನ ಮಾಡಿಸಿ, ಶವದುಡಿಗೆ ತೊಡಿಸಿ, ಹೂವು ಅತ್ತರುಗಳಿಂದ ಸಾಲಂಕೃತಗೊಳಿಸಿ ಮಸೀದಿಯಿಂದ ಒದಗಿಸುವ ತೊಟ್ಟಿಲಲ್ಲಿ ಮಲಗಿಸಿ, ಮೆರವಣಿಗೆಯಲ್ಲಿ ಶವವನ್ನು ಸ್ಮಶಾನಕ್ಕೆ ಸಾಗಿಸುವರು. ಮೃತರ ಸದ್ಗತಿಗಾಗಿ ಪ್ರಾರ್ಥನೆ ಸಲ್ಲಿಸುವರು. ಉತ್ತರ ದಿಕ್ಕಿಗೆ ತಲೆ ಬರುವಂತೆ ಮಾಡಿ ಮುಖವನ್ನು ಮೆಕ್ಕಾ ಕಡೆಗೆ ತಿರುಗಿಸಿ ಹೂಳುತ್ತಾರೆ. ಸಮಾಧಿ ಮಾಡುವ ಪದ್ಧತಿ ಇದೆ. ಮೂರು ದಿನ ಸಾವಿಗೀಡಾದವರ ಮನೆಯಲ್ಲಿ ಆಹಾರ ತಯಾರಿಸುವುದಿಲ್ಲ. ಹತ್ತಿರದ ಬಂಧುಗಳು ಊಟ ಒದಗಿಸುವರು. ಮೂರನೇ ದಿನ 'ಜಿಯಾರತ್' ಅನ್ನು ಆಚರಿಸುತ್ತಾರೆ. ೪೦ನೇ ದಿನಕ್ಕೆ ವಿಧಿ ವಿಧಾನಗಳನ್ನಾಚರಿಸಿ ಸಂತರ್ಪಣೆ ಮಾಡುವರು.

ಕ್ರೈಸ್ಥರಲ್ಲಿ ವ್ಯಕ್ತಿ ಸಾಯುವ ಸಮಯಕ್ಕೆ ಪ್ಯಾರಿಷ್ ಪಾದ್ರಿಯನ್ನು ಕರೆಸುತ್ತಾರೆ. ಕ್ಯಾಥೊಲಿಕ್‌ರಲ್ಲಿ ಪಾದ್ರಿಯು ಸಾಯುತ್ತಿರುವ ವ್ಯಕ್ತಿಯ ಶರೀರಕ್ಕೆ ಪವಿತ್ರ ಎಣ್ಣೆಯನ್ನು ಸವರುತ್ತಾರೆ. ಪ್ರೊಟೆಸ್ಟೆಂಟರಲ್ಲಿ ಸಾಯುತ್ತಿರುವ ವ್ಯಕ್ತಿಗೆ ಧರ್ಮಗುರುವು ಕರ್ತನ ಕಡೆಯ ಪವಿತ್ರ ಭೋಜನವೆಂಬ ಸಂಸ್ಕಾರ ಮಾಡುವರು. ಸತ್ತ ನಂತರ ದೇಹವನ್ನು ತೊಳೆದು ಅಲಂಕರಿಸಿ, ಶವದ ಪೆಟ್ಟಿಗೆಯಲ್ಲಿರಿಸಿ ಹೊತ್ತುಕೊಂಡು ಅಥವಾ ಕುದುರೆಗಾಡಿಯಲ್ಲಿಟ್ಟು ಪ್ಯಾರಿಷ್ ಚರ್ಚಿಗೆ ಕೊಂಡೊಯ್ಯುತ್ತಾರೆ. ಅಲ್ಲಿ ಪಾದ್ರಿಯು ಮೃತದೇಹದ ಮೇಲೆ ಪವಿತ್ರ ನೀರು ಚಿಮುಕಿಸಿ ಆಶೀರ್ವದಿಸುತ್ತಾರೆ. ಆನಂತರ ಶವವನ್ನು ಹೂಳುತ್ತಾರೆ. ಕ್ಯಾಥೊಲಿಕರಲ್ಲಿ ಸತ್ತದಿನ, ಮೂರನೇ, ಏಳನೇ ದಿನ ಹಾಗೂ ೨೦ನೇ ದಿನ ವಿಶೇಷ ಪ್ರಾರ್ಥನೆ ಸಲ್ಲಿಸುವರು. ಪ್ರೊಟೆಸ್ಟೆಂಟರಲ್ಲಿ ೧೦ನೇ ದಿನ ಪ್ರಾರ್ಥನೆ ಸಲ್ಲಿಸುವರು. ಪ್ರತಿಯೊಬ್ಬ ಮೃತರಿಗೂ ಸಮಾಧಿ ನಿರ್ಮಿಸಿ, ಪ್ರತೀ ವರ್ಷ ಪ್ರಾರ್ಥನೆ ಸಲ್ಲಿಸುವ ಪದ್ಧತಿ ಇದೆ.

ಆದಿವಾಸಿ ಪರಿಕಲ್ಪನೆಯಲ್ಲಿದ್ದ ಎರಡು ಆತ್ಮಗಳ ಕಲ್ಪನೆ ಸೋಲಿಗರಲ್ಲಿಯೂ ಬೆಳೆದು ಬಂದಿರುವುದನ್ನು ಕಾಣಬಹುದು. ಅವರು ಸ್ವತಂತ್ರ ಆತ್ಮ ಮತ್ತು ದೈಹಿಕ ಆತ್ಮ ಎಂದು ಎರಡು ಆತ್ಮಗಳನ್ನು ನಂಬುತ್ತಿದ್ದರು. ಸೋಲಿಗರು 'ಸೂಲು' ಎಂದು ಕರೆಯುತ್ತಾರೆ. ಚಿಕ್ಕಸೂಲು ಮತ್ತು ದೊಡ್ಡ ಸೂಲು ಎಂದು ಪ್ರತಿಪಾದಿಸುವರು. ಚಿಕ್ಕಸೂಲು ಚಲಿತ ಆತ್ಮ ಅದು ಮನುಷ್ಯನ ದೇಹದಲ್ಲಿ ಇರುವವರೆಗೆ ಮನುಷ್ಯ ಬದುಕಿರುತ್ತಾನೆ. ಅದು ಮನುಷ್ಯ ದೇಹವನ್ನು ತ್ಯಜಿಸಿದಾಗ ಅವನು ಸಾಯುತ್ತಾನೆ. ಸತ್ತವನನ್ನು ಬಿಟ್ಟ ಚಿಕ್ಕ ಸೂಲು ದೊಡ್ಡ ಸೂಲನ್ನು ಸೇರುತ್ತದೆ ಎಂಬುದು ಇವರ ನಂಬಿಕೆ. ಮನುಷ್ಯನ ಹುಟ್ಟಿನಂತೆಯೇ ಸತ್ತಾಗಲೂ ಅನೇಕ ಆಚರಣೆಗಳನ್ನು ಅನುಸರಿಸಲಾಗುತ್ತದೆ. ಕೆಲವರಲ್ಲಿ ವಾರಗಳು ಕೆಲವರಲ್ಲಿ ತಿಂಗಳು ಕಾಲ ನಡೆಯುತ್ತವೆ.

ಸಾಯುತ್ತಿರುವ ವ್ಯಕ್ತಿಯನ್ನು ಮನೆಯಿಂದ ಹೊರಗೆ ತೆಗೆದುಕೊಂಡು ಬರುತ್ತಾರೆ. ಹಾಗೂ ಬಾಯಿಗೆ ನೀರುಬಿಡುತ್ತಾರೆ. ಸತ್ತ ವ್ಯಕ್ತಿಯ ಕೈಗಳನ್ನು ಅವನ ಎದೆಯಮೇಲೆ ಇಡುವರು. ಕಾಲುಗಳನ್ನು ಮಡಿಸುವರು. ಬಂಧುಗಳಿಗೆ ಮರಣವಾರ್ತೆ ತಿಳಿಸುವರು. ಸತ್ತವನ ಮನೆಯ ಮುಂದೆ ಬೆಂಕಿಕೊಂಡ ಇಡುವರು. ಇವರಲ್ಲಿ ಹೂಳುವ ಪದ್ಧತಿ ಇದೆ. ಬಿಳಿ ತೊನ್ನು ಇದ್ದವರನ್ನು ಸುಡುವ ಪದ್ಧತಿಯೂ ಇದೆ. ಹೊಸಬಟ್ಟೆ, ಊದುಕಡ್ಡಿ, ಕರ್ಪೂರ, ಹೂವು ಮುಂತಾದ ಪೂಜಾ ಸಾಮಗ್ರಿಗಳನ್ನು ತರಿಸಿ, ಬಿದಿರಿನಿಂದ ಚಟ್ಟ ತಯಾರಿಸುತ್ತಾರೆ. ಶವಕ್ಕೆ ಬಿಸಿನೀರಿನಿಂದ ಸ್ನಾನ ಮಾಡಿಸಿ ಮಡಿ ಬಟ್ಟೆ ಹೊದಿಸಿ ಶವ ಅಲುಗಾಡದಂತೆ ಹಗ್ಗದಿಂದ ಬಿಗಿಯುತ್ತಾರೆ. ಹೆಣ ಸ್ಮಶಾನಕ್ಕೆ ಬರುವಷ್ಟರಲ್ಲಿ ಸೋಲಿಗರ ಕೆಲವರು ಗುಂಡಿ ತೋಡಿಸುತ್ತಾರೆ. ಇದನ್ನು 'ಗುದ್ದ' ಎನ್ನುವರು. ಉತ್ತರ–ದಕ್ಷಿಣವಾಗಿ ತೆಗೆದು ಗುದ್ದದಲ್ಲಿ ತಲೆಯ ಭಾಗವನ್ನು ಉತ್ತರದ ಕಡೆಗೂ ಕಾಲುಗಳನ್ನು ದಕ್ಷಿಣದ ಕಡೆಗೂ ಇರುವಂತೆ ಮಲಗಿಸಿ ಹೂಳುವರು. (ಸ್ಮಶಾನವನ್ನು 'ಗೋಪಮನೆ' ಎಂದು ಕರೆಯುತ್ತಾರೆ.) ಹೆಣವನ್ನು ಮಲಗಿಸುವ ಮುನ್ನ ಗುದ್ದಿನೊಳಗೆ ಕಾರೆಮುಳ್ಳು, ತರಗು, ರಾಗಿಯ ಮುದ್ದೆ, ಒಂದು ಚೊಂಬಲ್ಲಿ ನೀರು,

ಮೃತನು ಉಪಯೋಗಿಸುತ್ತಿದ್ದ ದಿನ ಬಳಕೆ ಸಾಮಗ್ರಿಗಳು, ತಿಂಡಿ, ಎಲೆ, ಅಡಿಕೆ ಮುಂತಾದವುಗಳನ್ನು ಅದರೊಳಗೆ ಹಾಕುವರು. ಹತ್ತಿರದ ಸಂಬಂಧಿಗಳು ಮೊದಲು ಮಣ್ಣು ಮುಚ್ಚಿ ನಂತರ ಇತರರು ಎಲ್ಲರೂ ಮಣ್ಣು ಮುಚ್ಚುತ್ತಾರೆ. ಸಮಾಧಿಯನ್ನು ಗುದ್ದಲಿಯಿಂದ ಮಟ್ಟ ಮಾಡಲಾಗುತ್ತದೆ. ತಲೆಯ ಕಡೆಗೆ ಒಂದು ಕಲ್ಲು ಇಡುವರು. ಆ ಕಲ್ಲಿಗೂ ಪೂಜೆಮಾಡಿ, ಸತ್ತವನ ಹೆಂಡತಿಯ ಮುತ್ತೈದೆತನದ ಸಂಕೇತವಾಗಿದ್ದ ಬಳೆಗಳನ್ನು ಒಡೆಯುವರು. ಗುದ್ದನ್ನು (ಸಮಾಧಿ) ಮಟ್ಟ ಮಾಡಿದ ಮೇಲೆ (ಮಾವಟಿ ಶಾಸ್ತ್ರ) ಗುದ್ದಲಿಯನ್ನು ಬಿಚ್ಚಿ ಮತ್ತೆ ಕಾವಿನೊಳಗೆ ಹಿಂದು ಮುಂದಾಗಿ ಹಾಕಿ ಗುದ್ದಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಇಬ್ಬರು ಕಾಲು ಸಂದಿಯಿಂದ ಮೂರು ಬಾರಿ ಎಸೆಯುವರು. ಆಮೇಲೆ ಎಲ್ಲರೂ ಯಾವುದಾದರೂ ಹಳ್ಳಕ್ಕೆ ಹೋಗಿ ಸ್ನಾನ ಮಾಡುವರು. ಶವವನ್ನು ಹೊತ್ತವರು ಸ್ನಾನ ಮಾಡುವುದನ್ನು 'ಹೆಗಲು ತೊಳೆಯುವುದು' ಎನ್ನುವರು. ಸ್ನಾನದ ನಂತರ ಎಲ್ಲರೂ ಸತ್ತವನ ಮನೆ ಅಥವಾ ಗುಡಿಸಲ ಬಳಿಗೆ ಬಂದು, ಪಡಸಾಲೆಯಲ್ಲಿ ರಾಗಿಯ ಸಣ್ಣಗುಡ್ಡೆಯ ಮೇಲಿಟ್ಟಿದ್ದ ಕೈಎಣ್ಣೆ ದೀಪವನ್ನು ನೋಡಬೇಕು. ಸೋಲಿಗರು ಇದನ್ನು 'ಸೊಳ್ಳು ನೋಡುವುದು' ಎನ್ನುವರು. ಎಲ್ಲರೂ ಆ ದೀಪಕ್ಕೆ ಕೈ ಮುಗಿದು ಸ್ವಲ್ಪ ಹುಣಸೆ ಹುಳಿ ಕುಡಿಯುತ್ತಾರೆ. ಐದು ಅಥವಾ ಹನ್ನೆರಡು ದಿನಗಳಿಗೆ ತಿಥಿ ಕಾರ್ಯ ನೆರವೇರಿಸುವರು. ಅಲ್ಲಿಯವರೆಗೂ ಸೂತಕ ಇರುತ್ತದೆ. ತಿಥಿಯಲ್ಲಿ ಮಾಂಸಾಹಾರ ಮಾಡುವ ಪದ್ದತಿಯಿದೆ. ಮಹದೇಶ್ವರ ಬೆಟ್ಟದ ಸೋಲಿಗರಲ್ಲಿ ಐದನೇ ದಿನಕ್ಕೆ ತಿಥಿ ಮಾಡುವರು. ಐದು ಕುಲದವರು ಸತ್ತವನ ಮನೆಗೆ ತಿಥಿಯ ದಿನ ಬಂದು ಪೂಜೆ ಸಲ್ಲಿಸಿ ಎಲ್ಲರಿಗೂ ತೀರ್ಥ ಕೊಡುವರು. ಆಗ ಸೂತಕ ಕಳೆಯುತ್ತದೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗರಲ್ಲಿ ೧೨ ದಿನ ಕಳೆದ ಮೇಲೆ ಮಾಡುತ್ತಾರೆ. ತಿಥಿ ಆಚರಿಸುವಾಗ ಅವರ ಪೋಡಿನಲ್ಲಿ ಯಾವ ಹಬ್ಬವನ್ನು ಮಾಡುವಂತಿಲ್ಲ. ಹರಿಯುವ ಹಳ್ಳ ಅಥವಾ ನೀರಿರುವ ಜಾಗದಲ್ಲಿ ಕಾರ್ಯ ನಡೆಸುವರು. ಇಲ್ಲಿಯೂ ಐದು ಕುಲದವರೂ ಸೇರುತ್ತಾರೆ. ಮಾಂಸ, ಮುದ್ದೆ, ಅನ್ನ, ಐದು ಮುತ್ತುಗದ ಎಲೆ, ಐದು ದೊನ್ನೆಗಳನ್ನು ನೆಲದ ಮೇಲೆ ಹಾಕಿ ಪ್ರತಿಯೊಂದರ ಮುಂದೆ ಐದು ಕುಲದ ಪ್ರತಿನಿಧಿಗಳು ಕೂರುತ್ತಾರೆ. ಸತ್ತವರಿಗೆ ಎಡೆ ಹಾಕಿ ಪೂಜೆ ಮಾಡಿ, ಸತ್ತವರನ್ನು ಎಡೆ ಸ್ವೀಕರಿಸುವಂತೆ ಪ್ರಾರ್ಥಿಸುತ್ತಾರೆ. ನಂತರ ಆ ಐದು ಜನರಿಗೆ ಊಟವಾಗುತ್ತದೆ. ನಂತರ ಉಳಿದವರು ಊಟಮಾಡುತ್ತಾರೆ. ಎಲ್ಲರೂ ಹೋದ ನಂತರ ೧೨ ಜನ ಮಾತ್ರ ಉಳಿದು ಅವರು ಕೈಯಲ್ಲಿ ಒಂದೊಂದು ಹಿಡಿ ರಾಗಿ ಹಿಡಿದು ಇನ್ನೊಂದು ಕೈಯಲ್ಲಿ ಒಂದೊಂದು ಬಿಂದಿಗೆ ನೀರು ಹಿಡಿದು ಪೂಜೆ ಮಾಡಿರುವ ಸ್ಥಳಕ್ಕೆ ಬಂದು ಒಬ್ಬರ ಕೈನೀರು ಮತ್ತು ರಾಗಿ ಇನ್ನೊಬ್ಬರ ಕೈಮೇಲೆ ಬೀಳುವಂತೆ ಹುಯ್ಯುತ್ತಾ "ಗುಡ್ಡು ಗುಡ್ಡು" ಎಂದು ಜೋರಾಗಿ ಕೂಗುವ ಪದ್ದತಿ ಮಹದೇಶ್ವರ ಬೆಟ್ಟದ ಸೋಲಿಗರಲ್ಲಿದೆ. ಇದರಿಂದ ಸತ್ತವನ ಆತ್ಮ ಭೂಮಿಯಲ್ಲೇ ಇದ್ದರೆ ಅದು ಭೂಮಿಯನ್ನು ಬಿಟ್ಟು ಹೋಗುತ್ತದೆ ಎಂದು ನಂಬುತ್ತಾರೆ. ಇದನ್ನು 'ಧಾನ್ಯ ಹಿಡಿಯುವುದು' ಎನ್ನುವರು.

ತಿಥಿ ಮಾಡಿದ ರಾತ್ರಿ, ಸತ್ತವರಿಗಾಗಿ ಎಡೆ ಇಟ್ಟಿದ್ದ ಅನ್ನಸಾರು, ಮುದ್ದೆಯನ್ನು ಸತ್ತ ಜಾಗದಲ್ಲಿಟ್ಟು ಅದರ ಜೊತೆ ಒಂದು ಚೊಂಬು ನೀರನ್ನು ಇಟ್ಟು ಅವುಗಳ ಮೇಲೆ ಒಂದು ಕುಕ್ಕೆ ಮುಚ್ಚಿ ಎಲ್ಲರೂ ಮಲಗುವರು. ಬೆಳಗಾದ ಮೇಲೆ ಮುಚ್ಚಿದ್ದ ಕುಕ್ಕೆ ತೆಗೆದು ನೋಡುವರು. ಊಟ ಚೆಲ್ಲಾಡಿದ್ದರೆ, ಅನ್ನದ ಅಗುಳು ಬಿದ್ದಿದ್ದು, ಮುದ್ದೆ ಮುರಿದ ಹಾಗಿದ್ದರೆ, ನೀರು ಸ್ವಲ್ಪ ಕಡಿಮೆಯಾಗಿದ್ದರೆ, ಸತ್ತ ವ್ಯಕ್ತಿ ಸತ್ತವರ ಲೋಕ ಸೇರಿದ್ದಾನೆಂದು ನಂಬುವರು. ಇಲ್ಲದಿದ್ದಲ್ಲಿ ಸತ್ತವನನ್ನು ಮತ್ತೆ ಸತ್ತವರ ಲೋಕಕ್ಕೆ ಸೇರಿಸಲು, 'ಈರುಮುರಿಯುವುದು' ಎಂಬ ಇನ್ನೊಂದು ಆಚರಣೆ ಮಾಡುವರು. [ಈ ಜಿಲ್ಲೆಯ ಸೋಲಿಗರಲ್ಲಿ ತಿಥಿಗೆ ತಲೆಬೋಳಿಸಿಕೊಳ್ಳುವ ಪದ್ದತಿ ಇಲ್ಲ] ಕೆಲವು ಕಡೆ 'ಕಲ್ಲುಸೇವೆ' ಮಾಡುವರು.

## ಶ್ರಾದ್ಧ

ಪ್ರಾಚೀನ ಕಾಲದಿಂದಲೂ ಕುಟುಂಬಗಳ ಸಮೂಹವನ್ನು ಒಂದಾಗಿರಿಸುವಲ್ಲಿ ಶ್ರಾದ್ಧಾದಿ ಕರ್ಮಗಳು ಸಹಕಾರಿಯಾಗಿವೆ. ಮಾತಾ ಪಿತೃಗಳು ಬದುಕಿರುವಾಗ ಅವರ ಮನಸ್ಸಿಗೆ ನೋವನ್ನುಂಟು ಮಾಡದೇ, ಆರೈಕೆ ಮಾಡುತ್ತಾ ಅವರ ಅಂತ್ಯ ಕಾಲದಲ್ಲಿ ಅಂತ್ಯಕರ್ಮಗಳನ್ನು ವಿತ್ತಶಾಠ್ಯವಿಲ್ಲದೆ, ವಿಧಿವಿಹಿತ ರೀತಿಯಲ್ಲಿ ಮಾಡಿ, ಋಣ ಮುಕ್ತರಾಗಬೇಕೆಂದು ಹಿಂದೂಗಳು ಬಯಸುತ್ತಾರೆ. ಅಲ್ಲದೆ, ಐಹಿಕವಾದ ಸಕಲ ಅಭ್ಯುದಯಗಳಿಗೂ ನಿಃಶ್ರೇಯಕ್ಕೂ ಪಿತೃಗಳೇ ಮೂಲ ಕಾರಣರು ಎಂದು ಶೃತಿ, ಸ್ಮೃತಿ, ಪುರಾಣಗಳು ಸಾರುತ್ತವೆ. ಶ್ರಾದ್ಧ ಕಾಲದಲ್ಲಿ ಪಿತೃ ದೇವತೆಗಳಿಗೆ ಪಿಂಡ ಪ್ರದಾನ ಮಾಡಲು ಅಧಿಕಾರವುಳ್ಳ ಎಲ್ಲಾ ಸದಸ್ಯರೂ ಸೇರಬೇಕೆಂದು ಶಾಸ್ತ್ರವು ವಿಧಿಸಿದೆಯಾಗಿ ಈಗಲೂ ಕೂಡ ಮರಣಿಸಿರುವ ವ್ಯಕ್ತಿಯ ಗಂಡು ಮಕ್ಕಳು, ಮೊಮ್ಮಗಂದಿರು, ಮರಿಮಗಂದಿರು ಒಟ್ಟಿಗೆ ಸೇರುವ ಪರಿಪಾಟವಿದೆ. ಆಗ ಇನ್ನುಳಿದ ಸಂಬಂಧಿಕರು, ಜ್ಞಾತಿಗಳ ಹೆಣ್ಣು ಮಕ್ಕಳು ಮುಂತಾದವರೂ ಸಾಮಾನ್ಯವಾಗಿ ಹಾಜರಿರುತ್ತಾರೆ. ಒಂದು ಅವಿಭಕ್ತ ಕುಟುಂಬ ಎಷ್ಟೇ ವಿಭಕ್ತ ಕುಟುಂಬಗಳಾಗಿ ಒಡೆದಿದ್ದರೂ ಎಲ್ಲಾ ಸಪಿಂಡರನ್ನೂ ಒಟ್ಟಾಗಿ ಉಳಿಸುವಲ್ಲಿ ಶ್ರಾದ್ಧಾಚರಣೆಯು ಒಂದು ಪ್ರಬಲ ಶಕ್ತಿಯಾಗಿ ಮುಂದುವರೆದಿದೆ.

ಸಾಮಾನ್ಯವಾಗಿ ಹಿಂದೂಗಳು ತಮ್ಮವರ ಮೃತ ದೇಹಗಳನ್ನು ದಹನ ಮಾಡುವರು. ಮೃತ ವ್ಯಕ್ತಿಯ ದೇಹಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸುವರು ; ಸುವಾಸನಾಯುಕ್ತ ಶ್ರೀಗಂಧವನ್ನು ಹಚ್ಚುವರು ; ಮತ್ತು ಹೂಗಳು ಹಾಗೂ ಮಾಲೆಗಳಿಂದ ಅಲಂಕರಿಸುವರು. ಇದಾದ ನಂತರ, ಕೆಲವು ಶುದ್ಧೀಕರಣ ವಿಧಿ ಸಂಬಂಧೀ ಪವಿತ್ರ ಮಂತ್ರೋಚ್ಚಾರಣೆ ಮಾಡಿ ಪೂಜಿಸಿ ದೇಹವನ್ನು ಚಿತೆಯ ಮೇಲೆ ಉತ್ತರ ಅಥವಾ ದಕ್ಷಿಣ ದಿಕ್ಕಿಗೆ ತಲೆ ಮಾಡಿ ಇಡುವರು. ಸನಿಹದ ಸಂಬಂಧಿಯೋರ್ವನು, ಸಾಮಾನ್ಯವಾಗಿ ಹಿರಿಮಗನು, ಅದಕ್ಕೆ ಅಗ್ನಿಸ್ಪರ್ಶ ಮಾಡಿ ಮೃತ ವ್ಯಕ್ತಿಯ ಆತ್ಮ ಶಾಂತಿಗಾಗಿ ಪ್ರಾರ್ಥನೆ ಮಾಡುತ್ತಾ ಚಿತೆಯ ಸುತ್ತಲೂ ನಡೆದು ಬರುವನು. ನಂತರ ಅವನು ಮೃತ ವ್ಯಕ್ತಿಯ ಬಾಯಿಯನ್ನು ಸ್ಪರ್ಶಿಸುತ್ತಾ ಚಿತೆಗೆ ಬೆಂಕಿ ಇಡುವನು. ಇತ್ತೀಚಿನ ದಶಕಗಳಲ್ಲಿ ನಗರ ಪ್ರದೇಶಗಳಲ್ಲಿ ವಿದ್ಯುತ್ ಚಿತಾಗಾರಗಳು ಬಳಕೆಗೆ ಬಂದಿವೆ. ಶವ ದಹನದ ನಂತರ ಉಳಿಯುವ ಭಸ್ಮ ಮತ್ತು ಅಸ್ಥಿಗಳನ್ನು ಯಾವುದಾದರೊಂದು ಪವಿತ್ರ ನದಿ ಅಥವಾ ಸಮುದ್ರದಲ್ಲಿ ವಿಸರ್ಜಿಸುವರು.

ಹಿಂದೂಗಳಲ್ಲಿ ಮೃತ ದೇಹವನ್ನು ಹೂಳುವ ಪದ್ಧತಿಯೇ ಹೆಚ್ಚು ಪ್ರಚಲಿತವಾಗಿದೆ. ಜಾತಿ ಮತ್ತು ಬುಡಕಟ್ಟುಗಳ ಕುರಿತು ಬರೆದಿರುವ ಇದೇ ಅಧ್ಯಾಯದ ಉಪ ಶೀರ್ಷಿಕೆಯಲ್ಲಿ ಇದರ ವಿವರಗಳನ್ನು ಕೊಡಲಾಗಿದೆ.

**ಗೃಹ ಜೀವನ:** ಮನುಷ್ಯ ಜೀವನದ ಬಹುಮುಖ್ಯ ಅವಶ್ಯಕತೆಗಳಲ್ಲಿ ಮನೆಯೂ ಒಂದು. ಮನೆ ಎಂಬುದು ಕೇವಲ ಕಟ್ಟಡವಾಗಿರದೇ ಅದರಲ್ಲಿ ಕುಟುಂಬದ ಸದಸ್ಯರೆಲ್ಲಾ ಕೂಡಿ ಬಾಳಿ, ಬೆಳೆದು, ಸಂಸ್ಕೃತಿಯನ್ನು ಕಟ್ಟಿ ಬೆಳೆಸುವ ಒಂದು ನೆಲೆವೀಡು ಎಂದರೆ ತಪ್ಪಾಗಲಾರದು. ಆಹಾರ ಬಟ್ಟೆ, ವಸತಿ ಈ ಮೂರೂ ಮಾನವನಿಗೆ ಹುಟ್ಟಿನಿಂದ ಸಾಯುವವರೆಗೂ ಅತ್ಯಂತ ಅಗತ್ಯ. ಪ್ರತಿಯೊಬ್ಬ ಮನುಷ್ಯ ಅಥವಾ ಪ್ರತೀ ಕುಟುಂಬಕ್ಕೂ ಒಂದು ಮನೆ ಎನ್ನುವ ವಾಸದ ನೆಲೆ ಇದ್ದೇ ಇರುತ್ತದೆ. ಆ ಮನೆಗಳನ್ನು ಆಯಾ ಪ್ರದೇಶದ ಹವಾಗುಣ, ಅವರವರ ಆರ್ಥಿಕ ಶಕ್ತಿ ಸಾಮರ್ಥ್ಯ, ಅಗತ್ಯತೆ, ಅನುಕೂಲಗಳಿಗೆ ಅನುಗುಣವಾಗಿ ನಿರ್ಮಿಸಿಕೊಳ್ಳುತ್ತಾರೆ. ಚಾಮರಾಜನಗರ ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ನೀಲಗಿರಿ ಸರಣಿಗೆ ಹೊಂದಿಕೊಂಡಂತೆ ಇದ್ದು,

ನಿರಂತರ ಹರಿಯುವ ನದಿ, ಕಾಡು, ಗುಡ್ಡಗಾಡು ಪ್ರದೇಶದಿಂದ ಕೂಡಿದ್ದು ಶೇ. ೪೮ ರಷ್ಟು ಅರಣ್ಯದಿಂದ ಕೂಡಿದೆ. ಬುಡಕಟ್ಟು ಜನಾಂಗ ವಾಸಿಸುತ್ತಿದ್ದು ಭಾಗಶಃ ಹಿಂದುಳಿದ ಪ್ರದೇಶವೆನಿಸಿದೆ. ಇಲ್ಲಿ ಚಪ್ಪಡಿ, ಕಲ್ಲು, ಮಣ್ಣು, ಇಟ್ಟಿಗೆ, ಸಿಮೆಂಟು, ಹೆಂಚು, ನಾಡಹೆಂಚು ಮುಂತಾದವನ್ನು ಬಳಸಿ ನಿರ್ಮಿಸಿದ ಮಾಳಿಗೆ ಮನೆ, ಹೆಂಚಿನ ಮನೆ, ಗುಡಿಸಲು, ಸಿಮೆಂಟ್ ಮನೆಗಳು ಕಂಡುಬರುತ್ತವೆ. ಕಂಬದ ಮನೆ, ಜಗಲಿ, ಓಣಿ, ತೊಟ್ಟಿಮನೆ, ಒಳ ಮನೆ, ಕೊಟ್ಟಿಗೆ, ಅಂಗಳ ಮುಂತಾದವುಗಳಿಂದ ಕೂಡಿದವುಗಳಾಗಿರುತ್ತವೆ. ಮನೆಗಳು ನಿರ್ಮಿಸಲ್ಪಟ್ಟಿವೆ. ರೈತರ ಮನೆಗಳಲ್ಲಿ ಕೃಷಿ ಉಪಕರಣಗಳನ್ನಿಡಲು ಬೆಳೆದ ದವಸ ಧಾನ್ಯಗಳಿಡುವ ಕಣಜ, ವಾಡೆ ನಿರ್ಮಿಸಿಕೊಳ್ಳುತ್ತಿದ್ದರು. ಬ್ರಾಹ್ಮಣರ ಮನೆ ಅಂಗಳದಲ್ಲಿ ತುಳಸಿಕಟ್ಟೆ ಇರುತ್ತದೆ. ನಗರ ಪ್ರದೇಶದಲ್ಲಿ ಆರ್‌ಸಿಸಿ ಕಟ್ಟಡಗಳು, ನೆಲಕ್ಕೆ ಗ್ರಾನೈಟ್, ಟೈಲ್ಸ್ ಹಾಕುವುದು, ಹೊನ್ನೆ, ತೇಗದ ಮರ ಬಳಸುವುದು, ಯೋಜನಾಬದ್ಧವಾಗಿ ವಾಸ್ತು ಪ್ರಕಾರ ಮನೆ ಕಟ್ಟುವುದು ಕಂಡುಬರುತ್ತದೆ. ನಗರಗಳಲ್ಲಿ ಪ್ರತ್ಯೇಕ ಶೌಚಾಲಯ ಕಟ್ಟಿಕೊಂಡರೂ ಹಳ್ಳಿಗಳಲ್ಲಿ ವಿರಳ.

ಹಿಂದಿನ ಕಾಲದಲ್ಲಿನ ಮನೆಗಳು ಬಹುತೇಕ ಮಣ್ಣಿನ ಗೋಡೆಗಳಿಂದಾಗಿದ್ದು, ಚಿಕ್ಕ ಚಿಕ್ಕ ಕಿಟಕಿ, ನೆಲಕ್ಕೆ ಸಗಣಿ ಅಥವಾ ಗಾರೆ ಹೆಚ್ಚೆಂದರೆ ರೆಡ್ ಆಕ್ಸೈಡ್‌ನಿಂದಾಗಿರುತ್ತಿದ್ದವು. ಶ್ರೀಮಂತರು, ಜಮೀನುದಾರರು ತೊಟ್ಟಿಮನೆಯಂತಹ ಮನೆ ಕಟ್ಟಿಕೊಳ್ಳುತ್ತಿದ್ದರು. ಈ ಜಿಲ್ಲೆಯಲ್ಲಿ ಬಡವರು ಮತ್ತು ಬುಡಕಟ್ಟು, ಗಿರಿಜನರು ಹೆಚ್ಚಾಗಿರುವುದರಿಂದ ಗುಡಿಸಲು ಮನೆಗಳೇ ಹೆಚ್ಚಾಗಿವೆ. ಮೇಲ್ಛಾವಣಿಗೆ ಒಣಹುಲ್ಲು, ಸೊಪ್ಪು, ನಾಡಹೆಂಚು ಮುಂತಾದವುಗಳನ್ನು ಬಳಸುತ್ತಿದ್ದರು.

ಸೋಲಿಗರು ಮೊದಲಾದ ಗಿರಿಜನರು ವಾಸಿಸುವ ಜಾಗವನ್ನು 'ಪೋಡು'ಅಥವಾ 'ಹಾಡಿ' ಎಂದು ಕರೆಯುವರು. ಮನೆಗಳೆಂದರೆ ಗುಡಿಸಲೇ ಆಗಿರುತ್ತವೆ. ಹಿಂದೆ ಇವರು ಒಂದೇ ಕಡೆ ನೆಲೆಸದೇ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಮ್ಮ ನೆಲೆ ಬದಲಿಸಿಕೊಳ್ಳುತ್ತಿದ್ದುದೂ ಇದಕ್ಕೆ ಕಾರಣವಿರಬಹುದು. ವ್ಯವಸಾಯದ ಭೂಮಿಯಲ್ಲೇ ಗುಡಿಸಲು ಹಾಕಿಕೊಳ್ಳುವುದು ರೂಢಿ.

**ಆಹಾರ ಪದ್ದತಿ:** ಜಿಲ್ಲೆಯಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿಗಳಿದ್ದು, ಮಾಂಸಾಹಾರಿಗಳಲ್ಲಿಯೂ ನಿರ್ಧಿಷ್ಟ ವಾರದ ದಿನಗಳಲ್ಲಿ ಮಾಂಸಾಹಾರ ಸೇವಿಸದಿರುವ ಕೆಲವು ಮಂದಿ ಇದ್ದಾರೆ. ಮುಖ್ಯವಾಗಿ ಶನಿವಾರ, ಸೋಮವಾರ ಹಾಗೂ ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಕೆಲವರಲ್ಲಿ ಮಾಂಸಾಹಾರ ವರ್ಜ್ಯ. ದಿನನಿತ್ಯ ಬಳಸುವ ಆಹಾರ ಹಾಗೂ ವಿಶೇಷ ದಿನಗಳಲ್ಲಿ ಬಳಸುವ ಆಹಾರ ಎಂಬುದಾಗಿ ಎರಡು ರೀತಿಯಲ್ಲಿಯೂ ಆಹಾರ ಬಳಸುವಿಕೆಯನ್ನು ಗುರುತಿಸಬಹುದು. ರಾಗಿ, ಅಕ್ಕಿ, ಜೋಳ, ಅವರೆ, ತೊಗರಿ, ಹುರಳಿ, ಕಡಲೆ ಮೊದಲಾದ ಕಾಳುಗಳು ಹಾಗೂ ಇನ್ನಿತರೆ ಜಾತ್ರೆ, ನಾಮಕರಣ, ಪೂಜೆ ಮುಂತಾದ ಸಂದರ್ಭದಲ್ಲಿ ಮಾಡುವ ಒಬ್ಬಟ್ಟು, ಪಾಯಸ, ವೆಜಿಟಬಲ್‌ಬಾತ್, ಹಪ್ಪಳ, ಕೋಸಂಬರಿ, ಪಲ್ಯ ಇತ್ಯಾದಿಗಳು ವಿಶೇಷ ಆಹಾರವೆನಿಸುತ್ತವೆ.

ಈ ಜಿಲ್ಲೆಯಲ್ಲಿ ಬಹುತೇಕ ಹಿಂದುಳಿದ ವರ್ಗದ ಜನಸಮುದಾಯವಿದ್ದು, ರಾಗಿ ಮುಖ್ಯ ಆಹಾರವೆನಿಸಿದೆ. ಜೊತೆಗೆ ಅಕ್ಕಿ, ಗೋಧಿ ಸಹಾ ಬಳಸುವರು. ಇತ್ತೀಚೆಗೆ ಇಡ್ಲಿ, ದೋಸೆ, ಉಪ್ಪಿಟ್ಟು, ಚಿತ್ರಾನ್ನ, ವೆಜಿಟಬಲ್ ಬಾತ್, ಚಪಾತಿ, ಪೂರಿ ಮುಂತಾದವುಗಳನ್ನು ದಿನನಿತ್ಯದ ಉಪಹಾರಕ್ಕಾಗಿ ಬಳಸುವರು. ಊಟಕ್ಕಾಗಿ ರಾಗಿಮುದ್ದೆ, ಅನ್ನ, ಸಾಂಬಾರು, ಮಜ್ಜಿಗೆ, ಮೊಸರು, ಪಲ್ಯ ಇತ್ಯಾದಿ ಬಳಸುವರು. ಹಣ್ಣು ತರಕಾರಿಗಳ ಬಳಕೆಯೂ ಇದೆ. ಮಾವು, ಹಲಸು, ಪಪ್ಪಾಯಿಗಳಂತಹ ಹಣ್ಣುಗಳು ಮತ್ತು ಕೆಲವು ತರಕಾರಿಗಳನ್ನು ತಾವೇ ಬೆಳೆಯುತ್ತಿದ್ದರು. ಹಬ್ಬಗಳಲ್ಲಿ ಆಯಾ ಹಬ್ಬಕ್ಕೆ ತಕ್ಕಂತಹ ಸಿಹಿ ಅಡುಗೆ ಮಾಡಿ ಊಟ ಮಾಡುವ ಪದ್ದತಿ ಇದೆ. ಊಟ

ಮಾಡಲು ಹಿಂದೆ ಅಲ್ಯೂಮಿನಿಯಂ ತಟ್ಟೆ, ಲೋಟ, ಬಾಳೆಎಲೆ, ಮುತ್ತುಗದ ಎಲೆ ಬಳಸುತ್ತಿದ್ದು, ಈಗ ಸ್ಟೀಲ್ ತಟ್ಟೆ ಲೋಟ ಬಳಸುವರು. ಅಡುಗೆಗಾಗಿ ಮಣ್ಣಿನ ಮಡಕೆ ಬಳಸುತ್ತಿದ್ದ ಜಾಗದಲ್ಲಿ ಅಲ್ಯೂಮಿನಿಯಂ ಮತ್ತು ಸ್ಟೀಲ್ ಬಂದಿದೆ. ಜೈನರು, ವೈದಿಕ ಪರಂಪರೆಯವರನ್ನು ಬಿಟ್ಟರೆ ಉಳಿದವರೆಲ್ಲಾ ಹಾಗೂ ಮುಸಲ್ಮಾನರು, ಕ್ರಿಶ್ಚಿಯನ್ನರು, ಮಾಂಸಾಹಾರಿಗಳು.

ಸೋಲಿಗರೇ ಮೊದಲಾದ ಬುಡಕಟ್ಟು ಜನಾಂಗದವರು ಮಾಂಸಾಹಾರಿಗಳು. ಮುಖ್ಯ ಆಹಾರ ರಾಗಿ. ಕಾಡಿನಲ್ಲಿ ಗೆಡ್ಡೆ ಗೆಣಸು, ಹಣ್ಣು, ಬೇಟೆಯಾಡಿ ಮಾಂಸ ಸಂಗ್ರಹಣೆ ಮಾಡಿ ತಂದು ಅಡುಗೆ ಮಾಡಿ ಸೇವಿಸುವರು. ಬೇಟೆಯೇ ಆಹಾರ ಸಂಗ್ರಹಣೆಯಲ್ಲಿ ಮುಖ್ಯವಾಗಿತ್ತು. ಇದೀಗ ಅರಣ್ಯ ಸಂರಕ್ಷಣಾ ಕಾಯ್ದೆ ಮುಂತಾದವುಗಳು ಬೇಟೆಯನ್ನು ಕಡಿತಗೊಳಿಸಿವೆ. ಇವರು ಪ್ರಾಣಿ, ಮೀನು, ಜೇನು ಬೇಟೆಯಾಡುವರು. ಜೇನು ಬೇಟೆ ಎಂದರೆ ಜೇನುತುಪ್ಪ ಸಂಗ್ರಹಿಸುವುದು. ಇವರು ಕಾಡುಕೋಳಿ, ಸಾರಂಗ, ಜಿಂಕೆ, ಕಡಬೆ(ವೆ), ಮೊಲ, ಮುಸು (ಕೋತಿಯ ಆಕಾರವುಳ್ಳ ಒಂದು ಪ್ರಾಣಿ) ಮುಂತಾದವುಗಳನ್ನು ಬೇಟೆಯಾಡುವರು. ಈಗ ಕಾಡು ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಗ್ರಹಿಸಿರುವುದರಿಂದ ಬೇರೆ ಬೇರೆ ವೃತ್ತಿಯವಲಂಬಿಸಿದ ಸೋಲಿಗರು ಇತರರಂತೆ ಅಕ್ಕಿ, ರಾಗಿ, ಗೋಧಿ, ಕಾಳು ಬಳಸುವರು.

**ಉಡುಗೆ ತೊಡುಗೆ:** ಆಯಾ ಪ್ರಾದೇಶಿಕ ಹವಾಗುಣಕ್ಕನುಗುಣವಾಗಿ ಅಲ್ಲಿನ ಜನರು ಉಡುಪುಗಳನ್ನು ಧರಿಸುವರು. ದಿನನಿತ್ಯದ ಉಡುಪು, ಹಬ್ಬ ಹರಿದಿನ ಮುಂತಾದ ವಿಶೇಷ ದಿನಗಳಲ್ಲಿನ ಉಡುಪು, ವಿವಾಹದಲ್ಲಿ ತೊಡುವ ಉಡುಪು ಹೀಗೆ ಭಿನ್ನ ಬಗೆಯಲ್ಲಿ ಉಡುಪುಗಳನ್ನು ಧರಿಸುವುದುಂಟು. ಇದು ಅವರವರ ಆರ್ಥಿಕ ಶಕ್ತ್ಯಾನುಸಾರವೂ ಇರುವುದುಂಟು. ಸಾಮಾನ್ಯವಾಗಿ ಗಂಡಸರು ತುಂಬುತೋಳಿನ ಅಥವಾ ಅರ್ಧತೋಳಿನ ಶರ್ಟ್, ಬನೀನು, ಪಂಚೆ, ಟವೆಲ್, ಚಡ್ಡಿ ಬಳಸುವರು. ವಿಶೇಷ ದಿನಗಳಲ್ಲಿ ಇವೇ ಉಡುಪುಗಳು ಹೊಸದಾದವುಗಳಾಗಿರುತ್ತವೆ. ಪಂಚೆಯನ್ನು ಕಚ್ಚೆ ಪಂಚೆಯಾಗಿ ಉಟ್ಟು ಮೇಲೆ ಕೋಟು ಧರಿಸಬಹುದು. ಶಲ್ಯ, ತಲೆಗೆ ಟೊಪ್ಪಿಗೆ ಅಥವಾ ಪೇಟ ಇಡಬಹುದು. ಮೈಸೂರು ಪೇಟ ಪ್ರಸಿದ್ಧಿಯಾದುದು. ಕಾಲಿಗೆ ಚಪ್ಪಲಿ ಅಥವಾ ಚಡಾವು ಮೆಟ್ಟಬಹುದು. ಇವು ಸ್ವಲ್ಪ ಸ್ಥಿತಿವಂತರ ಉಡುಪು. ಬಡವರು ಬನೀನು, ಶರ್ಟ್, ನಿಕ್ಕರ್, ಪಂಚೆ, ಲುಂಗಿ ಇತ್ಯಾದಿಗಳನ್ನು ತೊಡುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಮಲೆಮಾದೇಶ್ವರನ ಒಕ್ಕಲು ಜನ ಹೆಚ್ಚಾಗಿರುವುದರಿಂದ ಹೆಗಲ ಮೇಲೆ ಕಂಬಳಿ ಅಥವಾ ದುಪಟಿ ಹೊದೆದಿರುತ್ತಾರೆ. ಚಿಕ್ಕವರು ಶರ್ಟ್ ಮತ್ತು ನಿಕ್ಕರ್ ಧರಿಸಿರುತ್ತಾರೆ. (ಸದಾ ಕೆಲಸದಲ್ಲಿ ನಿರತರಾಗಿರುವುದರಿಂದ) ಸ್ತ್ರೀಯರು ಸೀರೆ, ಕುಪ್ಪಸ ಧರಿಸುವರು. ಈಗ ಆಧುನಿಕತೆಯ ಪರಿಣಾಮವಾಗಿ ಚೂಡಿದಾರ್, ಸ್ಕರ್ಟ್, ನೈಲಾನ್ ಸೀರೆಗಳು ಮುಂತಾದವುಗಳನ್ನು ಬಳಸುವರು. ಹೆಣ್ಣು ಮಕ್ಕಳು ಸ್ಕರ್ಟ್, ಲಂಗಬ್ಲೌಸ್, ಜೀನ್ಸ್‌ಪ್ಯಾಂಟ್, ಶರ್ಟ್ ಮುಂತಾದವುಗಳನ್ನು ಧರಿಸುತ್ತಾರೆ. ಹಿಂದೆ ಲಂಗದಾವಣಿ ಮತ್ತು ಸೀರೆ ಮುಖ್ಯವಾಗಿತ್ತು. ಮದುವೆ ಹಬ್ಬಗಳಲ್ಲಿ ವೈದಿಕ ಪರಂಪರೆಯ ಹೆಂಗಸರು ರೇಷ್ಮೆಸೀರೆ ಉಡುತ್ತಿದ್ದರು. ಈಗ ಗಂಡಸರಲ್ಲಿ ಪ್ಯಾಂಟ್ ಶರ್ಟ್, ಟೀ ಶರ್ಟ್, ಜೀನ್ಸ್ ಪ್ಯಾಂಟ್ ಮುಂತಾದವುಗಳನ್ನು ತೊಡುತ್ತಾರೆ.

ಸೋಲಿಗರು ಅರೆಬೆತ್ತಲೆ ಉಡುಪು ತೊಡುತ್ತಿದ್ದವರು ಈಗ ನಾಗರೀಕತೆಯ ಪರಿಚಯವಾಗಿ ದೇಹ ಪೂರ್ತಿ ಉಡುಪು ಧರಿಸುತ್ತಾರೆ. ಮುಸಲ್ಮಾನರಲ್ಲಿ ಗಂಡಸರು ಶರ್ಟ್, ಜುಬ್ಬಾ ವಿಶೇಷ ಸಂದರ್ಭದಲ್ಲಿ ಉದ್ದನೆಯ ನಿಲುವಂಗಿ (ಶೇರವಾನಿ) ಹಾಗೂ ಟೋಪಿ ಧರಿಸುವರು. ಇದು ಅವರ ಸಾಂಪ್ರದಾಯಿಕ ಉಡುಪು

ಕೂಡ ಆಗಿದೆ. ಮಹಿಳೆಯರು ಸೀರೆ ಕುಪ್ಪಸ, ಪಂಜಾಬಿ ಡ್ರೆಸ್ (ಚೂಡಿದಾರ್) ಧರಿಸುವುದಲ್ಲದೇ ಹೊರಗೆ ಹೋಗುವಾಗ ಬುರ್ಕಾ ಧರಿಸುವರು.

ಹಿಂದಿನಿಂದಲೂ ಪುರುಷರೂ, ಮಹಿಳೆಯರೂ ಹಲವು ಬಗೆಯ ಅಲಂಕಾರಿಕ ಆಭರಣಗಳನ್ನು ಧರಿಸುವುದು ರೂಢಿಯಲ್ಲಿತ್ತು. ಅವು ಚಿನ್ನವೇ ಆಗಬೇಕಿರಲಿಲ್ಲ. ಬೆಳ್ಳಿ, ಚಿನ್ನ, ಇತರೆ ಲೋಹ ಹಾಗೂ ಇನ್ನಿತರೆ ರೂಪದವಾಗಿರುತ್ತಿದ್ದವು. ಗಂಡು ಮಕ್ಕಳಿಗೆ, ಮಗುವಿಗೆ ಕಿವಿಚುಚ್ಚಿ ಚಿಕ್ಕ ಚಿಕ್ಕ ಓಲೆ, ಮುರ, ಲೋಲಾಕು, ಉಂಗುರ, ಸೊಂಟಕ್ಕೆ ಉಡಿದಾರ, ಕಾಲುಕಡಗ ಮುಂತಾದವುಗಳನ್ನು ಧರಿಸುತ್ತಿದ್ದರು. ಹೆಣ್ಣು ಮಕ್ಕಳಿಗೂ ಕೂಡ ಇವುಗಳೊಂದಿಗೆ ಕಾಲಂದಿಗೆ, ಗೆಜ್ಜೆ ಹಾಕುತ್ತಿದ್ದರು. ಕಿವಿಯದು ಬಿಟ್ಟರೆ ಉಳಿದವು ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದಾಗಿರುತ್ತಿದ್ದವು. ಹೆಣ್ಣು ಮಕ್ಕಳು ದೊಡ್ಡವರಾಗುವ ವೇಳೆಗೆ ಮೂಗು ಚುಚ್ಚಿ ಮೂಗುಬೊಟ್ಟು ಇಡುತ್ತಿದ್ದರು. ಅವರವರ ಅನುಕೂಲಕ್ಕೆ ತಕ್ಕಂತೆ ಕಿವಿಗೆ ಓಲೆ, ಮಾಟಿ, ಕೆನ್ನೆ ಚೈನು, ಉಂಗುರ, ಕೈಕಡಗ, ಬೆಳ್ಳಿಕಾಲಂದಿಗೆ, ಕಾಲುಚೈನು, ಸೊಂಟಪಟ್ಟಿ, ಡಾಬು, ಚಿನ್ನದಸರ, ಕರಿಮಣಿಸರ, ಅಡ್ಡಿಕೆ, ಕಾಸಿನಸರ, ಚಿಂತಾಕು, ಜೋಮಾಲೆಸರ ಇತ್ಯಾದಿ. ಗಂಡಸರೂ ಕೂಡ ಕಿವಿಗೆ ಒಂಟಿ, ಉಂಗುರ, ಬೆಳ್ಳಿ ಉಡುದಾರ, ಕೈಗೆ ಕಪ್ಪ, ಸರ ಮುಂತಾದವನ್ನು ಧರಿಸುತ್ತಾರೆ.

ಹೆಣ್ಣು ಮಕ್ಕಳಿಗೆ ತಲೆಬಾಚಿ ಜಡೆಹಾಕಿದರೆ, ದೊಡ್ಡವರು, ವಯಸ್ಸಾದವರು ತಲೆಬಾಚಿ ಗಂಟು (ತುರುಬು) ಕಟ್ಟಿಕೊಳ್ಳುತ್ತಿದ್ದರು. ತಲೆಗೆ ಹರಳೆಣ್ಣೆ ಬಳಕೆ ಜಾಸ್ತಿ. ಬ್ರಾಹ್ಮಣರು ಮುಂತಾದವರು ಕೊಬ್ಬರಿಎಣ್ಣೆ ಹಾಕುತ್ತಿದ್ದರು. ಸ್ನಾನಕ್ಕೆ ಸೀಗೆಕಾಯಿ ಹಾಕುತ್ತಿದ್ದರು. ಸಾಬೂನು ಬಳಸುವುದು ವೈಭವವೆನಿಸಿತ್ತು. ಬಹಳ ಜನ ಕಾಲಿಗೆ ಚಪ್ಪಲಿ ಹಾಕುತ್ತಿರಲಿಲ್ಲ. ಕೆಲವರು ಸ್ಥಳೀಯವಾಗಿ ತಯಾರಿಸಿದ ಮೆಟ್ಟುಗಳನ್ನು ಬಳಸುತ್ತಿದ್ದರು. ಗಂಡಸರು ಜುಟ್ಟು ಬಿಡುತ್ತಿದ್ದರು. ಕ್ರಮೇಣ ಕ್ರಾಪು ಬಿಡತೊಡಗಿದರು. ಹೆಣ್ಣು ಮಕ್ಕಳಿಗೆ ಹಚ್ಚೆ ಹಾಕಿಸುವುದು ಕಡ್ಡಾಯ ಎನ್ನುವಷ್ಟು ಜನಪ್ರಿಯವಾದುದಾಗಿತ್ತು.

ಲಂಬಾಣಿ ಜನಾಂಗದವರು ಧರಿಸುವ ಉಡುಗೆ ತೊಡುಗೆಗಳು ಇತರರಿಗಿಂತ ಭಿನ್ನವಾಗಿರುತ್ತವೆ. ಮೂಲತಃ ರಾಜಸ್ತಾನದವರಾದ ಇವರು ಉಡುಗೆಯಲ್ಲಿ ಕೆಂಪು ಬಣ್ಣಕ್ಕೆ ಮಹತ್ವ ನೀಡುತ್ತಾರೆ. ಇವರು 'ಛಾಂಟಿಯಾ'– ತಲೆಯ ಮೇಲೆ ದೊಡ್ಡ ವಸ್ತ್ರವನ್ನು ಧರಿಸುವರು (ಗುಬುರು ಹಾಕಿಕೊಂಡಂತೆ) 'ಕಾಂಚಾಳಿ'– ಕುತ್ತಿಗೆಯಿಂದ ಸೊಂಟದವರೆಗೆ ಮುಂಭಾಗವನ್ನು ಆವರಿಸಿರುವ ಕುಪ್ಪಸ, 'ಫೇಟಿಯಾ'– ಸೊಂಟದಿಂದ ಕಾಲಿನ ವರೆಗೆ ಮುಚ್ಚುವ ಲಂಗ ಧರಿಸಿರುತ್ತಾರೆ. ಇವರು ಬೆನ್ನು ಮುಚ್ಚದಂತಹ ಕುಪ್ಪಸ ಹಾಕುತ್ತಾರೆ. ಅದಕ್ಕೆ ಒಂದು ದಂತಕಥೆ ಹೇಳುವರು. ಯೋಧನೊಬ್ಬ ಯುದ್ಧಕ್ಕೆ ಹೋಗಿದ್ದು, ಅವನ ಹೆಂಡತಿ ತನ್ನ ನಲ್ಲನ ನೆನಪಿನಲ್ಲಿಯೇ ತನ್ನ ಪೋಷಾಕನ್ನು ಕಲಾತ್ಮಕವಾಗಿ ಹೆಣೆಯುತ್ತಿರುತ್ತಾಳೆ. ಅರ್ಧಕ್ಕೆ ಹೆಣೆದಿರುವ ಹೊತ್ತಿಗೆ ಯೋಧ ಸಮರದಲ್ಲಿ ಮರಣಹೊಂದಿದಾಗ ಸುದ್ದಿ ತಿಳಿದ ಇವಳು ತನ್ನ ಉಡುಪನ್ನು ಅರ್ಧದಲ್ಲಿಯೇ ಬಿಟ್ಟು ಗಂಡನ ಜೊತೆ ಚಿತೆ ಏರುತ್ತಾಳೆ. ಅವಳು ಬಿಟ್ಟು ಹೋದ ಅರ್ಧದ ಉಡುಪನ್ನೇ ಪೂರ್ಣವೆಂದು ಲಂಬಾಣಿ ಮಹಿಳೆಯರು ಭಾವಿಸುತ್ತಾರೆ. ಆದುದರಿಂದ ಬೆನ್ನಿನ ಭಾಗ ತೆರೆದಿರುತ್ತದೆ. ಇವರು ತಮ್ಮ ಪೋಷಾಕು ಹೊಲಿಯುವಾಗ ಕವಡೆ, ಕನ್ನಡಿ, ಕಾಸು, ಗೆಜ್ಜೆ, ಗೊಂಡೆ ಮುಂತಾದವುಗಳನ್ನು ಸೇರಿಸಿ ಹೊಲಿಯುತ್ತಾರೆ. ತಲೆ, ಕಿವಿ, ಮೂಗು, ಕೊರಳು, ಕೈಕಾಲುಗಳಿಗೆ ವಿಧವಿಧವಾದ ಕಲಾತ್ಮಕವಾದ ಭಾರವಾದ ಆಭರಣಗಳಿಂದ ಅಲಂಕಾರ ಮಾಡಿಕೊಳ್ಳುತ್ತಾರೆ. ಇದನ್ನು ಮದುವೆದಿನ ಗಂಡಿನ ಮನೆಯವರು ಹೆಣ್ಣಿಗೆ ಹಾಕುವರು. ಕೈಗೆ ಧರಿಸುವ ಬಳೆಗಳನ್ನು 'ಚೂಡಿ' ಎಂದೂ

ತೋಳಿಗೆ ಹಾಕಿಕೊಳ್ಳುವ ಬಳೆಯನ್ನು 'ಚೂಡೋ' ಎಂದು ಕರೆಯುತ್ತಾರೆ. ಇವುಗಳನ್ನು ಮುತ್ತೈದೆಯರು ಮಾತ್ರ ಧರಿಸುತ್ತಾರೆ. 'ಮರ್ಕಿ' ಎಂಬ ಓಲೆಯನ್ನು ಧರಿಸುತ್ತಾರೆ.

**ಗೃಹೋಪಕರಣಗಳು:** ಮನೆ ಬಳಕೆಯಲ್ಲಿ ಅನೇಕ ವಿಧದ ಸಾಧನ ಸಾಮಗ್ರಿಗಳು ಬಳಕೆಯಾಗುತ್ತವೆ. ಅವುಗಳಲ್ಲಿ ನಿತ್ಯ ಬಳಕೆಯಲ್ಲಿ ಬಳಸಲ್ಪಡುವ ಅಡುಗೆ ಮನೆಯ ಸಾಮಗ್ರಿ, ಕೂರಲು, ಮಲಗಲು, ನಿತ್ಯೋಪಯೋಗಿತ ವಸ್ತುಗಳು, ಕೃಷಿಗೆ ಬಳಸುವ ಸಾಮಗ್ರಿ ದವಸಧಾನ್ಯ ತುಂಬುವ ಪರಿಕರ ಹೀಗೆ ಹಲವು ಹತ್ತು ರೀತಿಯ ಉಪಕರಣಗಳು ಅದರಲ್ಲಿಯೂ ಗ್ರಾಮೀಣ ಭಾಗದ ಜನರಿಗೆ ಅನಿವಾರ್ಯವಾದವುಗಳಾಗಿವೆ. ಅವುಗಳಲ್ಲಿ ಮಣ್ಣಿನ, ಕಬ್ಬಿಣ, ಹಿತ್ತಾಳೆ, ತಾಮ್ರ, ಮರ, ಅಲ್ಯೂಮಿನಿಯಂ, ಬೆಳ್ಳಿ, ಇತ್ತೀಚೆಗೆ ಸ್ಟೀಲ್, ಪ್ಲಾಸ್ಟಿಕ್‌ಗಳಾಗಿರುತ್ತವೆ. ಕುಳಿತುಕೊಳ್ಳಲು ಚಾಪೆಗಳು, ಕಂಬಳಿ, ಜಮಖಾನ, ಕೆಲವು ಮನೆಗಳಲ್ಲಿ ಇತ್ತೀಚೆಗೆ ಮರದ ಅಥವಾ ಕಬ್ಬಿಣದ ಖುರ್ಚಿ, ಬೆಂಚು, ಟೇಬಲ್‌ಗಳಿರುವುದನ್ನು ಕಾಣಬಹುದು. ನಗರದ ಶ್ರೀಮಂತರ ಮನೆಗಳಲ್ಲಿ ಐಷಾರಾಮಿ ಸೋಫಾಸೆಟ್, ಕಾರ್ಪೆಟ್ ಮುಂತಾದವುಗಳಿರುತ್ತವೆ. ಹಿಂದೆ ಹಳ್ಳಿಗಳಲ್ಲಿ ಗೋಣಿಚೀಲ, ಮಣೆ, ತೆಂಗಿನಗರಿ ಮತ್ತು ಈಚಲಗರಿಗಳಿಂದ ಹೆಣೆದ ಚಾಪೆಗಳನ್ನು ಬಳಸಲಾಗುತ್ತಿತ್ತು. ಮನೆ ಬಳಕೆಯಲ್ಲಿ ಹಂಡೆ, ಕೊಳಗ, ಬಿಂದಿಗೆ, ಹರವಿ, ಚೊಂಬು, ಲೋಟ, ಡಬರಿ, ಜರಡಿ, ಮೊರ, ಕವೆಗೋಲು, ಹಿಟ್ಟು ತಿರುವೋ ದಬ್ಬೆ, ಒರಳು ಕಲ್ಲು, ಹಸೇಕಲ್ಲು, ಒನಕೆ, ರುಬ್ಬುವ ಗುಂಡು ಮುಂತಾದವು. ಪೊರಕೆ, ಮೊಸರು ಕಡೆಯುವ ಮಂತು, ಕಾಯಿತುರಿಮಣೆ, ಕೊಬ್ಬರಿ ತುರಿಯುವ ಮಣೆ, ಕುಡುಗೋಲು, ಕೃಷಿ ಉಪಕರಣಗಳಾದ ನೇಗಿಲು, ನೊಗ, ಬೈರಿಗೆ, ಬಾಚಿ, ಕುಡುಗೋಲು, ಕೂರಿಗೆ, ಹಲುಬೆ, ಅರ, ಇಕ್ಕಳ, ಮುಚ್ಚಳ, ಬಾಂಡ್ಲಿ, ಸುತ್ತಿಗೆ, ಗುದ್ದಲಿ, ಪಿಕಾಸಿ ಮುಂತಾದವು. ಊಟದ ಮನೆಯಲ್ಲಿ ಬಳಸುವ ತಣಿಗೆ (ಊಟದ ತಟ್ಟೆ), ಚೊಂಬು, ಲೋಟ, ಕೈಬಟ್ಟಲು, ಸೌಟು, ಅನ್ನದ ಕೈ, ಪ್ಲೇಟು, ಹಿಟ್ಟಿನ ಮಡಕೆ, ಬಾಣಲೆ ಹಾಗೂ ಇತರೆ ಪಾತ್ರೆ ಪಡಗಗಳನ್ನು ಬಳಸುತ್ತಿದ್ದು ಇವುಗಳಲ್ಲಿ ಅಲ್ಯೂಮಿನಿಯಂ, ಸ್ಟೀಲ್, ಕಂಚು ಇತ್ಯಾದಿ ಸೇರಿವೆ. ಹಳ್ಳಿಗಳಲ್ಲಿ ಸ್ನಾನದ ನೀರು ಕಾಯಿಸಲು ಹಾಗೂ ಕುಡಿಯುವ ಮನೆಬಳಕೆ ನೀರು ಸಂಗ್ರಹಿಸಲು ದೊಡ್ಡ ದೊಡ್ಡ ಮಣ್ಣಿನ ಗುಡಾಣಗಳನ್ನು ಉಪಯೋಗಿಸುತ್ತಿದ್ದರು. ಸ್ಥಿತಿವಂತರು ಶ್ರೀಮಂತರು ತಾಮ್ರದ ಕಡಾಯಿಗಳನ್ನು ಬಳಸುತ್ತಿದ್ದರು. ಅಡುಗೆ ಮಾಡಲು ಸೌದೆ ಒಲೆ, ಇದ್ದಿಲು ಒಲೆಗಳಿದ್ದು, ಈಗಲೂ ಹಳ್ಳಿಗಳಲ್ಲಿ ಬಹುತೇಕ ಬಳಕೆಯಲ್ಲಿದೆ. ಕೆಲವರು ಸೀಮೆಎಣ್ಣೆ ಸ್ಟೌವ್, ವಿದ್ಯುತ್ ಒಲೆ, ಗ್ಯಾಸ್ ಬಳಸಲು ಪ್ರಾರಂಭಿಸಿದ್ದಾರೆ. ನಗರದಲ್ಲಿ ಈ ಪ್ರಮಾಣ ಹೆಚ್ಚಾಗಿರುವುದು ಗಮನಾರ್ಹ.

## ಸ್ತ್ರೀಯರ ಸ್ಥಾನಮಾನ

ಚಾಮರಾಜನಗರ ಜಿಲ್ಲೆಯಲ್ಲಿನ ಸ್ತ್ರೀಯರ ಸ್ಥಿತಿಗತಿಗಳು ರಾಜ್ಯದ, ಏಕೆ, ಇಡೀ ದೇಶದ – ಸ್ತ್ರೀಯರ ಸ್ಥಿತಿಗತಿಗಳಿಗಿಂತ ಭಿನ್ನವಾಗೇನೂ ಇಲ್ಲ. ಪ್ರಾಚೀನ ಕಾಲದಲ್ಲಿ ಸಮಾಜವು ಅವರಿಗೆ ಗೌರವಯುತವಾದ ಸ್ಥಾನ ನೀಡಿತ್ತು. ಬಹುಶಃ ಆಗ ಬಾಲಕ – ಬಾಲಿಕೆಯರ ಸಹ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಕ್ಷತ್ರಿಯ ಸ್ತ್ರೀಯರಿಗೆ ಸಾಮಾನ್ಯ ಶಿಕ್ಷಣದ ಜೊತೆ ಜೊತೆಗೇ ಶಸ್ತ್ರಗಳ ಬಳಕೆಯಲ್ಲಿ ಮತ್ತು ಇತರ ಯುದ್ಧ ತಂತ್ರಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಅನೇಕ ರಾಜ ಕುಟುಂಬಗಳ ಸ್ತ್ರೀಯರು ಆಡಳಿತ ಕಾರ್ಯದಲ್ಲಿಯೂ ಪಾತ್ರ ವಹಿಸುತ್ತಿದ್ದರು. ಪತಿ ಮರಣಿಸಿದಾಗ ಅವನ ವಿಧವೆಯು ಮಡಿ ತೆಗೆಸಿ, ಒಡವೆಗಳನ್ನು ತೆಗೆದಿರಿಸಿ ಕೆಂಪು ಸೀರೆಯನ್ನುಡುವುದಾಗಲೀ, ಸಹಗಮನವಾಗಲೀ ಪ್ರಾಚೀನ ಹಿಂದೂ ಸಮಾಜದಲ್ಲಿ ಕಡ್ಡಾಯವಾಗಿರಲಿಲ್ಲ. ಪ್ರಾಚೀನ ಕಾಲದಿಂದಲೂ ವಿವಾಹ ಸಮಯದಲ್ಲಿ ವರನ ವಯಸ್ಸು ವಧುವಿನ ವಯಸ್ಸಿನ ಎರಡರಷ್ಟಿರಬೇಕೆಂದು ಹಿಂದೂ ಧರ್ಮಶಾಸ್ತ್ರಕಾರನೊಬ್ಬ ಹೇಳಿದ್ದರೆ, ಇನ್ನೊಬ್ಬ ಧರ್ಮಶಾಸ್ತ್ರಕಾರನು ವರನು ೨೫ ವರ್ಷಗಳ ವಯಸ್ಸಿನವನಾಗಿರಬೇಕೆಂದೂ ವಧು ೧೬ ವರ್ಷ

ವಯಸ್ಸಿನವಳಾಗಿರಬೇಕೆಂದೂ ಹೇಳಿದ್ದಾನೆ. ಇಪ್ಪತ್ತೊಂದು ವರ್ಷಕ್ಕೂ ಕಡಿಮೆ ವಯಸ್ಸಿನ ವರನ ಮದುವೆಯನ್ನು ಯಾವುದೇ ಧರ್ಮಶಾಸ್ತ್ರವೂ ಶಿಫಾರಸು ಮಾಡುವುದಿಲ್ಲ. ಇತ್ತೀಚಿನ ದಶಕಗಳಲ್ಲಿ ವಿವಾಹ ವಯೋಮಿತಿಯ ಬಗ್ಗೆ ಧರ್ಮಶಾಸ್ತ್ರಕಾರರ ಶಿಫಾರಸುಗಳನ್ನು ಅನುಸರಿಸುತ್ತಿರುವುದು ಕಡಿಮೆ. ಮಧ್ಯಯುಗೀನ ಕಾಲದಲ್ಲಿ ಅನೇಕ ಕಾರಣಗಳಿಂದ ಜನಪ್ರಿಯವಾಗುತ್ತಾ ಬಂದಿದ್ದ ಬಾಲ್ಯ ವಿವಾಹ ಪದ್ಧತಿಯು ೧೯-೨೦ನೇ ಶತಮಾನಗಳ ಸಮಾಜ ಸುಧಾರಕರ ನಿರಂತರ ಯತ್ನಗಳಿಂದಾಗಿ ಸಂಪೂರ್ಣವಾಗಿ ನಿಂತು ಹೋಗಿದೆ ಅಪವಾದಗಳನ್ನು ಹೊರತುಪಡಿಸಿ. ಹಿಂದೂ ವಿವಾಹ ಅಧಿ ನಿಯಮ, ೧೯೫೫, ನಿಶ್ಚಿತಪಡಿಸಿರುವಂತೆ ವಧೂವರರ ವಯೋಮಿತಿ ಅವರ ವಿವಾಹ ಕಾಲದಲ್ಲಿ ಕ್ರಮವಾಗಿ ಕನಿಷ್ಟ ೧೫ ಮತ್ತು ೧೮ ವರ್ಷಗಳಾಗಿರಬೇಕಿತ್ತು. ಸಾಮಾನ್ಯವಾಗಿ ಈಗ ನಗರಪ್ರದೇಶಗಳಲ್ಲಿ ವಾಸಿಸುವ ಓರ್ವ ಲಾಕ್ಷಣಿಕ ಹಿಂದೂ ೨೫ ರಿಂದ ೩೦ ವರ್ಷಗಳ ನಡುವೆ ವಿವಾಹವಾಗುತ್ತಾನೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಇದಕ್ಕಿಂತ ಸ್ವಲ್ಪ ಕಡಿಮೆ ವಯಸ್ಸಿನ ಯುವಕರು ವಿವಾಹವಾಗುವುದು ಕಂಡು ಬಂದಿದೆ. ವಧುವು ವರನಿಗಿಂತ ವಯಸ್ಸಿನಲ್ಲಿ ಕಿರಿಯಳಾಗಿರಬೇಕೆಂಬುದು ಒಂದು ಸಾಮಾಜಿಕ ನಿಯಮವೇ ಆಗಿದೆ.

ಪ್ರಾಚೀನ ಕಾಲದಲ್ಲಿ ಕನ್ಯಾವಿಧವೆಯರು ಮರುವಿವಾಹವಾಗಲು ಅವಕಾಶವಿತ್ತು, ಆದರೆ ವಿವಾಹ ವಿಚ್ಛೇದನಕ್ಕೆ ಅನುಮತಿ ಇರಲಿಲ್ಲ. ಹಿಂದೂ ವಿವಾಹವು ಜೀವನ ಪರ್ಯಂತವೂ ನಡೆಸಬೇಕಾದ ಒಂದು ಕಟ್ಟುಪಾಡು. ಇದರ ಮೂಲಾಧಾರವೆಂದರೆ ಪರಿಶುದ್ಧತೆ, ಪರಿನಿಷ್ಠತೆ ಮತ್ತು ಪತಿ – ಪತ್ನಿಯರ ನಡುವೆ ಪರಸ್ಪರ ನಂಬಿಕೆ. ಹಿಂದೂ ವಿವಾಹ ಅಧಿನಿಯಮ [೧೯೫೫] ದ ಪ್ರಕಾರ ವಿವಾಹ ವಿಚ್ಛೇದನಕ್ಕೆ ಕಾನೂನಿನ ಮಾನ್ಯತೆ ಇದೆಯಾದರೂ, ಹಿಂದೂ ಸಮಾಜದಲ್ಲಿ ಇದು ಇನ್ನೂ ಕಡಿಮೆ ಎಂದೇ ಹೇಳಬೇಕು. ಇಂತಹ ಸಂಗತಿಗಳು ಕುಲ ಗೌರವಕ್ಕೆ ಧಕ್ಕೆ ತರುತ್ತವೆಂದೇ ಬಹುತೇಕ ಹಿಂದೂಗಳ ಭಾವನೆ. ಕಾನೂನು ಪ್ರಕಾರ ಅವಕಾಶವಿದೆಯಾದರೂ ಮಕ್ಕಳಿರುವ ವಿಧವೆಯರು ಮರುಮದುವೆಯಾಗುವುದು ಅತ್ಯಂತ ವಿರಳ. ಸಾಮಾಜಿಕ ವ್ಯವಸ್ಥೆ ಹಾಗೂ ಸ್ಥಾನಮಾನಗಳ ಬಗೆಗಿನ ಆತಂಕವೇ ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಬಹುತೇಕ ಸಂದರ್ಭಗಳಲ್ಲಿ ವಿಧವೆಯ ತವರು ಮನೆಯವರೋ ಅಥವಾ ಅವಳ ಗತಿಸಿದ ಪರಿಯ ಮನೆಯವರೋ ಅವಳ ಮತ್ತು ಅವಳ ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸಲು ಮುಂದೆ ಬರುವರು. ಚಿಕ್ಕ ವಯಸ್ಸಿನ ವಿದ್ಯಾವಂತ ವಿಧವೆಯಾಗಿದ್ದಲ್ಲಿ ಯಾವುದಾದರೊಂದು ಉದ್ಯೋಗವನ್ನು ಹಿಡಿದು ತನ್ನ ಮಕ್ಕಳನ್ನು ಸಾಕಲು ಮುಂದಾಗುವುದೇ ಹೆಚ್ಚು. ಆಗ ಅವಳಿಗೆ ಬೇಕಾದ ಸಾಮಾಜಿಕ ಮತ್ತು ಮಾನಸಿಕ ಬೆಂಬಲವನ್ನು ನೆಂಟರಿಷ್ಟರು ನೀಡುವರು.

ಮುಸಲ್ಮಾನರು ಪಿತೃವಂಶೀಯ ಸಂಬಂಧಿಗಳಲ್ಲಿ ವಿವಾಹ ನಡೆಸಲು ಒಪ್ಪುತ್ತಾರೆ. ಓರ್ವ ಮದುವೆ ದಲ್ಲಾಳಿಯ ಮುಖೇನ ವರನ ಮಾತಾಪಿತೃಗಳು ವಧುವಿನ ಕಡೆಯವರನ್ನು ಸಂಪರ್ಕಿಸಿ ವಿವಾಹದ ಪ್ರಸ್ತಾಪವನ್ನು ಮಾಡುತ್ತಾರೆ. ಇದಾದ ನಂತರ ವರ ಮತ್ತು ವಧುವಿನ ಕಡೆಯವರ ನಡುವೆ ಉಡುಗೊರೆಗಳ ವಿನಿಮಯ ಆಗುತ್ತದೆ. ಮಾತುಕತೆ ನಡೆದು ಮೆಹರ್ ಮುಂತಾದ ವಿಷಯಗಳ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಗುತ್ತದೆ. ಮದುವೆಯ ದಿನದಂದು, ವಿಶೇಷ ಪೋಷಾಕಿನಲ್ಲಿ ವರನು ವಧುವಿನ ಸ್ವಗೃಹಕ್ಕೆ ಕುದುರೆಯೇರಿ ಆಗಮಿಸುತ್ತಾನೆ. (ಇತ್ತೀಚಿನ ವರ್ಷಗಳಲ್ಲಿ ಅನೇಕರು ಕುದುರೆಯ ಬದಲು ಕಾರಿನಲ್ಲಿ ಆಗಮಿಸುವುದೂ ಇದೆ.) ಖಾಜಿಯು ವಧುವರರಿಬ್ಬರ ಅನುಮೋದನೆಯನ್ನು ಮೆಹರ್ ಮೊತ್ತದ ವಿಷಯವಾಗಿ ಪಡೆದು ಅದನ್ನು ಬರವಣಿಗೆಯಲ್ಲಿ ದಾಖಲಿಸಿ ಸಾಕ್ಷಿಗಳೆದುರಿನಲ್ಲಿ 'ನಿಖಾ'ವನ್ನು ಓದುತ್ತಾನೆ. ವರನ ತಾಯಿ ಅಥವಾ ಬೇರೊಬ್ಬ ವಿವಾಹಿತ ಸ್ತ್ರೀ ಕರಿಮಣಿಗಳ ಹಾರವೊಂದನ್ನು ವಧುವಿನ ಕೊರಳಿಗೆ ಕಟ್ಟುತ್ತಾಳೆ. ವಧುವಿನ ತಂದೆಯ ಮನೆಯಲ್ಲಿ ನಂತರದ ನಾಲ್ಕು ಶುಕ್ರವಾರಗಳಂದು ವರನು ಭೋಜನ ಮಾಡುತ್ತಾನೆ. ಇದಕ್ಕೆ 'ಚಾರ್ ಜುಮ್ಮೆಗಿರ್' ಎಂದೆನ್ನುವರು.

ಗಂಡನು ತನ್ನ ಪತ್ನಿಯನ್ನು ವಿಚ್ಛೇದನದ ಮೂಲಕ ಬಿಡುಗಡೆ ಮಾಡುವುದು ಕುರ್–ಆನ್ ಪ್ರಕಾರ ಸಾಧ್ಯವಿದೆ. ಈ ಕುರಿತು ಅದು ಹೇಳುವುದೇನೆಂದರೆ, 'ವಿಶ್ವಾಸಿಗಳೇ, ಸ್ತ್ರೀಯರ ಮೇಲೆ ಬಲಾತ್ಕಾರವಾಗಿ ಪರಂಪಾರಾಗತ ಸೊತ್ತಿನಂತೆ ಒಡೆತನವಿದೆ ಎಂದುಕೊಳ್ಳುವುದು ನಿಮಗೆ ಧರ್ಮವಲ್ಲ. ನೀವು ಅವರಿಗೆ ಮೆಹರ್–ವಿವಾಹಧನ ಕೊಟ್ಟಿರುವುದರಿಂದ ಅದನ್ನು ಪಡೆಯುವುದಕ್ಕಾಗಿ ತಡೆದು ನಿಲ್ಲಿಸಬೇಡಿ. ಆದರೆ ಅವರೇನಾದರೂ ದುರ್ನನಡತೆಯಲ್ಲಿ ತೊಡಗಿರುವುದು ನಿಮಗೆ ಪ್ರತ್ಯಕ್ಷ ಕಂಡಲ್ಲಿ ಹೊರತುಪಡಿಸಿ ಅವರ ಜೊತೆಗೆ ನೀವು ಸಾಮಾನ್ಯವಾಗಿ ಬದುಕುವಂತೆಯೇ ಜೀವನ ಸಾಗಿಸಿರಿ' ಎಂದು. ಪತಿ ಪತ್ನಿಯರು ಒಂದಾಗಿ ಬಾಳುವುದು ಸಾಧ್ಯವಿಲ್ಲವೆಂಬ ಸಂದರ್ಭದಲ್ಲಿ ಬೇರ್ಪಡುವುದು ಅಗತ್ಯವೆಂದು ಪರಿಗಣಿಸಲಾಗುತ್ತದೆ.

ಮುಸ್ಲಿಂ ಗಂಡು ಅಥವಾ ಹೆಣ್ಣು ಸತ್ತಾಗ ಶವಕ್ಕೆ ಸ್ನಾನ ಮಾಡಿಸಿ. ಶವದುಡುಗೆ ತೊಡಿಸಿ ಮಸೀದಿ ಒದಗಿಸುವ ತೊಟ್ಟಿಲಲ್ಲಿ ಮಲಗಿಸಿ ಮೆರವಣಿಗೆಯಲ್ಲಿ ಶವವನ್ನು ಮಸೀದಿಗೆ ಸಾಗಿಸುವರು. ಅಲ್ಲಿ ಮೃತರ ಸದ್ಗತಿಗಾಗಿ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ನಂತರ, ಶವವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಶವವನ್ನು ಉತ್ತರ ದಿಕ್ಕಿಗೆ ತಲೆ ಬರುವಂತೆ ಮಾಡಿ ಮುಖವನ್ನು ಮೆಕ್ಕಾ ಕಡೆಗೆ ತಿರುಗಿಸಿ ಹೂಳುತ್ತಾರೆ. ಶೋಕತಪ್ತರ ಮನೆಯಲ್ಲಿ ಮೂರು ದಿನಗಳವರೆಗೆ ಆಹಾರ ತಯಾರಿಸುವುದಿಲ್ಲ ಮತ್ತು ಮೂರನೇ ದಿನ ಜಿಯಾರತನ್ನು ಆಚರಿಸುವರು. ಮರಣಾನಂತರದ ವಿಧಿ ಬದ್ಧ ಸಂತರ್ಪಣೆಯನ್ನು ೪೦ ನೇ ದಿನದಂದು, ನಾಲ್ಕನೇ, ಆರನೇ ಮತ್ತು ಒಂಭತ್ತನೇ ತಿಂಗಳ ಕೊನೆಯಲ್ಲಿ ಮತ್ತು ಮೊದಲನೇ ವರ್ಷದ ಕೊನೆಯ ದಿನದಂದು ನಡೆಸುವರು.

ಮಸ್ಜಿದ್ ಎಂಬ ಪದಕ್ಕೆ ಪ್ರಾರ್ಥನೆಗೆ ಮೀಸಲಿಟ್ಟ ನಿವೇಶನವೆಂಬ ಅರ್ಥವಿದೆ; ಭಕ್ತರು ನೆಲಕ್ಕೆ ಹಣೆ ಸೋಕಿಸಿ ಸಲ್ಲಿಸುವ ನಮಸ್ಕಾರ ಎಂಬ ಇನ್ನೊಂದು ಅರ್ಥವಿದೆ. ಗಂಡಸರು ಮಾತ್ರ ಮಸೀದಿಗಳಿಗೆ ಹೋಗಿ ಪ್ರಾರ್ಥನೆ ಮಾಡುವುದು ರೂಢಿ; ಸ್ತ್ರೀಯರು ಅವರವರ ಮನೆಗಳಲ್ಲಿ ಪ್ರಾರ್ಥನೆ ಸಲ್ಲಿಸುವರು. ವಿಶ್ವಾದ್ಯಂತ ಮುಸ್ಲಿಮರ ಪ್ರವಚನಗಳು ಸ್ಥಳೀಯ ಭಾಷೆಗಳಲ್ಲಿ [ಮಾತೃ ಭಾಷೆಯಲ್ಲಿ] ನಡೆದರೆ ಪ್ರಾರ್ಥನೆ ಮಾತ್ರ ಅರಬ್ಬಿ ಭಾಷೆಯಲ್ಲಿಯೇ ನಡೆಯುತ್ತದೆ.

ಪ್ರತಿಯೊಂದು ಮಸೀದಿಯಲ್ಲಿಯೂ 'ಖತಿಬ್' ಮತ್ತು 'ಮವಜ್ಜನ್' ಎಂಬ ಇಬ್ಬರು ಅಧಿಕಾರಿಗಳಿರುತ್ತಾರೆ. ಮವಜ್ಜನ್ ಮುಸ್ಲಿಮರಿಗೆ ಪ್ರಾರ್ಥನೆಗೆ ಬರಬೇಕೆಂದು ದಿನಕ್ಕೆ ಐದು ಬಾರಿ ಕರೆ ಕೊಡುವನು ; ವಿದ್ಯುಕ್ತವಾಗಿ ಪ್ರಾರ್ಥನೆ ನಡೆಸಿಕೊಡುವವನೇ ಖತೀಬ್. ಮುಸ್ಲಿಮರು ಪ್ರಾರ್ಥನೆ ಸಲ್ಲಿಸುವಾಗ ಯಾವುದೇ ರೀತಿಯ ಭೇದ ಭಾವನೆ ಅಥವಾ ಪಕ್ಷಪಾತಕ್ಕೆ ಅವಕಾಶವಿಲ್ಲ. ಎಲ್ಲರೂ ಸಾಲುಗಳಲ್ಲಿ ಭುಜಕ್ಕೆ ಭುಜ ತಾಗಿಸಿ ನಿಂತು ಪ್ರಾರ್ಥನೆ ಸಲ್ಲಿಸುವರು.

ಇಸ್ಲಾಂ ಮತಾವಲಂಬಿಗಳು ಸಾಕಷ್ಟು ಸಂಖ್ಯೆಯಲ್ಲಿರುವ ಊರುಗಳಲ್ಲಿ, ಊರಿನ ಹೊರ ಭಾಗದಲ್ಲಿ ಈದ್ಗಾ ಕಟ್ಟಡ ಇರುವುದುಂಟು. ಇದರ ಮುಂಭಾಗದಲ್ಲಿ ದೊಡ್ಡ ಬಯಲು ಪ್ರದೇಶವಿದ್ದು ಹಬ್ಬದ ದಿನಗಳಲ್ಲಿ ಅನೇಕ ಭಾಗಗಳಿಂದ ಬಂದು ಸೇರುವ ಮುಸ್ಲಿಮರು ಒಟ್ಟಾಗಿ ಪ್ರಾರ್ಥನೆ ಸಲ್ಲಿಸುವರು. ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳ ವಿಸ್ತರಣೆಯಿಂದಾಗಿ ಅನೇಕ ಸ್ಥಳಗಳಲ್ಲಿ ಈದ್ಗಾ ಕಟ್ಟಡಗಳು ನಗರಗಳ ಒಳ ಭಾಗದಲ್ಲಿರುವುದೇ ಹೆಚ್ಚು.

**ಜನನ:** ಗರ್ಭಾವಸ್ಥೆ ಮತ್ತು ಮಗುವಿನ ಜನನದ ಸಂದರ್ಭದಲ್ಲಿ ಅನೇಕ ರೀತಿಯ ರೂಢಿ, ಆಚರಣೆ ಸಂಪ್ರದಾಯಗಳಿರುತ್ತವೆ. ಸಾಮಾಜಿಕ ಬದುಕಿನಲ್ಲಿ ಹಾಗೂ ದಾಂಪತ್ಯ ಜೀವನದಲ್ಲಿ ಸಂತಾನಾಪೇಕ್ಷೆಯೂ ಒಂದು. ಸಾಮಾನ್ಯವಾಗಿ ಮೊದಲನೆಯ ಹೆರಿಗೆ ತಾಯಿಯ ಮನೆಯಲ್ಲಿಯೇ ನಡೆಯುವುದು ಒಂದು ಸಂಪ್ರದಾಯ. ಹಾಗೂ ಗರ್ಭಧರಿಸಿದ ಮಹಿಳೆಯನ್ನು ಆರೈಕೆ ಮಾಡುವುದು ಪೋಷಕಾಂಶವುಳ್ಳ ಆಹಾರ ನೀಡಿ ಆರೋಗ್ಯ ರಕ್ಷಣೆ ಮಾಡುವುದು ಕುಟುಂಬ ಸದಸ್ಯರ ಹೊಣೆಯಾಗಿರುತ್ತದೆ. ಅದನ್ನು ಸೂಕ್ತ ರೀತಿಯಲ್ಲಿ ಅಳವಡಿಸಲು ಅದಕ್ಕೊಂದು ಸಾಮಾಜಿಕವಾದ ಸ್ವರೂಪ ನೀಡಿ ಸಂಪ್ರದಾಯದ ಮೇಲ್ಕಟ್ಟು ಹೊದಿಸಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಗರ್ಭಿಣಿ ಬಯಸುವ ಆಹಾರ, ಊಟ, ತಿಂಡಿ ಮಾಡಿಕೊಡುವುದು ಒಡವೆ, ವಸ್ತ್ರ ನೀಡುವುದು, ಶಿಶು ಜನನದವರೆಗೂ ವಿಶೇಷ ಗಮನ ನೀಡುವುದು ಇತ್ಯಾದಿಗಳಿವೆ. ತವರು ಮನೆಗೆ ಹೆರಿಗೆಗೆ ಕಳುಹಿಸುವ ಸಂದರ್ಭದಲ್ಲಿ ನೆರೆಹೊರೆಯವರು, ಬಂಧು–ಬಾಂಧವರು ಸಂತಸವನ್ನು ಹಂಚಿಕೊಳ್ಳುತ್ತಾರೆ. ೭ ಅಥವಾ ೮ನೇ ತಿಂಗಳಲ್ಲಿ ಶಾಸ್ತ್ರ ಸೀಮಂತ ಮಾಡಿ, ಸಿಹಿಊಟ ಮಾಡಿ ಹರಸಿ ಕಳುಹಿಸಿಕೊಡುತ್ತಾರೆ.

ಜನನ, ಋತುಮತಿಯಾಗುವುದು ಮತ್ತು ಮರಣ ಸಂದರ್ಭಗಳಲ್ಲಿ ಮೈಲಿಗೆಯಾಗುವುದೆಂದು ಎಲ್ಲ ಜನಸಮುದಾಯದವರೂ ಭಾವಿಸುತ್ತಾರೆ ಹಾಗೂ ಆಚರಿಸುತ್ತಾರೆ. ಮೈಲಿಗೆ ಅಥವಾ ಸೂತಕವನ್ನು ಅವರವರ ರೂಢಿ ಸಂಪ್ರದಾಯಗಳಿಗನುಗುಣವಾಗಿ ಕಳೆದುಕೊಳ್ಳುತ್ತಾರೆ. ಅದಕ್ಕೆ ಕೆಲವು ಶಾಸ್ತ್ರಾಚರಣೆಗಳು ಮತ್ತು ವಿಧಿವಿಧಾನಗಳಿರುತ್ತವೆ. ಉದ್ದೇಶ ಒಂದೇ ಆದರೂ ಆಚರಣೆಯಲ್ಲಿ ವಿಭಿನ್ನತೆ ಕಂಡು ಬರುತ್ತವೆ.

ಸಾಮಾನ್ಯವಾಗಿ ಮಗು ಹುಟ್ಟಿದ ಒಂಭತ್ತರಿಂದ ಹದಿನಾರನೇ ದಿನ ಸೂತಕದ ದಿನಗಳಾಗಿರುತ್ತವೆ. ೧೬ನೇ ದಿನ ಸೂತಕ ಕಳೆದುಕೊಂಡು ಶುದ್ಧಿಯಾಗುವರು. ಅಂದೇ ಮಗುವಿಗೆ ಹೆಸರಿಡುವುದೂ ಉಂಟು. ಕೆಲವರು ೧೨ನೇ ದಿನಕ್ಕೆ ಸೂತಕ ಕಳೆದುಕೊಂಡು ಮಗುವನ್ನು ತೊಟ್ಟಿಲಿಗೆ ಹಾಕುವರು. ಕೆಲವರು ಮೂರು ತಿಂಗಳ ಒಳಗಾಗಿ ನಾಮಕರಣ ಇಟ್ಟುಕೊಳ್ಳುತ್ತಾರೆ. ಮಕ್ಕಳಿಲ್ಲದವರು ಸಂಬಂಧದಲ್ಲಿ ದತ್ತುತೆಗೆದುಕೊಳ್ಳುವರು. ಹೆರಿಗೆಯಾದ ನಂತರ ಮೂರು ತಿಂಗಳವರೆಗೆ (ಕೆಲವು ಬಾರಿ ಕಡಿಮೆ ಅಥವಾ ಹೆಚ್ಚಿನ ಅವಧಿ ಇರುತ್ತದೆ) ಮಗುವಿನ ತಾಯಿಗೆ ಬಾಣಂತನ ಮಾಡುವರು ಇದೊಂದು ಆರೋಗ್ಯ ರಕ್ಷಣಾ ಕ್ರಮ ಎನ್ನಬಹುದು. ಆ ವೇಳೆಯಲ್ಲಿ ಮಿತಾಹಾರ ನೀಡುವರು. ಬಾಣಂತಿ ಲೇಹ್ಯ, ಗಿಡಮೂಲಿಕೆಗಳಿಂದ ತಯಾರಿಸಿದ ಔಷಧ ಪಾನೀಯ ನೀಡುತ್ತಾರೆ. ಮಗು– ಬಾಣಂತಿಯ ಆರೈಕೆಯಾದ ನಂತರ ಏಳು ಅಥವಾ ಒಂಭತ್ತನೇ ತಿಂಗಳಲ್ಲಿ ಮನೆದೇವರಿಗೆ ಹೋಗಿ ನಂತರ ಗಂಡನ ಮನೆಗೆ ಕಳುಹಿಸುತ್ತಾರೆ. ಮಗುವಿನ ತಲೆಕೂದಲು ತೆಗೆಸುವ ಕಾರ್ಯ (ಹುಟ್ಟುಕೂದಲು, ಮಂಡೆ) ಮಾಡುವರು. ಬ್ರಾಹ್ಮಣರು ಮೊದಲಾದ ವೈದಿಕ ಧರ್ಮದವರು ಗಂಡು ಮಕ್ಕಳಿಗೆ ಉಪನಯನ ಮಾಡುವರು. ಲಿಂಗಾಯತರು ಲಿಂಗದೀಕ್ಷೆ ಕೊಡಿಸುತ್ತಾರೆ.

ಮುಸಲ್ಮಾನರ ಮನೆಗಳಲ್ಲಿ ಮಗು ಹುಟ್ಟಿದ ಕೆಲವು ಗಂಟೆಗಳು ಕಳೆಯುವಷ್ಟರಲ್ಲಿ ಅದರ ಕಿವಿಯಲ್ಲಿ 'ಅಜಾನ್' ಕೂಗುವ ಸಂಪ್ರದಾಯವಿದೆ. ಮಗು ಹುಟ್ಟಿದ ಸಂಗತಿಯನ್ನು ಮೊದಲು ಬಂದು ಹೇಳುವ ವ್ಯಕ್ತಿಗೆ ಏನಾದರೊಂದು ಬಹುಮಾನವನ್ನು ಅದರ ತಂದೆಯು ನೀಡುವನು. ಮಗುವಿನಿಂದ ದುಷ್ಟ ಶಕ್ತಿಗಳನ್ನು ದೂರವಿಡಲು ಕೆಲವು ಸಾಂಪ್ರದಾಯಿಕ ಕ್ರಿಯೆಗಳನ್ನು ನಡೆಸುವರು. ಹುಟ್ಟಿದ ಆರನೇ ದಿನ ನಾಮಕರಣವನ್ನು ಮಾಡುವರು. ಏಳು, ಹದಿನಾಲ್ಕು ಅಥವಾ ಇಪ್ಪತ್ತೊಂದನೇ ದಿನದಂದು ಅಕೀಕಾ ವಿಧಿಯನ್ನು ನಡೆಸುವರು. ಮಗುವಿಗೆ ನಾಲ್ಕೂವರೆ ತಿಂಗಳಾದಾಗ ಉಪ್ಪು ಅಥವಾ ಮಾಂಸವನ್ನು ಚೀಪಿಸುವ 'ನಮಕ್ ಚಾರಿ' ವಿಧಿಯನ್ನು ನಡೆಸುವರು. ಮಗು ಜನಿಸಿ ನಾಲ್ಕು ವರ್ಷ ನಾಲ್ಕು ತಿಂಗಳು ಮತ್ತು ನಾಲ್ಕು ದಿನಗಳಾದಾಗ 'ಬಿಸ್ಮಿಲ್ಲಾ' ಅಥವಾ

'ದೀಕ್ಷಾ ವಿಧಿ'ಯನ್ನು ಮಾಡುವರು. ಇದಾದ ನಂತರ ಸಾಮಾನ್ಯವಾಗಿ ಏಳನೇ ವರ್ಷದಿಂದ ಹದಿನಾಲ್ಕನೇ ವರ್ಷದೊಳಗೆ 'ಸುನ್ನತಿ' ನೆರವೇರಿಸುವರು.

ಕ್ರೈಸ್ಥರು ಸಹ ೪೦ ದಿನಗಳಲ್ಲಿ ಚರ್ಚಿನಲ್ಲಿ ನಾಮಕರಣ ನೆರವೇರಿಸುವರು.

ಸೋಲಿಗರಲ್ಲಿಯೂ ಚೊಚ್ಚಲ ಹೆರಿಗೆಗೆ ತವರುಮನೆಗೆ ಕಳುಹಿಸುವ ಪದ್ಧತಿ ಇದೆ. ನಿರ್ಧರಿಸಿದ ದಿನದಂದು ಕೆಲ ಸ್ಥಿತಿವಂತರು ಬಸುರಿ ವಸಗೆ ಮಾಡುತ್ತಾರೆ. ಊಟದ ಏರ್ಪಾಡುಮಾಡಿ ಹೊಸ ಸೀರೆ ಉಡಿಸಿ ತೌರಿಗೆ ಕಳುಹಿಸುತ್ತಾರೆ. ಹೆರಿಗೆದಿನ ಸಮೀಪಿಸುತ್ತಿದ್ದಂತೆ ತಮ್ಮ ವಾಸದ ನೆಲೆಯ ಪಕ್ಕದಲ್ಲಿಯೇ ಒಂದು ಹೆರಿಗೆ ಗುಡಿಸಲು ಕಟ್ಟುತ್ತಾರೆ. ಅಲ್ಲಿ ಬಸುರಿ ಹೆಂಗಸನ್ನು ವಯಸ್ಸಾದ ಮಹಿಳೆಯೊಂದಿಗೆ ಬಿಡುತ್ತಾರೆ. ಅಲ್ಲಿ ಅವರಿಗೆ ಅಗತ್ಯವಿರುವ ಉಡುಗೆ, ತೊಡುಗೆ, ಊಟದತಟ್ಟೆ, ನೀರು-ನಿಡಿ, ಎಣ್ಣೆ, ಬಾಚಣಿಗೆ ಮುಂತಾದ ಅಗತ್ಯ ಬಳಕೆಯ ವಸ್ತುಗಳನ್ನು ನೀಡಿ, ಪ್ರತಿದಿನ ಊಟವನ್ನು ಅಲ್ಲಿಗೇ ಕಳುಹಿಸುವರು. ಹೆರಿಗೆ ನೋವು ಶುರುವಾದಾಗ ಹೆರಿಗೆ ಮಾಡಿಸಿ ಅನುಭವ ಇರುವ ಹೆಂಗಸನ್ನು ಕರೆಸುವರು. ಬೇಗ ಹೆರಿಗೆಯಾಗದಿದ್ದಲ್ಲಿ ಬೆಂಡೆ ಮತ್ತು ನೆಲ್ಲಿ ಮರಗಳ ತೊಗಟೆಗಳಿಂದ ತಯಾರಿಸಿದ ರಸ ಕುಡಿಸುವ ನಂಬಿಕೆ ಇದೆ. ಹೆರಿಗೆಯಾದಾಗ ಮೊದಲೇ ಅಂದುಕೊಂಡಿದ್ದ ಯಾವುದಾದರೊಂದು ಹೆಸರನ್ನು ಮಗುವಿನ ಹಣೆಗೆ ಮೂರು ಬಾರಿ ವಿಭೂತಿ ಧರಿಸಿ ಮೂರು ಬಾರಿ ಉಚ್ಚರಿಸುವರು. ಹೀಗೆ ಐದು ಜನ ಮಾಡುತ್ತಾರೆ. ಬಾಣಂತಿಯ ಎದುರಿಗೆ ಬೆಂಕಿಯ ಕೆಂಡ ಹಾಕಿ ಐದು ಜನ ಕುಲಸ್ಥರು ಸೇರಿ ಧೂಪದ ಪುಡಿ ಹಾಕುವರು. ಹಾಗೂ ಅದರಲ್ಲಿ ಹಾವಿನಪೊರೆ, ಕಟ್ಟಿರುವೆ, ಕೊಳ್ಳಿರುವೆ, ಕುಂದನಸ್ವಾಲೆ ಎಂಬ ಒಂದು ಜಾತಿಯ ಸೆಲೆ, ಎಮ್ಮರುಕ ಎಂಬ ಒಂದು ಜಾತಿಯ ವಿಷದ ಮುಳ್ಳು ಇತ್ಯಾದಿಗಳನ್ನು ಪುಡಿ ಮಾಡಿಟ್ಟುಕೊಂಡಿದ್ದು, ಅದನ್ನು ಐದೂ ಜನ ಸೇರಿ ಬೆಂಕಿಗೆ ಹಾಕುವರು. ನಂತರ ಮಗುವನ್ನು ಎತ್ತಿಕೊಂಡು ಮನೆ ಒಳಗೆ ಹೋಗುವಳು. ಆಗ ಆ ಐದು ಜನರಿಗೂ ಭೋಜನ ಕೊಡಲಾಗುತ್ತದೆ. ತಾಯಿ-ಮಗುವಿಗೆ ಪ್ರತಿದಿನ ಸ್ನಾನ ಮಾಡಿಸುವರು, ಎಂಟುದಿನಕ್ಕೊಮ್ಮೆ ಮೇಲೆ ಹೇಳಿದ ಧೂಪ ಹಾಕುವರು. ತಾಯಿಯಾದವಳು ಮಗುವಿನ ಆರೋಗ್ಯ ದೃಷ್ಟಿಯಿಂದ ಪಥ್ಯ ಇರುತ್ತಾಳೆ. ಬಾಳೆಹಣ್ಣು, ಸಕ್ಕರೆ, ಜೇನು, ಬೆಲ್ಲ, ಕುಂಬಳಕಾಯಿ, ಸೋರೆಕಾಯಿ ಮುಂತಾದವನ್ನು ತಿನ್ನಬಾರದು. ಮೂರು ತಿಂಗಳುಗಳಾಗುವ ತನಕ ತಣ್ಣೀರು ಸ್ನಾನ ಮಾಡುವುದಿಲ್ಲ ಮತ್ತು ಮುಟ್ಟುವುದಿಲ್ಲ ಹಾಗೂ ಮಾಂಸಾಹಾರ ಇಲ್ಲ. ಮಗು ರಚ್ಚೆ ಮಾಡಿದಾಗ, ಸೋಲಿಗರ ಹೆಂಗಸು ಸ್ವಲ್ಪ ಕೆಂಡವನ್ನು ಒಂದು ಕಲ್ಲಿನ ಮೇಲೆ ಹಾಕಿ ಆ ಕೆಂಡಗಳ ಮೇಲೆ ಸ್ವಲ್ಪ ಕಸಪರಕೆ ಚೂರುಗಳು, ಉಪ್ಪಿನಹರಳು, ಮೆಣಸಿನಕಾಯಿ ಹಾಕಿ ಹೊಗೆ ಮಾಡಿ ಮಗುವನ್ನು ಅದರ ಮೇಲೆ ಆತು ಹಿಡಿಯುತ್ತಾರೆ. ಹೀಗೆ ಮಾಡುವುದರಿಂದ ಮಗು ರಚ್ಚೆ ಮಾಡಿ ಅಳುವುದನ್ನು ನಿಲ್ಲಿಸುತ್ತದೆ ಎಂದು ನಂಬುತ್ತಾರೆ. ಹುಟ್ಟಿದ ಮಕ್ಕಳೆಲ್ಲಾ ಸಾಯುತ್ತಿದ್ದರೆ ಏನೋ ದೋಷವಿದೆ ಎಂದು ಭಾವಿಸಿ, ಅದರ ಪರಿಹಾರಕ್ಕಾಗಿ ಮಗುವಿನ ಮೂಗು ಅಥವಾ ಕಿವಿ ಚುಚ್ಚಿ ದೋಷದ ಮೇಣಿಯನ್ನು ಇಡುವರು.

**ಋತುಮತಿ ಆಚರಣೆ (ಇದನ್ನು ಮೈ ನೆರೆಯುವುದು, ದೊಡ್ಡವಳಾಗುವುದು ಎಂದೂ ಸಹ ಕರೆಯುತ್ತಾರೆ):** ಹೆಣ್ಣು ಮಕ್ಕಳು ಪ್ರೌಢಾವಸ್ಥೆಗೆ ಬಂದಾಗ ಕೆಲವೊಂದು ವಿಧಿ ವಿಧಾನಗಳನ್ನು ಅನುಸರಿಸುವರು. ಮೂರು ದಿನದಿಂದ ಒಂಭತ್ತು ಅಥವಾ ಹನ್ನೊಂದು ದಿನಗಳವರೆಗೆ ಸೂತಕ ಆಚರಿಸುತ್ತಾರೆ. ಆಕೆಯನ್ನು ಪ್ರತ್ಯೇಕ ಇರಿಸುತ್ತಾರೆ. ಆಯಾ ಜಾತಿಯ ಸಂಪ್ರದಾಯಕ್ಕನುಗುಣವಾಗಿ ಆಚರಣೆಗಳು ಇರುತ್ತವೆ. ಋತುಮತಿಯಾದಾಗ ಹುಡುಗಿಯ ಸೋದರಮಾವನು ಹಸಿರು ಗಿಡಗಳ ಸೊಪ್ಪು, ಹಲಸು, ಲಕ್ಕಿ ಸೊಪ್ಪು ಮುಂತಾದವುಗಳಿಂದ ಗುಡಿಸಲು (ಗುಡ್ಲು) ನಿರ್ಮಿಸಿ ಅದರೊಳಗೆ ಹುಡುಗಿಯನ್ನು ಇರಿಸುತ್ತಾರೆ. ಋತುಮತಿಯಾದಾಗ ತೊಟ್ಟಿದ್ದ

ಬಟ್ಟೆಬರೆಗಳನ್ನು ಅಗಸರಿಗೆ ಕೊಡುತ್ತಾರೆ. ಪ್ರತಿದಿನ ಅಲಂಕಾರ ಮಾಡಿ ಕೂರಿಸಿ ಆರತಿ ಮಾಡಿ ಸಿಹಿ ಹಂಚುವುದು, ಸಿಹಿ ಊಟ ಮಾಡುವುದು ರೂಢಿ. ಹುಡುಗಿಗೆ ಎಳ್ಳು, ಕೊಬ್ಬರಿ ಮುಂತಾದವುಗಳಿಂದ ತಯಾರಿಸಿದ ಚಿಗಳಿ ಉಂಡೆ. ಸಿಹಿ ತಿಂಡಿ, ತುಪ್ಪದಲ್ಲಿ ಮಾಡಿದ ಪದಾರ್ಥಗಳು, ಮೆಂತ್ಯದ ಹಿಟ್ಟು ಮುಂತಾದವುಗಳನ್ನು ವಿಶೇಷವಾಗಿ ತಿನ್ನಲು ಕೊಡುತ್ತಾರೆ.

ಬುಡಕಟ್ಟು ಜನಾಂಗದಲ್ಲಿ ಇದನ್ನು ಇನ್ನೂ ಕಟ್ಟುನಿಟ್ಟಾಗಿ ಮಾಡುತ್ತಾರೆ. ಕಾಡುಗೊಲ್ಲರಲ್ಲಿ ೨೧ ದಿನ, ಇರುಳಿಗರು ಎಂಬ ಜನಾಂಗದಲ್ಲಿ ೩೦ ದಿನ ಹುಡುಗಿಯನ್ನು ಪ್ರತ್ಯೇಕವಾಗಿರಿಸಿರುತ್ತಾರೆ. ಅದಕ್ಕಾಗಿ ಪ್ರತ್ಯೇಕವಾಗಿ ಗುಡಿಸಲು ನಿರ್ಮಿಸಿರುತ್ತಾರೆ. ಅಥವಾ ವಾಸದ ಮನೆಯಲ್ಲಿಯೇ ಪ್ರತ್ಯೇಕ ಕೊಠಡಿಯಲ್ಲಿಸಿರುವರು.

ಸೋಲಿಗರಲ್ಲಿಯೂ ಕೂಡ ಹುಡುಗಿಯ ಸೋದರಮಾವ ಅಥವಾ ಅವಳಿಗೆ ಮಾವನಾಗಬೇಕಾದ ವ್ಯಕ್ತಿ ಹುಡುಗಿ ವಾಸಿಸುವ ಗುಡಿಸಲು ಪಕ್ಕದಲ್ಲಿಯೇ ಸೊಪ್ಪಿನ ಗುಡಿಸಲು ಹಾಕುತ್ತಾನೆ. ಹುಡುಗಿಗೆ ಸ್ನಾನಮಾಡಿಸಿ, ಹಣ್ಣುಕಾಯನ್ನು ಮಡಿಲಿಗೆ ತುಂಬಿ ಗುಡಿಸಲಿಗೆ ಬಿಡುತ್ತಾರೆ. ಆ ಸಮಯದಲ್ಲಿ ಅವಳ ಓರಗೆಯ ಒಂದು ಹುಡುಗಿಯನ್ನು ಅವಳ ಸಹಾಯಕ್ಕೆಂದು ಕಳಿಸುವರು. ಚೂರು ಬೇವಿನಸೊಪ್ಪು, ಕನ್ನಡಿ, ಬಾಚಣಿಗೆ, ಕುಂಕುಮ, ಎಣ್ಣೆ ಮುಂತಾದವನ್ನು ಕೊಡುವರು. ಗುಡಿಸಲಿಗೇ ಊಟ, ತಿಂಡಿಗಳನ್ನು ಕಳುಹಿಸುವರು. ಹುಡುಗಿ ಹೊರಗೆ ಹೋಗಬೇಕಾದಲ್ಲಿ ಚಪ್ಪಲಿಮೆಟ್ಟಿಕೊಂಡು ಕುಡುಗೋಲು ಹಿಡಿದು ಸಹಾಯಕ್ಕಾಗಿ ಕಳುಹಿಸಿದ್ದ ಸಂಗಾತಿ ಹುಡುಗಿಯ ಜೊತೆಯಲ್ಲಿಯೇ ಹೋಗಬೇಕು. ಪ್ರತಿದಿನ ಹೀಗೆಯೇ ಹೋಗಿ ಹಳ್ಳದಲ್ಲಿ ಸ್ನಾನಮಾಡಿ ಬರಬೇಕು. ಚಪ್ಪಲಿ ಕುಡುಗೋಲು ಇಲ್ಲದಿದ್ದರೆ ನಾಯಿದೆವ್ವ ಅಥವಾ ಕೊಳ್ಳಿದೆವ್ವ ಮೆಟ್ಟುತ್ತದೆ ಎಂದು ನಂಬುತ್ತಾರೆ. ಐದುದಿನಗಳ ತನಕ ಗುಡಿಸಲಿನಲ್ಲಿ ಸಂಗಾತಿ ಹುಡುಗಿಯೊಂದಿಗೆ ಇರಬೇಕು. ಆಕೆಯನ್ನೂ ಯಾರೂ ಮುಟ್ಟಿಸಿಕೊಳ್ಳುವುದಿಲ್ಲ.

ಆರನೆಯ ದಿನ ಹುಡುಗಿಗೆ ಧಾರ್ಮಿಕ ಸ್ನಾನ ಮಾಡಿಸುವರು. ಈ ದಿನ ಸೂತಕ ಮುಗಿಯುತ್ತದೆ. ಹುಡುಗಿಯನ್ನು ಸ್ನಾನಕ್ಕೆ ಕರೆದುಕೊಂಡು ಹೋಗುವಾಗ ಸೋಲಿಗರು ದಾರಿಯುದ್ದಕ್ಕೂ ಬೂದಿಯನ್ನು ಬಿಟ್ಟುಕೊಂಡು ಹೋಗುತ್ತಾರೆ. ಸೋದರಮಾವ ಅವಳಿಗಾಗಿ ನಿರ್ಮಿಸಿದ್ದ ಗುಡಿಸಲಿಗೆ ಬೆಂಕಿಇಟ್ಟು ಸುಡುತ್ತಾನೆ. ಹಳ್ಳದ ಹತ್ತಿರ ಹುಡುಗಿಗೂ ಸಹಾಯಕ್ಕಿದ್ದ ಗೆಳತಿಗೂ ಅರಿಸಿನ ಸೀಗೆಕಾಯಿ ಹಾಕಿ ಸ್ನಾನ ಮಾಡಿಸುವರು. ಗುಡಿಸಲು ಸುಟ್ಟ ಬೂದಿಯನ್ನು ತುಳಿದುಕೊಂಡು ಹುಡುಗಿ ಮನೆ ಒಳಗೆ ಕಾಲಿಡುವಳು. ಐದು ಜನ ಕುಲಸ್ಥರನ್ನು ಕರೆಸಿ ಅವರಿಗೆ ಮಣೆ ಹಾಕಿ ಕೂಡಿಸಿ ಪೂಜೆ ಮಾಡಿ ಅವರಿಂದ ಹುಡುಗಿಗೆ ತೀರ್ಥ ಕೊಡಿಸುತ್ತಾರೆ. ಅಲ್ಲಿಗೆ ಸೂತಕ ಕಳೆಯುತ್ತದೆ. ಆ ದಿನ 'ಹೊಸಗೆ ಹಿಟ್ಟು' ಔತಣ ನಡೆಯುತ್ತದೆ. ಸೋಲಿಗರಿಗೆ ಐದು ಬಹುಮುಖ್ಯವಾದ ಅವರಲ್ಲಿ ಐದು ಕುಲಗಳಿವೆ. ಐದು ಕುಲಗಳನ್ನು ಪ್ರತಿನಿಧಿಸುವಂತೆ ಐದು ಜನ ಅನೇಕ ಸಂಪ್ರದಾಯ ಆಚರಣೆಗಳಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾರೆ.

## ಹಬ್ಬಗಳು ಮತ್ತು ಜಾತ್ರೆಗಳು

ಎಲ್ಲಾ ಭಾಗಗಳಲ್ಲಿ ಕಂಡು ಬಂದಂತೆ ಈ ಜಿಲ್ಲೆಯಲ್ಲಿಯೂ ಹಬ್ಬ-ದೇವರು ಮಾಡುವುದು ಕಂಡು ಬರುತ್ತದೆ. ಇದು ಕೇವಲ ಹಿಂದೂಗಳಿಗೆ ಮಾತ್ರವಲ್ಲದೇ ಇತರ ಧರ್ಮೀಯರೂ ಕೂಡ ತಮ್ಮದೇ ಆದ ಹಬ್ಬಗಳನ್ನು ಆಚರಿಸುವರು. ಕೆಲವು ದೇವರುಗಳನ್ನು ಪೂಜಿಸಿದರೆ ಕೆಲವು ಸಂತರನ್ನು ನೆನಪಿಸಿಕೊಳ್ಳುವ ಮೂಲಕ ಗೌರವಿಸುತ್ತಾರೆ. ವೈದಿಕ ಪರಂಪರೆಯಲ್ಲಿ ದೇವತೆಗಳನ್ನು ಪೂಜಿಸಿದರೆ ಉಳಿದವರು ಗ್ರಾಮದೇವತೆ,

ನಿಸರ್ಗ ದೇವತಾರಾಧನೆ ಮಾಡುತ್ತಾರೆ. ಆಯಾ ಮತ – ಪಂಥಗಳವರು ಆಯಾ ಕುಲದೇವತೆಗಳನ್ನು ಪೂಜಿಸುವ, ಉತ್ಸವ ಮಾಡುವ ರೂಢಿ ಇದೆ. ಹಿಂದೂಗಳು ಶಿಷ್ಟ ಪರಂಪರೆಯಲ್ಲಿ ಬರುವ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಗಣಪತಿ, ಗೌರಿ, ಮಹಾನವಮಿ, ದೀಪಾವಳಿ ಮೊದಲಾದವುಗಳೊಂದಿಗೆ ಭೀಮನ ಅಮವಾಸ್ಯೆ, ವರಮಹಾಲಕ್ಷ್ಮಿ, ರಾಮನವಮಿ, ಏಕಾದಶಿ, ನಾಗರ ಪಂಚಮಿ, ಕೃಷ್ಣಾಷ್ಟಮಿ ಮುಂತಾದವುಗಳನ್ನು ಆಚರಿಸುವುದು ರೂಢಿಯಲ್ಲಿದೆ. ಸಾಮಾನ್ಯ ಜನ ವೈದಿಕೇತರ ಜನಸಮೂಹ ಬಹಳ ಮುಖ್ಯವಾದ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಮಹಾನವಮಿ, ದೀಪಾವಳಿಗಳನ್ನು ಆಚರಿಸುವುದರ ಜೊತೆಗೆ ಸ್ಥಳೀಯವಾಗಿರುವ ರೂಢಿಗತವಾಗಿರುವ ಗ್ರಾಮದೇವತೆ, ಕುಲದೇವರ ಹಬ್ಬ–ಜಾತ್ರೆಗಳನ್ನು ಆಚರಿಸುತ್ತಾರೆ. ಬೇವಿನ ಮರ, ಕಂಬ, ಗುಂಡುಗಳೂ ಕೂಡ ಪೂಜಾರ್ಹವಾಗುತ್ತವೆ. ಹಾಗೆ ನೋಡಿದರೆ ಹಿಂದೂಗಳಿಗೆ ವರ್ಷಪೂರ್ತಿ ಹಬ್ಬಗಳಿರುತ್ತವೆ ಎನ್ನಬಹುದು. ಇವುಗಳಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಆಚರಿಸುವ ಪ್ರಮುಖವಾದ ಹಬ್ಬಗಳು ಈ ರೀತಿ ಇವೆ.

**ಯುಗಾದಿ:** ಇದನ್ನು ಚೈತ್ರಶುದ್ಧ ಪಾಡ್ಯಮಿಯಂದು ಆಚರಿಸಲಾಗುವುದು. ಎಲ್ಲಾ ವರ್ಗದವರಿಗೂ ಪ್ರಮುಖವಾದ ಹಬ್ಬ. ಹಿಂದೂಗಳ ಹೊಸ ವರ್ಷ. ಪ್ರತಿವರ್ಷ ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಬರುವ ಈ ಹಬ್ಬವನ್ನು ಜಿಲ್ಲಾದ್ಯಂತ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಬಾಗಿಲಿಗೆ ಮಾವಿನ ಎಲೆಯಿಂದ ಹಸಿರು ತೋರಣ ಕಟ್ಟಿ ಸಿಂಗರಿಸುತ್ತಾರೆ. ಎಣ್ಣೆ ಸ್ನಾನ ಮಾಡಿ ಹೊಸಬಟ್ಟೆ ಧರಿಸಿ ಪೂಜೆಯಾದ ನಂತರ ಬೇವು ಬೆಲ್ಲ ಸೇವಿಸುತ್ತಾರೆ. ಹಾಗೂ ಬಂಧು ಬಳಗ ಸ್ನೇಹಿತರಲ್ಲಿ ವಿನಿಮಯ ಮಾಡಿಕೊಳ್ಳುವರು. ಸಾಮಾನ್ಯವಾಗಿ ಒಬ್ಬಟ್ಟಿನ ಸಿಹಿಯೂಟ ಮಾಡುತ್ತಾರೆ. ಸಂಜೆ ದೇವಸ್ಥಾನಗಳಲ್ಲಿ 'ಪಂಚಾಂಗ ಶ್ರವಣ' ಇರುತ್ತದೆ. ಇದರಿಂದ ಇಡೀ ವರ್ಷದ ಮಳೆಬೆಳೆ ಆಗು ಹೋಗುಗಳನ್ನು ವಿಶ್ಲೇಷಣೆ ಮಾಡಿಕೊಳ್ಳುವುದರಿಂದ ರೈತಾಪಿ ಜನರಿಗೆ ಬಹಳ ಮುಖ್ಯವಾದುದಾಗಿರುತ್ತದೆ. ಮಾರನೇ ದಿನ 'ವರ್ಷ ತೊಡಕು' ಎಂಬುದಾಗಿ ಆಚರಿಸುತ್ತಾರೆ. ಮಾಂಸಾಹಾರಿಗಳಿಗೆ ಇದು ತುಂಬ ಮಹತ್ವದ ದಿನ. ಕೆಲವರು ಬೇಟೆಯಾಡಿ ತಂದ ಪ್ರಾಣಿಗಳ ಮಾಂಸದಿಂದ ಆಹಾರ ತಯಾರಿಸುತ್ತಾರೆ. ಹಿಂದೆ ಬೇಡ, ನಾಯಕ ಮುಂತಾದ ಜನಾಂಗದವರು ವಿಶೇಷವಾಗಿ ಬೇಟೆಯಾಡುತ್ತಿದ್ದರು. ಅರಣ್ಯ ಕಾನೂನು ಬಂದನಂತರ ಬೇಟೆಗೆ ಕುತ್ತು ಬಂದಿದ್ದು, ಕೇವಲ ಹವ್ಯಾಸಿ ಬೇಟೆ ಉಳಿದಿದೆ. ಕೆಲವು ಕಡೆ ಹೊನ್ನಾರು ಕಟ್ಟುತ್ತಾರೆ. (ಅಂದರೆ ಬೇಸಾಯವನ್ನು ಆರಂಭಿಸುವುದು.)

**ರಾಮನವಮಿ:** ಶ್ರೀರಾಮ ಹುಟ್ಟಿದ ದಿನವನ್ನು ಚೈತ್ರ ಶುದ್ಧ ನವಮಿಯಂದು (ಏಪ್ರಿಲ್) ಯುಗಾದಿ ಹಬ್ಬ ಕಳೆದ ಒಂಭತ್ತನೇ ದಿನದಂದು ಆಚರಿಸಲಾಗುತ್ತದೆ. ವಿಶೇಷವಾಗಿ ರಾಮ ಮಂದಿರ, ರಾಮನ ದೇವಾಲಯ, ಆಂಜನೇಯ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಪಾನಕ, ಹೆಸರುಬೇಳೆ, ಮಜ್ಜಿಗೆ ಮುಂತಾದವುಗಳನ್ನು ಹಂಚುತ್ತಾರೆ. ಎಲ್ಲಾ ಜನಾಂಗ, ವರ್ಗದವರೂ ಸೇರಿ ಆಚರಿಸುವ ಇದು ಜನಸಾಮಾನ್ಯರ ಹಬ್ಬ ಎನ್ನಬಹುದು. ಕೆಲವೆಡೆ ಒಂಭತ್ತು ದಿನಗಳಕಾಲ ಹರಿಕಥೆ, ಉಪನ್ಯಾಸ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

**ಬಸವ ಜಯಂತಿ:** ವೈಶಾಖ ಮಾಸದ ಅಕ್ಷಯ ತೃತೀಯ ದಿನದಂದು ಬಸವಣ್ಣ ನವರ ಜನ್ಮದಿನವನ್ನು ಬಸವಜಯಂತಿಯಾಗಿ ಆಚರಿಸುತ್ತಾರೆ. ಗ್ರಾಮೀಣ ರೈತಾಪಿ ಜನರು ದುಡಿಯುವ ಎತ್ತುಗಳಿಗೆ ಗೌರವ ಸಲ್ಲಿಸುವ ದಿನವನ್ನಾಗಿಯೂ ಆಚರಿಸುತ್ತಾರೆ. ಆ ದಿನ ಎತ್ತುಗಳಿಗೆ ಮೈತೊಳೆದು ಸಿಂಗರಿಸಿ ಮೆರವಣಿಗೆ ಸಹಾ ಮಾಡುವರು. ಹಾಗೇ ನಗರ ಪ್ರದೇಶಗಳಲ್ಲಿ ಬಸವೇಶ್ವರರ ಮೆರವಣಿಗೆ, ಉತ್ಸವ, ಉಪನ್ಯಾಸ ಏರ್ಪಡಿಸುವರು.

**ಏಕಾದಶಿ:** ಆಷಾಢ ಶುದ್ಧ ಏಕಾದಶಿಯಂದು ಪ್ರಥಮ ಏಕಾದಶಿ ಎಂದು ಹಲವೆಡೆ ಆಚರಿಸುತ್ತಾರೆ. ಅನೇಕ ಕಡೆ ರಥೋತ್ಸವ ಕೂಡ ನಡೆಯುತ್ತದೆ.

**ಗೌರಿ–ಗಣೇಶ ಹಬ್ಬ:** ಭಾದ್ರಪದ ಶುದ್ಧ ಚತುರ್ಥಿಯಂದು ಆಗಸ್ಟ್– ಸೆಪ್ಟೆಂಬರ್‌ನಲ್ಲಿ ಗಣೇಶನ ಹಬ್ಬ ಆಚರಿಸಲಾಗುತ್ತದೆ. ಇದರ ಮುನ್ನಾದಿನ ಗೌರಿ ಹಬ್ಬವಾಗಿ ಆಚರಿಸುವರು. ಇಲ್ಲಿನ ಬೇಡ ಹಾಗೂ ಪರಿವಾರ ಪಂಗಡದವರಿಗೆ ವಿಶೇಷವಾದ ಹಬ್ಬ. ಸಾಮಾನ್ಯವಾಗಿ ಮಣ್ಣಿನ ಗಣಪತಿ ಮೂರ್ತಿಯನ್ನು ಪೂಜಿಸಿ ಕೆರೆಗೆ ಬಿಡುತ್ತಾರೆ.

**ಗೋಕುಲಾಷ್ಟಮಿ:** ಶ್ರೀ ಕೃಷ್ಣ ಜನ್ಮದಿನವನ್ನು ಗೋಕುಲಾಷ್ಟಮಿಯಾಗಿ ಆಚರಿಸಲಾಗುತ್ತದೆ. ವಿಶೇಷವಾಗಿ ವೈಷ್ಣವ ಪಂಥದವರಿಗೆ ವಿಶಿಷ್ಟ ಹಬ್ಬವಾಗಿದೆ.

**ನವರಾತ್ರಿ/ದಸರಾ:** ಆಶ್ವೀಜ ಶುದ್ಧ ಮೊದಲ ಒಂಭತ್ತು ದಿನಗಳು ಅಂದರೆ ಮಹಾಲಯ ಅಮವಾಸ್ಯೆಯ ಮಾರನೇ ದಿನದಿಂದ ಪ್ರಾರಂಭವಾಗಿ ಒಂಭತ್ತು ದಿನಗಳವರೆಗೆ ನಡೆಯುತ್ತದೆ. ಮೈಸೂರು ದಸರಾ ಹಬ್ಬಕ್ಕೆ ಪ್ರಸಿದ್ಧ. ಉಳಿದ ಕಡೆಗಳಲ್ಲಿಯೂ ಆಯುಧಪೂಜೆ, ದುರ್ಗಾಪೂಜೆ ಮಾಡುತ್ತಾರೆ. ಗ್ರಾಮೀಣ ಪರಿಸರದಲ್ಲಿ ಮಹಾಲಯ ಅಮವಾಸ್ಯೆಯನ್ನು ಹಿರಿಯರ ಹಬ್ಬ ಎಂಬುದಾಗಿ ಆಚರಿಸುತ್ತಾರೆ. ಶಮೀಪೂಜೆ, ದೇವರುಗಳ ಉತ್ಸವ ನಡೆಸುತ್ತಾರೆ.

**ದೀಪಾವಳಿ:** ಆಶ್ವೀಜ ಬಹುಳ ಚತುರ್ದಶಿಯಲ್ಲಿ (ಅಕ್ಟೋಬರ್–ನವೆಂಬರ್) ನಡೆಯುವ ಇದನ್ನು ಮೂರು ದಿನ ಧನಲಕ್ಷ್ಮಿ ಪೂಜೆ, ಬಲಿಪಾಡ್ಯಮಿ, ಬಲೀಂದ್ರ ಪೂಜೆ, ನಡೆಸುವ ಮೂಲಕ ಆಚರಿಸುತ್ತಿದ್ದು, ಈ ಮಾಸವನ್ನು ಕಾರ್ತೀಕ ಮಾಸ ಎಂಬುದಾಗಿ ಕರೆಯುತ್ತಾರೆ.

**ಸಂಕ್ರಾಂತಿ:** ಜನವರಿ ತಿಂಗಳ ೧೪ ರಂದು (ಕೆಲವೊಮ್ಮೆ ೧೫) ಆಚರಿಸುವರು. ಎಳ್ಳು ಬೆಲ್ಲ ಹಂಚುವರು. ಕಬ್ಬು, ಕಡಲೇಕಾಯಿ, ಗೆಣಸು, ಅವರೇಕಾಯಿಯನ್ನು ಬೇಯಿಸಿ ತಿನ್ನುವರು. ನಗರ ಪ್ರದೇಶದವರು ಪೊಂಗಲ್ ಸಿಹಿ ಮಾಡುವರು. ದನಗಳನ್ನು ಸಿಂಗರಿಸಿ ಸಂಜೆ ವೇಳೆ ಮೆರವಣಿಗೆಯಲ್ಲಿ ಓಡಿಸಿಕೊಂಡು ಹೋಗಿ ಕಿಚ್ಚು ಹಾಯಿಸುವರು. ಇದರಿಂದ ದನಗಳಿಗೆ ಏನಾದರೂ ತೊಂದರೆ ಇದ್ದಲ್ಲಿ ನಿವಾರಣೆಯಾಗುವುದೆಂಬ ನಂಬಿಕೆ ಹಲವು ಕಡೆ ಇದೆ. 'ಕೊಂಡ ಹಾಯುವುದು' ಎಂದೂ ಸಹ ಕರೆಯುತ್ತಾರೆ.

**ಶಿವರಾತ್ರಿ:** ಮಾಘ ಬಹುಳ ಚತುರ್ದಶಿ ಫೆಬ್ರವರಿ– ಮಾರ್ಚ್. ಈ ದಿನದಂದು ಉಪವಾಸವಿದ್ದು, ರಾತ್ರಿ ಜಾಗರಣೆ ಇದ್ದು ಶಿವನನ್ನು ಆರಾಧಿಸುತ್ತಾರೆ. ಶಿವನಕಥೆ– ಪಾರಾಯಣ ಕೇಳುವುದು ಶ್ರೇಷ್ಠ ಎಂಬ ಭಾವನೆ ಇದ್ದು ಅಹೋರಾತ್ರಿ ಶಿವನದೇವಾಲಯಗಳಲ್ಲಿ ಪೂಜಾ ಕೈಂಕರ್ಯ ನಡೆಯುತ್ತದೆ. ಉಪವಾಸವಿರುವವರು ತಂಬಿಟ್ಟು, ಹಣ್ಣುಗಳು, ಕೋಸಂಬರಿ ಮುಂತಾದವನ್ನು ಮಾತ್ರ ಸೇವಿಸುವರು.

**ಹೋಳಿಹಬ್ಬ:** ಫಾಲ್ಗುಣ ಶುದ್ಧ ಪೌರ್ಣಿಮೆಯಂದು ಇದನ್ನು 'ಕಾಮದಹನ' ದ ಅಂಗವಾಗಿ ಆಚರಿಸುತ್ತಾರೆ. 'ಕಾಮನನ್ನು ಸುಡುವುದು' ಎನ್ನುತ್ತಾರೆ.

**ಮಾರಿಹಬ್ಬ:** ಬಹುರೂಪಿ ಸಂಸ್ಕೃತಿ, ಸಂಪ್ರದಾಯಗಳು ಈ ಜಿಲ್ಲೆಯ ಜೀವಾಳ. ಮೂಲ ಸಂಸ್ಕೃತಿ – ಸಂಪ್ರದಾಯಗಳ ಆಚರಣೆಗಳು ನಗರಗಳಲ್ಲಿ ನವಿರಾಗಿದ್ದರೂ ಗ್ರಾಮೀಣ ಭಾಗಗಳಲ್ಲಿ ನೆಲಮೂಲದ ಆಚರಣೆ ಮರೆಯಾಗಿಲ್ಲ. ಅಂತಹ ನೆಲಮೂಲ ಸಂಸ್ಕೃತಿಯ ಒಂದು ಭಾಗವಾಗಿ ಈ ಮಾರಿಹಬ್ಬಗಳು ಕಂಡುಬರುತ್ತವೆ. ಗ್ರಾಮದೇವತೆಯಾಗಿರುವ ಅನೇಕ ಗ್ರಾಮಗಳಲ್ಲಿ ಕೆಲವೊಂದು ಹೆಸರೂ ಕೂಡ ಇವೆ. ಬೆಂಡರ ವಾಡಿಯ ಲಕ್ಷ್ಮಿದೇವಿ, ಅರಳಿನಕಟ್ಟೆ ಚಾಮುಂಡೇಶ್ವರಿ, ಬಾಗಳಿಯ ಮಾಳಿಗೆ ಅರಸಮ್ಮ (ಚಾಮರಾಜನಗರ) ಬೊಮ್ಮಲಾಪುರದ ಲಕ್ಷ್ಮೀದೇವಿ, (ಗುಂಡ್ಲುಪೇಟೆ) ಚಿಕ್ಕತುಪ್ಪೂರು ಗ್ರಾಮದ ಯೋಗೇಶ್ವರಿ (ಗುಂ.ಪೇ) ಕಂದಗಾಲದ ಪಾರ್ವತಮ್ಮ ಮುಂತಾದವು. ಆದರೆ ಅನೇಕ ಕಡೆ 'ಮಾರಿ' ಹೆಸರಿನಲ್ಲೇ ಹಬ್ಬ ಆಚರಿಸಲಾಗುತ್ತದೆ. ಜಾತ್ರೆಕೂಡ ನಡೆಯುತ್ತವೆ. ಕೆಲವೊಮ್ಮೆ ಹಬ್ಬ– ಜಾತ್ರೆ ಒಟ್ಟಿಗೆ ಸೇರಿ ಆಚರಿಸಲ್ಪಡುತ್ತವೆ. 'ಮಡೆ' (ರಾತ್ರಿ ಗ್ರಾಮಸ್ಥರೆಲ್ಲಾ ನಿಗದಿಪಡಿಸಿದ ಸ್ಥಳಕ್ಕೆ ಹೊಸಮಡಕೆಯಲ್ಲಿ ನೀರು ಅನ್ನ ಮತ್ತು ಬೆಲ್ಲದೊಂದಿಗೆ ಪೂಜಾರಿಗೆ ನೀಡುತ್ತಾರೆ. ಪೂಜಾರಿ ಬೊಗಸೆಯಲ್ಲಿ ಪ್ರತಿಯೊಂದರಿಂದ ತೆಗೆದುಕೊಂಡು ನೈವೇದ್ಯ ಮಾಡುತ್ತಾನೆ. ನಂತರ ಪ್ರಸಾದವಾಗಿ ಹಂಚುತ್ತಾರೆ. 'ಕರ್ಲ್ಲು' (ಆಡಿನಮರಿ ಕತ್ತರಿಸಿ ಅನ್ನಕ್ಕೆ ಅದರ ರಕ್ತಬೆರೆಸಿ ಊರಸುತ್ತ 'ರಸಮುದ್ದೆ' ಇಡುತ್ತಾರೆ. ಕೆಲವು ಕಡೆ ಬಲಿರಕ್ತಕ್ಕೆ ಬೇಯಿಸಿದ ಹುರುಳಿಕಾಳನ್ನು ಬೆರೆಸಿ ಊರಿನ ಸುತ್ತ ಎರಚುತ್ತಾರೆ. ಒಂದರಿಂದ ಏಳು ದಿನಗಳವರೆಗಿನ ಹಬ್ಬಗಳಿವೆ. ಕೆಲವು ಹಬ್ಬ–ಜಾತ್ರೆಗಳನ್ನು ಏಳು ಎಂಟು ವರ್ಷಗಳಿಗೊಮ್ಮೆ ಮಾಡುವುದುಂಟು.

**ಕ್ರೈಸ್ಥರ ಹಬ್ಬಗಳು:** ಇತರ ಧರ್ಮ – ಪಂಗಡದವರ ಹಾಗೆಯೇ ಕ್ರೈಸ್ಥರೂ ಕೂಡ ಹಲವಾರು ಹಬ್ಬ ಆಚರಿಸುತ್ತಾರೆ. ಪ್ರಮಾಣ ಕಡಿಮೆ. ಹೊಸ ವರ್ಷಾರಂಭದಿಂದ ಪ್ರಾರಂಭಿಸಿ ಕ್ರಿಸ್‌ಮಸ್ ಹಬ್ಬದವರೆಗೆ ಇರುತ್ತವೆ. ಸಾರ್ವತ್ರಿಕವಾದಂತಹ ಪ್ರಮುಖ ಹಬ್ಬ ಆಚರಣೆ ಬೆರಳೆಣಿಕೆಯಷ್ಟು.

ಜನವರಿ ಮೊದಲ ದಿನದಂದು ಹೊಸ ವರ್ಷಾಚರಣೆ. ಇದನ್ನು ಕ್ರೈಸ್ಥ ವರ್ಷಾರಂಭ ಎಂದೂ ಕರೆಯುತ್ತಾರೆ. ಗುಡ್‌ಫ್ರೈಡೆ (ಏಪ್ರಿಲ್) ಮತ್ತು ಮಾರನೆ ದಿನ ಪವಿತ್ರ ಶನಿವಾರ ಆಚರಿಸುತ್ತಾರೆ. ಡಿಸೆಂಬರ್ ೨೫ ರಂದು ವಿಶ್ವದಾದ್ಯಂತ ವೈಭವದಿಂದ ಆಚರಿಸುವ ಕ್ರಿಸ್‌ಮಸ್ ಬಹುಮುಖ್ಯವಾದವು. ಏಸು ಪ್ರಭುವಿನ ಪುನರುತ್ಥಾನ ದಿನವನ್ನಾಗಿ ಈಸ್ಟರ್ ಭಾನುವಾರ, ಮೇರಿಯ ಹುಟ್ಟುಹಬ್ಬ, ಇವರಿಗೆ ಈಸ್ಟರ್ ಹಬ್ಬ ಬಹಳ ಪವಿತ್ರವಾದ ಹಬ್ಬವಾಗಿದೆ. ಆಗಸ್ಟ್ ೧೫ನ್ನು ಸಂತ ಮರಿಯಮ್ಮನ ಸ್ವರ್ಗಾರೋಹಣ ದಿನವನ್ನಾಗಿ ಆಚರಿಸುವರು. ಇವರು ವ್ಯಕ್ತಿಗಿಂತ ಆತ್ಮಕ್ಕೆ ಹೆಚ್ಚು ಗೌರವ ಕೊಡುವುದರಿಂದ ಪ್ರತಿಯೊಂದು ಆತ್ಮವೂ ಪವಿತ್ರವಾದುದೆಂದು ಭಾವಿಸುತ್ತಾರೆ. ಸಕಲ ಆತ್ಮಗಳ ಹಬ್ಬ, ಸಕಲ ಸಂತರ ಹಬ್ಬ, ದಿವ್ಯ ಸತ್ಪ್ರಸಾದದ ಹಬ್ಬ ಮುಂತಾದವುಗಳನ್ನು ಆಚರಿಸುತ್ತಾರೆ. ಚರ್ಚ್ ವಾರ್ಷಿಕೋತ್ಸವ, ವಿಶೇಷವಾದ ಆರಾಧನೆ ಉತ್ಸವ ಕೂಡ ನಡೆಯುತ್ತವೆ. ಏಸುಕ್ರಿಸ್ಥ ಶಿಲುಬೆಗೇರುವ ಹಿಂದಿನ ದಿನ ತನ್ನ ಶಿಷ್ಯರೊಂದಿಗೆ ಮಾಡಿದ ಭೋಜನದ ನೆನಪಿಗಾಗಿ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ದಿವ್ಯ ಸತ್ಪ್ರಸಾದವೆಂದು ಭಾವಿಸಿ ಸ್ವೀಕರಿಸುವುದರ ಮೂಲಕ ಪರಮ ಪ್ರಸಾದದ ಹಬ್ಬವಾಗಿ ಆಚರಿಸುವರು.

**ಮುಸ್ಲಿಂ ಹಬ್ಬಗಳು:** ರಾಜ್ಯದ ಎಲ್ಲೆಡೆ ಆಚರಿಸುವಂತೆ ಇಲ್ಲಿನ ಮುಸ್ಲಿಮರೂ ಕೂಡ ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಕ್ಕೆ ಮುನ್ನ ಚಂದ್ರನ ದರ್ಶನವಾಗುವುದು ಮುಖ್ಯ. ಈದ್ ಮಿಲಾದ್, ಷಬ್–ಎ–ಬರಾತ್, ಜಮತ್–ಉಲ್–ವಿದಾ, ಷಬ್–ಎ–ಖಾದರ್, ಖುತುಬ್–ಎ–ರಂಜಾನ್ (ಈದ್–ಉಲ್–ಫಿತರ್), ಬಕ್ರೀದ್, ಮೊಹರಮ್ ಮುಂತಾದ ಹಬ್ಬಗಳನ್ನು ಆಚರಿಸುವರು. ರಂಜಾನ್ ಆಚರಿಸುವ ಹಿಂದಿನ ಒಂದು ತಿಂಗಳು ಉಪವಾಸ ಪ್ರಾರಂಭಿಸಿ ರಂಜಾನ್ ಹಬ್ಬ ಆಚರಿಸುತ್ತಾರೆ. ಬಡಬಗ್ಗರಿಗೆ ದಾನ ಮಾಡುವುದು ಶ್ರೇಷ್ಠ ಎಂದು ನಂಬಿಕೆ ಇದೆ. ಈದ್ ಮಿಲಾದ್‌ನ್ನು ಪ್ರವಾದಿ ಮಹಮ್ಮದ್ ಪೈಗಂಬರರ ಜನ್ಮ ದಿನವಾಗಿ ಆಚರಿಸುವರು. ಈ

ದಿನದಂದು ಈದ್ ಮೈದಾನಕ್ಕೆ ಹೋಗಿ, ಸಾಮೂಹಿಕ ಪ್ರಾರ್ಥನೆ ಸಲ್ಲಿಸುವರು. ಮಸ್ಜಿದ್ ಎಂದರೆ, ಪ್ರಾರ್ಥನೆಗೆ ಮೀಸಲಿಟ್ಟ ಪ್ರದೇಶ. ನೆಲಕ್ಕೆ ಹಣೆ ತಗುಲಿಸುವ ನಮಸ್ಕಾರ ಎಂದೂ ಅರ್ಥವಿದೆ. ಗಂಡಸರು ಮಾತ್ರ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡುವರು. ಹೆಂಗಸರು ಮನೆಯಲ್ಲಿಯೇ ಪ್ರಾರ್ಥನೆ ಸಲ್ಲಿಸುವರು. ಪ್ರಾರ್ಥನೆ ಅರಬ್ಬಿ ಭಾಷೆಯಲ್ಲಿಯೇ ನಡೆಯುವುದು. ವಿಧ್ಯುಕ್ತವಾಗಿ ಪ್ರಾರ್ಥನೆ ನಡೆಸುವವರನ್ನು ಖತೀಬ್ ಎನ್ನುವರು. ಪ್ರಾರ್ಥನೆ ಸಲ್ಲಿಸುವಾಗ ಇವರಲ್ಲಿ ಭೇದ-ಭಾವ ಅಥವಾ ಪಕ್ಷಪಾತಕ್ಕೆ ಅವಕಾಶವಿರುವುದಿಲ್ಲ. ಹಬ್ಬಗಳಲ್ಲಿ ಈದ್ಗಾ ಕಟ್ಟಡ ಬಯಲಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವರು. ದಿನಕ್ಕೆ ಐದು ಬಾರಿ ಮುಸ್ಲಿಂ ಆದ ವ್ಯಕ್ತಿ ಪ್ರಾರ್ಥನೆ ಸಲ್ಲಿಸಬೇಕೆಂಬ ನಿಯಮ ಅವರ ಧರ್ಮದಲ್ಲಿದೆ.

**ಮೊಹರಮ್:** ಮೊಹರಮ್ ಹಬ್ಬವು ಕೋಮು ಸೌಹಾರ್ದತೆಯನ್ನು ಬಿಂಬಿಸುವ ಹಬ್ಬವಾಗಿದೆ. ಇದನ್ನು ಬಾಬಯ್ಯನ ಹಬ್ಬ ಅಥವಾ ಬಾಬಯ್ಯನ ಜಲ್ದಿ ಎಂದೂ ಸಹ ಕರೆಯುತ್ತಾರೆ. ಹಿಂದು-ಮುಸ್ಲಿಮರು ಒಟ್ಟಾಗಿ ಈ ಆಚರಣೆಯಲ್ಲಿ ಪಾಲ್ಗೊಳ್ಳುವುದು ಒಂದು ವಿಶೇಷ. ಒಂಭತ್ತು ದಿನಗಳ ಕಾಲ ವಿವಿಧ ಆಚರಣೆಗಳು ನಡೆದು ಒಂಭತ್ತನೇ ದಿನ ಜಾತ್ರೆ ಸೇರುತ್ತದೆ. ಮೆರವಣಿಗೆ, ವಿವಿಧ ವೇಷಗಳು, ಕುಣಿತ, ಕೋಡಂಗಿ, ಹುಲಿವೇಷ, ಪಾಳೆಗಾರ ಮುಂತಾದ ವೇಷಧಾರಿಗಳು ಪಾಲ್ಗೊಳ್ಳುತ್ತಾರೆ.

ಮೊದಲನೆ ದಿನ ಪ್ರತಿಸಲ ಜಲ್ದಿ ನಡೆಯುವ ಜಾಗದಲ್ಲಿ ಗುದ್ದಲಿ ಹಾಕಿ ಸ್ವಲ್ಪ ಅಗೆಯುತ್ತಾರೆ. ಮೂರನೇ ದಿನ ಗುಂಡಿ ತೋಡುತ್ತಾರೆ. ನಾಲ್ಕನೇ ದಿನ ದೇವರ ಸಾಮಗ್ರಿಗಳನ್ನು ಇಡುತ್ತಾರೆ. ಐದನೇ ದಿನ 'ನಿಸಾನೆ'ಯೊಂದಿಗೆ ಮೆರವಣಿಗೆ ಹೋಗುತ್ತಾರೆ. ಈ ನಿಸಾನೆಗೆ ಹಿಂದೂಗಳು ಸೇರಿದಂತೆ ಎಲ್ಲರೂ ಪೂಜೆ ಮಾಡಿ ಕಾಣಿಕೆ ಕೊಡುವುದುಂಟು. ಎಂಟನೇ ದಿನ ಕೊಂಡ ಹಾಕುವರು. ಅಂದು ರಾತ್ರಿ ವಿವಿಧ ವೇಷಧಾರಿಗಳ ಕುಣಿತ, ಹರಕೆ ಮಾಡಿಕೊಂಡವರು ಕೊಂಡ ತುಳಿಯುವರು. ಕೆಲವು ಕಡೆ ಹರಕೆ ಹೊತ್ತವರು ತಲೆ ಮೇಲೆ ಕೆಂಡ ಸುರಿಸಿಕೊಳ್ಳುವರು. ಒಂಭತ್ತನೇ ದಿನ ಜಾತ್ರೆ ನಡೆದು ರಾತ್ರಿ ಕೊಂಡ ಮುಚ್ಚುತ್ತಾರೆ. ಎಲ್ಲ ಜನಾಂಗದವರೂ ಇದರಲ್ಲಿ ಭಾಗವಹಿಸಿ 'ಸಕ್ಕರೆ ಓದಿಸಿ' (ನೈವೇದ್ಯದ ತರಹ ಮಾಡಿ) ಪ್ರಸಾದವಾಗಿ ಸ್ವೀಕರಿಸುತ್ತಾರೆ. ಮಕ್ಕಳನ್ನು ಕರೆತಂದು ಆಶೀರ್ವಾದ ಸಹ ಬೇಡುತ್ತಾರೆ. ಸಾಂಸ್ಕೃತಿಕವಾಗಿ ಇದೊಂದು ವಿಶಿಷ್ಟವಾದ ಹಾಗೂ ಮಹತ್ತರವಾದ ಆಚರಣೆ.

**ಚಂದಕವಾಡಿ (ಚಂದಕಡ್ಡಿ) ಲಕ್ಷ್ಮಿದೇವಿ ಜಾತ್ರೆ :** ಶಿವರಾತ್ರಿ ಹಬ್ಬಕ್ಕೆ ಎರಡು ದಿನ ಹಿಂದೆ ಅಥವಾ ಮುಂದೆ ಈ ಜಾತ್ರೆ ಐದು ದಿನಗಳ ಕಾಲ ಜರುಗುತ್ತವೆ. ಬ್ರಾಹ್ಮಣ ಕುಟುಂಬದವರು ದೇವರ ಪೂಜೆ ಮಾಡುತ್ತಾರೆ. ಒಂದುತಿಂಗಳು ಮುಂಚೆಯೇ ಸಿದ್ಧತೆಗಳಾಗುತ್ತವೆ. ಎಲ್ಲಾ ಕೋಮಿನವರು ಸೇರಿ ಜಾತ್ರೆ ನಡೆಸುತ್ತಾರೆ. ನಾಯಕರು ಹಾಗೂ ಹರಿಜನರು ಕರ್ಳ್ಳು ಇಟ್ಟ ಮೇಲೆ 'ರಸಮುದ್ದೆ' ಇಟ್ಟು ಹೊಳೆ ಪಕ್ಕವಿರುವ ಹಳೆದೇವಿ, ಹೊಸದೇವಿ ಆಲಯಗಳಿಗೆ ಪೂಜೆ ಸಲ್ಲಿಸುತ್ತಾರೆ. 'ಕುರ್ಜಿ'ನಲ್ಲಿ ಆಡುಮರಿ ಕಟ್ಟಿ, ನಡುರಾತ್ರಿ ಬಲಿಕೊಟ್ಟು ತಮ್ಮ ಕೇರಿಗೆ ತೆಗೆದುಕೊಂಡು ಹೋಗುತ್ತಾರೆ. ಇದಾದ ಒಂದು ವಾರದ ನಂತರ ಸೋಮವಾರದ ದಿನ ದೇವರ ತಲೆ ಮೇಲೆ ಹೂವಿಟ್ಟು ಬಲಗಡೆ ಪ್ರಸಾದ ಪಡೆದು ಮುಂದಿನ ಪ್ರಕ್ರಿಯೆ ಪ್ರಾರಂಭಿಸುವರು. ಗಂಡಸರು ಜಾತಿ ಭೇದವಿಲ್ಲದೇ ಕೊಂಡಕ್ಕೆ ಸೌದೆ ತರಲು ಹೋಗುತ್ತಾರೆ. ಇದಕ್ಕೆ ಕಗ್ಗಲೀ ಮರವೇ ಆಗಬೇಕು. ಒಬ್ಬ ಮನುಷ್ಯ ತನ್ನ ಹೆಗಲ ಮೇಲೆ ಎಷ್ಟು ಭಾರಹೊತ್ತು ತರಬಹುದೋ ಅಷ್ಟನ್ನು ಮಾತ್ರ ತರಬೇಕು. ಗಾಡಿಕಟ್ಟಿ ತರುವಂತಿಲ್ಲ. ಮಂಗಳವಾರ ರಾತ್ರಿ ಕೊಂಡಕ್ಕೆ ಬೆಂಕಿ ಹಚ್ಚುತ್ತಾರೆ. ಬುಧವಾರ ಬೆಳಗಿನ ಜಾವ ಹೊಳೆ ಹತ್ತಿರ ಹೋಗಿ ದೇವರು ತರುತ್ತಾರೆ. ತಮಡಿಯೂ ಕೇಲ್ ಹೊತ್ತು ಬರುತ್ತಾನೆ. ಗಾಣಿಗರ ದೊಡ್ಡ ಸತ್ತಿಗೆಗೆ ಆಡುಮರಿಬಲಿ ಕೊಟ್ಟ

ನಂತರ ತಮಡಿ ಕೊಂಡ ಹಾಯುತ್ತಾನೆ. ನಂತರ ಇತರರು, ಗುರುವಾರ ದೊಡ್ಡ ಜಾತ್ರೆ ಸೇರುತ್ತದೆ. ಉಯ್ಯಾಲೆ ಸೇವೆ, ಮಡೆಸೇವೆ ನಡೆಯುತ್ತದೆ. ಎತ್ತುಗಳ ಜಾತ್ರೆಯೂ ನಡೆಯುತ್ತದೆ. ಶುಕ್ರವಾರ ಕೊನೆಯ ದಿನವಾಗಿದ್ದು ಸಂಜೆತೇರು ಎಳೆಯುತ್ತಾರೆ. ಅಲ್ಲಿ ಸೇರಿದ ಎಲ್ಲಾ ಕೋಮಿನವರೂ ಕೂಡಿ ರಥ ಎಳೆಯುವರು.

**ಮಂಟೇಸ್ವಾಮಿ ಕೊಂಡ:** ಚಾಮರಾಜನಗರ ಪಟ್ಟಣದಲ್ಲಿರುವ ಮಂಟೇಸ್ವಾಮಿ ದೇವಾಲಯದ ಆವರಣದಲ್ಲಿ ಪ್ರತೀ ವರ್ಷ ಯುಗಾದಿ ಹಬ್ಬವಾದ ಒಂದು ತಿಂಗಳ ನಂತರದ ಗುರುವಾರದಂದು ಹಬ್ಬ ಶುರುವಾಗುತ್ತದೆ. ಕೊಂಡ ಮಾಡಲು ಮರವೊಂದನ್ನು ಖರೀದಿಸಿರುತ್ತಾರೆ. ೧೫ ದಿನ ಮುಂಚಿತವಾಗಿ ಕೊಂಡದ ಸೌದೆ ಸಿದ್ಧಪಡಿಸುತ್ತಾರೆ. ಎತ್ತಿನಗಾಡಿಗಳನ್ನು ಅಲಂಕರಿಸಿ ಪೂಜೆಮಾಡಿ, ವಾದ್ಯಗೋಷ್ಟಿಗಳೊಂದಿಗೆ ಸೌದೆ ತರುವ ರೂಢಿ ಇದೆ. ಉಪ್ಪಾರ ಜನಾಂಗದವರಿಂದ ಕೊಂಡೋತ್ಸವ ನಡೆಯುತ್ತದೆ. ಜಿಲ್ಲೆಯಾದ್ಯಂತ ಸುಮಾರು ೪೦ ಗ್ರಾಮಗಳ ತಮ್ಮ ಜನಾಂಗದವರಿಗೆ ಹಬ್ಬದಲ್ಲಿ ಭಾಗವಹಿಸಲು ವೀಳ್ಯ ನೀಡಿ ಆಹ್ವಾನಿಸುತ್ತಾರೆ. ಆಹ್ವಾನಿತರೆಲ್ಲಾ ಗುರುವಾರದಂದು ತಮ್ಮ ಗ್ರಾಮಗಳ ಸತ್ತಿಗೆ, ಸೂರೆಪಾನಿಗಳೊಂದಿಗೆ ಆಗಮಿಸಿ ಮಾರಮ್ಮನ ಗುಡಿ ಬಳಿ ಸೇರುತ್ತಾರೆ. ಕೇರಿಯ ಯಜಮಾನರು ವಾದ್ಯ, ಹಾರಗಳ ಸಹಿತ ಸ್ವಾಗತಿಸಿ ಮಂಟೇಸ್ವಾಮಿ ದೇವಸ್ಥಾನದ ಆವರಣಕ್ಕೆ ಕರೆದೊಯ್ಯುವರು. ಎಲ್ಲಾ ಬೀದಿಗಳಲ್ಲೂ ಮೆರವಣಿಗೆ ಮಾಡಿ ಕೊಂಡದ ಗುಣಿ ಬಳಿ ಬಂದು ಪೂಜೆ ಸಲ್ಲಿಸಿ ಶುಭಲಗ್ನದಲ್ಲಿ ಕೊಂಡಕ್ಕೆ ಬೆಂಕಿ ಹಾಕುತ್ತಾರೆ. ಬಂದವರೆಲ್ಲರನ್ನು ಊಟಕ್ಕೆ ಮನೆ ಮನೆಗೆ ಕಳುಹಿಸುವರು. ರಾತ್ರಿ ದೇವರಿಗೆ ಕೋಳಿ ಬಲಿಕೊಟ್ಟು ಅಡಿಗೆ ಮಾಡಿ 'ಎಡೆ' ಇಟ್ಟು ಭಂಗಿ ಸೇವೆ ನಡೆಸುತ್ತಾರೆ. ಶುಕ್ರವಾರ ಬೆಳಿಗ್ಗೆ ಆರು ಗಂಟೆಗೆ ದೊಡ್ಡರಸನ ಕೊಳಕ್ಕೆ ಕೇಲ್ ತರಲು ಹೋಗುತ್ತಾರೆ. ಸುಮಾರು ೬೦-೭೦ ಜನ ಮಂಟೇಸ್ವಾಮಿ ಗುಡ್ಡರು ಸಾಲಾಗಿ ಹೊರಟು ಒಬ್ಬರು ಕೇಲ್ ಹೊತ್ತರೆ, ಮೂವರು ಹೊಂಬಾಳೆಯ 'ಕಂಡಾಯ' ಹೊರುತ್ತಾರೆ. ಉಳಿದವರು ಬೆತ್ತ, ಜೋಳಿಗೆ ಹೊತ್ತು ಜಾಗಟೆ ಬಾರಿಸುತ್ತಾ ಸಾಗುತ್ತಾರೆ. ಮಡಿವಾಳರು ಹಾಸಿದ ನಡೆಮುಡಿಯ ಮೇಲೆ ಮೆರವಣಿಗೆ ಹೊರಡುತ್ತಾರೆ. ೪೦ ಗ್ರಾಮಗಳಿಂದ ಬಂದಿದ್ದ ಕಲಾವಿದರು ಕೋಲಾಟ, ದೊಣ್ಣೆವರಸೆ, ಕಂಸಾಳೆಕುಣಿತ, ಗಾರುಡಿಗೊಂಬೆ ಪಟಕುಣಿತ ಮುಂತಾದ ಸಾಂಸ್ಕೃತಿಕ ಕಲಾ ಪ್ರದರ್ಶನ ನೀಡುತ್ತಾರೆ.

ಮದ್ಯಾಹ್ನ ೧೨ ಗಂಟೆಗೆ ಕೇಲ್, ಕಂಡಾಯ ಹೊತ್ತ ನಾಲ್ಕು ಜನ ಗುಡ್ಡರು ಕೊಂಡ ಹಾಯುತ್ತಾರೆ. ಇವರು ದಿನಕ್ಕೆ ಎರಡು ಬಾರಿ ಸ್ನಾನ ಮಾಡಿ ದಿನಕ್ಕೆ ಒಂದೇ ಒಂದು ಲೋಟ ಹಾಲು ಕುಡಿದು ಕೊಂಡ ಹಾಯುವವತನಕ ಹಿಂದಿನ ದಿನದಿಂದಲೇ ಉಪವಾಸವಿರುತ್ತಾರೆ. (ಒಪ್ಪೊತ್ತು) ಆ ನಾಲ್ವರ ಮೇಲೂ ಕ್ರಮವಾಗಿ ಸಿದ್ದಪ್ಪಾಜಿ, ದೊಡ್ಡಮ್ಮ ತಾಯಿ, ರಾಚಪ್ಪಾಜಿ ದೇವರುಗಳು ಮೈಮೇಲೆ ಬಂದಿರುತ್ತವೆ. ಆ ನಂತರ ಯಾರೂ ಕೊಂಡ ಹಾಯುವುದಿಲ್ಲ. ಹರಕೆ ಹೊತ್ತವರು ಸತ್ತಿಗೆಗೆ ವಸ್ತ್ರ ಕಟ್ಟುತ್ತಾರೆ. ಹಾಗೂ ಕೊಂಡಕ್ಕೆ ಹರಳು, ಎಳ್ಳು ಹಾಕುತ್ತಾರೆ. ಕೊಂಡ ಹಾಯ್ದ ನಂತರ ಸಿಹಿ ಊಟವಿರುತ್ತೆ. ಮೂರು ಗಂಟೆಗೆ ಮತ್ತೆ ಮೆರವಣಿಗೆ ಹೊರಟು, ಉಪ್ಪಾರ ಬೀದಿಗೆ ಹೋಗಿ ಮನೆಮನೆಯಿಂದ ಪೂಜೆ ಪಡೆಯುತ್ತದೆ. ಬೀದಿಯ ಎಲ್ಲರೂ ಹಣ್ಣು ಕೈಯಿ ಪೂಜೆ ಮಾಡುತ್ತಾರೆ. ಸಂಜೆಗೆ ಪೂರ್ಣ ಕಾರ್ಯ ಮುಗಿದ ಮೇಲೆ ಆಹ್ವಾನಿತರಿಗೆಲ್ಲಾ ತಾಂಬೂಲ ನೀಡಿ ಬೀಳ್ಕೊಡುತ್ತಾರೆ. ಶನಿವಾರ ಬೆಳಿಗ್ಗೆ ಗರುಡವಾಹನದ ಮೇಲೆ ರಾಮನವಿಗ್ರಹವಿಟ್ಟು ಮೆರವಣಿಗೆ ನಡೆಯುತ್ತದೆ. ಹುಡುಗರು ಓಕುಳಿಯಾಡುತ್ತಾರೆ. ವಾಹನಹೊತ್ತವರಿಗೆ ಮನೆಮನೆಗಳಲ್ಲಿ ಅರಿಶಿನ ಕುಂಕುಮ ಬೆರೆಸಿದ ನೀರು ಹುಯ್ಯುತ್ತಾರೆ. ಭಾನುವಾರ ಮತ್ತೆ ಓಕುಳಿ. ಹೆಂಗಸರು ಮಾತ್ರ ಓಕುಳಿ ಆಡುತ್ತಾರೆ. (ಬಣ್ಣ ಬೆರೆಸದೇ ಬರೀ ನೀರಿನಲ್ಲಿ) ಸೋಮವಾರ ಮುಕ್ತಾಯದ ದಿನ ಬಂದಿದ್ದ ನೆಂಟರಿಷ್ಟರಿಗೆಲ್ಲಾ ಹಬ್ಬದ ಅಡುಗೆ ಮಾಡಿ ಬಡಿಸುತ್ತಾರೆ. ಸಡಗರ ಸಂಭ್ರಮದಿಂದ ಹಬ್ಬ ಮುಗಿಯುತ್ತದೆ. ಬುಧವಾರದಿಂದ ಸೋಮವಾರದವರೆಗೆ ಆರು ದಿನಗಳ ಕಾಲ ಜನ ಹಬ್ಬದಲ್ಲಿ ಸಂಭ್ರಮಿಸುತ್ತಾರೆ.

**ಮಂಗಲದ ಎತ್ತಿನ ಹಬ್ಬ:** ಮಂಗಲ ಗ್ರಾಮದಲ್ಲಿ ಶಿವರಾತ್ರಿ ಕಳೆದ ಒಂಭತ್ತನೇ ದಿನಕ್ಕೆ ಇದನ್ನು ಆಚರಿಸುತ್ತಾರೆ. ೨೫ ದಿನ ಮುಂಚೆ ಊರಸುತ್ತ ಕರ್ಕ್ಲು ಇಡಲಾಗುತ್ತದೆ. ಪ್ರಾರಂಭದ ಆಚರಣೆಗಳೆಲ್ಲಾ ಎಲ್ಲಾ ಮಾರಿಹಬ್ಬಗಳಂತೆಯೇ ಇರುತ್ತವೆ. ಐದನೇ ದಿನ ಉಪ್ಪಾರ ಜನಾಂಗದ ಮಹಿಳೆಯರು ದೇವಸ್ಥಾನದ ಮುಂಭಾಗ 'ಮಡೆ' ಬೇಯಿಸುತ್ತಾರೆ. ಹರಿಜನರು ಹೊಸಮಡಕೆ ಅಕ್ಕಿ ನೀಡಿದರೆ ಅವನ್ನು ಬೇಯಿಸಿ ದೇವರಿಗೆ ಪೂಜೆ ನೈವೇದ್ಯ ಮಾಡಿ ಪ್ರಸಾದವೆಂದು ಹಿಂತಿರುಗಿ ಕೊಡುತ್ತಾರೆ. ೨೦ ದಿನಗಳ ತನಕ ಹರಿಜನ ಕೇರಿಯ ಹೆಬ್ಬರೆ ಕುಲದವರು ಪ್ರತಿದಿನ ಸಂಜೆ ೭ ಗಂಟೆಗೆ ತಮ್ಮ ಬೀದಿಯ ಮಕ್ಕಳೊಂದಿಗೆ ಹೆಬ್ಬರೆ ಬಡಿಯುತ್ತಾ ದೇವಸ್ಥಾನದ ಬಳಿ ಬಂದು ಪೂಜೆ ಸಲ್ಲಿಸಿ ಕೈಮುಗಿದು ಹಿಂತಿರುಗಬೇಕು. ೨೦ನೇ ದಿನ ಊರವರೆಲ್ಲಾ ಸೇರಿಕೊಂಡು ಮಾರಿಗುಡಿಯ ಮುಂದೆ ಹುಲ್ಲುಕಡ್ಡಿಯಿಂದ ಮಾಡಿದ ಎಂಟ್ಟತ್ತು ಮೆದೆಗಳಿಗೆ ಬೆಳಗಿನ ಜಾವ ಬೆಂಕಿ ಹಾಕುತ್ತಾರೆ. ಕಿಚ್ಚು ಉರಿಸಿದ ಐದನೇ ದಿನಕ್ಕೆ ಶನಿವಾರದಿಂದ ಎತ್ತಿನ ಹಬ್ಬ ಶುರುವಾಗುತ್ತದೆ. ಭಾನುವಾರ ಮುಗಿಯುತ್ತದೆ.

ಶನಿವಾರ ಬೆಳಿಗ್ಗೆ ಹರಿಜನ ಬೀದಿಯ ಹುಡುಗರೆಲ್ಲಾ ತಮಟೆ ವಾದ್ಯ ಸಹಿತ ಊರಿನ ಎಲ್ಲಾ ಬೀದಿಗಳಲ್ಲಿಯೂ ಕುಣಿಯುತ್ತಾ ಬಂದು ದೇವಸ್ಥಾನದ ಮುಂಭಾಗ ಸೇರುತ್ತಾರೆ. ಅಲ್ಲಿ ಓಕುಳಿ ಕೊಂಡ ಸಿದ್ಧವಾಗುತ್ತದೆ. ಇವರು ಓಕುಳಿ ಆಡಿದ ನಂತರವೇ ಇತರೆ ಕೋಮಿನವರು ಮನೆಯಲ್ಲಿ ಅಡಿಗೆ ಮಾಡಲು ಒಲೆ ಹಚ್ಚುವುದು. ಅಂದು ಸಾಯಂಕಾಲ 'ಎತ್ತಿನ ಉಂಡೆ' ನಡೆಯುತ್ತದೆ. ಅಂದರೆ ದೇವಸ್ಥಾನದ ಬಯಲಲ್ಲಿ ಒಂದೊಂದಾಗಿ ಉರ್ಜಿ ಹಗ್ಗಕ್ಕೆ ಕಟ್ಟಿ ಎತ್ತು ಓಡಿಸುವುದು. 'ಕರ್ಕ್ಲು' ಇಟ್ಟ ಮರಿಯ ಚರ್ಮವನ್ನು ಉಂಡೆಮಾಡಿ ಸಜ್ಜದ ಗಳಕ್ಕೆ ಕಟ್ಟಿರುತ್ತಾರೆ. ದಪ್ಪದಾದ ಉರ್ಜಿ ಹಗ್ಗವನ್ನು ಎತ್ತಿಗೆ ಸಿಕ್ಕಿಸಿ ಎರಡೂಕಡೆ ಐದೈದು ಜನರು ಹಗ್ಗ ಹಿಡಿದುಕೊಳ್ಳುವರು. ಗಳದ ಉಂಡೆಯಿಂದ ಎತ್ತಿನ ಮೂತಿಗೆ ತಿವಿದು ತಿವಿದು ರೋಷ ಬರಿಸಿ, ಅಬ್ಬರಿಸುತ್ತಾ ಎತ್ತು ಓಡಿಸುವರು. ಮೊದಲು ವೀರಶೈವ ಜನಾಂಗದವರಿಗೆ ಸೇರಿದ ಎತ್ತು ಓಡಿಸುವರು ನಂತರ ಬೇರೆಯವರದು. ಅಲ್ಲಿಗೆ ಹರಿಜನ ಕೇರಿಯವರ ಹಬ್ಬ ಮುಗಿಯುತ್ತದೆ. ಭಾನುವಾರ ಇತರೇ ಜನಾಂಗದವರು ಹಬ್ಬ ಮುಂದುವರೆಸುವರು.

## ಜಾತ್ರೆಗಳು

ಒಂದು ಪ್ರದೇಶದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ಜಾತ್ರೆಗಳು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಪ್ರಾಚೀನ ಕಾಲದಿಂದಲೂ ಉಳಿಸಿಕೊಂಡು ಬಂದಿವೆ. ಸಾಮಾನ್ಯವಾಗಿ ಜಾತ್ರೆಯ ಆಚರಣೆಯು ಒಂದು ನಿರ್ದಿಷ್ಟ ಧಾರ್ಮಿಕ ಸಂಸ್ಥೆ, ಸಂತ, ದೇವತೆ ಅಥವಾ ದೇವಿಯ ಆರಾಧನೆಯೊಂದಿಗೆ ತಳಕು ಹಾಕಿಕೊಂಡಿರುತ್ತದೆ ಎನ್ನಬಹುದು. ಪ್ರತೀ ವರ್ಷ, ಸಾಮಾನ್ಯವಾಗಿ ಸುಗ್ಗಿಯ ನಂತರ ಜರುಗುವ ಪರಿಷೆ ಮತ್ತು ಜಾತ್ರೆಗಳು ಗ್ರಾಮೀಣ ಜನರ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಹಲವಾರು ಅಗತ್ಯಗಳನ್ನು ಪೂರೈಸುವಲ್ಲಿ ಉಪಯುಕ್ತವಾಗಿವೆ. ಸಾಮಾನ್ಯವಾಗಿ ಯಾವುದೇ ಸ್ಥಳದಲ್ಲಿ ವರ್ಷಕ್ಕೆ ಒಂದೇ ಜಾತ್ರೆ ನಡೆಯುವುದಾದರೂ, ಈ ನಿಯಮಕ್ಕೆ ಅಪವಾದವಿಲ್ಲದಿಲ್ಲ. ಅಪರೂಪ ಎನಿಸಿದರೂ ಕೆಲವು ಊರುಗಳಲ್ಲಿ ವರ್ಷಕ್ಕೆ ಎರಡು ಬಾರಿ ಜಾತ್ರೆ ಜರುಗುವುದುಂಟು. ಕೊಳ್ಳೇಗಾಲ ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ವರ್ಷಕ್ಕೆ ನಾಲ್ಕು ಬಾರಿ ಜಾತ್ರೆ ನಡೆಯುತ್ತದೆ. ಹೆಚ್ಚಾಗಿ ಹಿಂದು ದೇವಾಲಯಗಳೊಂದಿಗೆ ಜಾತ್ರೆಗಳು ಸಂಬಂಧಪಟ್ಟಿರುವುದಾದರೂ, ಕೆಲವೊಮ್ಮೆ ಜೈನ ಬಸದಿಗಳು, ಮುಸಲ್ಮಾನರ ದರ್ಗಾಗಳು, ಮತ್ತು ಕ್ರಿಶ್ಚಿಯನ್ನರ ಚರ್ಚ್‌ಗಳೊಂದಿಗೂ ಸಂಬಂಧ ಹೊಂದಿರುವ ಜಾತ್ರಾ ಮಹೋತ್ಸವಗಳುಂಟು.

ಜಾತ್ರೆಯ ಸಂದರ್ಭದಲ್ಲಿ ಮೂಲ ದೇವತೆಗೆ ಪ್ರಾಶಸ್ತ್ಯ ನೀಡಿದರೂ ರಥೋತ್ಸವದಲ್ಲಿ ಉತ್ಸವ ಮೂರ್ತಿಗಳು ಪ್ರಮುಖವಾಗುತ್ತವೆ. ಅವನ್ನು ಅಲಂಕೃತ ರಥ ಅಥವಾ ತೇರಿನಲ್ಲಿ ಕುಳ್ಳಿರಿಸಿ, ಅನೇಕ ವಿಶೇಷ ಪೂಜಾ

ಕೈಂಕರ್ಯಗಳನ್ನು ನಡೆಸಿ ಸಂಭ್ರಮದಿಂದ ಮೆರವಣಿಗೆ ನಡೆಸುವರು. ಜಾತಿ–ಮತ, ಸ್ತ್ರೀ–ಪುರುಷ ಬೇಧಗಳಿಲ್ಲದೆ ಉತ್ಸಾಹದಿಂದ ಭಾಗವಹಿಸುವ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ.

ಜಾತ್ರೆಗಳೊಂದಿಗೇ ಸೇರಿ ನಡೆಸುವ ಮತ್ತೊಂದು ಆಚರಣೆ ಎಂದರೆ ದನಗಳ ಪರಿಷೆ. ಗ್ರಾಮೀಣ ಜನರ ಬದುಕಿನ ಮತ್ತೊಂದು ಅವಿಭಾಜ್ಯ ಅಂಗವೆಂದರೆ ಪಶು ಸಂಗೋಪನೆ. ಇತ್ತೀಚಿನ ವರ್ಷಗಳಲ್ಲಿ ಕೃಷಿಕ್ಷೇತ್ರದಲ್ಲಿ ಹೆಚ್ಚುತ್ತಿರುವ ಯಾಂತ್ರಿಕರಣದ ಪರಿಣಾಮವಾಗಿ ಕೃಷಿ ಚಟುವಟಿಕೆಗಳು ಮತ್ತು ಕೃಷಿ ಉತ್ಪನ್ನಗಳ ಸಾಗಾಣಿಕೆಯಲ್ಲಿ ಪಶು ಶಕ್ತಿಯ ಉಪಯೋಗ ತನ್ನ ಮಹತ್ವ ಕಳೆದುಕೊಂಡಿದೆ. ಹಿಂದಿನ ಕಾಲದಲ್ಲಿ ಎತ್ತುಗಳಿಲ್ಲದೆ ಕೃಷಿ ಚಟುವಟಿಕೆಗಳನ್ನು ನಡೆಸುವುದು ಸಾಧ್ಯವೇ ಇರಲಿಲ್ಲ. ಹಾಗಾಗಿ ದನಗಳ ಪರಿಷೆಗಳಲ್ಲಿ ರೈತರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅಲ್ಲಿಗೆ ನೆರೆಹೊರೆಯ ಪ್ರದೇಶದಿಂದ ಮಾತ್ರವೇ ಅಲ್ಲದೆ ದೂರದೂರದ ಸ್ಥಳಗಳಿಂದಲೂ ಅನೇಕ ಉತ್ತಮ ತಳಿಯ ರಾಸುಗಳನ್ನು ಮಾರಾಟಕ್ಕಾಗಿ ರೈತರು ತರುತ್ತಿದ್ದರು. ಅವುಗಳ ವ್ಯಾಪಾರ ಬಹಳ ಚುರುಕಾಗಿ ನಡೆಯುತ್ತಿತ್ತು. ಏನೆಲ್ಲಾ ಬದಲಾವಣೆಗಳ ನಡುವೆಯೂ ದನಗಳ ಜಾತ್ರೆ ಇಂದಿಗೂ ಸ್ವಲ್ಪ ಮಟ್ಟಿನ ಆಕರ್ಷಣೆಯನ್ನು ಉಳಿಸಿಕೊಂಡು ಬಂದಿದೆ ಎನ್ನಬಹುದು. ಶ್ರೇಷ್ಠತಳಿಯ ಮತ್ತು ಉತ್ತಮ ರೀತಿಯಲ್ಲಿ ಸಾಕಲಾಗಿರುವ ರಾಸುಗಳಿಗೆ ಬಹುಮಾನಗಳನ್ನು ಸರ್ಕಾರದ ವತಿಯಿಂದ ನೀಡುವ ಪರಿಪಾಠ ಬಹಳ ಹಳೆಯದು.

ಇಷ್ಟೇ ಅಲ್ಲದೆ, ಜಾತ್ರೆಗಳು ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಜನರಿಗೆ ವ್ಯವಸಾಯೋತ್ಪನ್ನಗಳು, ಮತ್ತು ಸ್ಥಳೀಯ ಗ್ರಾಮೀಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ಪನ್ನಗಳನ್ನು ವಿಲೇವಾರಿ ಮಾಡಲು ಉತ್ತಮ ಅವಕಾಶಗಳನ್ನು ಒದಗಿಸುವ ಮೂಲಕ ಆರ್ಥಿಕಾಭಿವೃದ್ಧಿಗೂ ಸಹಾಯಕವಾಗಿವೆ. ಸ್ಥಳೀಯರು ಪಾತ್ರೆ–ಪರಡಿ, ಕೃಷಿ ಉಪಕರಣಗಳು, ಬಟ್ಟೆ, ಮಕ್ಕಳಿಗಾಗಿ ವಿವಿಧ ರೀತಿಯ ಆಟಿಕೆಗಳೇ ಮುಂತಾದವನ್ನು ಜಾತ್ರೆ ಸಮಯದಲ್ಲಿ ಖರೀದಿಸುವರು. ಸಿನೆಮಾ, ನಾಟಕ, ಮುಂತಾದ ಸಂಚಾರಿ ಮನೋರಂಜನಾ ಕೇಂದ್ರಗಳೂ ಜಾತ್ರೆ–ಪರಿಷೆ ಸಂದರ್ಭಗಳಲ್ಲಿ ಪ್ರದರ್ಶನಗಳನ್ನು ನೀಡುವುದುಂಟು. ಚಾಮರಾಜನಗರ ಜಿಲ್ಲೆಯಲ್ಲಿ ವರ್ಷಂಪ್ರತಿ ಜರುಗುವ ಹಲವು ನಿರ್ದಿಷ್ಟ ಜಾತ್ರೆಗಳನ್ನು ಗಮನಿಸಬಹುದು.

**ಬೆಂಡರವಾಡಿ ಜಾತ್ರೆ:** ವಾಸ್ತವವಾಗಿ ಲಕ್ಷ್ಮಿದೇವಿ ಜಾತ್ರೆಯಾಗಿದ್ದು, ಸುತ್ತ ಮುತ್ತ ಬೆಂಡರವಾಡಿ ಜಾತ್ರೆ ಎಂದೇ ಪ್ರಸಿದ್ಧವಾಗಿದೆ. ಶಿವರಾತ್ರಿಯಾದ ೧೨ನೇ ದಿನಕ್ಕೆ ತೇರು ಎಳೆಯುತ್ತಾರೆ. 'ಕೊಂಡ'ವೂ ಜರುಗುತ್ತದೆ. ಸಮಾಜದ ಎಲ್ಲಾ ಜನಾಂಗದವರೂ ಒಟ್ಟಾಗಿ ಸೇರಿ ಜಾತ್ರೆ ನಡೆಸುತ್ತಾರೆ. ಜಾತ್ರೆಗೆ ಮುನ್ನ ಗ್ರಾಮ ದೇವತೆಗಳಾದ ಚಿಕ್ಕಮಾರಮ್ಮ, ದಂಡಿನಮಾರಮ್ಮ, ಪಟ್ಟಲದಮ್ಮನ ಹಬ್ಬಗಳು ಜರುಗಿರಬೇಕು. ಚಿಕ್ಕಮಾರಮ್ಮನ ಹಬ್ಬದಲ್ಲಿ ಲಿಂಗಾಯತ ತಮಡಿ 'ಮಡೆ' ಬೇಯಿಸಿ ಧೂಪ ಹಾಕಿ ಗ್ರಾಮದ ಎಲ್ಲಾ ಕೋಮಿನ ಪ್ರತಿ ಮನೆಗೂ ತಪ್ಪದೇ ಮಡೆ ಪ್ರಸಾದ ಹಂಚಬೇಕು. ಕೇಲ್ ಹೊರುವ ಉಪ್ಪಾರರ ಕುಟುಂಬಕ್ಕೆ ,ಹರಿಜನ ಕೇರಿಯ ಹೆಬ್ಬರೆ ಕುಲದವರಿಗೆ, ಮಡಿ ಹಾಸುವ ಮಡಿವಾಳರಿಗೆ ಹಂಚಬೇಕು. ಜಾತ್ರೆಗೆ ೧೫ ದಿನಗಳ ಮುಂಚೆ 'ಕರ್ಬ್ಲು' ಸೇವೆ, ರಾತ್ರಿ ೧೨ ಗಂಟೆಗೆ ಮೇಕೆಮರಿ ಬಲಿಕೊಟ್ಟು ಹುರಿದು ಬೇಯಿಸಿದ ಹುರುಳಿಕಾಳಿಗೆ ರಕ್ತ ಬೆರೆಸಿ ಊರಿನ ಸುತ್ತ ಎರಚುತ್ತಾರೆ. ಜಾತ್ರೆಗೆ ಮೂರು ದಿನ ಮುಂಚೆ ಸುತ್ತ ಮುತ್ತಲ ಕೆಲಗ್ರಾಮಗಳ ಎಲ್ಲಾ ಕೋಮಿನ ಜನ ದೇವಾಲಯದ ಮುಂಭಾಗದಲ್ಲಿ ಸೇರುತ್ತಾರೆ. ಲಿಂಗಾಯತ ಕೋಮಿನ ಪೂಜಾರಿಗೆ (ತಮಡಿ) ಮೈಮೇಲೆ ದೇವರು ಬರುತ್ತದೆ. ಸುತ್ತಲ ಗ್ರಾಮಗಳ ಐದು ದೇವರುಗಳು ಅವನ ಮೈಮೇಲೆ ಬಂದು ಒಪ್ಪಿಗೆ ಸೂಚಿಸಿದ ನಂತರ ಜಾತ್ರೆಯ ಸಿದ್ಧತೆಗಳು ನಡೆಯುತ್ತವೆ. ಪೂಜಾರಿ ಗುದ್ದಲಿ ಪೂಜೆ ನೆರವೇರಿಸಿ, ಕೊಂಡಗುಳಿ ಮಾಡುತ್ತಾರೆ. ಕೊಂಡದ ಸೌದೆ

ತಂದು ಕೊಂಡ ಸಿದ್ಧಗೊಳಿಸುತ್ತಾರೆ. ಬೆಂಡರವಾಡಿ ಕೆರೆಗೆ ಬಂದು ಪೂಜೆ ಮಾಡಿ ಕೇಲ್ ತರುತ್ತಾರೆ. ಹರಕೆ ಹೊತ್ತವರು ಬಾಯಿಬೀಗದವರು ಮುಂತಾದವರು ಉತ್ಸವದಲ್ಲಿ ಬರುತ್ತಾರೆ. ಹಲವಾರು ಆಡಿನ ಮರಿಗಳನ್ನು ಬಲಿ ಕೊಡಲಾಗುತ್ತದೆ. ಬಾಯಿಬೀಗದ ಹರಕೆ ಹೊತ್ತವರು, ಮೊದಲಿಗೆ, ನಂತರ ಇತರರು ಕೊಂಡ ಹಾಯುತ್ತಾರೆ. ಮಧ್ಯಾಹ್ನ ತೇರು ಎಳೆಯುತ್ತಾರೆ. ನಂತರ ಜನರು ಲಕ್ಷ್ಮಿ ದೇವಿಗೆ ಹಣ್ಣು ಕಾಯಿ ಪೂಜೆ ಮಾಡಿಸುತ್ತಾರೆ.

ಕೊಂಡಕ್ಕೆ ಬಲಿಗೊಟ್ಟ ಮರಿಗಳಿಂದ 'ಪರ' ಮಾಡಿ ದೇವರ ಪ್ರಸಾದವೆಂದು (ಮಾಂಸಾಹಾರಿಗಳು ಮಾತ್ರ) ಸಹ ಪಂಕ್ತಿಯಲ್ಲಿ ಕುಳಿತು ಊಟಮಾಡುತ್ತಾರೆ. ಜಾತ್ರೆಯಲ್ಲಿ ಸುತ್ತ ಮುತ್ತಲ ಗ್ರಾಮಗಳ ಸಾವಿರಾರು ಜನ ಪಾಲ್ಗೊಳ್ಳುತ್ತಾರೆ. ನಾಲ್ಕುದಿನ ಜಾತ್ರೆ ನಡೆಯುತ್ತದೆ. ಲಕ್ಷ್ಮಿದೇವರ ಪೂಜೆ ಮಾಡುವವರು ಬ್ರಾಹ್ಮಣರು.

**ಮಲೆ ಮಹದೇಶ್ವರ ಜಾತ್ರೆ:** ಚಾಮರಾಜನಗರ ಜಿಲ್ಲೆಯ ಅತ್ಯಂತ ಮುಖ್ಯವಾದ ಜಾತ್ರೆಗಳಲ್ಲಿ ಮಲೆ ಮಾದೇಶ್ವರ ಜಾತ್ರೆ ಸೇರುತ್ತದೆ. ಹಳೆ ಮೈಸೂರು ಪ್ರಾಂತ್ಯದ ಬಹುತೇಕ ಸಮುದಾಯಗಳು ನಡೆದುಕೊಳ್ಳುವ, ನಿರ್ದಿಷ್ಟ ಸಮುದಾಯಗಳನ್ನು ಒಕ್ಕಲು ಪಡೆದಿರುವ ಮಾದೇಶ್ವರನ ಐಕ್ಯಗುಡಿ ಕೊಳ್ಳೇಗಾಲ ತಾಲೂಕಿನ ಮಾದೇಶ್ವರನ ಬೆಟ್ಟದಲ್ಲಿದೆ. ಮಲೆಮಾದೇಶ್ವರ ಓರ್ವ ಚಾರಿತ್ರಿಕ ಸಂತನಾಗಿದ್ದು ಶ್ರೀಶೈಲದಿಂದ ಮೈಸೂರು ಪ್ರಾಂತಕ್ಕೆ ಬಂದು ಸುಮಾರು ಕ್ರಿ.ಶ. ೧೫–೧೬ ನೇ ಶತಮಾನದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮಾರ್ಪಾಟುಗಳಿಗೆ ಕಾರಣನಾದ ಮಹಾಪುರುಷ. ಈತ ಶೈವ, ಸಿದ್ಧ, ನಾಥ ಪಂಥಗಳ ಸಂಕರ ರೂಪಿಯಾಗಿ ರೂಪುಗೊಂಡ ಸಂತ. ಮುಖ್ಯವಾಗಿ ದಲಿತ, ಬುಡಕಟ್ಟು, ಸೋಲಿಗ ಮತ್ತು ಹಿಂದುಳಿದ ವರ್ಗದ ಜನರ ಸುಧಾರಣೆ ಮತ್ತು ಏಳಿಗೆಗಾಗಿ ಈತನು ವಿಶೇಷವಾಗಿ ಶ್ರಮಿಸಿದವನು. ಈ ಎಲ್ಲಾ ಸಮುದಾಯಗಳು ಈತನನ್ನು ದೈವವಾಗಿ ಪೂಜಿಸುತ್ತಾರೆ. ಕಂಪಣ ಬೇಡರು ಮಲೆ ಮಾದೇಶ್ವರ ಗುಡಿಯ ತಂಬಡಿಕಿ (ಪೂಜಾರಿ) ಮಾಡುವರು. ಮಲೆ ಮಾದೇಶ್ವರ ಬೆಟ್ಟದ ಜಾತ್ರೆ ಕರ್ನಾಟಕದಾದ್ಯಂತ ಜನಪ್ರಿಯ, ಚಿರಪರಿಚಿತ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ ಹಬ್ಬ ಬರುವ ತಿಂಗಳುಗಳಲ್ಲಿ ವಿಶೇಷ ಜಾತ್ರೆ ಜರುಗುತ್ತದೆ. ಮಿಕ್ಕಂತೆ ಇಲ್ಲಿ ವರ್ಷವಿಡೀ ಜಾತ್ರೆ ಇದ್ದೇ ಇರುತ್ತದೆ.

**ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆ:** ಕೊಳ್ಳೇಗಾಲ ಪಟ್ಟಣದಿಂದ ೨೬ ಕಿ.ಮೀ.ದೂರದಲ್ಲಿ ಚಿಕ್ಕಲ್ಲೂರಿದೆ. ಮಲೆ ಮಾದೇಶ್ವರ ಪರಂಪರೆಯಂತೆಯೆ ಜನಪ್ರಿಯವಾದ ಪರಂಪರೆ ಮಂಟೇಸ್ವಾಮಿಯದು. ಮಾದೇಶ್ವರನ ಸಮಕಾಲೀನರೆಂಬಂತೆ ಕಂಡುಬರುವ ಮಂಟೇಸ್ವಾಮಿ ಮೂಲತಃ ಉತ್ತರ ಕರ್ನಾಟಕದ ಕೊಡೇಕಲ್ಲು ಬಸವಣ್ಣನ ಶಿಷ್ಯರಾಗಿದ್ದು, ಅಲ್ಲಿಂದ ಮೈಸೂರು ಪ್ರಾಂತಕ್ಕೆ ಬಂದವರು. ವರ್ಷಕ್ಕೊಮ್ಮೆ ಜನವರಿ–ಫೆಬ್ರವರಿಯಲ್ಲಿ ಚಿಕ್ಕಲ್ಲೂರು ಜಾತ್ರೆ ಐದು ದಿನಗಳ ಕಾಲ ನಡೆಯುತ್ತದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನ ಪುರದಲ್ಲಿ ಮಂಟೇಸ್ವಾಮಿ ಐಕ್ಯರಾದ ಸ್ಥಳದಲ್ಲಿ ಅವರ ಮಠವಿದೆ. ಇದರ 'ಸ್ವಾಮಿ' ಗಳೇ ಚಿಕ್ಕಲ್ಲೂರಿಗೆ ಆಗಮಿಸಿ ಜಾತ್ರೆಗೆ ಚಾಲನೆ ನೀಡುತ್ತಾರೆ.

**ವೆಂಕಟರಮಣಸ್ವಾಮಿ ಜಾತ್ರೆ:** ಕೊಳ್ಳೇಗಾಲ ತಾಲೂಕಿನ ಬೂದಬಾಳು ಗ್ರಾಮದಲ್ಲಿ ಪ್ರಸಿದ್ಧ ವೆಂಕಟರಮಣ ಸ್ವಾಮಿ ದೇವಾಲಯವಿದೆ. "ಚಿಕ್ಕ ತಿರುಪತಿ" ಎಂದೂ ಕರೆಯಲಾಗುವ ಇಲ್ಲಿ ವರ್ಷಕ್ಕೊಮ್ಮೆ ಮೂರು ದಿನಗಳ ಜಾತ್ರೆ ಸೇರುತ್ತದೆ. ಮೊದಲ ದಿನ ತೇರು; ಎರಡನೇ ದಿನ ರಾಕ್ಷಸ ಸಂಹಾರ; ಮೂರನೇ ದಿನ ಮಸಣತೋತ್ಸವ (ತೆಪ್ಪೋತ್ಸವ) ಜರುಗುತ್ತವೆ. ಪ್ರಮುಖವಾಗಿ ಇದು ವೈಷ್ಣವ ಪಂಥದ, ಅಥವಾ ನಾರಾಯಣ ಸ್ವಾಮಿ ಒಕ್ಕಲಿನ, ದಾಸ ಒಕ್ಕಲಿನ ಸಮುದಾಯಗಳು ಸೇರಿ ನಡೆಸುವ ಜಾತ್ರೆ. ಜಾತ್ರೆ ಸಮಯದಲ್ಲಿ ಹರಿಕಥೆ

ಮಾಡುವ ಸಂಪ್ರದಾಯವಿದೆ. ರಥೋತ್ಸವದ ದಿನ ಇದೇ ಗ್ರಾಮದ ಮಾದಿಗ ಜನಾಂಗದ ತಮಟೆ ತಂಡದವರು ಪ್ರದರ್ಶಿಸುವ ತಮಟೆ ವಾದನ ಬಹಳ ಹೆಸರುವಾಸಿಯಾಗಿದ್ದು, ಈ ದೇವಸ್ಥಾನದ ಪೂಜಾರಿಕೆ ಕುಂಚಿಟಿಗ ಸಮುದಾಯದವರಿಗೆ ಸೇರಿದ್ದು.

**ಹೊಂಡರಬಾಳು ಜಾತ್ರೆ:** ಕೊಳ್ಳೇಗಾಲ ಪಟ್ಟಣಕ್ಕೆ ೮–೧೦ ಕಿ.ಮೀ ದೂರದಲ್ಲಿರುವ ಹೊಂಡರಬಾಳು ಬೆಟ್ಟವು ಸಿದ್ಧರ ತಾಣ. ಇಲ್ಲಿ ನಡೆಯುವ ಜಾತ್ರೆಯನ್ನು ಸಿದ್ದಪ್ಪನ ಬೆಟ್ಟದ ಜಾತ್ರೆ ಅಥವಾ ಹೊಂಡರಬಾಳು ಜಾತ್ರೆ ಎಂದು ಕರೆಯುವರು. ಮೈಸೂರು ದಸರಾ ನವರಾತ್ರಿ ಉತ್ಸವಕ್ಕೆ ಮುನ್ನ ನಡೆಯುವ ಈ ಜಾತ್ರೆಯಲ್ಲಿ (ಬನ್ನಿ) ಚಿಗುರು ಕಡಿಯುವ ಆಚರಣೆ ಇರುವುದೊಂದು ವಿಶೇಷ. ಏಳು ದಿನಗಳ ಕಾಲ ಜರುಗುವ ಈ ಜಾತ್ರೆಯಲ್ಲಿ ರಥೋತ್ಸವ, ಕೊಂಡೋತ್ಸವ ಬಹಳ ಮುಖ್ಯ ಎನಿಸಿವೆ. ರಥೋತ್ಸವದ ರಾತ್ರಿ ಜರುಗುವ ಪಟಾಕಿ ಸಿಡಿಸುವ ಕಾರ್ಯಕ್ರಮವು ಈ ಜಾತ್ರೆಯ ಇನ್ನೊಂದು ಪ್ರಮುಖ ಆಕರ್ಷಣೆ. ಮರುಳ ಶಂಕರ ದೇವನೇ ಈ ಬೆಟ್ಟದ ಸಿದ್ಧಪ್ಪ ಎಂಬು ನಂಬಿಕೆ ಇದೆ. ಈ ದೈವಕ್ಕೆ ಮೊದಲ ಪೂಜೆ ಸಲ್ಲಿಸುವವರು ಮಾದಿಗ ಜನಾಂಗದವರು ಎಂಬುದು ಗಮನಾರ್ಹ ಸಂಗತಿ. ಇಲ್ಲಿಯೇ ಇರುವ ವೀರಶೈವ ಮಠದ ಗುರುಗಳು ಈ ಜಾತ್ರೆಯ ಆಚರಣೆಗಳಲ್ಲಿ ಪ್ರಧಾನ ಪಾತ್ರವಹಿಸುತ್ತಾರೆ.

**ಚಾಮರಾಜನಗರ ಜಿಲ್ಲೆಯ ಪ್ರಧಾನ ಜಾತ್ರೆಗಳು ಮತ್ತು ಉರುಸುಗಳು**

| ಸ್ಥಳ | ಪ್ರಧಾನ ದೇವತೆ/ದೇವಿ ಅಥವಾ ಸಂತ | ನಡೆಸುವ ಮಾಹೆ | ಅವಧಿ | ಅಂದಾಜು ಜನರ ಜಮಾವಣೆ | ಷರಾ |
|---|---|---|---|---|---|
| | | **ಚಾಮರಾಜನಗರ ತಾಲೂಕು** | | | |
| ಬಾಗಲಿ | ಮಳಿಗೆ ಅರಸಮ್ಮ | ಮಾರ್ಚ್ | ನಾಲ್ಕು ದಿನ | ೧೦,೦೦೦ | – |
| ಚಾಮರಾಜನಗರ | ಚಾಮರಾಜೇಶ್ವರ | ಜೂನ್ | ಒಂದು ದಿನ | ೧೦,೦೦೦ | – |
| ಚಂದಕವಾಡಿ | ಲಕ್ಷ್ಮೀ ದೇವಿ | ಫೆಬ್ರವರಿ | ಎರಡು ದಿನ | ೨೦,೦೦೦ | – |
| ಗಂಗವಾಡಿ | ವೀರಭದ್ರಸ್ವಾಮಿ | ಡಿಸೆಂಬರ್ | ಒಂದು ದಿನ | ೫೫,೦೦೦ | – |
| ಕೆಸ್ತೂರು | ದೊಡ್ಡಮ್ಮ ತಾಯಿ | ಜನವರಿ | ಒಂದು ದಿನ | ೬,೦೦೦ | – |
| ಉಮ್ಮತ್ತೂರು | ಊರುಕ್ಯಾತಮ್ಮ | ಜನವರಿ | ಮೂರು ದಿನ | ೧೦,೦೦೦ | – |
| ಎಣ್ಣೆಹೊಳೆ | ಮಹದೇಶ್ವರ | ಫೆಬ್ರವರಿ | ಒಂದು ದಿನ | ೧೫,೦೦೦ | – |
| ಕೀಲಗೆರೆ | ವೆಂಕಟರಮಣಸ್ವಾಮಿ | ಮಾರ್ಚ್ | ಒಂದು ದಿನ | ೪,೦೦೦ | – |
| ಮಲೆಯೂರು | ಮಾರಮ್ಮ | ಜನವರಿ | ಒಂದು ದಿನ | ೪,೦೦೦ | – |
| ಅರಳಿಕಟ್ಟೆ | ಚಾಮುಂಡೇಶ್ವರಿ | ಜನವರಿ | ಒಂದು ದಿನ | ೩,೦೦೦ | – |
| ಕುಡ್ಲೂರು | ಮಂಟೇಸ್ವಾಮಿ | ಮಾರ್ಚ್ | ಒಂದು ದಿನ | ೨,೦೦೦ | – |
| | | **ಗುಂಡ್ಲುಪೇಟೆ ತಾಲೂಕು** | | | |
| ಬೊಮ್ಮಲಾಪುರ | ಪಟ್ಟದರಾಣಿ | ಮಾರ್ಚ್ | ಒಂದು ದಿನ | ೫,೦೦೦ | – |
| ಗುಂಡ್ಲುಪೇಟೆ | ವಿಜಯ ನಾರಾಯಣಸ್ವಾಮಿ | ಜನವರಿ | ಒಂದು ದಿನ | ೫,೦೦೦ | – |
| ಗುಂಡ್ಲುಪೇಟೆ | ವಡ್ಡರ ಮಾರಮ್ಮ | ಏಪ್ರಿಲ್ | ಎರಡು ದಿನ | ೫,೦೦೦ | – |
| ಹಂಗಳ | ಹಿಮವತ್ ಗೋಪಾಲಸ್ವಾಮಿ | ಏಪ್ರಿಲ್ | ಎರಡು ದಿನ | ೫,೦೦೦ | – |
| ಹಸುಗುಳಿ | ಮಾರಮ್ಮ | ಡಿಸೆಂಬರ್ | ಮೂರು ದಿನ | ೫,೦೦೦ | – |

| ಸ್ಥಳ | ಪ್ರಧಾನ ದೇವತೆ/ದೇವಿ ಅಥವಾ ಸಂತ | ನಡೆಸುವ ಮಾಹೆ | ಅವಧಿ | ಅಂದಾಜು ಜನರ ಜಮಾವಣೆ | ಷರಾ |
|---|---|---|---|---|---|
| ಕಬ್ಬಹಳ್ಳಿ | ಮಲರಸಮ್ಮ | – | ಮೂರು ದಿನ | ೬,೦೦೦ | – |
| ಕಂದಗಾಲ | ಪಾರ್ವತಮ್ಮ | ಮೇ | ಎರಡು ದಿನ | ೫,೦೦೦ | – |
| ತೆರಕಣಾಂಬಿ | ವೆಂಕಟರಮಣಸ್ವಾಮಿ | ಜನವರಿ | ಒಂದು ದಿನ | ೫,೦೦೦ | – |
| ಬೇಗೂರು | ಮಹದೇಶ್ವರ | ಮಾರ್ಚ್ | ಮೂರು ದಿನ | ೩,೦೦೦ | – |
| ದುಂದಾಸನಪುರ | ಮಹದೇಶ್ವರ | ನವೆಂಬರ್ | ಒಂದು ದಿನ | ೨,೦೦೦ | – |
| ಹೆಗ್ಗಡೆಹಳ್ಳಿ | ಪಾರ್ವತಮ್ಮ | ಫೆಬ್ರವರಿ | ಒಂದು ದಿನ | ೧,೫೦೦ | – |
| **ಕೊಳ್ಳೆಗಾಲ ತಾಲೂಕು** | | | | | |
| ಮಹದೇಶ್ವರ ಬೆಟ್ಟ | ಮಹದೇಶ್ವರ ಸ್ವಾಮಿ | ಫೆಬ್ರವರಿ–ಮಾರ್ಚ್ | ಒಂದು ವಾರ | ೨ ಲಕ್ಷ | – |
| | | ಸೆಪ್ಟೆಂಬರ್–ಅಕ್ಟೋಬರ್ | ಒಂದು ವಾರ | ೨ ಲಕ್ಷ | – |
| ಶಿವನ ಸಮುದ್ರ | ಹಜರತ್ ಮರ್ದಾನಾ ಗಾಯಬ್ ಉರುಸು | ಅಕ್ಟೋಬರ್ | ಒಂದುವಾರ | ೨ ಲಕ್ಷ | – |
| ಚಿಕ್ಕಲ್ಲೂರು | ಸಿದ್ಧಪ್ಪಾಜಿ | ಜನವರಿ | ಎಂಟು ದಿನ | ೧ ಲಕ್ಷ | – |
| ಗೂಳ್ಯ | ಮಲೆಮಹದೇಶ್ವರ | ನವೆಂಬರ್ ಮತ್ತು ಮಾರ್ಚ್ | ಮೂರು ದಿನ<br>ಮೂರು ದಿನ | ೨೫,೦೦೦<br>೨೫,೦೦೦ | ದನದ ಜಾತ್ರೆ |
| ಬೂದಬಾಳು | ವೆಂಕಟರಮಣಸ್ವಾಮಿ | ಮಾರ್ಚ್ | ಮೂರು ದಿನ | ೨೦,೦೦೦ | ದನದ ಜಾತ್ರೆ |

# ಸೋಲಿಗರ ಜೀವನ ಶೈಲಿ

**–ಡಾ. ಹೆಚ್. ಸುದರ್ಶನ್**

ಚಾಮರಾಜನಗರವು ರಾಜ್ಯದ ದಕ್ಷಿಣದ ತುದಿಯಲ್ಲಿರುವ ವೈಶಿಷ್ಟ್ಯಪೂರ್ಣ ಭೌಗೋಳಿಕ ಹಿನ್ನೆಲೆಯುಳ್ಳ ಜಿಲ್ಲೆ. ಜಿಲ್ಲೆಯ ಯಳಂದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಬಿಳಿಗಿರಿರಂಗನಬೆಟ್ಟವು ಪೂರ್ವ ಹಾಗೂ ಪಶ್ಚಿಮ ಘಟ್ಟಗಳ ಸಂಗಮ ಸ್ಥಾನದಲ್ಲಿರುವ ಜೀವ ವೈವಿಧ್ಯತೆಯ ತಾಣ. ವನ್ಯಜೀವಿಗಳ ಆವಾಸ ಸ್ಥಾನ. ಬಿಳಿಗಿರಿರಂಗನಾಥಸ್ವಾಮಿ ವನ್ಯಧಾಮವು ೫೪೦ ಚ.ಕಿ.ಮೀ. ವ್ಯಾಪ್ತಿಯ ಸಮೃದ್ಧ ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಈ ವನ್ಯಜೀವಿಧಾಮವು ಸರಿಸುಮಾರು ೩೫ ಕಿಲೋಮೀಟರ್ ಉತ್ತರ ದಕ್ಷಿಣ ಹಾಗೂ ೧೫ ಕಿ.ಮೀ. ಪೂರ್ವ ಪಶ್ಚಿಮಾಭಿಮುಖವಾಗಿ ಹರಡಿಕೊಂಡಿದೆ. ಇಲ್ಲಿನ ಎತ್ತರವಾದ ಬೆಟ್ಟಗುಡ್ಡ ಪ್ರದೇಶಗಳು, ವಾಯುಗುಣ ವೈಪರೀತ್ಯ, ಉಷ್ಣತೆ, ಮಳೆಯ ಪ್ರಮಾಣ ಇವೆಲ್ಲವೂ ಇಲ್ಲಿನ ವಿಶಿಷ್ಟ ಸಸ್ಯ ವರ್ಗಕ್ಕೆ ಹಾಗೂ ಪ್ರಾಣಿ ಪ್ರಪಂಚಕ್ಕೆ ಒಂದು ರೂಪ ಕೊಟ್ಟಿವೆ.

ಬಿಳಿಗಿರಿರಂಗನಬೆಟ್ಟವೆಂದರೆ ಬಹುತೇಕ ಬಿಳಿಗಿರಿರಂಗಸ್ವಾಮಿ ದೇವಾಲಯ(ಬಿ.ಆರ್.ಟಿ) ಅಭಯಾರಣ್ಯವೇ ಆಗಿದೆ. ಕರ್ನಾಟಕದ ಆಗ್ನೇಯ ದಿಕ್ಕಿನಲ್ಲಿರುವ ಎರಡು ದಿಬ್ಬಗಳ ನಡುವೇ ದಕ್ಷಿಣೋತ್ತರವಾಗಿ ಚಾಚಿಕೊಂಡಿರುವ ವನ್ಯಧಾಮವು ಚಿಕ್ಕಪುಟ್ಟ ಗುಡ್ಡಗಳ ಸರಮಾಲೆಯನ್ನೇ ಹಾರದಂತೆ ಹೊಂದಿದೆ.

ಕೆಳಗಿನ ಬಯಲು ಪ್ರದೇಶದಿಂದ ನೋಡಿದರೆ ಈ ವನ್ಯಜೀವಿಧಾಮವು ವಿಸ್ತಾರವಾಗಿ ಹರಡಿ ನಿಂತ ವನ್ಯ ರಾಶಿಯ ನಡುವೆ ಬಿಳಿಗಿರಿರಂಗಸ್ವಾಮಿಯು ಬಿಳಿ ಬಣ್ಣದಂತೆ ಕಾಣುತ್ತವೆ. ಅತ್ಯಂತ ಪುರಾತನ ಐತಿಹ್ಯವುಳ್ಳ ರಂಗನಾಥಸ್ವಾಮಿ ದೇವಾಲಯದ ಕಾರಣದಿಂದಲೇ ಈ ವನ್ಯಧಾಮವನ್ನು ಬಿಳಿಗಿರಿರಂಗಸ್ವಾಮಿ ವನ್ಯಧಾಮ ಎಂದೇ ಕರೆಯಲಾಗಿದೆ.

ಸಮುದ್ರ ಮಟ್ಟಕ್ಕಿಂತ ೭೫೦ ಮೀಟರ್‌ನಿಂದ ೧೮೧೬ ಮೀಟರ್ ಎತ್ತರವಿರುವ ವಿವಿಧ ಬೆಟ್ಟಗುಡ್ಡಗಳು ಇಲ್ಲಿ ಕಾಣಸಿಗುತ್ತವೆ. ಈ ಶ್ರೇಣಿಯು ಸರಾಸರಿ ೧೩೦೦ ಮೀಟರ್ ಎತ್ತರದಲ್ಲಿದೆ. ಇಲ್ಲಿನ ಅತಿ ಎತ್ತರದ ಪ್ರದೇಶವೆಂದರೆ ಸಮುದ್ರ ಮಟ್ಟಕ್ಕಿಂತ ಸುಮಾರು ೧೭೬೦ ಮೀ. ಎತ್ತರದ ಹೊನ್ನಮಟ್ಟಿಬೆಟ್ಟ ಹಾಗೂ ಸುಮಾರು ೧೮೦೦ ಮೀ. ಎತ್ತರವಿರುವ ಕತ್ತರಿಬೆಟ್ಟ ಇಲ್ಲಿನ ಭೂ ಪ್ರದೇಶದ ಏರಿಳಿತದ ಸ್ವರೂಪವೇ ಇಲ್ಲಿನ ವಿಶಿಷ್ಟ ಹವಾಗುಣಕ್ಕೆ ಕಾರಣವಾಗಿದೆ. ವಾರ್ಷಿಕ ಸರಾಸರಿ ಮಳೆಯೂ ಕೂಡ ಉತ್ತಮವಾಗಿದೆ. ಇಲ್ಲಿನ ಬೆಟ್ಟಗುಡ್ಡ ಪ್ರದೇಶಗಳ ಎತ್ತರಕ್ಕೆ ಹೋದಂತೆಲ್ಲ ಉಷ್ಣತೆ ಗಮನಾರ್ಹವಾಗಿ ಕಡಿಮೆಯಾಗುವುದು ಅನುಭವಕ್ಕೆ ಬರುತ್ತದೆ. ಮಳೆಯ ಪ್ರಮಾಣ ಉತ್ತಮವಾಗಿರುವುದಿಂದ ವನರಾಶಿಯ ನಡುವೆ ನೈಸರ್ಗಿಕವಾಗಿ ಅಲ್ಲಲ್ಲಿ ರೂಪುಗೊಂಡಿರುವ ನದಿ, ತೊರೆಗಳು ನೋಡುಗರ ಕಣ್ಮನವನ್ನು ಸೆಳೆಯುತ್ತದೆ.

ಬಿ.ಆರ್.ಟಿ. ಅಭಯಾರಣ್ಯದಲ್ಲಿ ಒಂದು ಸಾವಿರಕ್ಕೂ ಅಧಿಕ ಸಸ್ಯ ಪ್ರಭೇಧಗಳಿವೆ. ಕುರುಚಲು ಸಸ್ಯಗಳು, ಬಳ್ಳಿಗಳು, ಪೊದೆಗಳು, ಔಷಧೀಯ ಗುಣವುಳ್ಳ ಮೂಲಿಕೆಗಳು, ಕೀಟಾಹಾರಿ ಸಸ್ಯಗಳು ಎಲ್ಲವೂ ಇಲ್ಲಿವೆ. ಈ ಭೂ ಪ್ರದೇಶದ ಏರಿಳಿತ ಮಣ್ಣಿನ ಗುಣ, ತೇವಾಂಶ ಇವೆಲ್ಲವೂ ಇಲ್ಲಿನ ವೈವಿಧ್ಯಮಯ ಸಸ್ಯ ಪ್ರಭೇಧದ ಸೃಷ್ಟಿಗೆ ಮೂಲವಾಗಿದೆ.

ಇಷ್ಟೆಲ್ಲಾ ವೈವಿಧ್ಯತೆಯನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಕಂಗೊಳಿಸುತ್ತಿರುವ ಈ ಪ್ರಕೃತಿಯ ನಡುವೆಯ ಅರಣ್ಯದ ಅವಿಭಾಜ್ಯ ಅಂಗವೆಂಬಂತೆ, ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದವರಾಗಿ ವಾಸಿಸುತ್ತಿರುವ ಬುಡಕಟ್ಟು ಗಿರಿಜನರೇ ಸೋಲಿಗರು. ಇಲ್ಲಿನ ವಿಶಾಲ ಅರಣ್ಯದ ನಡುವೆ ಚದುರಿ ವಾಸಿಸುತ್ತಿರುವ ಸರಿ ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಸೋಲಿಗ ಜೀವಗಳಿಗೆ ಇದು ಆಶ್ರಯ ನೀಡಿದೆ. ಅನಾದಿ ಕಾಲದಿಂದಲೂ ಇವರು ಸರಳವಾಗಿ, ಶಾಂತಚಿತ್ತರಾಗಿ ಇಲ್ಲಿನ ಪ್ರಕೃತಿದತ್ತ ಭೂಮಿ, ನೀರು, ಅರಣ್ಯಗಳನ್ನೇ ಅವಲಂಬಿಸಿಕೊಂಡು ವಾಸಿಸುತ್ತಿರುವ ಬಗ್ಗೆ ನಮಗೆ ಸಾಕಷ್ಟು ಪುರಾವೆಗಳು ದೊರಕುತ್ತವೆ. ಹಿಂದಿನಿಂದಲೂ ಸಹಜ ಸುಂದರವಾಗಿ ರೂಪುಗೊಂಡಿರುವ ಅರಣ್ಯ ಸಂಸ್ಕೃತಿ ಇವರಲ್ಲಿ ಇಂದಿಗೂ ಉಳಿದುಕೊಂಡಿದೆ.

## ಸೋಲಿಗ ಪದದ ಮೂಲ

ಸೋಲಿಗ ಜನಾಂಗವು ಒಂದು ಆದಿವಾಸಿ ಸಮುದಾಯವಾಗಿದ್ದು ಇವರಿಗೆ ಸೋಲಿಗ ಎಂಬ ಹೆಸರು ಹೇಗೆ ಬಂದಿರಬಹುದೆಂದು ಎಂಬ ಬಗ್ಗೆ ಸಾಕಷ್ಟು ಚರ್ಚೆಯಿದೆ. ಸೋಲಿಗರಾಡುವ ಭಾಷೆ 'ಸೋಲಿಗ ನುಡಿ' ಇದು ಕನ್ನಡದ್ದೇ ಆದ ಒಂದು ಉಪಭಾಷೆಯಾಗಿದ್ದು ವ್ಯವಹಾರಿಕವಾಗಷ್ಟೆ ಅಸ್ತಿತ್ವದಲ್ಲಿದೆ. ಸೋಲಿಗ ಭಾಷೆಯಲ್ಲಿ ಸೋಲ ಎಂದರೆ ಬಿದಿರು ಎಂಬ ಅರ್ಥವಿದೆ. ಸೋಲಿಗರು ತಮ್ಮನ್ನು ತಾವು ಬಿದಿರಿನಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ.

ಸೋಲಿಗ ಎಂಬುದು 'ಸೋಯಿಗೆ' ಎಂಬುದರಿಂದ ಬಂದಿದೆ. 'ಸೋಯಿಗ' ಎಂಬುದಕ್ಕೆ 'ಸ್ವಾಮಿಗ' ಎಂಬುದು ಮೂಲರೂಪ. 'ಸ್ವಾಮಿಗ' ಎಂದರೆ ಸ್ವಾಮಿಗೆ ಅಂದರೆ ದೇವರಿಗೆ ಸಂಬಂಧಿಸಿದವನು. ಸ್ವಾಮಿ ಎಂದರೆ ಈ ಭಾಗದ ಜನರು ಆರಾಧಿಸುವ ಮಹದೇಶ್ವರಸ್ವಾಮಿ. ಇವರು ಮಹದೇಶ್ವರಸ್ವಾಮಿ ಒಕ್ಕಲಾದ್ದರಿಂದ 'ಸ್ವಾಮಿಗ' ಜನರು ಸೋಲಿಗರಾದರು ಎಂದು ಅರ್ಥೈಸುವ ಮತ್ತೊಂದು ವಾದವಿದೆ.

ಸೋಲಿಗ ಪದವು 'ಸೋಲೈ' ಎಂದರೆ ತಮಿಳು ಭಾಷೆಯಲ್ಲಿ ಕಾಡು, ಗುತ್ತಿ, ಮೆಳೆ ಎಂಬ ಅರ್ಥವಿದೆ ಎಂಬುದಾಗಿ ಸಹ ಹೇಳಲಾಗುತ್ತದೆ. ಒಟ್ಟಾರೆ ಸೋಲಿಗರು ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಜನರಾಗಿದ್ದರು ಎಂಬುದು ನಿರ್ವಿವಾದದ ಸಂಗತಿಯಾಗಿದೆ.

ಒಂದು ಕತೆಯ ಪ್ರಕಾರ ಮಹದೇಶ್ವರಸ್ವಾಮಿಯ ಕೃಪೆಯಿಂದಾಗಿ ಸಂಕಮ್ಮ ಮತ್ತು ನೀಲಯ್ಯ ಎಂಬ ದಂಪತಿಗಳಿಗೆ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಇಬ್ಬರು ಮಕ್ಕಳು ಜನಿಸುತ್ತಾರೆ. ಆ ಮಕ್ಕಳನ್ನೇ ಭಿಕ್ಷೆಯಾಗಿ ಪಡೆದ ಮಹದೇಶ್ವರಸ್ವಾಮಿಯು ಕಾಡು ಸ್ವಭಾವದ ಕಾರಯ್ಯನನ್ನು ಕಾಡಿನಲ್ಲಿಯೂ, ಮೃದು ಪ್ರಕೃತಿಯ ಬಿಲ್ಲಯ್ಯನನ್ನು ನಾಡಿನಲ್ಲಿಯೂ ನೆಲಸುವಂತೆ ಮಾಡುತ್ತಾರೆ. ಈ ಕಾರಯ್ಯನ ಮಕ್ಕಳೇ ಸೋಲಿಗರು ಎನ್ನುತ್ತಾರೆ.

ಪ್ರಕೃತಿಯನ್ನೇ ಉಸಿರಾಗಿಸಿಕೊಂಡಿರುವ ಅರಣ್ಯವನ್ನೆ ನೆಲೆಯಾಗಿಸಿಕೊಂಡಿರುವ ಸೋಲಿಗ ಗಿರಿಜನರು ಮೂಲತಃ ಕಷ್ಟಸಹಿಷ್ಣುಗಳು, ಕಂದುವರ್ಣ, ಚಪ್ಪಟೆಮೂಗು, ಗುಂಗುರು ಕೂದಲು, ಮಧ್ಯಮ ಎತ್ತರ, ಇದು ಸೋಲಿಗರ ದೈಹಿಕ ಚಹರೆ. ಮೈಸೂರು ಹಾಗೂ ಕೊಡಗು ಜಿಲ್ಲೆಯ ಕೆಲವು ಭಾಗಗಳಲ್ಲಿ ಸೋಲಿಗರ ವಾಸಸ್ಥಾನಗಳು ಕಂಡು ಬಂದರೂ, ಜನಸಂಖ್ಯಾ ದೃಷ್ಟಿಯಿಂದ ತುಂಬಾ ವಿರಳ. ಜೊತೆಗೆ ಈ ಭಾಗದಲ್ಲಿ ನೆಲೆ ನಿಂತಿರುವ ಇತರೆ ಗಿರಿಜನ ಸಮುದಾಯಗಳಾದ ಜೇನುಕುರುಬ, ಬೆಟ್ಟಕುರುಬ, ಯರವ ಮುಂತಾದ

ಪಂಗಡಗಳ ಪ್ರಭಾವಗಳನ್ನು ಇಲ್ಲಿನ ಸೋಲಿಗರಲ್ಲಿ ಗಮನಿಸಬಹುದು ಆದರೆ ಸೋಲಿಗರ ಆಡುಂಬೋಲವಾದ ಬಿಳಿಗಿರಿರಂಗಸ್ವಾಮಿ ವನ್ಯಧಾಮದಲ್ಲಿ ಹೊರಗಿನ ಯಾರ ಪ್ರಭಾವ ಪ್ರಲೋಭನೆಗಳಿಗೂ ಅವಕಾಶವಿಲ್ಲ. ಹೀಗಾಗಿ ಇವರಲ್ಲಿನ ಆಚಾರ ವಿಚಾರಗಳಲ್ಲಿ ಉಡುಗೆ ತೊಡುಗೆಗಳಲ್ಲಿ, ಆಹಾರ ಪದ್ಧತಿಯಲ್ಲಿ ಹೆಚ್ಚೇನೂ ಭಿನ್ನತೆಯನ್ನು ನಾವು ಕಾಣಲು ಸಾಧ್ಯವಿಲ್ಲ.

## ಸೋಲಿಗರಲ್ಲಿ ವಲಸೆ

ಸೋಲಿಗರು ಅರಣ್ಯ ಪ್ರದೇಶದ ನಡುವೆ ಅಲ್ಲಲ್ಲಿ ಚದುರಿ ನೆಲೆಸಿದ್ದಾರೆ. ಇವರು ನೆಲೆಸಿರುವ ಭೂ ಪ್ರದೇಶವಿರುವ ೨೫ ರಿಂದ ೪೦ ಮನೆಗಳಿರುವ ಗುಂಪನ್ನು 'ಪೋಡು' ಎಂಬುದಾಗಿ ಕರೆಯುತ್ತಾರೆ. ತಲತಲಾಂತರದಿಂದ ಅರಣ್ಯದಲ್ಲಿ ನೆಲೆನಿಂತಿರುವ ಸೋಲಿಗರನ್ನು ಅರೆ ಅಲೆಮಾರಿಗಳು ಎಂದು ಕರೆಯಬಹುದು. ಇವರು ದೂರ ಸ್ಥಳಗಳಿಗೆ ವಲಸೆ ಹೋಗದಿದ್ದರೂ ಅಲ್ಲಲ್ಲಿಯೇ ವಲಸೆ ಹೋಗುತ್ತಿದ್ದರು. ಆದುದರಿಂದ ಇವರ ಶಾಶ್ವತ ನೆಲೆಗಳನ್ನು ನಾವು ಗುರುತಿಸಲಾಗುವುದಿಲ್ಲ.

ಸೋಲಿಗರಲ್ಲಿನ ವಲಸೆ ಪ್ರವೃತ್ತಿಗೆ ಹಲವಾರು ಕಾರಣಗಳಿವೆ. ಕೆಲವೊಮ್ಮೆ ಏನೊಂದೂ ಕಾರಣಗಳು ಇಲ್ಲದೆಯೂ ಇವರು ವಲಸೆ ಹೋಗುವುದುಂಟು. ಸಾಮಾನ್ಯವಾಗಿ ಇವರು ನೆಲೆನಿಂತ ಪ್ರದೇಶದಲ್ಲಿ ನಿರಂತರವಾಗಿ ಏನಾದರೊಂದು ಅವಘಡ, ತೊಡಕುಗಳು ಸಂಭವಿಸಿದರೆ, ಸಾಂಕ್ರಾಮಿಕ ರೋಗಗಳಿಗೆ ತುತ್ತಾದರೆ ಇವರು ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಇವರ ವಲಸೆಗೆ ಮತ್ತೊಂದು ಕಾರಣವೆಂದರೆ ಭೂ ಫಲವತ್ತತೆ ಕ್ಷೀಣವಾಗುವುದು. ಅಂದರೆ, ಸೋಲಿಗರು ಐದಾರು ವರ್ಷಗಳ ಕಾಲ ಒಂದೆಡೆ ನೆಲೆನಿಂತು, ಸುತ್ತಮುತ್ತಲ ಭೂ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಾರೆ. ಹೀಗೆ ಒಂದೇ ಸಮನೆ ಮಾಡುವ ವ್ಯವಸಾಯದಿಂದಾಗಿ ಸ್ವಾಭಾವಿಕವಾಗಿಯೇ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿತ್ತು ಅಂತಹ ಸಂದರ್ಭದಲ್ಲಿ ಇವರು ತಮ್ಮ ವಾಸಸ್ಥಾನವನ್ನು ಬದಲಾವಣೆ ಮಾಡುತ್ತಿದ್ದರು.

ಮತ್ತೊಂದು ಕಾರಣವೆಂದರೆ ಯಾವುದಾದರೂ ಸ್ಥಳ ಆಗಬರದಿದ್ದರೆ ವಲಸೆ ಹೋಗುವುದು ಅಂದರೆ ಏನಾದರೊಂದು ಹಾನಿ ಆಗುವುದು, ಅನಾಹುತ ಸಂಭವಿಸುವುದು ಇತ್ಯಾದಿ. ಸಾಮಾನ್ಯವಾಗಿ ಸೋಲಿಗರು ವಲಸೆ ಹೋಗುವಾಗ ತಮ್ಮ ಅಲ್ಪ ವಸ್ತುಗಳನ್ನು ಮಾತ್ರ ಜೊತೆಯಲ್ಲಿ ಕೊಂಡೊಯ್ಯುತ್ತಾರೆ. ಸಾಂಕ್ರಾಮಿಕ ರೋಗಗಳುಂಟಾಗಿ ವಲಸೆ ಹೋಗಬೇಕಾದ ಸಂದರ್ಭಗಳಲ್ಲಿ ಮಾತ್ರ ಅವರು ಏನನ್ನು ತೆಗೆದುಕೊಳ್ಳದೆ, ತಮ್ಮ ಸಾಕು ಪ್ರಾಣಿಗಳನ್ನು ಸಹ ಅಲ್ಲಿಯೇ ಬಿಟ್ಟು ತೆರಳುತ್ತಾರೆ. ಹೀಗೆ ಹೋಗುವಾಗ ಅಲ್ಲಿ ಉಳಿಯುವ ವೃದ್ಧರು ಹಾಗೂ ರೋಗಿಗಳನ್ನು ನೋಡಿಕೊಳ್ಳಲು ಹಿರಿಯರನ್ನು ನೇಮಿಸಲು ಮರೆಯುವುದಿಲ್ಲ. ರೋಗ ಹರಡದಂತೆ ಅವರು ವಹಿಸುತ್ತಿದ್ದ ಮುಂಜಾಗ್ರತಾ ಕ್ರಮಗಳು ಇವು.

ಒಂದು ಸ್ಥಳದಿಂದ ವಲಸೆ ಹೊರಟು ಮತ್ತೊಂದು ವಾಸಸ್ಥಳವನ್ನು ಆಯ್ಕೆ ಮಾಡಿಕೊಳ್ಳುವಾಗ ಸೋಲಿಗರು ತುಂಬಾ ಎಚ್ಚರಿಕೆ ವಹಿಸುತ್ತಾರೆ. ಸಾಮಾನ್ಯವಾಗಿ ಇವರು ಕಾಡು ಪ್ರಾಣಿಗಳಿಂದ ರಕ್ಷಣೆ ಸಿಗುವ ಪ್ರಶಸ್ತವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಜೊತೆಗೆ ನೀರಿನ ಸೌಕರ್ಯವೂ ಹತ್ತಿರದಲ್ಲಿ ಇರುವಂತಹ ಸ್ಥಳಗಳಿಗೆ ಆದ್ಯತೆ. ಆದರೆ ಅಲ್ಲಿಗೆ ನೀರು ಕುಡಿಯಲು ಬರುವ ಪ್ರಾಣಿಗಳಿಂದಲೂ ಸಹ ತಮಗೆ ತೊಂದರೆಯುಂಟಾಗಬಾರದು ಎಂಬುದನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ. ಹೀಗೆ ಹಿರಿಯರು ಸ್ಥಳ ಆಯ್ಕೆ ಮಾಡಿದ ನಂತರ ಇತರರು ಅಲ್ಲಿಗೆ ಹೋಗುತ್ತಾರೆ.

ಹೀಗೆ ಸೂಕ್ತ ಸ್ಥಳವೊಂದನ್ನು ಆಯ್ಕೆ ಮಾಡಿದ ನಂತರ ಆ ಸ್ಥಳದ ನಿರ್ದಿಷ್ಟ ಜಾಗವೊಂದರಲ್ಲಿ ದೇವರಿಗೆ ಪೂಜೆ ಸಲ್ಲಿಸಿ 'ಅಳ್ಳು ಶಾಸ್ತ್ರ' ಮಾಡುತ್ತಾರೆ. 'ಅಳ್ಳುಶಾಸ್ತ್ರ'ದಲ್ಲಿ ಏಳು ಹರಳು ಬೀಜ ಅಥವಾ ಚಿಕ್ಕ ಹರಳು ಕಲ್ಲುಗಳನ್ನು ಸಾಲಾಗಿ ಇಟ್ಟು ಅದರ ಮೇಲೆ ಒಂದು ಚಿಕ್ಕ ಬುಟ್ಟಿ ಮುಚ್ಚಿ ಅದನ್ನು ಕಲಸಿದ ಮಣ್ಣಿಂದ ಇರುವೆ ಸಹ ನುಗ್ಗದ ಹಾಗೆ ಮೆತ್ತಿ ರಾತ್ರಿ ಅಲ್ಲಿಯೇ ಮಲಗುತ್ತಾರೆ. ಅಲ್ಲಿ ಮಲಗಿದಾಗ ಒಳ್ಳೆಯ ಕನಸುಗಳೂ ಬೀಳಬೇಕು. ಮರುದಿನ ಬುಟ್ಟಿ ತೆಗೆದಾಗ ಹರಳು ಬೀಜ ಇಲ್ಲವೇ ಕಲ್ಲುಗಳು ಚದುರಿರಬಾರದು ಚದುರಿದರೆ ಆ ಸ್ಥಳ ಸೂಕ್ತವಲ್ಲವೆಂದು ಭಾವಿಸಿ ಮತ್ತೊಂದು ನೆಲೆಯನ್ನು ಹುಡುಕುತ್ತಾರೆ. ಪ್ರಶಸ್ತ ಸ್ಥಳವೊಂದನ್ನು ಹುಡುಕಿ ನೆಲೆ ನಿಂತ ನಂತರ ಮಳೆ ಬಂದ ಮೇಲೆ ಸುತ್ತಮುತ್ತಲ ಪ್ರದೇಶವನ್ನು ಶುದ್ಧಿಗೊಳಿಸಿ ಕಳಕೋಟ್ಲು ಬೇಸಾಯ ಮಾಡುತ್ತಾರೆ. ಹಿಂದೆ ಗಿರಿಜನರ ಸಂಖ್ಯೆ ಕಡಿಮೆ ಇದ್ದುದರಿಂದಲೂ ಹಾಗೂ ಅವರ ಅಗತ್ಯಗಳು ಕಡಿಮೆ ಇರುತ್ತಿದ್ದುದರಿಂದಲೂ ಅರಣ್ಯದ ಮೇಲೆ ಗಿರಿಜನರ ಪ್ರಭಾವ ಉಂಟಾಗುತ್ತಿರಲಿಲ್ಲ. ಅಲ್ಲದೆ ಒಂದೆಡೆ ನೆಲೆ ನಿಂತ ನಂತರ ಸಾಮಾನ್ಯವಾಗಿ ಎರಡು ಬಾರಿ ಬಿದಿರು ಹೂ ಬಿಡುವವರೆಗೆ ತಮ್ಮ ವಾಸಸ್ಥಳವನ್ನು ಬದಲಿಸುತ್ತಿರಲಿಲ್ಲ. ಬಿದಿರು ಹೂ ಬಿಡುವುದು ೬೦ ವರ್ಷಗಳಿಗೆ ಒಮ್ಮೆ ಅಂದರೆ ಇವರು ೧೨೦ ವರ್ಷಗಳ ತನಕವೂ ವಾಸಿಸುತ್ತಿದ್ದರು. ಹೀಗೆ ನಿಸರ್ಗದೊಂದಿಗಿನ ಅವರ ಸಹಜೀವನ ತುಂಬಾ ಹೊಂದಾಣಿಕೆಯಿಂದ ಕೂಡಿತ್ತು.

ಇತ್ತೀಚಿನ ದಿನಗಳಲ್ಲಿ ಅರಣ್ಯ ಕಾಯಿದೆಯ ಬಿಗಿ ನಿಲುವುಗಳು ಗಿರಿಜನರನ್ನು ಒಂದೆಡೆ ನೆಲೆಯಾಗುವಂತೆ ಮಾಡಿವೆ. ಕಳೆದ ನಾಲ್ಕೈದು ದಶಕಗಳಿಂದ ಈಚೆಗೆ ಗಿರಿಜನರಲ್ಲಿ ವಲಸೆ ಪ್ರವೃತ್ತಿ ಮರೆಯಾಗಿರುವುದು ಕಂಡು ಬಂದಿದೆ.

### ಪೋಡು

ಸೋಲಿಗರು ವಾಸಿಸುವ ಹತ್ತಾರು ಮನೆಗಳಿರುವ ಸ್ಥಳವೇ ಪೋಡು. ಇವರು ವಾಸಿಸುವ ಇಂತಹ ಪೋಡಿನ ಹೆಸರುಗಳೂ ಅನ್ವರ್ಥಕನಾಮವಾಗಿರುವುದನ್ನು ಗಮನಿಸಬಹುದು. ಪೋಡೊಂದು ಇದ್ದ ಹತ್ತಿರದ ಸ್ಥಳದಲ್ಲಿ ರಾಜರ ಆಳ್ವಿಕೆಯ ಬಂಗ್ಲೆಯೊಂದು ಇದ್ದುದರಿಂದ ಅದು ಬಂಗ್ಲೆಪೋಡು, ಕಲ್ಯಾಣಿ ಬಳಿ ಇರುವ ಪೋಡು ಕಲ್ಯಾಣಿ ಪೋಡು, ಯರಕಮರಗಳು ಹೆಚ್ಚಾಗಿರುವ ಪೋಡು ಯರಕನಗದ್ದೆಪೋಡು, ಮುತ್ತುಗದ ಮರ ಹೆಚ್ಚಾಗಿರುವ ಪೋಡು ಮುತ್ತುಗದ ಪೋಡು. ಇತ್ತೀಚಿಗೆ ಅರಣ್ಯ ಇಲಾಖೆ ಅಲ್ಲಲ್ಲಿದ್ದ ಗಿರಿಜನರನ್ನು ಒಗ್ಗೂಡಿಸಿ ಮನೆ ನಿರ್ಮಿಸಿಕೊಟ್ಟಿದೆ ಇವುಗಳೇ ಕಾಲೋನಿಗಳು. ಕಾಡಿನ ನಡುವೆ ಇರುವ ಪೋಡುಗಳು ಅದೆಷ್ಟು ಮನೋಹರವಾಗಿ, ನಾಜೂಕಾಗಿ, ನಿಸರ್ಗದೊಡನೆ ಮಿಳಿತಗೊಂಡಿರುತ್ತದೆಯೆಂದರೆ ಹೊಸಬರು ಪೋಡು ಗಮನಿಸದೆಯೇ ಮುನ್ನಡೆಯಬಹುದು. ತಮ್ಮ ವಾಸಕ್ಕೆ ಸರ್ವ ರೀತಿಯಲ್ಲೂ ಪ್ರಶಸ್ತವಾದ ಸ್ಥಳವೆಂದು ಆಯ್ಕೆ ಮಾಡಿ ನೆಲೆಸಿದ ಸ್ಥಳದಲ್ಲಿ ಸೋಲಿಗರು ಸಹಜೀವನ ನಡೆಸುತ್ತಾರೆ. ಸುಖ, ದುಃಖಗಳನ್ನು, ಸಂಭ್ರಮ, ಸೂತಕಗಳನ್ನು ಪೋಡಿನ ಜನರೆಲ್ಲರೂ ಒಟ್ಟೊಟ್ಟಿಗೆ ಅನುಭವಿಸುತ್ತಾರೆ; ಆಚರಿಸುತ್ತಾರೆ.

### ಜೋಪಡಿ ನಿರ್ಮಾಣ

ಪೋಡುಗಳಲ್ಲಿ ಸೋಲಿಗರ ವಾಸಸ್ಥಾನ ಕುಶಲ ಕಲೆಯ ಜೋಪಡಿಗಳು. ಚಿಕ್ಕದಾದ, ಚೊಕ್ಕ ಸುಂದರ ರಚನೆಗಳು, ಅದ್ಭುತ ಜೋಪಡಿ ಮಾಡುವುದರಲ್ಲಿ ಸೋಲಿಗರು ಸಿದ್ಧಹಸ್ತರು. ಆರರಿಂದ ಎಂಟು ಗಳಗಳನ್ನು ಬಳಸಿ ನಿರ್ಮಿಸುವ ಜೋಪಡಿಯೇ ಸೋಲಿಗರ ಮನೆ. ಇದು ಮಧ್ಯದಲ್ಲಿ ಆಳೆತ್ತರ ಇದ್ದರೆ ಅಕ್ಕಪಕ್ಕ ಗಿಡ್ಡ, ಸುತ್ತಲೂ ತಡಿಕೆ ಇಲ್ಲವೇ ನೇರವಾಗಿ ಜೋಡಿಸಲ್ಪಟ್ಟ ಕಡ್ಡಿಗಳೇ ಗೋಡೆಯ ಸ್ಥಾನವನ್ನು ಪಡೆದಿವೆ. ಕೆಲವೊಮ್ಮೆ ಮನೆಯ ನಡುವೆ ಅಡ್ಡಗೋಡೆ ನಿರ್ಮಿಸುವುದೂ ಉಂಟು. ಇದರಲ್ಲಿನ ಒಂದು ಭಾಗವೇ ಅಡುಗೆ ಮನೆ.

ಮೇಲ್ಭಾಗಕ್ಕೆ ಹುಲ್ಲಿನ ಛಾವಣಿ ಹೊದಿಸುತ್ತಾರೆ. ಜೋಪಡಿ ನಿರ್ಮಾಣ ಕಾರ್ಯಕ್ಕೆ ಇವರು ಗೆದ್ದಲು ತಿನ್ನದಿರುವ ಮರಗಳನ್ನೇ ಬಳಸುತ್ತಾರೆ. ಪಕ್ಕದಲ್ಲಿ ರಾತ್ರಿಯಿಡೀ ಮರದ ಕೊರಡೊಂದು ಉರಿಯುತ್ತಿರುತ್ತದೆ. ಇದು ಕಾಡು ಪ್ರಾಣಿಗಳಿಂದ ರಕ್ಷಣೆಯನ್ನು ನೀಡುತ್ತದೆ. ಜೊತೆಗೆ ಚಳಿಯನ್ನು ದೂರ ಮಾಡುತ್ತದೆ.

ರಾಗಿ, ಜೋಳ ಮುಂತಾದವುಗಳೇ ಇವರ ಪ್ರಧಾನ ಆಹಾರವಾಗಿರುವುದರಿಂದ ಧಾನ್ಯಗಳನ್ನು ತುಂಬಿಡಲು ಕಣಜ ರೂಪದಲ್ಲಿ ಗುಳಿಗಳನ್ನು ನೆಲದಲ್ಲಿ ತೋಡಿ, ಸಗಣಿ ಸಾರಿಸಿ ಇಲಿ,ಹೆಗ್ಗಣ ಮುಂತಾದವು ಬರದಂತೆ ಭದ್ರಪಡಿಸುತ್ತಾರೆ. ಇವರು ಸಾಮಾನ್ಯವಾಗಿ ಮಣ್ಣಿನಿಂದ ಮಾಡಿದ ಮಡಕೆ, ಪಾತ್ರೆಗಳು ಹಾಗೂ ಬಿದಿರಿನಿಂದ ಮಾಡಿದ ವಸ್ತುಗಳನ್ನು ಮನೆಯಲ್ಲಿ ಬಳಸುತ್ತಾರೆ. ಇತ್ತೀಚೆಗೆ ಅಲ್ಯೂಮಿನಿಯಂ, ಹಿತ್ತಾಳೆ ಹಾಗೂ ಸ್ಟೀಲ್ ವಸ್ತುಗಳು ಸೋಲಿಗರ ಮನೆಯನ್ನು ಪ್ರವೇಶಿಸಿವೆ.

## ಆಹಾರ ಪದ್ಧತಿ

ಆದಿವಾಸಿ ಜನಾಂಗದ ಜೀವನಾಧಾರವಾಗಿರುವ ಹಲವು ಪ್ರಕೃತಿದತ್ತ ಉತ್ಪನ್ನಗಳ ಬಹುಪಾಲು ಇವರ ಆಹಾರ ಪದ್ಧತಿಯಲ್ಲಿ ಸೇರಿ ಹೋಗಿವೆ. ಇವುಗಳನ್ನು ಸಂಗ್ರಹಿಸಲು ಅವರು ಕಾಡಿಗೆ ತೆರಳುತ್ತಾರೆ. ಸುಮಾರು ಏಳು ಬಗೆಯ ಗೆಣಸುಗಳು ಇವರ ಆಹಾರವಾಗಿ ಬಳಕೆಯಾಗುತ್ತವೆ. ಕಾಡಲ್ಲಿ ಸಿಗುವ ಹಣ್ಣುಗಳನ್ನು , ಬಿದಿರು, ಕಳಲೆ ಹಾಗೂ ಕಾಡುಸೊಪ್ಪುಗಳನ್ನು ಸಂಗ್ರಹಿಸಿ ತಂದು ಬೇಯಿಸಿ ತಿನ್ನುತ್ತಾರೆ. ಜೇನು ಇವರಿಗೆ ಬಹಳ ಪ್ರಿಯವಾದ ಆಹಾರ. ಜೊತೆಗೆ ಪೋಡಿನ ಸುತ್ತಮುತ್ತಲಿನ ಸಮತಟ್ಟು ಪ್ರದೇಶಗಳಲ್ಲಿ ರಾಗಿ, ಜೋಳ, ಬಾಳೆ ಮುಂತಾದವುಗಳನ್ನು ಬೆಳೆದು ಆಹಾರವನ್ನಾಗಿಸಿಕೊಳ್ಳುತ್ತಾರೆ.

## ಕಿರು ಅರಣ್ಯ ಉತ್ಪನ್ನಗಳು

ಸೋಲಿಗರು ಜೀವನೋಪಾಯಕ್ಕಾಗಿ ಹಾಗೂ ಆದಾಯದ ಮೂಲವಾಗಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹವನ್ನು ಮಾಡುತ್ತಾರೆ. ನಿಸರ್ಗದತ್ತವಾಗಿ ಸಿಗುವ ಈ ಉತ್ಪನ್ನಗಳೇ ಮೂಲನಿವಾಸಿಗಳ ಜೀವನಾಡಿ. ಅನಾದಿ ಕಾಲದಿಂದಲೂ ಗಿರಿಜನರು ಈ ನೈಸರ್ಗಿಕ ಸಂಪತ್ತನ್ನು ಬಳಸಿ ಉಳಿಸಿಕೊಂಡು ಬಂದಿದ್ದಾರೆ. ಭಾರತದ ಅರಣ್ಯ ಪ್ರದೇಶಗಳಲ್ಲಿ ವಾಸಿಸುವರೆಂದು ಅಂದಾಜಿಸಲಾಗಿರುವ ಸುಮಾರು ೪೦ ಕೋಟಿಗೂ ಹೆಚ್ಚು ಜನರಿಗೆ ಕಿರು ಅರಣ್ಯ ಉತ್ಪನ್ನಗಳೇ ಜೀವನಾಧಾರ ಉಪಕಸುಬುಗಳಿಗೆ ಮೂಲವಾಗಿವೆ.

ಭಾರತದ ಸಮೃದ್ಧ ಅರಣ್ಯ ಪ್ರದೇಶದಲ್ಲಿ ಸಿಗುವ ಬಹುತೇಕ ಅರಣ್ಯ ಸಂಪತ್ತನ್ನು ರಾಷ್ಟ್ರೀಕರಣ ಮಾಡಲಾಗಿದೆ. ಅಂದರೆ ಕಿರು ಅರಣ್ಯ ಉತ್ಪನ್ನಗಳು ಸರ್ಕಾರದ ಹತೋಟಿಯಲ್ಲಿದ್ದು, ಅದನ್ನು ಸಂಗ್ರಹಿಸಿದವರು ಸರಕಾರಕ್ಕೆ ಮಾರಾಟ ಮಾಡಬೇಕಾಗುತ್ತದೆ. ರಾಷ್ಟ್ರೀಕರಣಕ್ಕೂ ಮುಂಚೆ ಆದಿವಾಸಿಗಳು ಸಂಗ್ರಹಿಸಿದ ಕಿರು ಉತ್ಪನ್ನಗಳನ್ನು ಕೊಳ್ಳುತ್ತಿದ್ದ ಖಾಸಗಿ ಗುತ್ತಿದಾರರು ಅತ್ಯಲ್ಪ ಬೆಲೆ ನೀಡಿ ತಾವು ಲಾಭದ ಅಧಿಕ ಪಾಲನ್ನು ಜೇಬಿಗಿಳಿಸುತ್ತಿದ್ದರು. ಸೋಲಿಗರ ಅಜ್ಞಾನ, ಮುಗ್ಧತೆಗಳನ್ನು ಹೊರಗಿನ ಜನ ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಆದರೆ ಈಗ ಪರಿಸ್ಥಿತಿ ತುಂಬಾ ಸುಧಾರಿಸಿದೆ. ಗುತ್ತಿಗೆದಾರರ ಕಾಲ ಮುಗಿದು 'ಲ್ಯಾಂಪ್' ಅಂದರೆ, ದೊಡ್ಡ ಪ್ರಮಾಣದ ಗಿರಿಜನ ವಿವಿಧೋದ್ದೇಶ ಸಹಕಾರ ಸಂಘಗಳು, ಅಸ್ತಿತ್ವಕ್ಕೆ ಬಂದಿವೆ. ಇಲ್ಲಿ ಸೋಲಿಗರು ಸಂಗ್ರಹಿಸಿದ ಜೇನು, ಜೇನು ಮೇಣ, ನಲ್ಲಿಕಾಯಿ, ಸೀಗೆಕಾಯಿ, ಅಂಟುವಾಳ, ತಾರೆ, ಅರಳೆ, ಬೇಲ, ಮಾಕಳಿಬೇರು ಮುಂತಾದವುಗಳನ್ನು ಖರೀದಿಸಲಾಗುತ್ತದೆ. ಗಿರಿಜನರ ಕಿರು ಅರಣ್ಯ ಉತ್ಪನ್ನ ಸಂಸ್ಕರಣ ಸಂಘಗಳೂ ಸ್ಥಾಪನೆಗೊಂಡಿವೆ. ಸಂಸ್ಕರಣದ ಉತ್ಪನ್ನಗಳಿಗೆ ಸಿಗುವ ಅಧಿಕ ಬೆಲೆಯ ಲಾಭಾಂಶವು ಗಿರಿಜನರಿಗೆ ಸಿಗುವಂತಾಗಿದೆ. ಇದರಿಂದ ಸೋಲಿಗರ ಬದುಕೂ ಸುಧಾರಿಸುತ್ತಲಿದೆ.

ಆರಂಭದಲ್ಲಿ ಸೋಲಿಗ ಗಿರಿಜನರು ವಸ್ತು ವಿನಿಮಯ ಪದ್ಧತಿಯ ಮೂಲಕ ವ್ಯವಹರಿಸುತ್ತಿದ್ದರು. ಇದರಿಂದಾಗಿ ಮುಗ್ಧ ಗಿರಿಜನರು ಹೊರಗಿನವರಿಂದ ವಂಚಿಸಲ್ಪಡುತ್ತಿದ್ದರು. ಆದರೆ ಈಗ ಬಹುತೇಕ ಎಲ್ಲಾ ವ್ಯವಹಾರಗಳು ಹಣಕಾಸಿನಲ್ಲಿಯೇ ನಡೆಯುತ್ತಿರುವದರಿಂದ ಶೋಷಣೆ ತಪ್ಪಿದೆ. ಈಗೀಗ ತಮಗೆ ಬೇಕಾದ ವಸ್ತುಗಳನ್ನು ಖರೀದಿಸಲು ಹತ್ತಿರದ ಪಟ್ಟಣ ಪ್ರದೇಶಗಳಿಗೆ ಹೋಗಿ ಬರುತ್ತಾರೆ.

## ಸೋಲಿಗ ಕೃಷಿ ಪದ್ಧತಿ

ಬಹುತೇಕ ಎಲ್ಲಾ ಸೋಲಿಗರು ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ತಮ್ಮ ನೆಲೆಯ ಸಮತಟ್ಟು ಪ್ರದೇಶದಲ್ಲಿ ಅಲ್ಪಮಟ್ಟದಲ್ಲಿಯಾದರೂ ಕೃಷಿ ಕೆಲಸ ಮಾಡದೆ ಅವರು ಸಂತೃಪ್ತಗೊಳ್ಳುವುದಿಲ್ಲ. ವ್ಯವಸಾಯ ಮಾಡಿ ರಾಗಿ, ಜೋಳ ಬೆಳೆದು ಒಂದು ಹಬ್ಬ ಮಾಡಿ ತನ್ನವರಿಗೆ, ಇತರರಿಗೆ ಸ್ವಲ್ಪ ಧಾನ್ಯ ಕೊಡುವುದರಲ್ಲಿ ಸಾರ್ಥಕಭಾವವನ್ನು ಕಾಣುತ್ತಾರೆ. ಸೋಲಿಗರು ಕೃಷಿ ಮಾಡಿದ ಬೆಳೆಯನ್ನು ಕಾಡುಪ್ರಾಣಿಗಳಿಂದ ರಕ್ಷಿಸಲು ಹಗಲು ರಾತ್ರಿ ಎನ್ನದೆ ಕಾವಲು ಕಾಯುತ್ತಾರೆ. ಕಾಳು ಹಾಲು ಕಟ್ಟುವ ಸಮಯದಲ್ಲಿ ಹಕ್ಕಿಗಳಿಂದ ಪೈರನ್ನು ರಕ್ಷಿಸಲು ಬೆದರು ಗೊಂಬೆ ಕಟ್ಟುತ್ತಾರೆ, ಕೂಗಿ ಹಕ್ಕಿ ಓಡಿಸುವರು ಮತ್ತು ಕವಣೆಯನ್ನು ಸಹ ಬಳಸುತ್ತಾರೆ. ಇವರು ರಾಗಿ, ಜೋಳ ಮಾತ್ರವಲ್ಲದೆ ಅವರೆ, ಹುರುಳಿ, ಹರಳು, ಸಾಸಿವೆ, ತೊಗರಿ, ಮುಸುಕಿನಜೋಳ ಮುಂತಾದ ಬೆಳೆಗಳನ್ನು ಸಹ ಬೆಳೆಯುತ್ತಾರೆ. ಕಾಡುಪ್ರಾಣಿಗಳ ಹಾವಳಿ ಇಲ್ಲದ ಕೆಲವೆಡೆ ಬಾಳೆಯನ್ನು ಬೆಳೆಯುತ್ತಾರೆ. ಇತ್ತೀಚೆಗೆ ಕೆಲವು ಭಾಗಗಳಲ್ಲಿ ವಾಣಿಜ್ಯ ಬೆಳೆಯಾದ ಕಾಫಿ ಬೆಳೆಯನ್ನು ಸಹ ತೆಗೆಯುತ್ತಾರೆ. ಎಂತಹ ಕಠಿಣ ಪರಿಸ್ಥಿತಿ ಎದುರಾದಾಗಲೂ ಇವರು ಪ್ರಕೃತಿಗೆ ಮಾರಕವಾದ ಚಟುವಟಿಕೆಗಳನ್ನು ಕೈಗೊಳ್ಳುವುದಿಲ್ಲ. ಫಸಲು ಹಾಗೂ ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಬಳಕೆಯ ಬಗ್ಗೆ ಇವರಿಗೆ ಅಪಾರ ಕಾಳಜಿಯಿದೆ. ಯಾವುದೇ ಫಸಲಿನ ಇಲ್ಲವೇ ಅರಣ್ಯ ಉತ್ಪನ್ನಗಳನ್ನು ಕೊಯ್ಲು ಮಾಡುವಾಗ ಮುಂದಿನ ಸುಗ್ಗಿಗೂ ಸಿಗುವಂತೆ ಕೊಯ್ಲು ಮಾಡುತ್ತಾರೆ.

ಅನಾದಿ ಕಾಲದಿಂದಲೂ ಇವರು ಸ್ಥಳಾಂತರ(ಕುಮರಿ) ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಮಣ್ಣಿನ ಫಲವತ್ತತೆಯ ಬಗ್ಗೆ ಇವರಿಗಿರುವ ಜ್ಞಾನ ಅಸಾಧಾರಣವಾದುದು. ಇವರು ಭೂಮಿಯ ಆಳವಾದ ಉಳುಮೆ ಮಾಡುವುದಿಲ್ಲ. ಇವರು ಸಾಮಾನ್ಯವಾಗಿ ಕೃಷಿ ಮಾಡಲು ಬಳಸುವ ಉಪಕರಣಗಳೆಂದರೆ ಕಡಕೋಲು, ದಸಿ, ಹಾರೆ, ಕೂಡುಗೋಲು ಮುಂತಾದವು. ಸಮತಟ್ಟಾದ ಭೂಮಿಯಲ್ಲಿ ವ್ಯವಸಾಯ ಮಾಡುವಾಗ ಮಾತ್ರ ನೇಗಿಲನ್ನು ಬಳಸುತ್ತಾರೆ.

ತಾವು ಕೃಷಿ ಕೈಗೊಳ್ಳುವ ಅಲ್ಪಭೂಮಿಯಲ್ಲಿಯೇ ಸೋಲಿಗರು ವಿವಿಧ ರೀತಿಯ ಬೆಳೆ ತೆಗೆಯುವ ಮಿಶ್ರ ಬೇಸಾಯವನ್ನು ಅನುಸರಿಸುತ್ತಾರೆ. ಆಹಾರ ಬೆಳೆಗಳ ಜೊತೆ ಜೊತೆಗೆ ಸವತೆ, ಕುಂಬಳ, ಗೆಣಸು ಮುಂತಾದವುಗಳನ್ನು ಬೆಳೆಯುತ್ತಾರೆ. ಏಕದಳ ಹಾಗೂ ದ್ವಿದಳ ಬೆಳೆಗಳ ಸಂಯೋಜಿತ ಬೇಸಾಯ ಕ್ರಮವು ಇವರಿಗೆ ತಿಳಿದಿದೆ. ಅಲ್ಲದೆ ಮಳೆಯ ಮುನ್ಸೂಚನೆ, ಬೆಳೆಗಳಿಗೆ ಹರಡುವ ರೋಗಗಳು ಹಾಗೂ ಕೀಟ ನಿಯಂತ್ರಣದ ಅರಿವೂ ಇದೆ.

## ಸೋಲಿಗ ಉಡುಪು

ಅರಣ್ಯವಾಸಿಗಳಾದ ಸೋಲಿಗರು ತಮ್ಮ ಜೀವನ ಶೈಲಿಗೆ ಹೊಂದುವಂತಹ ಉಡುಪುಗಳನ್ನೇ ಧರಿಸುತ್ತಾರೆ. ಅಂದರೆ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಕ್ಕೆ ತೆರಳಿದಾಗ ಇಲ್ಲವೆ ಕಾಡು ಪ್ರಾಣಿಗಳ ಅನಿರೀಕ್ಷಿತ

ಧಾಳಿಯನ್ನು ಎದುರಿಸಲು ಅನುಕೂಲವಾಗುವಂತೆ ಪುರುಷರು ಮೊಣಕಾಲಿನವರೆಗೆ ತುಂಡು ಪಂಚೆಯೊಂದನ್ನು ಸುತ್ತಿಕೊಳ್ಳುತ್ತಾರೆ. ಇದಕ್ಕೆ ಸೋಲಿಗ ಭಾಷೆಯಲ್ಲಿ 'ಮುಂಡು' ಎಂದು ಕರೆಯುತ್ತಾರೆ. ದೇಹದ ಮೇಲ್ಭಾಗದಲ್ಲಿ ಹೊದ್ದುಕೊಳ್ಳಲು ಒಂದು ಬಟ್ಟೆ ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಷರ್ಟನ್ನು ಹಾಕಿಕೊಳ್ಳುತ್ತಾರೆ. ಹೆಂಗಸರು ಸೀರೆ, ರವಿಕೆ ತೊಡುತ್ತಾರೆ. ಕಾಡಿನಲ್ಲಿ ಸಂಚರಿಸುವಾಗ ಕಡು ಕೆಂಪು ಹಾಗೂ ಬಿಳಿ ಬಟ್ಟೆಯನ್ನು ಇವರು ಧರಿಸುವುದಿಲ್ಲ. ಇದು ಪ್ರಾಣಿಗಳು ಕೆರಳಿ ಮೇಲೆ ಬೀಳದಿರಲೆಂದು ಅನುಸರಿಸುವ ಮುನ್ನೆಚ್ಚರಿಕೆ. ಹಣೆಯಲ್ಲಿ ಕುಂಕುಮ, ವಿಭೂತಿಗಳನ್ನು ಧರಿಸುತ್ತಾರೆ. ಎಳೆಯ ಮಕ್ಕಳಿಗೆ ಹಾಗೂ ಯುವತಿಯರ ಕೆನ್ನೆಯ ಮೇಲೆ ದೃಷ್ಟಿ ಬೊಟ್ಟನ್ನಿಡುತ್ತಾರೆ. ಇದನ್ನು 'ಕರಳು' ಎಂದು ಕರೆಯುತ್ತಾರೆ.

ದೇವರನ್ನು ಪೂಜಿಸುವ ಹೊಣೆಹೊತ್ತ ಪೂಜಾರಿಗಳು ಉದ್ದನೆಯ ಜಟೆ ಬಿಡುವುದುಂಟು. ಹಳೆಯ ಕಾಲದ ಪುರುಷರು ಉದ್ದ ಕೂದಲು ಬಿಟ್ಟು ಹಿಂಭಾಗದಲ್ಲಿ ಗಂಟು ಹಾಕಿಕೊಳ್ಳುತ್ತಾರೆ. ಆದರೆ ನವ ಪೀಳಿಗೆಯಲ್ಲಿ ಇದು ಕಂಡು ಬರುವುದಿಲ್ಲ. ಹೆಂಗಸರಿಗೆ ಹೂವೆಂದರೆ ಬಹಳ ಇಷ್ಟ. ಕಡಗ, ಓಲೆ, ಡಾಬು, ಮೂಗುತಿ, ಮುರಿ ಮುಂತಾದ ಅಲ್ಪ ಬೆಲೆಯ ಆಭರಣಗಳನ್ನು ಧರಿಸುತ್ತಾರೆ.

## ಸೋಲಿಗರ ಆರೋಗ್ಯ ಸ್ಥಿತಿಗತಿ

ಪ್ರಕೃತಿಯ ನಡುವೆ ವಾಸಿಸುವ ಸೋಲಿಗ ಗಿರಿಜನರಲ್ಲಿ ಕಂಡು ಬರುವ ಸಣ್ಣಪುಟ್ಟ ತೊಂದರೆಗಳನ್ನು ಹೊರತುಪಡಿಸಿದರೆ ಅವರ ಆರೋಗ್ಯ ಚೆನ್ನಾಗಿದೆ ಎಂದೇ ಹೇಳಬಹುದು. ಅವರು ಬಳಸುವ ಹಸಿರು ಔಷಧಗಳು, ಚಕ್ಕೆ ಲೇಪನಗಳು ಇವರ ಆರೋಗ್ಯವನ್ನು ವೃದ್ಧಿಸಿವೆ. ಸಾಮಾನ್ಯ ಸೋಲಿಗ ಯುವಕರೂ ಸಹ ನೂರಾರು ಬಗೆಯ ಔಷಧೀಯ ಗುಣವುಳ್ಳ ಗಿಡಮೂಲಿಕೆಗಳನ್ನು ಹಾಗೂ ಅವುಗಳ ಬಳಕೆಯ ವಿಧಾನವನ್ನು ಅರಿತವರಾಗಿದ್ದಾರೆ. ವಂಶಪಾರಂಪರ್ಯವಾಗಿ ಕೆಲವರು ನಾರುಬೇರು ಔಷಧಿ ನೀಡುವ ನಾಟಿ ವೈದ್ಯರುಗಳಿದ್ದಾರೆ. ಅರಣ್ಯದ ನಡುವೆಯೇ ವಾಸಿಸುವ ಇವರಿಗೆ ಸಾಕಷ್ಟು ಗೆಡ್ಡೆ ಗೆಣಸುಗಳು, ತಿನ್ನಬಹುದಾದ ಹಸಿರು ಸೊಪ್ಪುಗಳು, ಹಣ್ಣುಗಳು ದೊರೆಯುವುದರಿಂದ ಪೌಷ್ಟಿಕಾಂಶದ ಕೊರತೆ ಬಾಧಿಸುವುದಿಲ್ಲ. ಆದರೆ ಅರಣ್ಯದ ಅಂಚಿನಲ್ಲಿ ನೆಲೆಯಾಗಿರುವ ಕೆಲವು ಗಿರಿಜನರಲ್ಲಿ ಇಂತಹ ಸಮಸ್ಯೆ ಕಂಡುಬರುವುದುಂಟು.

ಸೋಲಿಗರು ಯಾವುದೇ ರೀತಿಯ ಆರೋಗ್ಯ ಸಮಸ್ಯೆ ಎದುರಾದಾಗ ನಾರುಬೇರು ಔಷಧಿ ಬಳಸುವಂತೆಯೇ, ದೇವರನ್ನು ಕೇಳುವುದೂ ಕೂಡ ಚಾಲ್ತಿಯಲ್ಲಿದೆ. ಪೂಜಾರಿಗೆ ದೇವರು ಎಂದು ರೋಗಿಗೆ ಧೈರ್ಯ ಹೇಳಿ ವಿಭೂತಿ ಮಂತ್ರಿಸಿ ಕೊಟ್ಟಿತೆಂದರೆ ರೋಗ ಗುಣವಾಯಿತೆಂದೇ ಅರ್ಥ. ಅಷ್ಟರ ಮಟ್ಟಿಗೆ ದೇವರ ಮೇಲೆ ಅವರಿಗೆ ಅಪಾರವಾದ ಭಕ್ತಿಯಿದೆ.

ಸರ್ವೇ ಸಾಮಾನ್ಯವಾಗಿ ಸೋಲಿಗ ಗಿರಿಜನರಲ್ಲಿ ಅನುವಂಶೀಯವಾಗಿ ಕಂಡು ಬರುವ ಖಾಯಿಲೆಯೊಂದಿದೆ. ಅದುವೆ 'ಸಿಕಲ್ ಸೆಲ್ ಅನೀಮಿಯಾ'. ಈ ರೋಗದಿಂದ ಬಳಲುವವರು ರಕ್ತಹೀನತೆಗೆ ತುತ್ತಾಗುತ್ತಾರೆ. ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ದೈನಂದಿನ ಚಟುವಟಿಕೆಗಳ ಮೇಲೆ ಪರಿಣಾಮ ಉಂಟು ಮಾಡುತ್ತದೆ.

## ಸೋಲಿಗ ವಿವಾಹ

ಸೋಲಿಗ ಜನಾಂಗದಲ್ಲಿ ನಾಲ್ಕು ತರಹದ ಮದುವೆ ಪದ್ಧತಿಗಳಿದ್ದವೆಂದು ಹೇಳಲಾಗಿದೆ. ಇವುಗಳಲ್ಲಿ ಕೆಲವು ಸಂಪ್ರದಾಯಗಳು ಕಣ್ಮರೆಯಾಗಿದ್ದರೆ, ಮತ್ತೆ ಕೆಲವು ಮಾರ್ಪಾಡುಗೊಂಡಿವೆ. ಸೋಲಿಗ ಹಿರಿಯರು

ಉದಾಹರಿಸುವ ನಾಲ್ಕು ರೀತಿಯ ಮದುವೆಗಳಲ್ಲಿ ಮೊದಲನೆಯದು ಬಲವಂತ ವಿವಾಹ, ಹೆಸರೇ ಸೂಚಿಸುವಂತೆ ಇದೊಂದು ಬಲವಂತದ ಮದುವೆ. ತನಗೆ ಇಷ್ಟವಾಗುವ ಯುವತಿಯೊಬ್ಬಳನ್ನು ಯುವಕ ಬಲವಂತವಾಗಿ ಕರೆದೊಯ್ದು ಒತ್ತಾಯ ಪೂರ್ವಕವಾಗಿ ಮದುವೆ ಮಾಡಿಕೊಳ್ಳುವುದು. ಪ್ರಸ್ತುತ ಇಂತಹ ಮದುವೆಗಳು ಸೋಲಿಗರಲ್ಲಿ ನಡೆಯುತ್ತಿರುವ ಸಂಗತಿ ಬೆಳಕಿಗೆ ಬಂದಿಲ್ಲ.

ಎರಡನೆಯದು ನಿರ್ಧಾರಿತ ಅಥವಾ ನಿಷ್ಕರ್ಷಿತ ವಿವಾಹ. ಹುಡುಗ ಹುಡುಗಿಯರು ಪರಸ್ಪರ ಇಷ್ಟಪಡುವುದನ್ನು ಗಮನಿಸಿ ಇಂತಹ ಮದುವೆಗಳು ಏರ್ಪಡುತ್ತವೆ. ನಾಡ ಸಂಸ್ಕೃತಿಯಲ್ಲಿ ನಡೆಯುವಂತೆಯೇ ಇಂತಹ ಮದುವೆಗಳು ಸಡೆಯುತ್ತವಾದರೂ ವರದಕ್ಷಿಣೆ, ವಧುದಕ್ಷಿಣೆಯ ಪೆಡಂಭೂತ ಇವರಲ್ಲಿಲ್ಲ.

ಸೋಲಿಗರ ಗಿರಿಜನರಲ್ಲಿ ಕಂಡು ಬರುವ ಹೆಚ್ಚು ಸಂಖ್ಯೆ ವಿವಾಹಗಳೆಂದರೆ 'ಪ್ರೇಮ ಪರಾರಿ ವಿವಾಹಗಳು'. ಪರಸ್ಪರ ಇಷ್ಟಪಡುವ ಹುಡುಗ–ಹುಡುಗಿ ಆಗಾಗ ಭೇಟಿಯಾಗುತ್ತಾರೆ. ಹಣ್ಣು, ಜೇನು ಮುಂತಾದವುಗಳನ್ನು ಹಂಚಿಕೊಳ್ಳುತ್ತಾರೆ. ನಂತರ ನಿರ್ಧರಿಸಿದ ಒಂದು ದಿನ ಇಬ್ಬರೂ ಪೋಡಿನಿಂದ ಕಣ್ಮರೆಯಾಗುತ್ತಾರೆ. ಯಾವುದಾದರೂ ದೂರದ ಪೋಡು ಇಲ್ಲವೆ ಕಾಡಿನಲ್ಲಿ ಸ್ವಲ್ಪ ದಿನ ಕಳೆಯುತ್ತಾರೆ. ಕ್ರಮೇಣ ಇದನ್ನು ಪತ್ತೆ ಹಚ್ಚುವ ಹೆಣ್ಣು ಗಂಡಿನ ಪೋಡಿನವರು ಇಬ್ಬರನ್ನು ಕರೆತರುತ್ತಾರೆ. ನ್ಯಾಯ ಮಾಡಿ ೧೨ ರೂ ತೆರ ವಿಧಿಸಿ ಅವರಿಬ್ಬರೂ ವಿವಾಹವಾಗಿ ಸಹಜೀವನ ನಡೆಸಲು ಅನುಮತಿ ನೀಡುತ್ತಾರೆ. ನ್ಯಾಯ ತೀರ್ಮಾನವಾದ ನಂತರ ಗಂಡು–ಹೆಣ್ಣಿನ ವಿವಾಹ ನಡೆಯುತ್ತದೆ. ಅಂದು ಸೇರುವ ನೆಂಟರಿಷ್ಟರಿಗೆ ಊಟವನ್ನು ಏರ್ಪಡಿಸಲಾಗುತ್ತದೆ.

ಸೋಲಿಗರಲ್ಲಿ ಈ ಹಿಂದೆ ಚಾಲ್ತಿಯಲ್ಲಿತ್ತೆಂದು ಹೇಳಲಾದ ಮತ್ತೊಂದು ವಿಧವಾದ ಮದುವೆಯೆಂದರೆ ಹುಡುಗ ಹುಡುಗಿಯ ಮನೆಯಲ್ಲಿದ್ದುಕೊಂಡು, ಕೆಲವು ತಿಂಗಳ ಕಾಲ ಕೆಲಸ ಮಾಡಿ ತನ್ನ ನಿಷ್ಠೆ ಹಾಗೂ ಅರ್ಹತೆಯನ್ನು ಪ್ರಕಟಪಡಿಸುವುದು. ನಂತರ ಆ ಮನೆ ಮಗಳನ್ನು ಮದುವೆಯಾಗಿ ಸಾಂಸಾರಿಕ ಜೀವನ ನಡೆಸುವುದು. ಇಂತಹ ಮದುವೆಗಳೂ ಕೂಡ ಗಿರಿಜನರಲ್ಲಿ ಈಗ ಕಂಡುಬರುವುದಿಲ್ಲ.

ಗಿರಿಜನರ ವೈವಾಹಿಕ ಬದುಕು ಸಾರವತ್ತಾಗಿಯೇ ನಡೆಯುತ್ತದೆ. ಪುನರ್ವಿವಾಹ, ವಿಚ್ಛೇದನ ಮರು ಮದುವೆಗಳಿಗೆ ಇವರಲ್ಲಿ ಅವಕಾಶವಿದೆಯಾದರೂ ಅಂತಹ ಸಂದರ್ಭಗಳು ವಿರಳಾತಿ ವಿರಳ. ಏಕೆಂದರೆ ಸೋಲಿಗ ಹಿರಿಯರು ಇಂತಹ ಹಾದಿ ತಪ್ಪಿದ ದಂಪತಿಗಳನ್ನು ನ್ಯಾಯ ತೀರ್ಮಾನ ಮಾಡಿ ಮತ್ತೆ ಕೂಡಿಸುತ್ತಾರೆ. ಸೋಲಿಗರಲ್ಲಿ ವಿಧವಾ ವಿವಾಹಕ್ಕೆ ಕೂಡ ಅವಕಾಶವಿದೆ. ಪುನರ್ವಿವಾಹವಾದಾಗ ಹಿಂದಿನ ಮಕ್ಕಳನ್ನು ಗಂಡ ಹೆಂಡಿರು ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ. ಅಂತೆಯೇ ಅನಾಥ ಮಕ್ಕಳನ್ನು ಸಂಬಂಧಿಕರು ಯಾರಾದರೂ ನೋಡಿಕೊಳ್ಳುತ್ತಾರೆ. ಇದು ಸೋಲಿಗ ಗಿರಿಜನರಲ್ಲಿರುವ ಸಮುದಾಯ ಕಳಕಳಿಯನ್ನು ಸೂಚಿಸುತ್ತದೆ.

ಸೋಲಿಗರು ವಯೋವೃದ್ಧರನ್ನು ಗೌರವಾದರಗಳಿಂದ ನೋಡಿಕೊಳ್ಳುತ್ತಾರೆ. ಖಾಯಿಲೆಯಾದಾಗ ನಾರು ಬೇರು ಔಷಧಿ ನೀಡಿ ಉಪಚರಿಸುತ್ತಾರೆ. ಗೆಡ್ಡೆ, ಗೆಣಸು ಕೊಡುತ್ತಾರೆ. ಹಿರಿಯರಿಗೆ ನೋವುಂಟಾಗುವಂತೆ ಸಾಮಾನ್ಯವಾಗಿ ಯಾರೂ ನಡೆದುಕೊಳ್ಳುವುದಿಲ್ಲ.

## ವೈಜ್ಞಾನಿಕ ಹೆರಿಗೆ ಪದ್ಧತಿ

ಸೋಲಿಗ ಗಿರಿಜನರಲ್ಲಿ ಪ್ರಚಲಿತವಿರುವ ಹೆರಿಗೆ ಮಾಡಿಸುವ ವಿಧಾನವು ವಿಸ್ಮಯ ಉಂಟು ಮಾಡುವ ಸಂಗತಿಯಾಗಿದೆ. ಮಲಗಿಸಿ ಹೆರಿಗೆ ಮಾಡಿಸುವುದು ವೈದ್ಯಕೀಯ ಲೋಕದ ಪದ್ಧತಿಯಾದರೆ, ಕೂಡಿಸಿ ಹೆರಿಗೆ ಮಾಡಿಸುವುದು ಸೋಲಿಗರ ಪದ್ಧತಿ. ಇದು ಈಗ ವೈಜ್ಞಾನಿಕವಾಗಿಯೂ ಸ್ವೀಕೃತವಾಗಿರುವುದು, ಒಳ್ಳೆಯ

ಪದ್ಧತಿ ಎಂದು ಪರಿಗಣಿಸಿರುವುದು ಗಮನಾರ್ಹ. ಇಂತಹ ಪದ್ಧತಿಯನ್ನು ತಲತಲಾಂತರದಿಂದ ಸೋಲಿಗರು ಅನುಸರಿಸಿಕೊಂಡು ಬಂದಿರುವುದು ಬೆರಗುಗೊಳಿಸುವ ಸಂಗತಿಯಾಗಿದೆ. ಈ ರೀತಿಯಲ್ಲಿ ಗರ್ಭಿಣಿ ಮಹಿಳೆಯರಿಗೆ ಯಾವುದೇ ತೊಂದರೆಯಾಗದಂತೆ ಸಾವಿರಾರು ಹೆರಿಗೆಗಳನ್ನು ಮಾಡಿಸುತ್ತಿದ್ದ ಯರಕನಗದ್ದೆ ಪೋಡಿನ ಸಿದ್ದಮ್ಮ ನಾಟಿ ವೈದ್ಯೆಯಾಗಿ ತುಂಬಾ ಹೆಸರು ಗಳಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಸಂಘ ಸಂಸ್ಥೆಗಳ ಸನ್ಮಾನಕ್ಕೆ ಪಾತ್ರವಾಗಿದ್ದರು.

ಸೋಲಿಗರು ಮಕ್ಕಳ ಜನನಾ ನಂತರ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ತಾಯಂದಿರು ದೀರ್ಘ ಕಾಲದ ವರೆಗೆ ಎದೆಹಾಲು ಉಣಿಸುತ್ತಾರೆ. ಗಂಡು ಮಗು ಜನಿಸಿದರೆ ನಾಲ್ಕನೇ ದಿನ ಹೆಣ್ಣು ಮಗು ಜನಿಸಿದರೆ ಐದನೇ ದಿನ ಹೆಸರಿಡುತ್ತಾರೆ. ಜನಿಸಿದ ೧೨ನೇ ದಿನಕ್ಕೆ ಕಿವಿ ಚುಚ್ಚುವುದೂ, ಹೆಣ್ಣು ಮಗುವಾದರೆ ೭-೮ನೇ ವಯಸ್ಸಿಗೆ ಮೂಗು ಚುಚ್ಚುವ ಪದ್ಧತಿಯಿದೆ.

**ಮೈನೆರೆಯುವುದು:** ಹೆಣ್ಣು ಮಗು ಮೈನೆರೆದ ನಂತರ ಐದು ದಿನಗಳ ಕಾಲ ಅವಳಿಗಾಗಿಯೇ ದಡಸು ಮತ್ತು ಬೆಂಡೆ ಕಟ್ಟಿಗೆಗಳನ್ನು ಬಳಸಿ ಒಂದು ಗುಡಿಸಲು ನಿರ್ಮಿಸುವುದು ಇದಕ್ಕೆ 'ಗುಮ್ಮಿ' ಎಂದು ಕರೆಯುವರು. ಇಲ್ಲಿ ಮೈನೆರೆದ ಹೆಣ್ಣು ಮಗಳು ಹಿರಿಯ ಮಹಿಳೆಯರ ಮೇಲ್ವಿಚಾರಣೆ ಮತ್ತು ರಕ್ಷಣೆಯಲ್ಲಿ ಐದು ದಿನ ವಾಸಿಸುತ್ತಾಳೆ. ಐದನೇ ದಿನದ ಸ್ನಾನದ ನಂತರ ಈ ಗುಡಿಸಲನ್ನು ಸುಟ್ಟು ಹಾಕುವರು. ಹೆಣ್ಣಿಗೆ ಹೊಸ ಸೀರೆ, ಕುಪ್ಪಸ ತೊಡಿಸಿ ಮೈನೆರೆದ ಹೆಣ್ಣಿನ ತೊಡೆಯ ಮೇಲೆ ಚಿಕ್ಕ ಮಕ್ಕಳನ್ನು ಕೂಡಿಸಿ ಶಾಸ್ತ್ರ ಮಾಡುವರು. ಇಂತಹ ಶಾಸ್ತ್ರ ಮಾಡಿದರೆ ಅವಳಿಗೆ ಮಕ್ಕಳ ಫಲ ದೊರೆಯುವುದು ಎಂಬ ನಂಬಿಕೆ ಸೋಲಿಗರಲ್ಲಿ ಇದೆ. ಮುಟ್ಟಾಗುವ ವಯಸ್ಕ ಹೆಂಗಸರು ೨-೩ ದಿನ ಮನೆಯಿಂದ ಹೊರಗೆ ವಾಸಿಸುತ್ತಾರೆ. ಇದು ಸಾಮಾನ್ಯವಾಗಿ ವಾಸದ ಮನೆಯಿಂದ ಪ್ರತ್ಯೇಕವಾಗಿರುತ್ತದೆ. ೨-೩ ದಿನದ ನಂತರ ಸ್ನಾನ ಮಾಡಿದ ನಂತರವಷ್ಟೆ ತಮ್ಮ ವಾಸದ ಮನೆಗೆ ಬರುತ್ತಾರೆ. ಮುಟ್ಟಾದ ಸಮಯದಲ್ಲಿ ಹೆಂಗಸರು ಹೊಲಗದ್ದೆಗಳಿಗೆ ಕೂಡ ಹೋಗುವುದಿಲ್ಲ. ಹಾಗೇನಾದರೂ ಮಾಡಿದರೆ ಬೆಳಸು ಕಾಡು ಪ್ರಾಣಿಗಳ ಪಾಲಾಗುತ್ತದೆಂಬ ನಂಬಿಕೆ ಇವರಲ್ಲಿದೆ.

## ಸಾವು-ನಿರ್ಲಿಪ್ತ ಪ್ರತಿಕ್ರಿಯೆ

ಜನ್ಮತಾಳಿದ ಪ್ರತಿಯೊಂದು ಜೀವಿಗೂ ಅಂತ್ಯ ಸಹಜ ಎಂಬ ಭಾವ ಸೋಲಿಗರಲ್ಲಿ ಮನೆ ಮಾಡಿದೆ. ಆದುದರಿಂದಲೇ ಸೋಲಿಗರು ತಮ್ಮ ರಕ್ತಸಂಬಂಧಿಗಳನ್ನು, ಬಂಧು ಬಳಗದವರನ್ನು ಕಳೆದುಕೊಂಡಾಗ ಅತಿ ಚೀರಾಟ, ಗೋಳಾಟಗಳು ಕಂಡುಬರುವುದಿಲ್ಲ. ಶವಸಂಸ್ಕಾರ ಸ್ಥಳವು ಪೋಡಿನ ಹೊರಭಾಗದಲ್ಲಿದ್ದು ಅಲ್ಲಿಯೇ ಶವ ಸಂಸ್ಕಾರ ನಡೆಯುತ್ತದೆ. ಶವವನ್ನು ಹೂಳುವ ಪದ್ಧತಿ ಆಚರಣೆಯಲ್ಲಿದೆ. ಶವ ಸಂಸ್ಕಾರ ಸಮಯದಲ್ಲಿ ಎಲ್ಲ ಕುಲದ ಸೋಲಿಗರೂ ಹಾಜರಿರುತ್ತಾರೆ. ಶವಕ್ಕೆ ಸ್ನಾನ ಮಾಡಿಸಿ ಶುಭ್ರವಸ್ತ್ರಗಳನ್ನು ಹಾಕಿ ಕಾಡು ಹೂಗಳಿಂದ ಅಲಂಕರಿಸುತ್ತಾರೆ. ಹಳ್ಳ ತೋಡಿ ಒಳಗಡೆ ಒಂದು ಕಡೆ ಟೊಳ್ಳು ಮಾಡಿ ಅದರಲ್ಲಿ ಶರೀರವನ್ನು ಇಳಿಸಿ ದಕ್ಷಿಣಕ್ಕೆ ತಲೆ ಮಾಡಿ ಹೂಳುತ್ತಾರೆ. ಹಳ್ಳದಲ್ಲಿ ಸತ್ತ ವ್ಯಕ್ತಿ ಬಳಸುತ್ತಿದ್ದ ಮಚ್ಚು, ಕುಡುಗೋಲು, ಬಟ್ಟೆಗಳು, ಬೀಡಿ, ಬೆಂಕಿಪೊಟ್ಟಣ ಮುಂತಾದವುಗಳನ್ನು ಇಟ್ಟು ಮಣ್ಣಿನಿಂದ ಮುಚ್ಚುತ್ತಾರೆ. ನಂತರ 'ಮಮಟಿಶಾಸ್ತ್ರ' ಅಂದರೆ ಬೆನ್ನ ಹಿಂದಿನಿಂದ ಸನಿಕೆ ಕೊಡುವ ಶಾಸ್ತ್ರವನ್ನು ಮಾಡುತ್ತಾರೆ. ಈ ಶವಸಂಸ್ಕಾರ ವಿಧಿಗೆ ತಮ್ಮ ಸುತ್ತಮುತ್ತಲು ಸಿಗುವ ವಸ್ತುಗಳನ್ನು ಬಳಸುವುದರಿಂದ ಆರ್ಥಿಕವಾಗಿ ಹೊರೆಯಾಗಿರುವುದಿಲ್ಲ. ಶವ ಸಂಸ್ಕಾರದ ನಂತರ ನೆರೆದ ಎಲ್ಲರಿಗೂ ಹುಣಿಸೆ ಹುಳಿ ರಸ ಹಂಚುತ್ತಾರೆ. ಹುಳಿ ದುಃಖವನ್ನು ಕಡಿಮೆ ಮಾಡುವುದೆಂಬ ನಂಬಿಕೆಯೇ ಇದಕ್ಕೆ ಕಾರಣ. ಶವಸಂಸ್ಕಾರ ಮಾಡಿದ ಮೂರು ದಿನಗಳ ನಂತರ ಆ ಸ್ಥಳದಲ್ಲಿ ರಾಗಿಮುದ್ದೆ,

ಕುಡಿಯುವ ನೀರು ಇಟ್ಟು ಬುಟ್ಟಿ ಮುಚ್ಚಿ ಸಗಣಿ ಸಾರಿಸುತ್ತಾರೆ, ಮರುದಿನ ಅದನ್ನು ತೆಗೆದು ನೋಡಿದಾಗ ಅದು ಚೆಲ್ಲಾಪಿಲ್ಲಿಯಾಗಿ ಕೆಡದಿದ್ದರೆ, ನೀರು ಕಡಿಮೆಯಾಗದಿದ್ದರೆ ಸರಿ, ಹಾಗೇನಾದರೂ ಆಗಿದ್ದರೆ ಆ ಮೃತ ಜೀವ ದೆವ್ವವಾಗಿದೆ ಎಂದು ನಂಬುತ್ತಾರೆ. ಆಗ ದೇವರನ್ನು ಕೇಳಿ ಪೂಜೆ ಇಲ್ಲವೇ ಬಲಿ ಕೊಡುತ್ತಾರೆ.

ಮೃತ ವ್ಯಕ್ತಿಯು ಕಾಡು ಪ್ರಾಣಿಗಳ ದಾಳಿಗೆ ತುತ್ತಾಗಿ ಸತ್ತಿದ್ದರೆ 'ರಾವು ಕಟ್ಟುವ' ಪದ್ಧತಿ ರೂಢಿಯಲ್ಲಿದೆ. ಆನೆ ಇಲ್ಲವೆ ಹುಲಿಯ ದಾಳಿಯಿಂದ ಮೃತಪಟ್ಟರೆ ಆ ಪ್ರಾಣಿಯ ಮಣ್ಣಿನಗೊಂಬೆ ಮಾಡಿ, ಆ ವ್ಯಕ್ತಿ ಬಲಿಯಾದ ಸ್ಥಳದಲ್ಲಿ ಜಜ್ಜಿ ಕೋಳಿ ಬಲಿ ಕೊಡುತ್ತಾರೆ. ಮರದಿಂದ ಬಿದ್ದು ಮರಣ ಹೊಂದಿದಾಗಲೂ ಇದೇ ರೀತಿ ಶಾಂತಿ ಮಾಡುತ್ತಾರೆ. ಇದು ಸೋಲಿಗರು ಮೃತನ ಆತ್ಮಕ್ಕೆ ಶಾಂತಿ ಮಾಡುವ ವಿಧಾನ.

## ವಿಭಕ್ತ ಕುಟುಂಬ; ಸಹಬಾಳ್ವೆ

ಇದು ಪರಸ್ಪರ ವೈರುಧ್ಯವೆನಿಸಿದರೂ ಸೋಲಿಗರಲ್ಲಿ ವಿಭಕ್ತ ಕುಟುಂಬವಿದ್ದಾಗ್ಯೂ ನಿಕಟ ಸಮುದಾಯ ಜೀವನವನ್ನು ನಡೆಸುತ್ತಾರೆ. ಸಾಮಾನ್ಯವಾಗಿ ಮದುವೆಯಾದ ನಂತರ ಗಂಡು ತನ್ನ ಪತ್ನಿಯೊಂದಿಗೆ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸುತ್ತಾನೆ. ಮದುವೆಯ ಮುಂಚೆ ತಾಯಿ ತಂದೆಯರೊಂದಿಗೆ ವಾಸಿಸುವ ಮಕ್ಕಳು ಮದುವೆಯ ನಂತರ ಪ್ರತ್ಯೇಕ ಗುಡಿಸಲು ಕಟ್ಟಿಕೊಂಡು ವಾಸಿಸಲಾರಂಭಿಸುತ್ತಾರೆ. ಆದರೆ ತಾಯ್ತಂದೆಯರೊಡನೆ ಅವರ ಬಾಂಧವ್ಯ ಕಡಿಮೆಯಾಗುವುದಿಲ್ಲ. ಸೋಲಿಗ ಮಹಿಳೆಯರು ನಾಡವರಿಗಿಂತ ಹೆಚ್ಚು ಸ್ವತಂತ್ರವಾಗಿದ್ದಾರೆಂದೇ ಹೇಳಬಹುದು. ಸೋಲಿಗರು ತಮ್ಮದೇ ಸ್ವಂತ ಕುಲದವರೊಡನೆ ಕೊಳು ಕೊಡುಗೆ ನಡೆಸುವುದಿಲ್ಲ. ಸೋಲಿಗ ಸಮುದಾಯದ ಆಸೆ, ಆಕಾಂಕ್ಷೆಗಳು, ಬಯಕೆಗಳು ಅತ್ಯಲ್ಪವಾಗಿರುವುದರಿಂದ ಸಂತೃಪ್ತ ಜೀವನ ನಡೆಸುತ್ತಾರೆ. ಇವರು ಸರಳ ಜೀವಿಗಳೂ, ಪ್ರಾಮಾಣಿಕರೂ, ಶಾಂತಿಪ್ರಿಯರೂ ಆಗಿದ್ದಾರೆ.

## ಕುಲಪದ್ಧತಿ

ಬಿಳಿಗಿರಿರಂಗನಬೆಟ್ಟದ ಸೋಲಿಗರಲ್ಲಿ ಐದು ಕುಲದ ಸೋಲಿಗರು ಕಾಣಸಿಗುತ್ತಾರೆ. ಇಲ್ಲಿರುವ ಐದು ಕುಲಗಳೆಂದರೆ ಸಳಕರು ಕುಲ, ತೆನೆಯರ ಕುಲ, ಸೂರರ ಕುಲ, ಬೆಳ್ಳರ ಕುಲ, ಹಾಲರ ಕುಲ. ಕೆಲವರು 'ಬಳೆಯರ ಕುಲ' ಎಂಬ ಆರನೇ ಕುಲವನ್ನು ಹೆಸರಿಸುವುದಾದರೂ ಅವರು ಈ ಭಾಗದಲ್ಲಿ ಇಲ್ಲ. ಅಲ್ಲದೆ ತಮಿಳುನಾಡಿನ ಗದ್ದೆಸಾಲು ಮುಂತಾದ ಪೋಡುಗಳಲ್ಲಿ ಏಳು ಕುಲದ ಸೋಲಿಗರು ಇದ್ದಾರೆ. ಬಿಳಿಗಿರಿರಂಗನಬೆಟ್ಟದ ಐದು ಕುಲದ ಸೋಲಿಗರಿಗೂ ಅವರದೇ ಆದ ಸಾಮುದಾಯಿಕ ಜವಾಬ್ದಾರಿಗಳನ್ನು ಅವುಗಳನ್ನು ನಿಷ್ಠೆಯಿಂದ ನೆರವೇರಿಸುತ್ತಾರೆ. ಆಯಾ ಕುಲದವರು ಆಯ್ಕೆ ಮಾಡುವ ಪ್ರತಿನಿಧಿಗಳು ನ್ಯಾಯ ಕಾರ್ಯ, ಪೂಜಾಕಾರ್ಯ, ರಂಗಸ್ವಾಮಿಗೆ ಬಿಟ್ಟಿ ಸೇವೆ ಸಲ್ಲಿಸುವುದು, ಪಲ್ಲಕ್ಕಿ ಹೊರುವುದು ಮುಂತಾದ ಗೌರವಯುತ ಕಾರ್ಯಗಳನ್ನು ಮಾಡುತ್ತಾರೆ.

ಸಳಕರ ಕುಲದವರು ಯಜಮಾನಿಕೆಯ ಜವಾಬ್ದಾರಿಯನ್ನು ನಿರ್ವಹಿಸುವವರಾಗಿದ್ದು, ನ್ಯಾಯ ತೀರ್ಮಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ತೀರ್ಮಾನಗಳನ್ನು ನೀಡುತ್ತಾರೆ. ಸೋಲಿಗಿತ್ತಮ್ಮ ಪುಸುಮಾಲೆಯ ಮುದ್ರೆಯುಂಗುರಕ್ಕೆ ಹಕ್ಕುದಾರರಾಗಿರುತ್ತಾರೆ.

ತೆನೆಯರ ಕುಲದವರು 'ಪಟ್ಟೆಗಾರ' ಜವಾಬ್ದಾರಿ ಹೊತ್ತಿರುತ್ತಾರೆ. ಇವರು ಪುಸುಮಾಲೆ ಕುಲದವರು ಎಂದು ಹೆಸರಾಗಿದ್ದಾರೆ. ನ್ಯಾಯಕ್ಕೆ ದಿನ ಗೊತ್ತುಪಡಿಸುವುದು ಹಾಗೂ ಪೋಡುಗಳಲ್ಲಿ ಆಶೀರ್ವಾದ ಹೇಳುವ ಕಾರ್ಯವನ್ನು ಇವರು ನೆರವೇರಿಸುತ್ತಾರೆ. ಸೂರರ ಕುಲದವರು 'ಚಲುವಾದಿ' ಹೊಣೆಯನ್ನು ನಿರ್ವಹಿಸುತ್ತಾರೆ. ಇವರು ಯಜಮಾನನ ಎಲ್ಲಾ ಕಾರ್ಯಗಳ ನಿರ್ವಹಣೆಯಲ್ಲಿ ಸಹಾಯಕರಾಗಿರುತ್ತಾರೆ.

ಬೆಳ್ಳರ ಕುಲದ ಕೋಲುಕಾರನು ಶಿಸ್ತು, ಸಂಯಮ ಕಾಪಾಡುವ ಕೆಲಸ ನಿರ್ವಹಿಸುತ್ತಾನೆ. ನ್ಯಾಯ ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತಾನೆ. ಹಾಲರ ಕುಲದ 'ದಳವಾದಿ'ಯು ಕೋಲುಕಾರರಂತೆಯೇ ಇನ್ನಿತರ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾನೆ.

ಹೀಗೆ ಐದೂ ಕುಲದ ಹಿರಿಯರು ತಮ್ಮದೇ ಆದ ಜವಾಬ್ಧಾರಿಗಳನ್ನು ಹೊಂದಿದವರಾಗಿರುತ್ತಾರೆ. ಈ ಕುಲಗಳ ಮುಖಂಡರೆಲ್ಲರೂ ಪುರುಷರೇ ಆದರೂ ಸೋಲಿಗರಲ್ಲಿ ಮಹಿಳೆಗೆ ಸ್ವಾತಂತ್ರವಿದೆ; ಗೌರವವಿದೆ. ಇಲ್ಲಿ ಕಂಡುಬರುವ ಐದು ಕುಲಗಳ ಜೊತೆ ತಮಿಳುನಾಡಿನ ಕೆಲವೆಡೆ ಕುಂಬಳು ಕುಲ ಹಾಗೂ ಜೇನು ಕುಲ ಎಂಬ ಮತ್ತೆರಡು ಕುಲಗಳಿವೆ.

ಯಜಮಾನಿಕೆಯ ಹೊಣೆ ಹೊತ್ತ ಸಳಕರ ಕುಲದ ಪ್ರತಿನಿಧಿಯು ಸೋಲಿಗಿತ್ತಮ್ಮನ ಮುದ್ರೆಯುಂಗುರದ ಹಕ್ಕುದಾರನಾಗಿದ್ದು 'ಬಂಗಾರು ಮೊಹರು' ಎಂದು ಪ್ರಸಿದ್ಧಿ ಪಡೆದಿದೆ. ಬಿಳಿಗಿರಿರಂಗಸ್ವಾಮಿಯು ಸೋಲಿಗರ ಸುಂದರಿ ಪು(ಕು)ಸುಮಾಲೆಯನ್ನು ಮದುವೆಯಾದ್ದರಿಂದ ಅವರಿಗೆ ರಂಗನು, ದೇವರಲ್ಲ, ಭಾವ. ಅಂತಹ ಆತ್ಮೀಯತೆಯೊಂದಿಗೆ ಸೋಲಿಗರು ರಂಗಸ್ವಾಮಿಯನ್ನು ಆರಾಧಿಸುತ್ತಾರೆ. ರಂಗನು ಪುಸುಮಾಲೆಗೆ ನೀಡಿದ ಉಂಗುರ ಮುದ್ರೆಯುಂಗುರವಾಗಿ ಸಳಕರ ಕುಲದ ಪ್ರತಿನಿಧಿಯ ಬಳಿ ಇರುತ್ತದೆ. ಸಳಕರ ಕುಲದ ಯಜಮಾನನ ಆಯ್ಕೆಯು ತೆಪ್ಪದ ಸಮಯದಲ್ಲಿ ಬಿಳಿಗಿರಿರಂಗಸ್ವಾಮಿ ದೇವಸ್ಥಾನದ ಅರ್ಚಕರ ಸಹಾಯದೊಂದಿಗೆ ನಡೆಯುತ್ತದೆ. ಸಳಕರ ಕುಲದ, ಎಲ್ಲರೂ ಗೌರವಿಸಲ್ಪಡುವ ೪-೫ ಜನರ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಬಿಳಿಗಿರಿರಂಗಸ್ವಾಮಿ ಪಾದದ ಬಳಿ ಇಟ್ಟು ಒಂದನ್ನು ಆಯ್ಕೆ ಮಾಡುತ್ತಾರೆ. ಅಲ್ಲಿ ಹೆಸರು ಬರುವ ಹಿರಿಯರು ಯಜಮಾನರಾಗಿ ಮುಂದಿನ ನಾಲ್ಕೈದು ವರ್ಷಗಳ ಕಾಲ ಸಮುದಾಯದ ಕಾರ್ಯವನ್ನು ನಿರ್ವಹಿಸುತ್ತಾರೆ. ಆಯ್ಕೆಯಾದ ಸಮಯದಲ್ಲಿಯೇ ಅವರಿಗೆ ಬೆಳ್ಳಿಯ ಉಂಗುರವೊಂದನ್ನು ಮರದ ಪೆಟ್ಟಿಗೆಯೊಂದರಲ್ಲಿಟ್ಟು ನೀಡಲಾಗುತ್ತದೆ. ನ್ಯಾಯ ತೀರ್ಮಾನ ಸಂದರ್ಭಗಳಲ್ಲಿ ಇನ್ನಿತರ ಪ್ರಮುಖ ಕಾರ್ಯ ನಿರ್ವಹಿಸುವಾಗ ಯಜಮಾನನು ಇದಕ್ಕೆ ಪೂಜೆ ಸಲ್ಲಿಸುತ್ತಾರೆ.

## ಸೋಲಿಗ ನ್ಯಾಯ ಪದ್ಧತಿ

ಅತ್ಯಂತ ಸರಳ ಪಾರದರ್ಶಕ ಮತ್ತು ನಿಷ್ಪಕ್ಷಪಾತವಾಗಿ ನ್ಯಾಯ ಪಡೆಯಬಹುದಾದ ಪದ್ಧತಿಯೊಂದನ್ನು ಸೋಲಿಗರು ಅನಾದಿಕಾಲದಿಂದಲೂ ನಿಷ್ಠೆಯಿಂದ ಸ್ವತಃ ರೂಪಿಸಿಕೊಂಡು ಅಳವಡಿಸಿಕೊಂಡು ಬಂದಿದ್ದಾರೆ ಹಿಂದಿನಿಂದಲೂ ಅಜ್ಞಾತವಾಗಿಯೇ ಇದ್ದು ಬದುಕು ಸಾಗಿಸುತ್ತಿರುವ ಸೋಲಿಗರಲ್ಲಿ ಇಂತಹದೊಂದು ಸೃಜನಶೀಲ ಪದ್ದತಿ ರೂಪುಗೊಂಡಿರುವುದೇ ಆಶ್ಚರ್ಯಕರ ಸಂಗತಿ. ಇಂದಿಗೂ ಸೋಲಿಗ ನ್ಯಾಯ ಪದ್ಧತಿಯಲ್ಲಿ ಇದು ಜೀವಂತವಾಗಿರುವುದು ಹೆಮ್ಮೆಯ ವಿಷಯವಾಗಿದೆ. ಆಧುನಿಕ ನ್ಯಾಯ ಪದ್ಧತಿಯಲ್ಲಿರುವ ಯಾವ ಕ್ಲಿಷ್ಟತೆಯೂ

ಇಲ್ಲಿಲ್ಲ. ಎಲ್ಲವೂ ಹಿರಿಯರೂ ಹಾಗೂ ಪೋಡಿನ ಜನರ ನಡುವೆಯೇ ಬೇಗ ನಿರ್ಣಯವಾಗಿ ಬಿಡುತ್ತದೆ. ಅದನ್ನು ಎಲ್ಲರೂ ಗೌರವಿಸುತ್ತಾರೆ ಮುಕ್ತ ಮನಸ್ಸಿನಿಂದ ಅನುಸರಿಸುತ್ತಾರೆ. ಸ್ವಲ್ಪವೇ ಸಮಯದಲ್ಲಿ ಪೈಸೆಯ ಖರ್ಚು ಆಗದೆ ಇಲ್ಲಿ ನೊಂದವರಿಗೆ ನ್ಯಾಯ ಸಿಗುತ್ತದೆ. ಸ್ವಲ್ಪ ವಿಷಮ ಸಮಸ್ಯೆಗಳಿದ್ದಾಗ ಮಾತ್ರ ನ್ಯಾಯ ತೀರ್ಮಾನಕ್ಕೆ ೩–೪ ದಿನ ಹಿಡಿಯಬಹುದು. ಉಳಿದಂತೆ ಅದೇ ದಿನ ನ್ಯಾಯ ತೀರ್ಮಾನವಾಗುತ್ತದೆ.

ನ್ಯಾಯ ತೀರ್ಮಾನಗೊಳ್ಳುವ ಪಂಚಾಯತಿ ಕಟ್ಟೆಯಲ್ಲಿ ಅಂದರೆ ದೇವಸ್ಥಾನದ ಜಗುಲಿ, ಮಂಟಪ ಇತ್ಯಾದಿ ಸ್ಥಳದಲ್ಲಿ ಎಲ್ಲ ಸೋಲಿಗ ಮುಖ್ಯಸ್ಥರುಗಳು ಮುಖ್ಯವಾಗಿ ಐದು ಕುಲದಿಂದ ಆಯ್ಕೆಯಾದ ಪ್ರತಿನಿಧಿಗಳಾದ ಯಜಮಾನ, ಪಟ್ಟೆಗಾರ, ಚೆಲುವಾದಿ, ಕೋಲುಕಾರ ಮತ್ತು ದಳವಾದಿ, ಪೋಡಿನ ಇತರೆ ಗಂಡಸು ಹೆಂಗಸರು ಎಲ್ಲರೂ ಸೇರುತ್ತಾರೆ ಸಂಪ್ರದಾಯದಂತೆ ಕೋಲುಕಾರರಾದವರು ಮುದ್ರೆಯುಂಗುರದ ಮೊಹರು ಪೆಟ್ಟಿಗೆಯನ್ನು ತರುತ್ತಾರೆ. ಭಕ್ತಿಯಿಂದ ಆ ಪೆಟ್ಟಿಗೆಗೆ ಪೂಜಿಸಿ ಅದರ ಸಮ್ಮುಖದಲ್ಲಿಯೇ ನ್ಯಾಯ ತೀರ್ಮಾನದ ಕಲಾಪಗಳನ್ನು ನಡೆಸುತ್ತಾರೆ. ಬೆಳ್ಳರ ಕುಲದವರು ನ್ಯಾಯ ಕಲಾಪದ ಪ್ರಾರಂಭದಲ್ಲಿ ಐದು ಕುಲಕ್ಕೆ ವೀಳ್ಯ ಹಂಚಿ ಧಾರೆ ಎರೆಯುತ್ತಾರೆ. ನಂತರ ಯಜಮಾನ ಕಂಬಳಿ ಗದ್ದುಗೆ ಹಾಸುತ್ತಾನೆ.

ಸಾಮಾನ್ಯವಾಗಿ ಕೌಟುಂಬಿಕ ಸಮಸ್ಯೆಗಳು, ಬೈಗುಳ, ವಂಚನೆ ಹೊಡೆದಾಟದ ಪ್ರಕರಣಗಳು ನ್ಯಾಯದ ಕಟ್ಟೆಗೆ ಬರುತ್ತವೆ. ಆ ಸಮಸ್ಯೆ ಒಂದು ಪೋಡಿನದಾದರೆ ಅಲ್ಲಿನ ಜನ ಸೇರುತ್ತಾರೆ. ಹಲವು ಪೋಡುಗಳಿಗೆ ಸಂಬಂಧಿಸಿದ ಸಮಸ್ಯೆಯಾದರೆ ಎಲ್ಲಾ ಪೋಡುಗಳ ಮುಖಂಡರೂ ಹಾಗೂ ಜನರು ಭಾಗವಹಿಸುತ್ತಾರೆ. ದೂರು ಕೊಡುವವರು ಕೋಲುಕಾರನಿಗೆ ಕೊಡಬೇಕು. ಅವರು ಅದನ್ನು ಚಲುವಾದಿಗೆ, ಚಲುವಾದಿ ಯಜಮಾನರಿಗೆ ಹೇಳಿ, ಎಲ್ಲಾ ಜನರು ಭಾಗವಹಿಸಲು ಸಾಧ್ಯವಾಗುವಂತಹ ಅನುಕೂಲಕರ ದಿನವನ್ನು ನ್ಯಾಯ ತೀರ್ಮಾನಕ್ಕಾಗಿ ನಿಗದಿಮಾಡುತ್ತಾರೆ. ಕೋಲುಕಾರನು ತಮಟೆಯೊಂದಿಗೆ ಪೋಡಿನ ಎಲ್ಲಾ ಬೀದಿಗಳಲ್ಲಿ ಸಂಚರಿಸಿ ವಿಚಾರಣಾ ದಿನವನ್ನು ಸಾರುತ್ತಾನೆ. ಕೆಲವೊಮ್ಮೆ ಇದು ಮೌಖಿಕವಾಗಿ ಮನೆಗಳಿಗೆ ವಿಷಯ ಮುಟ್ಟಿಸುವ ಮೂಲಕ ನಡೆಯುತ್ತದೆ. ದೂರುದಾರ, ಆರೋಪ ಹೊತ್ತ ವ್ಯಕ್ತಿ ಹಾಗೂ ಸಾಕ್ಷಿಗಳನ್ನು ಶಿಸ್ತು ಜಾರಿಮಾಡುವ ಹೊಣೆಹೊತ್ತ ಕೋಲುಕಾರನು ಹಾಜರು ಪಡಿಸುತ್ತಾನೆ. ಕೋಲುಕಾರನ ಎದುರು ಯಾರೂ ಆಲಸ್ಯ, ಅನಾದರ ತೋರುವಂತಿಲ್ಲ. ಹಾಗೇನಾದರೂ ಮಾಡಿದರೆ ಅದು ಮತ್ತೊಂದು ಅಪರಾಧವಾಗುತ್ತದೆ. ಯಜಮಾನನು ಒಂದು ಚಾಪೆ ಹಾಸಿ ಐದು ಕುಲದ ಪ್ರತಿನಿಧಿಗಳಿಗೂ ವೀಳ್ಯದ ಎಲೆ ಹಂಚುತ್ತಾನೆ. ಯಜಮಾನ ಮತ್ತು ಪ್ರತಿನಿಧಿಗಳು ಪೆಟ್ಟಿಗೆಯ ಮುಂದೆ ಕುಳಿತುಕೊಂಡ ನಂತರ ವಿಚಾರಣೆ ಪ್ರಾರಂಭವಾಗುತ್ತದೆ ಇದಕ್ಕೆ 'ದೇವಸಭೆ' ಎನ್ನುತ್ತಾರೆ. ಕೆಲವೊಮ್ಮೆ ನೊಂದವರು ವಂಚನೆಗೆ ಒಳಗಾದವರು ದೂರು ನೀಡಲು ಮುಂದೆ ಬರದಿದ್ದಾಗ ಅವರ ಕಡೆಯವರು ನ್ಯಾಯದ ಕಟ್ಟೆಗೆ ದೂರನ್ನು ತರಬಹುದಾಗಿದೆ.

ದೇವಸಭೆಯ ನ್ಯಾಯ ತಿರ್ಮಾನವು ಕೂಲಂಕಷ ವಿಚಾರಣೆಯೊಂದಿಗೆ ನಡೆಯುತ್ತದೆ. ಸಾಕ್ಷ್ಯಾಧಾರಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಹಲವು ವರ್ಷಗಳ ಸಮುದಾಯದ ಅನುಭವದ ಬುದ್ಧಿವಂತಿಕೆ ಹಾಗೂ ಹೃದಯವಂತಿಕೆಯು ನ್ಯಾಯ ತೀರ್ಮಾನದಲ್ಲಿ ಸ್ವಲ್ಪ ಮೃದು ಧೋರಣೆ ತಾಳಲಾಗುತ್ತದೆ. ದೂರಿಗೆ ಸಂಬಂಧಿಸಿದಂತೆ ಮಾತನಾಡುವವರೆಲ್ಲರೂ ತಮ್ಮ ಪಾದರಕ್ಷೆಗಳನ್ನು ದೂರದಲ್ಲಿಯೇ ಬಿಟ್ಟು ಬರಬೇಕು. ನಯವಿನಯದಿಂದ ಇರಬೇಕು ಅವಾಚ್ಯ ಶಬ್ಧಗಳನ್ನು ಬಳಸುವಂತಿಲ್ಲ ಎಲ್ಲ ವಿಚಾರಗಳ ಪರಿಶೀಲನೆಯ ನಂತರವೇ ನ್ಯಾಯ ತೀರ್ಮಾನ ಪ್ರಕಟಗೊಳ್ಳುತ್ತದೆ ತಪ್ಪಿತಸ್ಥರಿಗೆ ದಂಡ ಹಾಕುವುದು ರೂಢಿಯಲ್ಲಿದೆ. ದಂಡವು

ಪ್ರಾರಂಭಿಕವಾಗಿ ೧೦೦೧ ರೂ.ಗಳು ಇದ್ದರೂ ತಪ್ಪಿತಸ್ಥನ ವಿನಂತಿಯ ಮೇರೆಗೆ ಅದು ೧೦೦ ಇಲ್ಲವೇ ೫೦ ರೂ.ಗಳಿಗೆ ಇಳಿಯುವುದು ಉಂಟು. ಎರಡೂ ಪಕ್ಷಗಳಲ್ಲಿ ಒಬ್ಬರಿಗೊಬ್ಬರಿಗೆ ಇರುವ ಅಂತರವನ್ನು ಕಡಿಮೆ ಮಾಡಿ ನೀವು 'ಒಮ್ಮ ಸೋಮ್ಮಾಗಿರಿ' (ಒಂದಾಗಿ ಇರಿ) ಎಂಬ ನುಡಿಯನ್ನು ಹೇಳುತ್ತಾರೆ.

ಹಿಂದಿನ ಕಾಲದಲ್ಲಿ ತಪ್ಪಿತಸ್ಥರಿಗೆ ಕಠೋರ ಶಿಕ್ಷೆಗಳನ್ನು ವಿಧಿಸುತ್ತಿದ್ದರು. ಸೊಂಟಕ್ಕೆ ನಾರು ಕಟ್ಟಿ ನೇತುಹಾಕಿ ಹೊಡೆಯುವುದು ಮೈಗೆ ಜೇನುಬಳಿದು ಇರುವೆ ಗೂಡಿನ ಮೇಲೆ ಕೂರಿಸುವುದು ಕಾದ ಕಬ್ಬಿಣದ ತುಂಡನ್ನು ಕೈಯಲ್ಲಿ ಹಿಡಿಸುವುದು ಮುಂತಾದ ಶಿಕ್ಷೆಗಳು ಇದ್ದವೆಂದು ಹೇಳುತ್ತಾರೆ.

ಇಂತಹ ಕ್ರೂರ ಶಿಕ್ಷೆಗಳು ಈಗ ಇವರಲ್ಲಿ ಕಂಡು ಬರುವುದಿಲ್ಲ ಇವರು ವಿಧಿಸುತ್ತಿದ್ದ ಮತ್ತೊಂದು ಶಿಕ್ಷೆಯೆಂದರೆ 'ಜಾತಿ'ಯಿಂದ ಹೊರಹಾಕುವುದು ಇಂತಹ ತಪ್ಪಿತಸ್ಥರಿಗೆ ಹಿಂದೆ 'ಕೈಲಿ ಕಕ್ಕೆ ಸೊಪ್ಪು ಕೊಟ್ಟು ದನಿದ ಮೂಳೆಸರ' ಹಾಕುತ್ತಿದ್ದರಂತೆ. 'ಇವರು ಜನಕ್ಕಿಲ್ಲ, ಜಾತಿಗಿಲ್ಲ, ಕುಲಕ್ಕಿಲ್ಲ ಕುಟಕ್ಕಿಲ್ಲ ಇವರ ಹತ್ತಿರ ಬೆಂಕಿ, ಬಿಸಿನೀರು ಎತ್ತಬೇಡಿ' ಎಂದು ಕಟ್ಟಪ್ಪಣೆ ಮಾಡುತ್ತಿದ್ದರು. ಈಗೀಗ ಬೇರೆ ಜಾತಿಯವರೊಡನೆ ವಿವಾಹವಾಗುವುದನ್ನು ಉದಾರತೆಯಿಂದ ಸ್ವೀಕರಿಸುತ್ತಾರೆ. ತಪ್ಪಿತಸ್ಥರಿಂದ ಸಂಗ್ರಹವಾಗುವ ದಂಡದ ದುಡ್ಡಿನಲ್ಲಿ ಒಮ್ಮೊಮ್ಮೆ ತಾಯಿ ಕುಸುಮಾಲೆಗೆ ಪೂಜೆ ಮಾಡಿಸಿ ಕೋಳಿ ಮಾಂಸದ ಊಟದ ಸಹ ಭೋಜನ ಮಾಡಿ ಸಂಭ್ರಮಿಸುತ್ತಾರೆ. ನ್ಯಾಯ ತೀರ್ಮಾನಗಳು ಪ್ರಕಟಗೊಂಡ ನಂತರ ಪರಸ್ಪರರ ವೈಮನಸ್ಸನ್ನು ತೊಡೆದುಹಾಕಲು ಒಬ್ಬರಿಗೊಬ್ಬರು ವೀಳ್ಯಕೊಡಿಸಿ ಮನಸ್ತಾಪವನ್ನು ದೂರ ಮಾಡುತ್ತಾರೆ. ಹೀಗೆ ನಿರಾಳವಾಗಿ ಒಂದಾಗುವುದು ಅದರ ಹಿಂದಿರುವ ಕಾಳಜಿ, ಆಕಾಂಕ್ಷೆಗಳು ಮೆಚ್ಚಬೇಕಾದ ಸಂಗತಿಗಳು.

## ಪ್ರಾಯಶ್ಚಿತ್ತ

ಅಂತರ್ಜಾತಿ ವಿವಾಹವಾಗಿ ಹೊರಹೋದವರು, ಕುಲಬಿಟ್ಟು ಹೋದವರು, ಯಾರಿಂದಲಾದರೂ ಪಾದರಕ್ಷೆ ಏಟು ತಿಂದವರು ನ್ಯಾಯ ತೀರ್ಮಾನದ ಅಡಿಯಲ್ಲಿ ಪ್ರಾಯಶ್ಚಿತ್ತ ಮಾಡಿಕೊಂಡು ಮತ್ತೆ ಸಮುದಾಯಕ್ಕೆ ಸೇರಬಹುದು.

ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಂದರ್ಭದಲ್ಲಿ ಆ ವ್ಯಕ್ತಿಯು ನುಣ್ಣಗೆ ತಲೆ ಬೋಳಿಸಿಕೊಂಡು ಹಳ್ಳದಲ್ಲಿ ಮಿಂದು ಏಳು ಬಣ್ಣದ ಏಳು ತೆರೆಗಳನ್ನು ದಾಟಬೇಕು. ಪ್ರಾಯಶ್ಚಿತ್ತ ಮಾಡಿಕೊಳ್ಳುವ ವ್ಯಕ್ತಿ ವಿವಾಹಿತನಾಗಿದ್ದರೆ ಗಂಡ ಹೆಂಡತಿ ಇಬ್ಬರೂ ಬುರುಡೆ ಮಾಡಿಸಿಕೊಂಡು ವಿಧಿ ವಿಧಾನಗಳನ್ನು ಪೂರೈಸಬೇಕು. ಏಳು ತೆರೆ ದಾಟಿಸುವ ಕೆಲಸವನ್ನು ಕೋಲುಕಾರ, ಚಲುವಾದಿ ಮಾಡುತ್ತಾರೆ. ಸೋಲಿಗರು ಆರಾಧಿಸುವ ಜಡೇಸ್ವಾಮಿ, ಕೇತೇದೇವರು, ಕಡುವಿನ ಬಸಪ್ಪ, ಸಿದ್ದಪ್ಪ, ಹಾಲು ಕೇತಪ್ಪ, ಸೊಪ್ಪಿತಾಳಿ ಬಸಪ್ಪ ಹೊಂಗ ತೊಕ್ಕಿನ ದೇವರು ರಂಗಪ್ಪ ಹೀಗೆ ಏಳು ದೇವಸ್ಥಾನಗಳಲ್ಲಿ ತೆರೆ ಹಾರಿಸುವ ಕ್ರಿಯೆಯನ್ನು ಮಾಡುತ್ತಿದ್ದರು. ಆದರೆ ಈಗ ಒಂದೆಡೆಯೇ ಎಲ್ಲಾ ದೇವರುಗಳ ಹೆಸರನ್ನು ಹೇಳಿ ಮಾಡುತ್ತಾರೆ. ಪ್ರತಿಬಾರಿ ತೆರೆ ಹಾರಿಸುವಾಗಲೂ ಒಂದೊಂದಾಗಿ ತೊಪ್ಪೆ ಸಗಣಿ ನೀರು, ತುಳಸಿ ನೀರು, ನಾಮದ ನೀರು, ಅರಿಶಿನ ನೀರು, ಕುಂಕುಮ ನೀರು, ಮುಂತಾದ ಏಳು ಬಣ್ಣದ ನೀರು ಹಾಕಿಸಿಕೊಳ್ಳಬೇಕು. ಪ್ರತಿಬಾರಿ ತೆರೆ ಹಾಕಿಸಿದ ನಂತರವೂ ತೀರ್ಥ ನೀಡಿ 'ಕಾಟಕರ್ಮ' ಕಳೆಯಿತು ಎಂದು ಹೇಳುತ್ತಾರೆ. ಆಗ ಪ್ರಾಯಶ್ಚಿತ್ತ ಮಾಡಿಕೊಳ್ಳುವ ವ್ಯಕ್ತಿಯ ಮನಸ್ಸು ಹಗುರವಾಗಿ ನಿರಾಳವಾಗುತ್ತದೆ. ನಂತರ ಎಲ್ಲರೂ ಕುಳಿತು ಸಹ ಭೋಜನ ಮಾಡಿ, ಮಂಗಳ ಹೇಳಿ ಸಭೆ ಮುಗಿಸುತ್ತಾರೆ.

ಅತ್ಯಂತ ಜಾಗರೂಕತೆಯಿಂದ, ಜಾಣ್ಮೆಯಿಂದ ರೂಪಿಸಿ, ತಮಗೆ ತಾವೇ ಅದರ ನಿಯಂತ್ರಣಕ್ಕೆ ಒಳಪಟ್ಟು ನೆಮ್ಮದಿಯ ಬದುಕು ಸಾಗಿಸುತ್ತಿರುವ ಸೋಲಿಗರ ನ್ಯಾಯ ಪದ್ಧತಿ ವೈಶಿಷ್ಟ್ಯಪೂರ್ಣವಾದುದು. ಹೊರ ಪ್ರಪಂಚದ ಸೆಳೆತ ಹಾಗೂ ಪ್ರಭಾವಗಳು ಇಂತಹ ಕಟ್ಟುಪಾಡುಗಳನ್ನು ನಶಿಸಿ ಹೋಗದಂತೆ ಮಾಡಿದರೆ ಎಲ್ಲರಿಗೂ ಮಾದರಿಯಾಗಬಲ್ಲ ಮೌಲ್ಯಗಳು ಇದರಲ್ಲಿ ಅಡಕವಾಗಿದೆ ಎಂದು ಹೇಳಬಹುದು.

## ಸೋಲಿಗರ ದೈವ ಭಕ್ತಿ

ದಟ್ಟ ಅರಣ್ಯಗಳ ನಡುವೆಯೇ ಪ್ರಕೃತಿಯ ಶಿಶುಗಳಾಗಿ ಬದುಕುವ ಸೋಲಿಗರು ಪ್ರಕೃತಿ ಆರಾಧಕರು. ಕಾಡಿನ ಮಧ್ಯೆಯೇ ದೇವರ ತಾಣಗಳಿವೆ. ಜಡೇಸ್ವಾಮಿ ಕೇತೇದೇವರು, ಕಡುವಿನ ಬಸಪ್ಪ, ಮಹದೇಶ್ವರ, ದೊಡ್ಡಸಂಪಿಗೆದೇವರು, ಮಲಕರ್ಮ ಮುಂತಾದ ಅನೇಕ ದೇವರುಗಳನ್ನು ಅವರು ಪೂಜಿಸುತ್ತಾರೆ. ಕಾಡಿನ ಒಂದೊಂದು ಭಾಗದಲ್ಲಿಯೇ ಅಲ್ಲಿನ ದೇವರಿರುವನೆಂದು ನಂಬಿರುವ ಸೋಲಿಗರು ಅಲ್ಲಿಗೆ ಪ್ರವೇಶಿಸುವಾಗ ಮನದಲ್ಲಿ ನಮಿಸಿಯೇ ಮುಂದುವರಿಯುತ್ತಾರೆ. ದಟ್ಟ ಕಾಡಿನ ನಡುವೆ ಇರುವ ದೊಡ್ಡಸಂಪಿಗೆ ಒಂದು ಪುಣ್ಯಕ್ಷೇತ್ರ. ಇದು ಬಿಳಿಗಿರಿರಂಗನಬೆಟ್ಟದಿಂದ ಸುಮಾರು ೧೪ ಕಿ.ಮೀ. ದೂರದಲ್ಲಿದೆ. ಸುಮಾರು ೨೦೦೦ ವರ್ಷಗಳಷ್ಟು ಹಳೆಯದು ಎಂದು ಹೇಳಲಾಗುವ ಬೃಹದಾಕಾರದ ಸಂಪಿಗೆ ಮರವೊಂದು ಇಲ್ಲಿದೆ. ಪ್ರತಿ ಶುಕ್ರವಾರ ಹಾಗೂ ಸೋಮವಾರ ಇಲ್ಲಿ ಪೂಜೆ ನಡೆಯುತ್ತದೆ. ಇಲ್ಲಿ ಲಿಂಗಾಕಾರದ ನೂರಾರು ವಿಗ್ರಹಗಳಿವೆ. ಎಲ್ಲವನ್ನು ಸೇರಿಸಿ ದೊಡ್ಡ ಸಂಪಿಗೆ ದೇವರು ಎಂದು ಕರೆಯಲಾಗುತ್ತದೆ.

ಸೋಲಿಗರು ಮತ್ತು ಬಿಳಿಗಿರಿರಂಗಸ್ವಾಮಿ ನಡುವಿನ ಬಾಂಧವ್ಯವನ್ನು ನಾವು ಸ್ಮರಿಸಲೇಬೇಕು ರಂಗನು ಸೋಲಿಗರ ಬದುಕಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದ್ದಾನೆ. 'ರಂಗಭಾವಾ' ಎಂದೇ ಸೋಲಿಗರು ರಂಗನಾಥನನ್ನು ಸಂಬೋಧಿಸುತ್ತಾರೆ. ಸೋಲಿಗ ಬೊಮ್ಮಯ್ಯನ ಮಗಳಾದ ಪುಸುಮಾಲೆ ರಂಗನಿಗೆ ಪ್ರೇಯಸಿಯಷ್ಟೇ ಅಲ್ಲ ಮಡದಿಯೂ ಹೌದು. ಆದುದರಿಂದಲೇ ಸೋಲಿಗರು ಮತ್ತು ಬಿಳಿಗಿರಿರಂಗನಾಥಸ್ವಾಮಿಯ ಬಾಂಧತ್ವ ತುಂಬಾ ನಿಕಟವಾದುದು ಮತ್ತು ಮಧುರವಾದುದು.

ಪೂಜಾ ಕಾರ್ಯಗಳನ್ನು ನೆರವೇರಿಸುವ ಸೋಲಿಗರ ಮೈಮೇಲೆ ದೇವರು ಬರುವುದು ಸಾಮಾನ್ಯ ಸಂಗತಿ. ದೇವರು ಮೈಮೇಲೆ ಬಂದಾಗ ದೈವ ಆವಾಹನೆಯಾದ ವ್ಯಕ್ತಿ ನಡುಗಲು ಆರಂಭಿಸುತ್ತಾನೆ. ದೇವರ ಕತ್ತಿ ಅಥವಾ ಗಂಡುಕೊಡಲಿ ಎಂದು ಕರೆಯಲ್ಪಡುವ ಸಾಧನದಿಂದ ಮೈಗೆ ಹೊಡೆದುಕೊಳ್ಳುವನು. ಮುಳ್ಳುಪಾದುಕೆ ಧರಿಸಿ ನಡೆಯುತ್ತಾ ತನ್ನ ದೈವತ್ವ ತೋರ್ಪಡಿಸುವನು. ಆಗ ನೆರೆದ ಜನರಲ್ಲಿ ಸಮಸ್ಯೆಯಿರುವವರು ಅಡ್ಡಬಿದ್ದು ತಮ್ಮ ಅಳಲನ್ನು ತೋಡಿಕೊಳ್ಳುವರು. ಸಮಸ್ಯೆಯನ್ನು ಆಲಿಸಿ ಸೂಕ್ತ ಶಾಂತಿ, ಪರಿಹಾರ ಇಲ್ಲವೇ ವಿಮೋಚನೆಯನ್ನು ಸೂಚಿಸುವರು.

## ಸೋಲಿಗರಲ್ಲಿ ದೆವ್ವ–ಭೂತದ ಕಲ್ಪನೆ

ಸೋಲಿಗರು ದೆವ್ವ, ಪಿಶಾಚಿ, ಭೂತಗಳನ್ನು ಬಹಳವಾಗಿ ನಂಬುತ್ತಾರೆ. ಇವುಗಳನ್ನು ನಿಯಂತ್ರಿಸಲು ಹಲವು ಆಚರಣೆಗಳನ್ನು ರೂಢಿಸಿಕೊಂಡಿದ್ದಾರೆ. 'ವೀರು' ಎಂದು ಕರೆಯುವ ಶಕ್ತಿಶಾಲಿ ದೆವ್ವವೊಂದಿದೆ ಎಂದು ಇವರು ನಂಬಿದ್ದಾರೆ. ಬೆಟ್ಟ ಮತ್ತು ಮರಗಳಲ್ಲಿ ಮುನಿ ದೆವ್ವವಾದ ಮುನೀಶ್ವರ ವಾಸಿಸುತ್ತಾನೆ ಎನ್ನುತ್ತಾರೆ. ತಾವು ನಡೆದಾಡುವ ಅಲ್ಲಲ್ಲಿ ಹಾಗೂ ಹಬ್ಬ ಹರಿದಿನಗಳಲ್ಲಿ ಉತ್ಸವಾದಿಗಳು ನಡೆಯುವ ಸಂದರ್ಭದಲ್ಲಿ ದೆವ್ವಗಳು

ಅಡ್ಡ ಹಾಕುತ್ತವೆ. ಆಗ ಅವುಗಳಿಗೆ ಇಡಿಗಾಯಿ ಹೊಡೆದು ಮುನ್ನಡೆಯುವ ಪದ್ಧತಿ ಆಚರಣೆಯಲ್ಲಿದೆ ಕೆರೆ, ಕೊಳಗಳಲ್ಲಿ ನೀರು ದೆವ್ವ ಇದೆ ಎಂದು ನಂಬಿರುವ ಸೋಲಿಗರು ಪಿಶಾಚಿಗಳನ್ನು ಶಾಂತ ಪಡಿಸಲು ಹಬ್ಬ ಹರಿದಿನಗಳಂದು ಸ್ವಲ್ಪ ಆಹಾರವನ್ನು ಹೊರಗಡೆ ಚೆಲ್ಲುತ್ತಾರೆ. ಮನುಷ್ಯರು ಸತ್ತನಂತರ ಕಲ್ಲುಗೊಂಬೆಯನ್ನು ಕಲ್ಲುಗುಡಿಗೆ ನೀಡುವುದರಿಂದ ಅವರು ದೆವ್ವವಾಗಿ ಕಾಟ ಕೊಡುವುದಿಲ್ಲ ಎಂಬುದಾಗಿ ನಂಬುತ್ತಾರೆ.

## ಸೋಲಿಗರ ಹಬ್ಬಗಳು

ಸೋಲಿಗರು ಆಚರಿಸುವ ಹಬ್ಬಗಳು, ಅವರಾಚರಿಸುವ ಪೂಜಾ ವಿಧಾನಗಳು ದೇವರು ಬರುವುದು ಸಾಮೂಹಿಕ ಭೋಜನ ರಾತ್ರಿಯಿಡೀ ಭಾವಪರವಶರಾಗಿ ಕುಣಿತ ಮಾಡುವುದು ಅವರಾಡುವ ಹಾಡುಕೆಗಳು ನೋಡುಗರ ಹಾಗೂ ಕೇಳುಗರ ಕಣ್ಮನವನ್ನು ತಣಿಸುತ್ತವೆ. ಇವರಾಚರಿಸುವ ಹಬ್ಬಗಳಲ್ಲಿ ರೊಟ್ಟಿಹಬ್ಬ ಮತ್ತು ಹೊಸರಾಗಿ ಹಬ್ಬಗಳು ಪ್ರಮುಖವಾದವುಗಳು. ಹಬ್ಬ ಆಚರಿಸಲು ಸೂಕ್ತವಾದ ಹಾಗೂ ಬಹುಜನರು ಸೇರಬಹುದಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಪವಿತ್ರ ಭಾವನೆಗಳೊಂದಿಗೆ ರೊಟ್ಟಿಯನ್ನು ಸಿದ್ಧಪಡಿಸುತ್ತಾರೆ. ಮುತ್ತುಗದ ಎಲೆಗಳ ಮಧ್ಯೆ ರೊಟ್ಟಿಯನ್ನು ತಟ್ಟಿ ಕೊಂಡದಲ್ಲಿ (ಬೆಂಕಿ) ಸುಡುವರು ಇದಕ್ಕೆ ಸಿಹಿಗುಂಬಳ ಪಲ್ಯವನ್ನು ಮಾಡುವರು ಎಲ್ಲ ಪೋಡುಗಳ ಜನ ಒಂದೆಡೆ ಕಲೆತು, ತಮ್ಮ ಪೋಡುಗಳಿಂದ ಹೊತ್ತು ತಂದ ದೇವರುಗಳನ್ನು ಪೂಜಿಸಿ ಭಕ್ತಿ ಭಾವದಿಂದ ಕೊಂಡ ಹಾಯುವರು ನಂತರ ಪೂಜೆ ನಡೆದು, ರೊಟ್ಟಿಯ ಜೊತೆ ಪಲ್ಯ ಊಟವನ್ನು ಬಡಿಸುವರು ತದನಂತರ ಯುವಕರು, ವಯಸ್ಕರು ಎಲ್ಲರೂ ಒಗ್ಗೂಡಿ ಭಕ್ತಿ ಪರವಶರಾಗಿ ರಾತ್ರಿಯಿಡೀ ಗೊರುಕನ ಮುಂತಾದ ಸಾಂಪ್ರದಾಯಕ ಕುಣಿತಗಳನ್ನು ಮಾಡುವರು ಬೆಳಿಗ್ಗೆ ಮತ್ತೊಮ್ಮೆ ದೇವರನ್ನು ಪೂಜಿಸಿ ಹಬ್ಬದ ಉಪಸಂಹಾರ ಮಾಡುವರು.

ಸುಗ್ಗಿ ಸಮಯದಲ್ಲಿ ಹೊಸದಾಗಿ ಕೊಯ್ಲು ಮಾಡಿದ ನಂತರ ಹೊಸರಾಗಿ ಹಬ್ಬದ ಆಚರಣೆಗಳು ಆರಂಭಗೊಳ್ಳುವುದು ಈ ಹಬ್ಬವು ಸಾಮಾನ್ಯವಾಗಿ ಆಯಾ ಕುಲಗಳ ಸಂಬಂಧಿತ ಕುಟುಂಬಗಳ ನಡುವೆ ಆಚರಣೆಯಾಗುತ್ತದೆ. ಊಟಕ್ಕೆ ರಾಗಿಯಿಂದ ತಯಾರಿಸಿದ ಮುದ್ದೆ, ಹಲಸಿನಕಾಯಿ ಹುಳಿ, ಪಾಯಸ ಇತ್ಯಾದಿ ಮಾಡುವರು ಸಾಂಪ್ರದಾಯಿಕ ಹಾಡು ಕುಣಿತಗಳು ಇದ್ದೇ ಇರುತ್ತದೆ.

ಇತ್ತೀಚಿಗೆ ನಾಡ ಕಡೆಯ ಪ್ರಭಾವದಿಂದಾಗಿ ಯುಗಾದಿ, ಗೌರಿ, ದೀಪಾವಳಿ ಶಿವರಾತ್ರಿ ಹಬ್ಬಗಳ ಆಚರಣೆಯೂ ರೂಢಿಯಾಗಿದೆ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಸೋಲಿಗರ ಭಾವನಾದ ಬಿಳಿಗಿರಿರಂಗನಾಥಸ್ವಾಮಿಯ ಜಾತ್ರೆಯೂ ನಡೆಯುವುದರಿಂದ ಸಡಗರ ಸಂಭ್ರಮಗಳು ಮನೆಮಾಡುತ್ತವೆ. ಮನೆಯ ಮುಂಭಾಗಗಳು ಕಾಡು ಹೂಗಳಿಂದ ಅಲಂಕರಿಸಿದ ರಂಗೋಲಿಗಳಿಂದ ಕಂಗೊಳಿಸುತ್ತದೆ. ಸೋಲಿಗ ಯುವ ತಂಡಗಳು 'ಜೋಗಿ' ಸಮೇತ ಕುಣಿತ ಮಾಡುತ್ತಾ ಮನೆ ಮನೆಗೆ ಹೋಗಿ ಕಾಣಿಕೆ ಸ್ವೀಕರಿಸುತ್ತಾರೆ. ಬಿಳಿಗಿರಿರಂಗನಬೆಟ್ಟದಲ್ಲಿ ನಡೆಯುವ ಚಿಕ್ಕಜಾತ್ರೆ ಮತ್ತು ದೊಡ್ಡ ಜಾತ್ರೆಗಳಲ್ಲಿ, ತೇರುಕಟ್ಟುವುದು, ಉತ್ಸವಮೂರ್ತಿ ಹೊರುವುದು ಮುಂತಾದ ದೇವತಾ ಕಾರ್ಯಗಳನ್ನು ವಿನಮ್ರವಾಗಿ ಉಚಿತವಾಗಿ ಅತ್ಯಂತ ಶ್ರದ್ದೆಯಿಂದ ಮಾಡುತ್ತಾರೆ.

## ಸೋಲಿಗ ಜಾನಪದ

ಸಾಹಿತ್ಯದ ನೈಜ ಬೇರು ಅಡಗಿರುವುದೇ ಜನಪದ ಸಾಹಿತ್ಯದಲ್ಲಿ ಎಂಬುದು ಸರ್ವವಿದಿತ. ಎಲ್ಲ ಭಾಷೆ, ಜನಾಂಗದವರೂ ತಮ್ಮದೇ ಆದ ಜಾನಪದ ಸಮೃದ್ಧ ಸಾಹಿತ್ಯವನ್ನು ಹೊಂದಿದ್ದಾರೆ ಅಂತೆಯೇ ಸೋಲಿಗರು ಕೂಡ ಪ್ರಕೃತಿಯೊಡನೆ ವನ್ಯಜೀವಿಗಳೊಳಗಿನ ಸೋಲಿಗರ ಸಾಮರಸ್ಯ ಬದುಕು ಅವರ ಜಾನಪದದಲ್ಲಿ

ಹಾಸುಹೊಕ್ಕಾಗಿ ಅಭಿವ್ಯಕ್ತಗೊಂಡಿದೆ. ಎಲ್ಲ ಸಂಸ್ಕೃತಿಗಳಿಗೂ ಮೂಲ ವನಸಂಸ್ಕೃತಿಯೇ ಎಂಬುದನ್ನು ನಾವು ಮನಗಾಣಬೇಕು. ಸೋಲಿಗರು ತಮ್ಮ ದುಃಖ ದುಮ್ಮಾನಗಳನ್ನು ಸಂತೋಷ ಸಂಭ್ರಮಗಳನ್ನು ಕಥೆಗಳಾಗಿ ಹೆಣೆದು ಗೀತೆಗಳಾಗಿ ಹಾಡಿದ್ದಾರೆ ಇವರ ಗೋರುಕಾನ, ಓಲೆಗ, ಅಡುಕೆ ಮತ್ತು ಇನ್ನಿತರ ಗೀತೆಗಳಲ್ಲಿ ಇದು ಹೊರಹೊಮ್ಮಿದೆ. ಹಿರಿಯ ಸೋಲುಗರು ಗೋರುಕಾನ ಎಂದರೆ ಜೇಡ ಎಂಬುದಾಗಿ ಬಣ್ಣಿಸಿದರೆ ಮತ್ತೆ ಕೆಲವರು ಅದು ಸೋಲಿಗರು ತಮ್ಮ ಗುರುವಿಗೆ ಸಲ್ಲಿಸುವ ಪ್ರಕೃತಿಗೆ ಕೃತಜ್ಞತೆ ಹೇಳಿ ನಮಿಸುವುದು ಎಂದು ವ್ಯಾಖ್ಯಾನಿಸುತ್ತಾರೆ ಏನೇ ಆದರೂ ಸೋಲಿಗರ ಬದುಕಂತೂ ಜೇಡನ ಸುಂದರ ಕಲಾತ್ಮಕ ಬಲೆಯಂತೆಯೇ ರೂಪುಗೊಂಡಿದೆ ಎನ್ನಬಹುದು.

ಇವರು ದೇವರನ್ನು ಬಣ್ಣಿಸಿ ಕರೆಯುವ ಪದಗಳೇ 'ಓಲಗ' ಎಂದು ಹೆಸರು ಪಡೆದಿವೆ. ಓಲಗವು ಪ್ರಾಸದಿಂದ ಕೂಡಿದ್ದು ಲಯಬದ್ಧವಾಗಿ ಹೆಜ್ಜೆ ಹಾಕುವಂತೆ ಹಾಡಲ್ಪಡುತ್ತವೆ. ದೇವರ ಪ್ರಶಂಸೆಗಳ ನಿರೂಪಣೆಯಿರುವ ಹಾಡುಗಳೇ 'ಹಾಡುಕೆ'. ಪ್ರಾಣಿಗಳನ್ನು ಸಹ ಹಾಡುಕೆಗಳಲ್ಲಿ ವರ್ಣಿಸುವುದಿದೆ. ದೇವರ ಪವಾಡಗಳನ್ನು ವರ್ಣಿಸುತ್ತಾ, ಉದ್ಘೋಷಿಸುವುದೇ 'ಕಗ್ಗ'. ಪ್ರತಿ ಕಗ್ಗದ ಕೊನೆಗೂ 'ಓ' ಎಂದು ಆಲಾಪಿಸುತ್ತಾರೆ. ಇದೊಂದು ಜಯಘೋಷ.

ಪ್ರಕೃತಿಯ ರಮಣೀಯತೆಯನ್ನು ಕಾವ್ಯಾತ್ಮಕವಾಗಿ ವರ್ಣಿಸಿರುವ ಇವರ ಹಾಡೊಂದರ ತುಣುಕು ಹೀಗಿದೆ.

"ಸೇಬಿನ ಕೊಬೆ ಸೇಬಿನೊವ್ವೆ
ಹನುಕು ಮಳೆಕ ಜಲ್ಲೆಂದೊಲ
ಬೆಟ್ಟ ಸುಳಿಯ ಹೂವದೆಲೊ"

(ಸೇಬಿನ ಕೊಂಬೆಯ ಸೇಬಿನ ಹೂವು ಹನಿ ಮಳೆಗೆ ಜೆಲ್ಲೆನ್ನುತ್ತಾ ಇದೆ ಬೆಟ್ಟಗಳಲ್ಲೆಲ್ಲಾ ಸಂಚರಿಸುತ್ತಿದ್ದರೆ ಅರಿಶಿನ ಬಣ್ಣದ ಬೆಟ್ಟ ಸುಳಿಯ ಹೂವು ಅಲ್ಲೆಲ್ಲಾ ಕಂಗೊಳಿಸುತ್ತದೆ.

ಪ್ರಕೃತಿ ದೈವದತ್ತವಾಗಿ ನೀಡಿರುವ ನೈಸರ್ಗಿಕ ಸಂಪತ್ತನ್ನು ಅವಶ್ಯವಿರುವಷ್ಟನ್ನು ಮಾತ್ರ ಬಳಸಿಕೊಂಡು ತೃಪ್ತ ಬದುಕು ಸಾಗಿಸುತ್ತಿರುವ ಸೋಲಿಗ ಮಗ್ಧ ಜನರು ದೇವರಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟಿದ್ದಾರೆ ಆಡಂಬರದ ಪೂಜೆ ಡಾಂಭಿಕ ವರ್ತನೆಗಳಿಗೆ ದೇವರು ಒಲಿಯನೆಂಬುದನ್ನು ಇವರು ಹೀಗೆ ಹಾಡಿದ್ದಾರೆ.

"ಆಲಿದರೆ ಬಾರನೋ
ಕೂಗಿದರೆ ಬಾರನೋ
ಬೇಡಿ ಬಿನ್ನ ಮಾಡಿದರೆ
ಈಗಾಗಲೆ ಬರಾನೋ । "

ದೇವರು ಅರಚಾಡಿದರೆ ಬರುವುದಿಲ್ಲ ಕೂಗಾಡಿದರೂ ಸಹ ಬರುವುದಿಲ್ಲ ಆದರೆ ನಮ್ರತೆಯಿಂದ ವಿನಂತಿಸಿ ಪ್ರಾರ್ಥನೆ ಮಾಡಿದರೆ ತಕ್ಷಣವೇ ಬಂದು ಬಿಡುತ್ತಾನೆ.

ಸೋಲಿಗ ಸಂಸ್ಕೃತಿಯಲ್ಲಿ ಗಂಡು ಹೆಣ್ಣು ಪ್ರೇಮಿಸುವ ಮದುವೆಯಾಗುವ ರೀತಿ ಅತಿ ವಿಶಿಷ್ಟವಾದುದು ಇವರ ಪ್ರೇಮವು ಹೃದಯಾಂತರಾಳದ ಉತ್ಕಟ ಭಾವನೆ ಹದಿವಯಸ್ಸಿನ ಹುಡುಗ ಹುಡುಗಿಯರೇ ಪರಸ್ಪರ ಇಷ್ಟಪಟ್ಟು ಕಾಡಿಗೆ ಹೋಗಿ, ಹಣ್ಣು ಜೇನನ್ನು ಹಂಚಿಕೊಂಡು ಸಾಂಸಾರಿಕ ಬದುಕಿಗೆ ಮುನ್ನುಡಿ ಬರುಯುತ್ತಾರೆ.

ಒಮ್ಮೆ ಅವಳು ನೀರಿಗೆ ಬಮದಾಗ ಅವನು ಕಾಡಿಗೆಂದು ಬಂದು ಪರಾರಿಯಾಗುವ ಪರಿಯ ಶೃಂಗಾರ ರಸ ಗೀತೆಯಿದು.

ಕಣ್ಣನೋಡಿ ಕಪ್ಪ ತನ್ನೆ
ಬೆನ್ನನೋಡಿ ರೊಯಿಕೆ ತನ್ನೆ
ನಿನ್ನ ನೋಡಿ ನನು ಬಂದೆಣ್ಣೆ ॥
ಚಂದುಳ್ಳಿ ಚೆಲುವೆ
ನಿನ್ನನೋಡಿ ನಾನು ಬಂದೆಣ್ಣೆ ॥
ಸೌದೆಗೆಂತ ನೀನು ಬಾರೋ
ಸೊಪ್ಪಿಗೆಂತ ನಾನು ಬಾರುವೆ
ದಾರಿತಪ್ಪಿ ಮಾತನಾಡೋಣ ।
ಚೆಂದುಳ್ಳಿ ಚೆಲುವ
ದಾರಿತಪ್ಪಿ ಮತನಾಡೋಣ ॥

ಪ್ರಕೃತಿಯ ಬಗ್ಗೆ ಕಾವ್ಯಮಯ ವರ್ಣನೆಯಿರುವ ಮತ್ತೊಂದು ಗೀತೆಯಿದು ಸರಳ ಆಡುನುಡಿಯನ್ನೆ ಮುತ್ತಿನಂತೆ ಪೋಣಿಸಿ ಅವರು ಹಾಡುವ ಪರಿಗೆ ಎಲ್ಲರೂ ತಲೆದೂಗಬೇಕು ಹಬ್ಬ ಹರಿದಿನಗಳಲ್ಲಿ ಇಂತಹ ಹಾಡುಗಳನ್ನು ನೇಸರು ಮೂಡುವವರೆಗೂ ಹಾಡುತ್ತಾ ಕುಣಿಯುತ್ತಾರೆ.

'ಹೂವಿನ ಕೊಂಬು ಮುರಿಯಾಗಿಲ್ಲೆ
ಮೊಗ್ಗಿನ ಕೊಂಬು ಬಡಾಗಿಲ್ಲೆ
ಮೊಗ್ಗು ಮೊಗುರೆಲ್ಲಾ ನಿನ್ನದಯ್ಯೋ
ಕಣ್ಣಿಟ್ಟು ನೋಡುನು ದೇವಾರೆ ॥
ಹಾಗೆವೇ ನೆನೆದು ನೋಡಿದಲೆ
ಜೀವನ ಬೆಂಡು ಆದದೆಲ್ಲೋ
ಕಾರೆಲೆ ಹಾಗೆ ಕರಗಿದಡೆ
ಬೆಂಡೆಲೆ ಹಾಗೆ ಬೆಂದದೆಲ ॥
ಗೋರು ಗೋಕುಕೂ ಗೋರುಕಾನಾ
ಇನ್ನಿಂತ ವರ್ಷ ಬಾರನಯ್ಯೋ
ಕಾಪಿಟ್ಟು ಮಡುಗುನು ದೇವರಯ್ಯ
ಗೋರುಗೋರೂಕೂ ಗೋರುಕಾನಾ ॥

"ಹೂವಿನ ಕೊಂಬಿನಂತಹ ಚಿಕ್ಕ ಮಕ್ಕಳನ್ನು ನಾಶಗೊಳಿಸಲು ಬರದು ಕಿಶೋರರನ್ನೂ ಬಡಿಸತಕ್ಕದ್ದಲ್ಲ. ಚಿಕ್ಕವರು ದೊಡ್ಡವರು ಎಲ್ಲರೂ ನಿನ್ನವರೆ ! ನಮ್ಮನ್ನು ಕಣ್ಣಿಟ್ಟು ಕಾಪಾಡು ಅನುಗ್ರಹಿಸು." 'ಹಾಗೆಯೇ ಯೋಚಿಸುತ್ತಿದ್ದರೆ ನಮ್ಮ ಜೀವನವೇ ಕಾರೆಲೆ ಹಾಗೆ ಕರಗಿತು ಬೆಂಡೆಲೆ ಹಾಗೆ ಬೆಂದಿತು (ಕಾರೆ, ಬೆಂಡೆ ಕಾಡಿನ ಮರಗಳು) ಇನ್ನು ಮುಂದೆ ಇಂತಹ ಆಪತ್ತು ಬಾರದಿರಲಿ ನಮ್ಮನ್ನು ಕಾಪಾಡಿ ಚೆನ್ನಾಗಿರಿಸು.'

ಇವರಾಡುವ ಬಹುತೇಕ ಹಾಡುಗಳಲ್ಲಿ 'ಗೋರು ಗೋರೂಕಾನಾ' ಎಂಬ ಪಲ್ಲವಿ ಇರುತ್ತದೆ. ಹಬ್ಬದ ದಿನ ಅರಣ್ಯದ ನಡುವೆ ಸಾಮೂಹಿಕವಾಗಿ ಹಾಡುವ ಈ ಪಲ್ಲವಿಯನ್ನು ಕೇಳಿದರೆ ಮೈ ಆನಂದದಿಂದ ಪುಳಕಿತವಾಗುತ್ತದೆ.

ಪ್ರಾಣಿ ಪಕ್ಷಿಗಳ ಬಣ್ಣನೆಯೂ ಇವರ ಜಾನಪದದಲ್ಲಿ ವಿಪುಲವಾಗಿದ್ದು, ಮಣ್ಣಹಕ್ಕಿ ಎಂದು ಕರೆಯಲ್ಪಡುವ ಚಿಕ್ಕಹಕ್ಕಿಯೊಂದು ಗೂಡು ಕಟ್ಟುವುದನ್ನು ಅವರು ಹೀಗೆ ವರ್ಣಿಸುತ್ತಾರೆ.

ಮಣ್ಣತೆಗೆತೆಗೆ ಮಣ್ಣಕ್ಕಿ ಮಾವ
ಅರಳು ಕಾಡೆಲ್ಲಾ ಮಣ್ಣಕ್ಕಿ ಗೂಡು
ಬೆಂಡೆ ಕಾಡೆಲ್ಲಾ ಮಣ್ಣಕ್ಕಿ ಗೂಡು

ಈ ಹಾಡುಗಳನ್ನು ಹಾಡುತ್ತಾ, ಸಾಂಪ್ರದಾಯಕವಾಗಿ ಕುಣಿಯುವಾಗ ಸೋಲಿಗರು ತಾವೇ ತಯಾರಿಸುವ ತಮಟೆ ಮತ್ತು ಪಿನಾಶಿಯನ್ನು ಬಳಸುತ್ತಾರೆ. ಅವುಗಳನ್ನು ಲಯಬದ್ಧವಾಗಿ ನುಡಿಸುತ್ತಾ ಹೆಜ್ಜೆ ಹಾಕುತ್ತಾರೆ. ಇವರು ಪ್ರಾಣಿಗಳ ಚರ್ಮವನ್ನು ಹದಮಾಡಿ ತಮಟೆ ತಯಾರಿಸಿದರೆ, ಪಿನಾಶಿಯನ್ನು ತಯಾರಿಸಲು ಬಿದಿರನ್ನು ಬಳಸುತ್ತಾರೆ. ಇವುಗಳಲ್ಲದೆ ಕೆಲವೊಮ್ಮೆ ತಾಳ, ಕೊರಳು ಮುಂತಾದವುಗಳನ್ನೂ ಬಳಸುತ್ತಾರೆ.

ಸೋಲಿಗ ಜಾನಪದದಲ್ಲಿ ಸುಂದರ ಕಾವ್ಯವಿದೆ, ದರ್ಶನವಿದೆ ಮತ್ತು ಮೌಲ್ಯಯುತ ಚಿಂತನವಿದೆ. ಹೇಳುವುದನ್ನೆಲ್ಲಾ ಅತ್ಯಂತ ಸರಳವಾಗಿ ಕಣ್ಣಿಗೆ ಕಟ್ಟುವಂತೆ ರಚಿಸಿದ್ದಾರೆ. ಅವರಲ್ಲಿನ ನೈಸರ್ಗಿಕ ಸಹಜೀವನ ಮತ್ತು ಮಧುರ ಸಂಸ್ಕೃತಿಯನ್ನು ಬಿಂಬಿಸುವ ಜನಪದ ಗೀತ ವೈವಿಧ್ಯವು ಯಾವುದೇ ಶಿಷ್ಟ ಸಾಹಿತ್ಯಕ್ಕೂ ಸಮನಾಗಿ ನಿಲ್ಲುವಂತಹದು ಎಂದು ಹೇಳಬಹುದು.

## ಸೋಲಿಗರ ಪಾರಂಪರಿಕ ಜ್ಞಾನವಾಹಿನಿ

ಪ್ರಕೃತಿಯ ನಿರಂತರ ಒಡನಾಟ ಹೊಂದಿರುವ ಸೋಲಿಗರಿಗೆ, ಪಾರಂಪರಿಕ ಜ್ಞಾನವು ಪ್ರಕೃತಿಯ ಪ್ರಭಾವದಿಂದ ಹರಿದು ಬಂದಿದೆ. ಅವರ ನಿತ್ಯ ಜೀವನವೇ ಪ್ರಕೃತಿ ಶಾಲೆಯಲ್ಲಿ ನಡೆದಿದೆ. ಪ್ರಕೃತಿಯ ಗಿಡ, ಮರ, ಬೆಟ್ಟ, ಗವಿ, ನದಿ, ಬೆಂಕಿ, ಗಾಳಿ ಇವುಗಳ ಮೌನ ಸಂದೇಶಗಳನ್ನು ಸಹಸ್ರಾರು ವರ್ಷ ಆಲಿಸಿದ ಆದಿನಿವಾಸಿಗಳು, ಸಂವೇದನಾಶೀಲತೆ ಹಾಗೂ ವಿಶೇಷ ಅಂತಃಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾರೆ.

## ಸೋಲಿಗರ ಸಾಮಾನ್ಯಜ್ಞಾನ

ಇವರು ಅಲೆಮಾರಿ ಜನಾಂಗದವರಾಗಿದ್ದರು. ಇತ್ತೀಚೆಗೆ ಅಂದರೆ ಸುಮಾರು ೩೦-೪೦ ವರ್ಷಗಳಿಂದ ಮಾತ್ರ ಬದಲಾದ ಕಾನೂನುಕಟ್ಟಳೆ, ರಾಜಕೀಯ, ಸಾಮಾಜಿಕ ಪರಿಸ್ಥಿತಿಯಲ್ಲಿ ಒಂದೆಡೆ ನೆಲೆ ನಿಲ್ಲುವ ಪರಿಸ್ಥಿತಿ ಉಂಟಾಗಿದೆ. ಹೀಗಿದ್ದರೂ ಬಿಡಿ ಕುಟುಂಬಗಳು ಈಗಲೂ ಒಂದೆಡೆಯಿಂದ ಮತ್ತೊಂದೆಡೆಗೆ ಇನ್ನೂ ಸಂಚರಿಸುವುದುಂಟು. ಭೂಮಿಯ ಫಲವತ್ತತೆಯನ್ನು ಕಳೆದುಕೊಂಡಾಗ, ವಲಸೆ ಹೋಗುವ ಅನಿವಾರ್ಯತೆಯನ್ನು ಆದಿವಾಸಿಗಳು ಕಂಡುಕೊಂಡರು. ವಲಸೆ ಹೋಗಲು ಮತ್ತೊಂದು ಕಾರಣವೆಂದರೆ ಸಿಡುಬು, ಕಾಲರಾ, ಪ್ಲೇಗು ಮೊದಲಾದ ಗೋರ; ಅಂತಹ'ಗೋರ' ಬಂದಾಗ ಬಟ್ಟೆಬರೆಗಳನ್ನು ಪಾತ್ರೆ ಮುಂತಾದವುಗಳನ್ನು ಅಲ್ಲೇ ಬಿಡುತ್ತಿದ್ದರು. ಅಲ್ಲದೇ ನಾಯಿ, ಬೆಕ್ಕು ಮುಂತಾದ ಸಾಕುಪ್ರಾಣಿಗಳನ್ನು ಅಲ್ಲಿಯೇ ಕಟ್ಟಿ ಹಾಕುತ್ತಿದ್ದರು. ತಾವು ತೊಟ್ಟ ಬಟ್ಟೆಯಲ್ಲಿಯೇ ವಲಸೆ ಹೊರಡುತ್ತಿದ್ದರು. ಎಷ್ಟೇ ಕಷ್ಟವಾದರೂ ಎಲ್ಲವನ್ನು ಬಿಟ್ಟು ಹೋಗುತ್ತಿದ್ದ, ಅವರ ಸಾಮಾನ್ಯ ಜ್ಞಾನವನ್ನು ಮೆಚ್ಚಬೇಕಾದದ್ದೇ. ಅಷ್ಟೇ ಅಲ್ಲದೇ ಉಲ್ಬಣ ರೋಗಿಗಳಿಗೆ ಅಲ್ಲಿಯೇ ಇರುವ ವ್ಯವಸ್ಥೆ ಮಾಡುತ್ತಿದ್ದರು. ಅವರಿಗಾಗಿ ದೊಡ್ಡ ಪಾತ್ರೆಗಳಲ್ಲಿ ರಾಗಿಗಂಜಿ ಕಾಯಿಸಿಡುತ್ತಿದ್ದರು. ಅವರ ಆರೈಕೆ ಮಾಡಲು ಧೈರ್ಯಶಾಲಿ ಹಿರಿಯರನ್ನು ಜೊತೆಯಲ್ಲಿ ಬಿಟ್ಟು, ಸಮುದಾಯವು ಆ ಸ್ಥಳದಿಂದ ವಲಸೆ ಹೊರಡುತ್ತಿತ್ತು. ತಮ್ಮ ಕರ್ತವ್ಯವನ್ನು ಮುಗಿಸಿದ ಬಳಿಕ ಆ ಹಿರಿಯರು ತಮ್ಮ ವಲಸೆ ಗುಂಪನ್ನು

ಸೇರುತ್ತಿದ್ದರು. ಸೋಂಕನ್ನು ನಿರ್ವಹಿಸುವ ಸೋಲಿಗರ ಪಾರಂಪರಿಕ ಜ್ಞಾನವನ್ನು ಇಲ್ಲಿ ಗಮನಿಸಬೇಕಾದ ವಿಷಯವಾಗಿದೆ. ಆರೋಗ್ಯವು ಎಲ್ಲಕ್ಕಿಂತಲೂ ಹೆಚ್ಚು ಎಂಬ ನಿಲುವನ್ನು ಹೊಂದಿದ್ದರು. ಈ ಕಾರಣಗಳಿಂದಲೇ ಗುಳೆ ಹೊರಡುವ ಜ್ಞಾನ ಹೊಂದಿದವರಾಗಿದ್ದರು.

ಹೀಗೆ ವಲಸೆ ಹೊರಟ ಸೋಲಿಗರು ಕೆಲವು ದಿನಗಳು ಪ್ರಯಾಣಿಸುತ್ತಿದ್ದರು. ಸ್ವಲ್ಪ ಎತ್ತರದ ಹಾಗೂ ನೀರು ಲಭ್ಯತೆಯಿರುವ ಸ್ಥಳವನ್ನು ಆಯ್ಕೆ ಮಾಡುತ್ತಿದ್ದರು. ಸ್ಥಳ ವಾಸಿಸಲು ಯೋಗ್ಯವಾಗಿದೆ ಎಂದು ತಿಳಿದು ಕೊಳ್ಳಲು ಒಂದು ಸಣ್ಣ ಪ್ರಯೋಗ/ಶಾಸ್ತ್ರ ಮಾಡುತ್ತಿದ್ದರು. ಏಳು ಹರಳು ಜೀಜಗಳನ್ನು/ಹರಳು ಕಲ್ಲುಗಳನ್ನು ಸಾಲಾಗಿ ಜೋಡಿಸುತ್ತಿದ್ದರು. ನಂತರ ಅದರ ಮೇಲೆ ಒಂದು ಚಿಕ್ಕ ಬೆತ್ತದ ಬುಟ್ಟಿಯನ್ನು ಬೋರಲಿಡುತ್ತಿದ್ದರು. ಒಂದು ಇರುವೆಯು ಸಹ ಒಳಗೆ ಬರದ ರೀತಿಯಲ್ಲಿ ಜೋಡಿಸಿಟ್ಟು ರಾತ್ರಿ ಅಲ್ಲಿಯೇ ಮಲಗುತ್ತಿದ್ದರು. ಇಂತಹ ಶಾಸ್ತ್ರವೇ ಅಳ್ಳುಶಾಸ್ತ್ರ. ಬೆಳಗಿನ ಜಾವ ಅವರು ಎದ್ದು ನೋಡಿದಾಗ ಹರಳು ಚದುರಿರಬಾರದು ಗಾಢವಾದ ನಿದ್ರೆಯಲ್ಲಿ ಕನಸುಗಳನ್ನು ಹೊಂದುವ ಪ್ರಯತ್ನ ಇದಾಗಿರಬೇಕೆಂದು ಊಹಿಸಬಹುದು. ಅವರು ಎತ್ತರದ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂಬುದರ ಹಿನ್ನೆಯಲ್ಲಿ ಕಾಡುಪ್ರಾಣಿಗಳನ್ನು ದೂರವಿಡುವ ಪ್ರಯತ್ನ ಇದಾಗಿದೆ ಎನ್ನಬಹುದು. ನೆಲದ ಭದ್ರತೆ, ಹತ್ತಿರದ ಕೋಲಾಹಲವನ್ನು ಸೂಚಿಸಲು ಬುಟ್ಟಿ ಪ್ರಯೋಗ ಅವರಿಗೆ ಸಹಾಯಕವಾಗುತ್ತಿತ್ತು. ಹೀಗೆ ಪ್ರಶಸ್ತವೆಂದು ಕಂಡುಬಂದ ಜಾಗದಲ್ಲಿ ಅವರು ವಸತಿ ಕಲ್ಪಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಗುಂಪಿನ ಯಜಮಾನ/ಹಿರಿಯರು ಸ್ಥಳವನ್ನು ಆಯ್ಕೆ ಮಾಡುತ್ತಾರೆ. ಸ್ಥಳ ಆಯ್ಕೆಯಾದ ಮೇಲೆ ಅಲ್ಲಿಯೇ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಭದ್ರತೆ, ಉತ್ತಮ ಬೇಸಾಯ, ನೀರು, ಗೇಣಸು, ಜೇನು, ಸೌದೆ, ಹಣ್ಣುಗಳು ಇವುಗಳ ಸಮೀಪದಲ್ಲಿ ದೊರೆಯುವ ಸ್ಥಳವು ಅವರ ವಸತಿಗೆ ಹೆಚ್ಚು ಅನುಕೂಲಕರವಾಗಿರುತ್ತದೆ. ಆರು 'ವೈ' ಆಕಾರದ ಕವೆಗಳನ್ನು ಭೂಮಿಯಲ್ಲಿ ನೆಟ್ಟು ಅದನ್ನು ಭದ್ರವಾದ ಮನೆಯ ಪಾಯವನ್ನಾಗಿ ಬಳಸುತ್ತಾರೆ. ಮಧ್ಯದ ಕಡೆಯು ಒಂದು ಆಳೆತ್ತರವಿರುತ್ತದೆ. ಗೋಡೆಯು ಸಾಲಾಗಿ ಜೋಡಿಸಲ್ಪಟ್ಟ ಬಿದಿರು ಕೋಲುಗಳಿಂದ ಮಾಡಲ್ಪಟ್ಟಿದ್ದು, ಮಣ್ಣಿನ ಜೊತೆ ಬೂದಿ ಬೆರೆಸಿ ಗೋಡೆಗೆ ಬಳಿಯುತ್ತಾರೆ. ಮೇಲ್ಛಾವಣಿಯು ಹುಲ್ಲಿನಿಂದ ಹೊದಿಸಲ್ಪಟ್ಟಿರುತ್ತದೆ.

## ಆಹಾರದ ಅಭ್ಯಾಸಗಳು

ಜೀವನಾಧಾರದ ಬೇಸಾಯದ ಜೊತೆಗೆ ಆಹಾರ ಸಂಗ್ರಹಣೆ ಮಾಡುವುದು ಸೋಲಿಗರ ಜೀವನದ ಮುಖ್ಯ ಭಾಗವಾಗಿದೆ. ಬೆಳೆದ ರಾಗಿ ಹಾಗೂ ಜೋಳವನ್ನು ದಿನನಿತ್ಯ ಮುದ್ದೆಗಾಗಿ ಹಾಗೂ ಹಬ್ಬದ ದಿನಗಳಲ್ಲಿ ರೊಟ್ಟಿ ಮಾಡಿ ಎಲ್ಲರಿಗೂ ಹಂಚಿ ತಿನ್ನುತ್ತಾರೆ. ಅವರೆ, ಕುಂಬಳ, ಧಾನ್ಯ ಹಾಗೂ ತರಕಾರಿಗಳನ್ನು ಬೆಳೆಯುತ್ತಾರೆ. ನಾನಾ ವಿಧವಾದ ಕಾಡು ಗೆಣಸು ಹಾಗೂ ಬಿದಿರುಕಳ್ಳೆಯನ್ನು ಆಹಾರದ ಜೊತೆಗೆ ಸೇವಿಸುತ್ತಾರೆ. ಬೆಳ್ಳಾರೆ, ನೂರೆಯಾ, ನೆವೆ, ಹಕ್ಕಿ, ತೋಟಂಬು, ಮರಬೆಲ್ಲ, ಕಾಯಂಬು, ಸೋಲನ ಇವೇ ಅವರು ಹೆಸರಿಸುವ ಕೆಲವು ಗೆಣಸಿನ ವಿಧಗಳು. ೪೦ ವಿಧದ ತಿನ್ನುವ ಸೊಪ್ಪುಗಳನ್ನು ಗುರುತಿಬಲ್ಲ ಅವರು ೧೦-೧೫ ಸೊಪ್ಪುಗಳನ್ನು ತಾವೇ ಬೆಳೆಯುತ್ತಾರೆ. ಅವರು ಗೆಣಸು ಕೀಳುವ ವಿಧಾನದಲ್ಲಿ ಪಾರಂಪರಿಕ ಜ್ಞಾನ ಹಾಗೂ ಕಳಕಳಿ ಅಡಗಿದೆ. ಗೆಣಸನ್ನು ಕೀಳುವಾಗ ಒಂದೆರಡು ಹಂಬಗಳನ್ನು ಅಲ್ಲಿಯೇ ಬಿಡುವರು. ಪೂರ್ತಿ ತೆಗೆಯುವುದಿಲ್ಲ. ಇದರಿಂದ ಮುಂದಿನ ಮಳೆಗೆ ಮತ್ತೆ ಗೆಣಸು ಚೆನ್ನಾಗಿ ಬೆಳೆದು ಬೇಕಾದಾಗ ಸಿಗುವುದು. ಜೇನು ಅಳೆಯುವಾಗ ಮೃದುವಾಗಿ ಕೀಳುತ್ತಾರೆ. ಇಂಪಾದ ಹಾಡಿನಿಂದ ಪ್ರಾರ್ಥನೆ ಸಲ್ಲಿಸಿ, ನಂತರ ಬಹು ಎತ್ತರಕ್ಕೆ ಹತ್ತುವರು. ಹೊಗೆ ಹಾಕಿ ಜೇನು ಇಳಿಸುವರು.

'ಕಾರನ ಕರೆಯೋ ಕಾರಯ್ಯ
ಸೊಪ್ಪಿನೆರಕೆ ಕಾರನ'

ಓ ಕಾರಯ್ಯ! ಕಾರನನ್ನು ಕರೆ
ಸೊಪ್ಪಿನ ಗುಡಿಸಲಿಗೆ ಅವನನ್ನು ಕರೆ

(ಕಾರ ಅಂದರೆ ದೇವರು, ಕಾರಯ್ಯ ಎಂದರೇ ಸೋಲಿಗರ ಮೂಲ ಪುರುಷ) ಮುಂತಾಗಿ ಹಾಡುವರು.

ನೆಲ್ಲಿ ಕೀಳಬೇಕಾದರೆ ಎತ್ತರದ ಹಣ್ಣು ಹಕ್ಕಿಗಳಿಗೆ ಬಿಡುತ್ತಾರೆ. ಪೂರ್ವದ ಹಣ್ಣನ್ನು ಸೂರ್ಯನಿಗೆ, ಹೀಗೆ ಪ್ರಕೃತಿಯೊಂದಿಗೆ ಸಾಮರಸ್ಯತೆಯನ್ನು ಕಾಣುವರು. ಅವರು ನೆಲ್ಲಿ ಗೆಲ್ಲನ್ನು(ಕೊಂಬೆಯನ್ನು) ಕಡಿಯುವುದಿಲ್ಲ. ಉಪ್ಪುಲು ಎಂಬ ಪರಾವಲಂಬಿ ಸಸ್ಯ ಬೆಳೆಯುತ್ತದೆ ಎಂಬ ಜ್ಞಾನ ಅವರಲ್ಲಿದೆ. ಇಂತಹ ಅಪರಿಮಿತ ಜ್ಞಾನ ಸೋಲಿಗರಲ್ಲಿರುವುದು ವಿಶೇಷವಾಗಿದೆ.

**ಸೂರ್ಯನ ಬಗ್ಗೆ ಭಕ್ತಿ:** ಬೆಳಿಗ್ಗೆಯೇ ಎದ್ದು ಮುಖ ತೊಳೆದು ಸೂರ್ಯನಿಗೆ ನಮಸ್ಕಾರ ಮಾಡುವುದು ಸೋಲಿಗ ಪದ್ಧತಿಯಾಗಿದೆ. 'ಸೂರ್ಯನೇ ಲೋಕವನ್ನು ನಡೆಸುವವನು, ಉರಿಯುತ್ತಾ ಸಂಚರಿಸುವವನು' ಎಂಬ ಅಚಲ ನಂಬಿಕೆ ಸೋಲಿಗರದು. ಸೂರ್ಯನೇ ಶಕ್ತಿಯ ಮೂಲ ಎಂಬುದನ್ನು ಇಂದಿನ ವಿಜ್ಞಾನವು ಪ್ರತಿಪಾದಿಸುತ್ತಿರುವುದು ಸರ್ವವಿಧಿತ. ಯಾವುದೋ ಆಂತರಿಕ ಜ್ಞಾನ, ಸೂರ್ಯ ಜೀವನಾಧಾರ ಎಂಬ ನಂಬಿಕೆಯನ್ನು ಸರಳ ಜೀವಿಗಳ ಮನದಲ್ಲಿ ಮೂಡಿಸಿರುವುದು ಅಚ್ಚರಿಯ ಸಂಗತಿಯಾಗಿದೆ. ಭಕ್ತಿಯ ಜೊತೆಗೆ ಸೌಂದರ್ಯವೂ ಸೋಲಿಗರ ಭಾವನೆಗಳಲ್ಲಿ ತುಂಬಿರುವುದು ಕಂಡುಬರುತ್ತದೆ. ಆಕಾಶ ನಕ್ಷತ್ರಗಳ ವಿಷಯದಲ್ಲಿ ಅವರ ಭಾವನೆಗಳು ಈ ರೀತಿ ವ್ಯಕ್ತವಾಗುವುದು. ಆಕಾಶಗಂಗೆಯನ್ನು 'ಸೀತೆ ನಡೆದ ದಾರಿ' ಎಂದೂ ಸಪ್ತರ್ಷಿ ಮಂಡಲವನ್ನು 'ಅಜ್ಜಿಮಂಚ' ಎಂದೂ, ಶುಕ್ರನನ್ನು 'ತಾರಕ್ಕಿ' ಅಥವಾ 'ಬೆಳ್ಳಿ' ಎಂದೂ ಮನೋಹರವಾಗಿ ಕರೆಯುವರು. ರಾತ್ರಿ ವೇಳೆ ಕಾಡಿನಲ್ಲಿ ದಾರಿ ಹಿಡಿಯಲು ಈ ಜ್ಞಾನವನ್ನು ಉಪಯೋಗಿಸಿಕೊಳ್ಳುತ್ತಿದ್ದರು.

## ಸಂಪನ್ಮೂಲಗಳ ಮಿತ ಬಳಕೆ

'ಮರಗಳನ್ನು ಬೆಳೆಸಬೇಕು' 'ಕಡಿಯಬಾರದು' ಎಂಬ ಜ್ಞಾನವು ಸೋಲಿಗರ ಪರಂಪರೆಯಲ್ಲಿ ಮೊದಲಿನಿಂದಲೂ ಹರಿದು ಬಂದಿದೆ. ನಗರ ಪ್ರದೇಶ ವಾಸಿಗಳ ಜೀವನ ಪದ್ಧತಿಯೇ ಈಗಿನ ಅರಣ್ಯನಾಶಕ್ಕೆ ಕಾರಣ ಎಂಬ ಹಿನ್ನೆಲೆಯಲ್ಲಿ ಸೋಲಿಗ ಜೀವನ ಪದ್ಧತಿಯು ಸಂಪನ್ಮೂಲಗಳ ಮಿತ ಬಳಕೆಯನ್ನು ಹೇಗೆ ಮಾಡಬಹುದು ಎಂಬುದನ್ನು ಎತ್ತಿ ಹಿಡಿಯುತ್ತದೆ. ಸೋಲಿಗರು ನಿರ್ಮಿಸುವ ಮನೆಗೆ ಬೇಕಾಗುವ ಕಟ್ಟಡ ಸಾಮಗ್ರಿಗಳು– ಆರು ಕವೆ, ನಾಲ್ಕು ಒಣ ಮರಗಳು, ಸ್ವಲ್ಪವೇ ಹುಲ್ಲು. ಪಟ್ಟಣ ವಾಸಿಗಳ ಮನೆಗೆ ಸುಸಜ್ಜಿತ ಬಾಗಿಲು, ತೊಲೆ, ಮರದ ಸಾಮಾನು, ಕುರ್ಚಿ, ಮೇಜು, ಮಂಚ, ಮೋಜಿನ ಅಲ್‌ಮೇರಾ ಇದರಿಂದ ನಾವು ನಿರ್ಧರಿಸಬೇಕಾದ್ದು ಅರಣ್ಯ ನಾಶಕ್ಕೆ ಕಾರಣರು ಗಿರಿಜನರೇ/ಪಟ್ಟಣ ವಾಸಿಗಳೇ ಎಂಬುದು. ಆದರೆ ಎಲ್ಲರೂ ದೂರುವುದು ಆದಿವಾಸಿಗಳೇ ಅರಣ್ಯನಾಶಕ್ಕೆ ಕಾರಣ ಎಂದು.

ಸೋಲಿಗರು ಮರ ಕಡಿಯುವ ಸಂದರ್ಭ ಒದಗಿದರೆ, ಮರ ಕಡಿದ ನಂತರ ಅಪರಾಧ ಮಾಡಿದ ಭಾವನೆ ಹೊಂದಿ ದೇವರಲ್ಲಿ ಕ್ಷಮೆ ಯಾಚಿಸುವರು. ಅವರು ಕಡಿದ ಮರ ಬೀಳುವಾಗ ಆಗುವ ಸುಯ್ಯೆಂಬ ಶಬ್ಧವು ಮರದ ಪ್ರಾಣ ಹೋಗುತ್ತಿದೆ ಎಂದು ಭಾವಿಸುವರು. ಮರಕ್ಕೆ ಅಡ್ಡಬಿದ್ದು ಕ್ಷಮೆ ಕೇಳಿದ ನಂತರ ಒಂದು ಕಲ್ಲನ್ನು ಅದರ ಬುಡದ ಕೊಂಟೆಯ ಮೇಲೆ ಇಡುವರು.

## ಸೋಲಿಗರ ಹೆರಿಗೆ ಪದ್ಧತಿ

ಸೋಲಿಗರು ನಡೆಸುವ ಹೆರಿಗೆ ಪದ್ಧತಿಯು ವಿಶೇಷವಾಗಿದೆ. ಇವರಲ್ಲಿ ಕುಳ್ಳಿರಿಸಿ ಹೆರಿಗೆ ಮಾಡುವ ಪದ್ಧತಿ ವೈಜ್ಞಾನಿಕವಾಗಿದೆ. ಇತರೆಡೆಗಳಲ್ಲಿ ರೂಢಿಯಲ್ಲಿರುವ ಮಲಗಿಸಿ ಹೆರಿಗೆ ಮಾಡುವ ಪದ್ಧತಿ ಅವೈಜ್ಞಾನಿಕ ಎಂದು ಇತ್ತೀಚಿನ ವೈದ್ಯರಿಗೆ ರುಜುವಾತಾಗಿದೆ. ಏಕೆಂದರೆ ಕುಳ್ಳಿರಿಸಿ ಹೆರಿಗೆ ಮಾಡುವಾಗ ಗುರುತ್ವಾಕರ್ಷಣೆಯ ಸಹಾಯದಿಂದ ತಾಯಿಗೂ ಸುಲಭವಾಗುತ್ತದೆ. ಸೋಲಿಗರ ಹೆಂಗಸರು ಹೆರಿಗೆ ಮಾಡಿಸುವಲ್ಲಿ ಸಿದ್ಧಹಸ್ತರು. ಸೋಲಿಗ ಆದಿವಾಸಿ ಜನಾಂಗ ಅನುಭವದ ಮೂಲಕ ಈ ವಿಚಾರವನ್ನು ಕಂಡುಹಿಡಿದುಕೊಂಡು ತಮ್ಮದೇ ರೀತಿಯಲ್ಲಿ ಜೀವನಕ್ಕೆ ಅಳವಡಿಸಿಕೊಂಡಿರುವರು. ಅಷ್ಟೇ ಅಲ್ಲ ಹೊಕ್ಕಳಬಳ್ಳಿ ಕತ್ತರಿಸಲು ಬಿದಿರಿನ ಸೀಳನ್ನು ಬಳಸುತ್ತಿದ್ದರು. ಆಗ ಸೋಂಕು ಉಂಟಾಗುವುದಿಲ್ಲ, ತಲೆಕೆಳಗಾಗಿ ಜನಿಸುವ ಮಗು ಇಲ್ಲಿ ಹುಟ್ಟಿಲ್ಲ. ಏಕೆಂದರೆ ಅವರಿಗೆ ಮಗುವನ್ನು ತಿರುಗಿಸುವ ತಂತ್ರ ಗೊತ್ತಿದೆ. ಒಮ್ಮೆ 'ಕೈಹೊರಗೆ' ಎಂಬ ಸಂದರ್ಭ ಒದಗಿದಾಗ ಶಸ್ತ್ರವಿಲ್ಲದ ಮಗು ಹುಟ್ಟುವಂತೆ ಉಪಾಯವಾಗಿ ಮಾಡುವ ಪರಿಣಿತಿಯನ್ನು ಇಲ್ಲಿನ ಸೋಲಿಗ ಹೆರಿಗೆ ಪರಿಣಿತೆ ಸಿದ್ದಮ್ಮ ಹೊಂದಿದ್ದಾರೆ. ತಾಯಂದಿರಿಗೆ ಹೆಚ್ಚು ಆಹಾರ ಕೊಡಬೇಕೆಂಬ ಇಂದಿನ ವೈದ್ಯರ ಪ್ರತಿಪಾದನೆಯನ್ನು ಸೋಲಿಗ ಮಹಿಳೆಯರು ವಿರೋಧಿಸುತ್ತಾರೆ. ಅವರ ಪ್ರಕಾರ ಮಗುವಿನ ಗಾತ್ರ ದೊಡ್ಡದಾಗಿ ಹೆರಿಗೆ ಕಷ್ಟವಾಗುವುದೆಂದು ಹೇಳಿದ್ದಾರೆ. ಆದುದರಿಂದ ಅತಿ ಹೆಚ್ಚಿನ ತೂಕದ ಮಕ್ಕಳು ಗಿರಿಜನರಲ್ಲಿ ಹುಟ್ಟುವುದಿಲ್ಲ. ಈ ಬಗೆಯ ತಿಳುವಳಿಕೆ ಗಂಡಸರಿಗೂ ಗೊತ್ತಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

## ಋತುಗಳು, ಸಮಯ ಗಣನೆ

ಆದಿವಾಸಿಗಳು ಕ್ಯಾಲೆಂಡರನ್ನು ಬಳಸದಿದ್ದರೂ ಮರಗಳಲ್ಲಿನ ಚಿಗುರು, ಹೂವುಗಳು ಮತ್ತು ಹಕ್ಕಿಗಳ ಎಲೆಯಿಂದ, ಸೂರ್ಯಚಂದ್ರರಿಂದ ದಿನದ ಸಮಯ, ದಿನ, ಋತುಗಳನ್ನು ತಿಳಿಯುತ್ತಿದ್ದರು. ಕಾಡುಕೋಳಿಯು ಅರಚಿದರೆ ಆ ಸಮಯ ೪ ಗಂಟೆ ಕಾಡಿಗೆ ಹೊರಡುವ ದಿನವಾದರೆ ಆ ಸಮಯಕ್ಕೆ ಏಳಬೇಕು ಎಂದು ನಿರ್ಧರಿಸುತ್ತಾರೆ. ಸಾಮಾನ್ಯ ದಿನಗಳಲ್ಲಿ ಅವರು ಏಳುವುದು ಗೊಲ್ಲರ ಹಕ್ಕಿಯು ಕೂಗಿದಾಗಲೇ. ಅದು ಕೂಗುವುದು ಬೆಳಿಗ್ಗೆ ೫ ಗಂಟೆಗೆ ಆ ಹಕ್ಕಿಯು ಮಧ್ಯಾಹ್ನ ಮತ್ತು ಸಂಜೆ ಕೂಗುತ್ತದೆ. ಮೂರು ಗಂಟೆ ಹೂ ಎಂಬುದು ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಅರಳುವುದೆಂದು ಸಮಯ ತಿಳಿಯುವುದು ಹಾಗೂ ಮನೆಗೆ ವಾಪಸ್ಸಾಗುವ ಸಮಯ ಎಂದು ತಿಳಿಯುವುದು.

## ಪ್ರಾಣಿಗಳ ಜ್ಞಾನ

ಸೋಲಿಗರು ವಾಸನೆಯಿಂದಲೂ, ಪಕ್ಷಿಗಳ ಚಲನೆಯಿಂದಲೂ, ಕಾಡು ಪ್ರಾಣಿಗಳ ಇರುವಿಕೆಯನ್ನು ತಿಳಿಯುತ್ತಿದ್ದರು. ಕೊಟ್ಟಿ ಪಿಡಿಯ ಹಕ್ಕಿ ಪಕ್ಕದಲ್ಲೆಲ್ಲಾದರೂ ಅರಚಿದರೆ ಹತ್ತಿರದಲ್ಲಿ ಹುಲಿ ಅಥವಾ ಆನೆ ಇದೆಯೆಂದು ಅರಿತ ಅವರು ಮರವನ್ನು ಏರುತ್ತಾರೆ. ಅದೇ ಹಕ್ಕಿಯು ದೂರದಲ್ಲಿ ಅರಚಿದ ಶಬ್ದ ಕೇಳಿಸಿದರೆ ಅವರು ರಸ್ತೆ ಬದಲಿಸಿ, ಬೇರೊಂದು ರಸ್ತೆಯನ್ನು ಹಿಡಿಯುತ್ತಾರೆ. ಅವರು ಗೆಣಸನ್ನು ಹುಡುಕುವಾಗಲೂ ಅಷ್ಟೇ ಗೆಣಸಿನ ಹಂಬನ್ನು ಕರಡಿಗೆ ಬಿಡುತ್ತಾರೆ.

## ಸಸ್ಯಜ್ಞಾನ

ಸೋಲಿಗರಿಗಿರುವ ಸಸ್ಯಗಳ ಬಗೆಗಿನ ಜ್ಞಾನ ಅಪರಿಮಿತವಾದುದು. ಚಿಕ್ಕ ಹುಡುಗರೂ ಸಹ ೩೦೦ ಗಿಡಗಳನ್ನು ಗುರುತಿಸಬಲ್ಲರು ಹಾಗೂ ಅದರ ಉಪಯೋಗವನ್ನು ಹೇಳಬಲ್ಲರು ಎಂದರೆ ಆಶ್ಚರ್ಯವಾಗುತ್ತದೆ.

ಇದೊಂದು ಅಪೂರ್ವ ಜ್ಞಾನ. ಅವರು ಸಸ್ಯಗಳ ಮಧ್ಯೆ ಇರುತ್ತಾರೆ. ಕಾಡಿನಲ್ಲಿಯೇ ಓಡಾಡುತ್ತಾರೆ. ಈ ಕಾರಣದಿಂದ ಸಸ್ಯಗಳು ಅವರ ಜೀವನದ ಅವಿಭಾಜ್ಯ ಸಂಗಾತಿಗಳಾಗಿವೆ.

**ನಾರುಬೇರು ಔಷಧಿ:** ಈ ವಿಷಯದಲ್ಲಿ ಗಿರಿಜನರ ಜ್ಞಾನ ಪರಂಪರಾನುಗತವಾಗಿ ಹರಿದು ಬಂದಿದೆ. ಅವರ ಔಷಧೋಪಚಾರದ ಮಹತ್ವ ಅರಿವಾಗುವುದು. ಅವರು ಬಳಸುವ ನಾರುಬೇರು ಔಷಧಿಗಳನ್ನು ತಿಳಿದಾಗಲೇ ಅವರಿಗೆ ನೂರಾರು ಸಸ್ಯಗಳು ಗೊತ್ತಿದೆ. ಅದರ ಔಷಧಿಯ ಗುಣಗಳ ಅರಿವಿದೆ. ಅದರ ಪರಿಣಾಮಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಯಾವ ರೋಗಕ್ಕೆ ಯಾವ ಎಲೆ ಉಪಯೋಗಿಸಬೇಕು, ಯಾವ ಚಕ್ಕೆಯಿಂದ ತೇಯಬೇಕು, ಎಲ್ಲಿ ಬೇರು ಉಪಯೋಗಿಸಬೇಕು ಇತ್ಯಾದಿ. ಎಲ್ಲವನ್ನು ಅನುಭವದ ಮೂಲಕ ಸಿದ್ಧಿಸಿಕೊಂಡಿರುವರು. ಕೋಳಿ ಮೊಟ್ಟೆ ಲೋಳೆ ಮತ್ತು ಸೊಪ್ಪುಗಳನ್ನು ಸೇರಿಸಿ ಪ್ಲಾಸ್ಟರ್ ಮಾಡುತ್ತಿದ್ದರು. ಇಂತಹ ಉಪಚಾರ ಮೂಳೆ ಮುರಿತಕ್ಕೆ ಸಿದ್ಧೌಷದವಾಗಿದೆ. ಸಂತಾನ ನಿಯಂತ್ರಣಕ್ಕೆ ಸಂಬಂಧಿಸಿದ ಕೆಲವು ಔಷಧಿಗಳು ಗಿರಿಜನರಿಗೆ ಗೊತ್ತಿದೆ. ಇದರ ಬಗ್ಗೆ ಇನ್ನೂ ಸಂಶೋಧನೆಯಾಗಬೇಕಿದೆ.

ನಾರುಬೇರು ಔಷಧಿಯನ್ನು ನೀಡುವ ಜೊತೆಯಲ್ಲಿ ವಿಭೂತಿ ಚಿಕಿತ್ಸೆಯನ್ನು ಇವರು ನೀಡುವರು. ಇದು ಮನಸ್ಸಿಗೆ ಧೈರ್ಯ ತುಂಬುತ್ತಿತ್ತು. ರೋಗಿಯು ಹುಷಾರಾಗಿ, ಸಂಬಂಧಿಸಿದವರೂ ಶಾಂತವಾಗಿರಲು, ಖಂಡಿತವಾಗಿ ಸಹಾಯಕವಾಗುವುದು. ಹೀಗೆ ಸೋಲಿಗರ ದೈಹಿಕ ಸ್ವಾಸ್ಥ್ಯ–ಮಾನಸಿಕ ದೃಢತೆ ಹಾಗೂ ಆರೋಗ್ಯದಿಂದ ಎಂಬ ಜ್ಞಾನವನ್ನು ಅರಿತವರಾಗಿದ್ದರೂ ಎಂಬುದು ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

## ಸೋಲಿಗ ಪಾರಂಪರಿಕ ಮೌಲ್ಯಾಧಾರಿತ ನೆಲೆಗಟ್ಟುಗಳು

ಸೋಲಿಗ ಆದಿವಾಸಿ ಜನಾಂಗದಲ್ಲಿ ಬಲವಂತದ ಮದುವೆಗಳ ಪ್ರಕರಣಗಳಿಲ್ಲ. ನಾಡಜನರ ನಾಗರೀಕತೆಯ ಪ್ರಭಾವದಿಂದ ಇತ್ತೀಚೆಗೆ ಅಲ್ಲಂದಿಲ್ಲೊಂದು ಕಂಡು ಬರಬಹುದು. ಇತ್ತೀಚೆಗೆ ತಾಯಿತಂದೆಯರು ಪ್ರಶ್ನೋತ್ತರ ಏರ್ಪಡಿಸಿ ವ್ಯವಸ್ಥಿತ ಮದುವೆಗಳನ್ನು ನಡೆಸುತ್ತಿದ್ದಾರೆ. ಹೀಗಿದ್ದರೂ ಗಂಡು ಹೆಣ್ಣಿನ ಒಪ್ಪಿಗೆಗೆ ಮಹತ್ವ ನೀಡಲಾಗುತ್ತದೆ. ಇನ್ನೂ ನಿಖರವಾಗಿ ಹೇಳುವುದಾದರೆ 'ಪ್ರೇಮಪರಾರಿ'ಯಲ್ಲಿ ಮದುವೆ ನಡೆಯುತ್ತದೆ. ಕರ್ನಾಟಕದಲ್ಲಿ ವಾಸಿಸುವ ಕಾಡು ಸೋಲಿಗರ ಕುಲಗಳಲ್ಲಿ ತಮ್ಮ ಸ್ವಂತ ಕುಲದವರನ್ನು ಮದುವೆಯಾಗುವಂತಿಲ್ಲವೆಂಬ ಕಟ್ಟುಪಾಡಿದೆ. ಇದು ನಾಡಿನ ಸಂಪ್ರದಾಯದಂತೆ ಗೋತ್ರದ ಲಕ್ಷಣವನ್ನು ಹೊಂದಿರುವಂತೆ ಕಂಡು ಬರುತ್ತದೆ. ಈ ವಿಚಾರವನ್ನು ಬಿಟ್ಟರೆ ಎಲ್ಲ ಕುಲಗಳವರು ಪರಸ್ಪರ ಮದುವೆಯಾಗಲು ಇನ್ನಾವುದೇ ಕಟ್ಟುಪಾಡು ಅಡ್ಡ ಬರುವುದಿಲ್ಲ.

'ಪ್ರೇಮ ಪರಾರಿ'ಯ ಬಗ್ಗೆ ಕೆಲವು ವಿಷಯಗಳನ್ನು ಇಲ್ಲಿ ಗಮನಿಸಬೇಕಾಗಿದೆ. ವಯಸ್ಸಿಗೆ ಬಂದ ಗಂಡು ಹೆಣ್ಣು ಒಬ್ಬರನ್ನೊಬ್ಬರು ನೋಡುತ್ತಾರೆ. ಅವರಲ್ಲಿ ಪ್ರೇಮ ಅಂಕುರಿಸುತ್ತದೆ. ಅವರು ಸಮಯ ಸಾಧಿಸಿ ಕಾಡಿನಲ್ಲಿ ಅಲೆಯುತ್ತಾರೆ. ಹಣ್ಣು ಜೇನನ್ನು ಒಬ್ಬರಿಗೊಬ್ಬರು ಕೊಡುತ್ತಾರೆ. ಹೀಗೆ ಅವರು 'ಪಳಗುತ್ತಾರೆ' ಒಂದು ದಿನ 'ನೀರಿಗಂತ ಅವಳು ಬಂದು ಕಾಡಿಗಂತ ಅವನು ಬಂದು' ಇಬ್ಬರೂ ಪರಾರಿಯಾಗುತ್ತಾರೆ. ಅವಳು ಕೊಡದಲ್ಲಿ ನೀರನ್ನು ತುಂಬಿಡುತ್ತಾಳೆ. ಆ ಕೊಡದ ನೀರು ಹಾಗೆಯೇ ಉಳಿಯುತ್ತದೆ. ಅವರಿಬ್ಬರೂ ಓಡಿ ಹೋಗಿ ದೂರದ ಯಾವುದಾದರೂ ಪೋಡಿನಲ್ಲಿ ಆಶ್ರಯ ಪಡೆಯುತ್ತಾರೆ. ಅಲ್ಲಿಯ ಜನ ಆಶ್ರಯ ನೀಡಿ ನೋಡಿಕೊಳ್ಳುತ್ತಾರೆ.

ಪೋಡಿನ ಯಜಮಾನರು ಓಡಿ ಹೋದ ಈ ಜೋಡಿಯನ್ನು ಪತ್ತೆ ಹಚ್ಚುತ್ತಾರೆ. ಪೋಡಿಗೆ ಅವರನ್ನು ವಾಪಸ್ ಕರೆದುಕೊಂಡು ಬರುತ್ತಾರೆ. ನ್ಯಾಯ ಸಭೆಯನ್ನು ಏರ್ಪಡಿಸುತ್ತಾರೆ. ಅವರು ಮಾಡಿದ ತಪ್ಪು ಪೋಡಿನ ಜನರ ಗಮನಕ್ಕೆ ಬರುತ್ತದೆ. ನ್ಯಾಯ ತೀರ್ಮಾನವಾಗುತ್ತದೆ. ಹನ್ನೆರಡೂವರೆ ರೂಪಾಯಿ ತಪ್ಪು ಕಾಣಿಕೆಯನ್ನು ಅವರಿಗೆ ವಿಧಿಸಲಾಗುತ್ತದೆ. ಆ ಜೋಡಿಯು ತಪ್ಪು ಕಾಣಿಕೆಯನ್ನು ಕಟ್ಟಿಕೊಟ್ಟ ನಂತರವೇ ಅವರ ಸಾಂಸಾರಿಕ ಜೀವನ ನಡೆಸಲು ಅನುಮತಿ ದೊರೆಯುತ್ತದೆ.

ಪ್ರಕೃತಿಯ ರಮ್ಯ ಮನೋಹರವಾದ ಮಡಿಲಲ್ಲಿ ಸೋಲಿಗ ಗಂಡು ಹೆಣ್ಣು ಜೋಡಿಗಳ ಮದುವೆ ನಡೆದೇ ಹೋಗುತ್ತದೆ. ನಿಸರ್ಗದ ಹಕ್ಕಿಗಳ ಚಿಲಿಪಿಲಿಗಾನದ ನಡುವೆ, ಗಿಡಮರಗಳ ತೋರಣಗಳ ಮಧ್ಯೆ ಝುಳು ಝುಳು ನೀರಿನ ತೊರೆಗಳ ಎಲೆಗಳ ಮರ್ಮರ ಶಬ್ಧಗಳಲ್ಲಿ ದೂರು ಆಕ್ಷೇಪಣೆಗಳಿಲ್ಲದೇ ಸೋಲಿಗರ ಈ ಪ್ರಕೃತಿ ಮದುವೆ ನೋಡಲು ಕೇಳಲು ಇಂದಿನ ಕಾಲಕ್ಕೆ ಅತಿ ವಿರಳ. ಇವರ ಪಾರಂಪರಿಕ ಮೌಲ್ಯವನ್ನು ತಿಳಿಯುವುದಾದರೆ, ಹೆಣ್ಣು ಗಂಡುಗಳಿಗೆ ತಮ್ಮ ಸಹವರ್ತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ, ಖರ್ಚಿಲ್ಲದೇ ಆಗುವ ಪ್ರಕೃತಿಯ ಮದುವೆ. ಇವುಗಳ ಮುಂದೆ ಆಧುನಿಕ ನಾಗರೀಕತೆಯ ಸಮಾಜದ ದುಂದುಗಾರಿಕೆ ಮದುವೆ ಹಾಗೂ ಸಂಪ್ರದಾಯಗಳು ತಲೆತಗ್ಗಿಸಬೇಕಾದದ್ದೇ.

## ಸರಳ ಜೀವನ ಮತ್ತು ಪ್ರಾಮಾಣಿಕತೆ

ಸರಳ ಜೀವನ ಮತ್ತು ಪ್ರಾಮಾಣಿಕತೆಯ ನಡೆ ಒಂದಕ್ಕೊಂದು ಪೂರಕವಾಗಿದೆ. ಸೋಲಿಗರ ಜೀವನದಲ್ಲಿ ಕಂಡು ಬರುವ ಆಹಾರ ಪದ್ಧತಿಗಳು, ವಸತಿ ಕ್ರಮಗಳು, ತೊಡುವ ಬಟ್ಟೆಗಳ, ಮನರಂಜನೆಯ ಸಾಧನಗಳು, ಪೂಜೆ ಪುನಸ್ಕಾರ, ಸಂಪ್ರದಾಯ ಆಚಾರ–ವಿಚಾರಗಳು, ಪಾರಂಪರಿಕ ವೈದ್ಯ ಚಿಕಿತ್ಸಾ ಪದ್ಧತಿ, ಪ್ರಕೃತಿಯ ಕಲಿಕೆ, ನ್ಯಾಯ ಪದ್ಧತಿ, ಪರಸ್ಪರ ಸಾಮಾಜಿಕ ವ್ಯವಹಾರ ಎಲ್ಲವೂ ಸರಳವಾಗಿದೆ.

ಕೇವಲ ರಾಗಿ, ಕಾಡಿನಲ್ಲಿ ದೊರೆಯುವ ಗೆಣಸು, ಹಣ್ಣು ಇವುಗಳಿಂದಲೇ ಸೋಲಿಗರ ಊಟ ತೀರಿತು. ಉಪವಾಸವಿರುವ ದಿನಗಳಿಗೂ ಲೆಕ್ಕವಿಲ್ಲ. ರುಚಿರುಚಿಯಾದ ಅಡುಗೆಯ ಭಕ್ಷಗಳಾಗಲೀ, ಆಹಾರ ನಿಯಮಗಳಾಗಲೀ ಇವರಲ್ಲಿ ಇಲ್ಲ. ಇನ್ನು ಮಾಂಸದ ಅಡುಗೆ ಕೆಲವು ಸಂದರ್ಭಗಳಲ್ಲಿ ಹಂಚಿಕೊಂಡು ತಿನ್ನಬಹುದು.

ಇನ್ನು ಸೋಲಿಗರ ಮನೆಯ ಬಗ್ಗೆ ಹೇಳುವುದಾದರೆ, ಅವರು ಪುಟ್ಟ ಗುಡಿಸಲಿನಲ್ಲಿ ವಾಸಿಸುತ್ತಾರೆ. ಆ ಗುಡಿಸಲಿಗೆ ಮಣ್ಣಿನ ಗೋಡೆ, ಬಿದಿರು ಗಳಗಳು ಹಾಗೂ ಮರದ ಕಡ್ಡಿಗಳೇ ಆಧಾರಗಳು. ಆ ಪುಟ್ಟ ಗುಡಿಸಲಿನಲ್ಲಿಯೇ ಎಲ್ಲಾ ರೀತಿಯ ಅನುಕೂಲತೆಗಳನ್ನು ಮಾಡಿಕೊಳ್ಳುತ್ತಾರೆ. ಅದರಲ್ಲಿಯೇ ಅಡುಗೆ ಮನೆ, ವಸ್ತುಗಳನ್ನು ಇಡಲು ಅಟ್ಟ ಎಲ್ಲವೂ ಇರುತ್ತದೆ. ಅವರ ಉಡುಪಿನ ಬಗ್ಗೆ ಹೇಳುವುದಾದರೆ, ಉಡಲು ಒಂದು ತುಂಡು ಪಂಚೆ ಹಾಗೂ ಹೊದೆಯಲು ಒಂದು ಕವಚ. ಅವರ ಮನಸ್ಸಿಗೆ ಬಂದ ಹಾಡು, ತಾಳಕ್ಕೆ ತಕ್ಕ ಕುಣಿತ, ಇವುಗಳಿಂದಲೇ ಅವರ ಮನಸ್ಸಿನ ರಂಜನೆ. ಇನ್ನು ದೇವರ ಪೂಜೆಯೆಂದರೆ, ಅವರೇ ನೇರವಾಗಿ ಮಾತನಾಡಬಹುದಾದ, ತಮ್ಮ ಕೈಯಿಂದ ಬಿಡಿಸಿ ತಂದ ಕಾಡು ಹೂಗಳು, ಪತ್ರೆಗಳಿಂದ ದೇವರ ಪೂಜೆ ಮಾಡುತ್ತಾರೆ. ಇವರ ಪೂಜೆಯ ಸೊಬಗು ಹೀಗಿದೆ.

"ಜಾಲಾಧುವ್ವಿನ ರುಂಡಮಾಲೆ
ಸಾಮಿ ಕತ್ತಿನ ಜೋಲಿದಾದೆ"

(ಜಾಲದ ಹೂವಿನ ತಲೆಯ, ಆಲೆಯು ದೇವರ ಕತ್ತಿನಲ್ಲಿ ಜೋಲಾಡುತ್ತಿದೆ.)

ಈಗಾಗಲೇ ತಿಳಿಸಿದಂತೆ ಅವರ ಪಾರಂಪರಿಕ ವೈದ್ಯ ಪದ್ಧತಿಯು ನಾರು ಬೇರು ಔಷಧಿಗಳಿಂದ ಕೂಡಿದುದಾಗಿದೆ. ಬಿಡಿಗಾಸು ಖರ್ಚಿಲ್ಲದ ಚಿಕಿತ್ಸೆ. ತಾವು ವಾಸಿಸುತ್ತಿರುವ ಕಾಡಿನಲ್ಲಿಯೇ ಲಭ್ಯವಿರುವ ಔಷಧಿ ಗಿಡಗಳಿಂದ ತಯಾರಿಸಿದ ಚಿಕಿತ್ಸೆ. ಹಾಗಾಗಿ ಇವರ ಪೂರ್ಣ ಕಲಿಕೆ ಉಂಟಾಗುವುದು ಮರಗಿಡಗಳ ಬಗ್ಗೆ, ಕಾಡಿನಲ್ಲಿ ಓಡಾಡುವ ಬಗ್ಗೆ, ಕಾಡು ಪ್ರಾಣಿಗಳ ಬಗ್ಗೆ, ಹಾಗಾಗಿ ಇವರಿಗೆ ಪರಿಸರದ ಬಗೆಗಿರುವ ಜ್ಞಾನವು ಉತ್ಕೃಷ್ಟವಾದುದಾಗಿದೆ. ಕೋರ್ಟು, ಕಛೇರಿಗಳಿಲ್ಲದ ನ್ಯಾಯ, ಪತ್ರಗಳ ಒಕ್ಕಣೆಯಿಲ್ಲದ ವ್ಯವಹಾರ. ಅವರ ವ್ಯವಹಾರಗಳಿಗೆ ಸೂರ್ಯ ಚಂದ್ರರೇ ಸಾಕ್ಷಿಯಾಗಿದ್ದಾರೆ. ಅವರು ಆಡಿದ ಮಾತೇ ಮುತ್ತು. ಇಂತಹ ವಿಶಿಷ್ಟವಾದ ಮೌಲ್ಯಗಳ ಬಗ್ಗೆ ನಮ್ಮ ಸಮಾಜವು ಗಮನಹರಿಸದಿರುವುದು ಸಮಾಜದ ಹೊರತು ಪಾರಂಪರಿಕ ಜ್ಞಾನವನ್ನು ದೂಷಿಸುವಂತಿಲ್ಲ.

## ಸೋಲಿಗ ನ್ಯಾಯ

ಅನಾದಿ ಕಾಲದಿಂದಲೂ ಸೋಲಿಗರ ನಾಡಿನಲ್ಲಿ ತಮ್ಮದೇ ಆದ ನ್ಯಾಯ ಪಂಚಾಯಿತಿ ನಡೆದುಕೊಂಡು ಬಂದಿದೆ. ಇವರದು ಸರಳವಾದ ಖರ್ಚುವೆಚ್ಚವಿಲ್ಲದ, ಕಾಲವಿಳಂಬದ ಗೊಂದಲವಿಲ್ಲದ ನ್ಯಾಯ ವ್ಯವಸ್ಥೆ. ಇವರ ನ್ಯಾಯ ವ್ಯವಸ್ಥೆಯು, ಕೋರ್ಟು, ಕಛೇರಿ ಅಲೆದು ದುಡ್ಡು ತೆತ್ತು ತತ್ತರಿಸುತ್ತಿರುವ ನಾಡಜನರನ್ನು ಅಣಕಿಸುತ್ತದೆ. ಅಪರಾಧದ ಸಮಸ್ಯೆಗಳೇ ಇಲ್ಲದೆ ಇವರ ನಾಡಿನ, ನ್ಯಾಯ ವ್ಯವಸ್ಥೆಯಲ್ಲಿ ತೀರ್ಮಾನವಾಗುವ ಹೆಚ್ಚಿನ ವಿಷಯಗಳು ಇತರೆ ಸರಳ ವಿಷಯಗಳಿಗೆ ಸಂಬಂಧಪಟ್ಟದ್ದು. ಸೋಲಿಗರ ಕುಲದ ಎಲ್ಲ ಮುಖ್ಯಸ್ಥರು ನ್ಯಾಯ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ.

ಪ್ರತಿ ಕುಲದ ಮುಖ್ಯಸ್ಥರಿಗೆ ಒಂದೊಂದು ಜವಾಬ್ದಾರಿಯನ್ನು ನೀಡಲಾಗಿದೆ. ಪುಸುಮಾಲೆ ಸೇರಿದ ವಂಶ ತೆನೆಯರ ಕುಲದ ಯಜಮಾನರು ಪಟ್ಟೆಗಾರ. ಸಳಕರ ಕುಲಕ್ಕೆ ಸೇರಿದವನು 'ಯಜಮಾನ' ಇವನ ಜವಾಬ್ದಾರಿ ನ್ಯಾಯ ತೀರ್ಮಾನ ಹೇಳುವುದು. ಈತನು ಮುದ್ರೆಯುಂಗುರ ಹೊಂದಿರುತ್ತಾನೆ. ಶಿಸ್ತಿನ ಅಧಿಕಾರಿಯೇ 'ಚಲುವಾದಿ'. ಈತನು ನ್ಯಾಯಾಲಯದಲ್ಲಿ ಪ್ರಶ್ನೆ ಕೇಳುತ್ತಾನೆ. ಸೂರರ ಕುಲಕ್ಕೆ ಸೇರಿರುತ್ತಾನೆ. ಬೆಳರ ಕುಲಕ್ಕೆ ಸೇರಿದ ಮುಖ್ಯಸ್ಥ 'ಕೋಲುಕಾರ'ನೆನಿಸಿಕೊಳ್ಳುತ್ತಾನೆ. ಇವನು ತಮಟೆ ಸಾರಣೆ ಮಾಡುತ್ತಾನೆ. ಅಪರಾಧಿಗಳನ್ನು ನ್ಯಾಯದ ಸ್ಥಾನಕ್ಕೆ ಹಾಜರುಪಡಿಸುವ ಕರ್ತವ್ಯ ಈತನದಾಗಿರುತ್ತದೆ. ಇವರಿಗೆ ಸಹಾಯ ಮಾಡುವವನೇ ಹಾಲರ ಕುಲಕ್ಕೆ ಸೇರಿದ ಮುಖ್ಯಸ್ಥ 'ದಳವಾದಿ' ಎಂದೆನಿಸಿಕೊಳ್ಳುತ್ತಾನೆ. ಎಲ್ಲರೂ ಕುಳಿತು ನ್ಯಾಯ ನಡೆಸುತ್ತಾರೆ. ಸೂಕ್ತ ಶಿಕ್ಷೆ, ಪರಿಹಾರ ವಿಧಿಸುತ್ತಾರೆ. ನ್ಯಾಯ ನೀಡುವಾಗ ಹೃದಯವಂತಿಕೆ ಮೆರೆಯುತ್ತದೆ. ಇಂದಿನ ಕಾರ್ಯಭಾರದ ಒಗ್ಗಟ್ಟು ಮುರಿಯುವ ತಂತ್ರಗಾರಿಕೆಗೆ ಇವರ ನ್ಯಾಯವ್ಯವಸ್ಥೆಯಲ್ಲಿ ಜಾಗವಿಲ್ಲ. ನ್ಯಾಯಾಲಯದಲ್ಲಿ ಜನರನ್ನು ಒಗ್ಗೂಡಿಸುವ ಪ್ರಯತ್ನ ಮಾಡುತ್ತಾರೆಯೇ ಹೊರತು ಒಡೆಯುವ ಪ್ರಯತ್ನ ಮಾಡುವುದಿಲ್ಲ. ಮಹಿಳೆಯರ ವಿಚಾರದಲ್ಲಿ ಸ್ವಲ್ಪ ಮೃದುತ್ವ ಇರುತ್ತದೆ. ನ್ಯಾಯ ತೀರ್ಮಾನ ಆದ ನಂತರ ಜನ ಮರೆಯುತ್ತಾರೆ, ದ್ವೇಷ ಸಾಧಿಸುವುದಿಲ್ಲ. 'ದೇವಸಭೆ'ಯಲ್ಲಿ ನೀಡಿದ ತೀರ್ಮಾನವೆಂದು ತಿಳಿದ ಸೋಲಿಗರು ಶಾಂತವಾಗಿರುತ್ತಾರೆ.

ನ್ಯಾಯ ಪಂಚಾಯಿತಿಯಲ್ಲಿ ಮಹಿಳೆಯರ ಸ್ಥಾನಮಾನ ಹೇಗೆ ಎಂದು ಕೇಳುವುದಾದರೆ, ನ್ಯಾಯಪೀಠದಲ್ಲಿ ಮಹಿಳೆಯರು ಅಲಂಕರಿಸದಿರುವುದು ಅವಳ ಸ್ಥಾನಕ್ಕೆ ಕುಂದುಂಟಾಗಿದೆಯೇ ಎಂದಲ್ಲ. ಹಿರಿಯ ಮಹಿಳೆಯರು ನ್ಯಾಯಪಂಚಾಯಿತಿಯಲ್ಲಿ ನಿರರ್ಗಳವಾಗಿ ಮಾತನಾಡಿ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ.

## ಹಂಚಿಕೊಂಡು ತಿನ್ನುವುದು

"ಜಗತ್ತಿನಲ್ಲಿ ಆಹಾರದ ಸಮಸ್ಯೆ ಉದ್ಭವವಾಗಿರುವುದು ಆಹಾರ ಧಾನ್ಯಗಳ ಅಭಾವದಿಂದಲ್ಲ; ಅದು ಹಂಚಿಕೆಯ ಅಭಾವದಿಂದ" ಎಂದು ವಿಶ್ವಸಂಸ್ಥೆ ಹೇಳುತ್ತದೆ. ಸೋಲಿಗರಲ್ಲಿ ಆಹಾರವನ್ನು ಹಂಚಿಕೊಂಡು ತಿನ್ನುವ ಗುಣವನ್ನು ಬೆಳೆಸಿಕೊಂಡಿದ್ದಾರೆ. ಅವರು ಬೆಳೆಯುವ ಆಹಾರ ಧಾನ್ಯಗಳನ್ನು ಸಂತೋಷವಾಗಿ ಹಂಚಿಕೊಳ್ಳುತ್ತಾರೆ. ತಾವು ಬೆಳೆದ ಅಲ್ಪ ಬೆಳೆಯಲ್ಲಿಯೇ ಇನ್ನೊಬ್ಬರಿಗೆ ಕೊಡುತ್ತಾರೆ.

ಮನೆಯಲ್ಲಿ ಎರಡು ಹೆಚ್ಚಿಗೆ ರಾಗಿಮುದ್ದೆ ಮಾಡುತ್ತಾರೆ. ಎಲೆ ಮುಚ್ಚಿ ಪಕ್ಕದ ಮನೆಯವರಿಗೆ ಕೊಡುತ್ತಾರೆ. ಈ ಪಾರಂಪರಿಕ ಜ್ಞಾನ ಇತ್ತೀಚೆಗೆ ನಶಿಸಿ ಹೋಗುತ್ತಿದೆ. ಇದೇ ಕಾರಣದಿಂದ ಜಗತ್ತಿನ ಎಲ್ಲ ಕಷ್ಟ ಕಾರ್ಪಣ್ಯಗಳು ನಡೆಯಲ್ಲಿ, ನುಡಿಯಲ್ಲಿ ಬರಲು ಸಾಧ್ಯವೇ? ಎಂದು ಕಾದು ನೋಡಬೇಕು. ಇದು ಆದಿವಾಸಿ ಜನಾಂಗದಲ್ಲಿಯಾದರೂ ಉಳಿದರೆ ಅದೊಂದು ಆಶಾಕಿರಣ.

## ಸೋಲಿಗರ ಅತೀಂದ್ರಿಯ ಚಿಂತನೆಗಳು

**ಪ್ರಾಣದ ಕಲ್ಪನೆ:** ನಾಗರೀಕ ಜನರು ಕಲ್ಪಿಸಿಕೊಂಡಿರುವ 'ಪ್ರಾಣ'ದ ಕಲ್ಪನೆ ಆದಿವಾಸಿ ಜನಾಂಗಗಳಲ್ಲಿಯೂ ಇದೆ. ಸೋಲಿಗ ಜನಾಂಗದವರು ಜೀವಿಗಳಲ್ಲಿ ಪ್ರಾಣವಿರುವುದನ್ನು ಗುರುತಿಸುತ್ತಾರೆ. ಜೀವಿಗಳಲ್ಲಿರುವ ಪ್ರಾಣವೇ ಸೂಲು. ಸೂಲುಗಳಲ್ಲಿ ಅವರು ಹೆಸರಿಸುವುದು 'ಸಣ್ಣಸೂಲು' ಮತ್ತು 'ದೊಡ್ಡ ಸೂಲು' ಎಂದು ಎರಡು ಬಗೆಯ ಸೂಲುಗಳನ್ನು, ದೊಡ್ಡ ಸೂಲು ಎಂದರೆ ಮನುಷ್ಯನ ಜೀವ ಹೋಗುವಾಗ ಮೊದಲು ಹೋಗುವುದು. ಸಣ್ಣ ಸೂಲು ಒಂದು ಘಳಿಗೆ ತಡವಾಗಿ ಹೋಗುವುದೆಂದು ನಂಬುತ್ತಾರೆ.

ಮನುಷ್ಯನಿಗಿರುವಂತೆಯೇ ಪ್ರಾಣಿಗಳಿಗೂ ಸೂಲು ಇರುತ್ತದೆ. ಸತ್ತ ನಂತರ ಮನುಷ್ಯರ ಪ್ರಾಣಿಗಳ ಸೂಲು ದೆವ್ವವಾಗಬಹುದು. ಸೋಲಿಗರಲ್ಲಿ ವಿಶೇಷವಾಗಿ ಕಂಡುಬರುವ ವಿಷಯವೇನೆಂದರೆ ಸಸ್ಯಗಳಿಗೆ ಜೀವವಿದೆ ಎಂಬ ನಂಬಿಕೆಯಿರುವುದು. ಅವರು ಇದನ್ನು 'ಸೂಲು' ಎಂದು ಹೇಳುತ್ತಾರೆ. ಮರ ಕಡಿದಾಗ ಆಗುವ 'ಸುಯ್ಯೆಂಬ' ಶಬ್ಧ ಆ ಸೂಲು ಹೋಗುವುದರಿಂದಲೇ ಆಗುತ್ತದೆ ಎಂದು ತಿಳಿಯುತ್ತಾರೆ. ಆದ್ದರಿಂದಲೇ ಮರ ಕಡಿದರೆ ಅವರು ಕ್ಷಮೆಯಾಚಿಸುತ್ತಾರೆ. ಪ್ರಕೃತಿಗೆ ನೋವುಂಟು ಮಾಡಿದ ಭಾವನೆಯೇ ಇದಕ್ಕೆ ಪ್ರಚೋದನೆ. ಸಾಮಾಜಿಕ ಸ್ಪಂದನ. ಈ ಪಾರಂಪರಿಕ ಜ್ಞಾನ ಸಹ ವೈಜ್ಞಾನಿಕತೆಯಿಂದ ಕೂಡಿದೆ.

## ಮಾತನಾಡುವ ದೇವರು

ಸೋಲಿಗರು ಅನೇಕ ದೇವರುಗಳನ್ನು ಪೂಜಿಸುತ್ತಿದ್ದರೆಂದು ಹೇಳಬಹುದು. ದೊಡ್ಡಸಂಪಿಗೆಸ್ವಾಮಿ, ಕೇತಪ್ಪ, ಜಡೆಯಪ್ಪ, ಸಿದ್ದಪ್ಪ, ಪಂದಪ್ಪ ಇತ್ಯಾದಿ. ಹಾಗೇಯೇ ಮಲಕಮ್ಮ(ಮಲಕಿಬೆಟ್ಟದ ದೇವತೆ) ಮಾಸ್ತಮ್ಮ, ಮಾರಮ್ಮ ಮುಂತಾಗಿ ಸ್ತ್ರೀ ದೇವತೆಗಳು ಸಹ ಇದ್ದಾರೆ. ನಾಡಕಡೆ ದೇವರು ಮೌನಿ ಮಾತನಾಡುವುದಿಲ್ಲ. ಆದರೆ ಆದಿವಾಸಿ ಜನಾಂಗಗಳಲ್ಲಿ ದೇವರು ಮೌನಿಯಲ್ಲ. ಮಾತನಾಡುತ್ತಾನೆ. ಆತನು ಸಾಮಾನ್ಯವಾಗಿ ತಮ್ಮಡಿ(ಪೂಜಾರಿ) ಮೇಲೆ ಆವಾಹನೆಯಾಗಿ ಬರುತ್ತಾನೆ. ಸ್ತ್ರೀ ದೇವತೆ ಆವಾಹನೆಯಾಗಿ ಬರುವುದಿಲ್ಲ.

ದೇವರು ಮೈಮೇಲೆ ಆವಾಹನೆಯಾಗಿ ಬರುವುದು ಪೂಜೆಯ ನಂತರ. ಇದಕ್ಕಾಗಿ ತಮ್ಮಡಿಯು ಉಪವಾಸಾದಿಗಳನ್ನು ಆಚರಿಸುತ್ತಾರೆ. ಪೂಜಾರಿಯಷ್ಟೆ ಅಲ್ಲ ಯಾರ ಮೇಲೆ ಬೇಕಾದರೂ ಸ್ವಾಮಿ ಬರಬಹುದು.

ತಾನು ಯಾರ, ಯಾವ ದಿಕ್ಕಿನಿಂದ ಬಂದಿದೆಯೆಂಬುದಾಗಿ ದೇವರು ಹೇಳುತ್ತದೆ. ಪವಾಡ ತೋರಿಸುತ್ತದೆ. ಶಕ್ತಿಯಿಂದ ಮೈಗೆ ಹೊಡೆದುಕೊಳ್ಳುವುದು, ಮುಳ್ಳಿನ ಪಾದುಕೆ ಧರಿಸುವುದು ಇತ್ಯಾದಿ.

ಕತ್ತಿಯ ಪಾವಡ ರತ್ತದ ಬೊಟ್ಟು
ನಿಂದು ಕೂಗೊ ದುಂಡುಮಾದೇವನ
ಮುಳ್ಳಾವಿಗೆ ಮಡುವಿನ ಜಂಗು
ಮೆಳ್ಳಗೆ ಬಂದರು ಮಾದೇವ.

(ದುಂಡು ಮಾದೇವನನ್ನು ಕರೆ; ಕತ್ತಿ ಪವಾಡದ ಕತ್ತಿ, ಅದರಿಂದ ತರಿದು ರಕ್ತದ ಬೊಟ್ಟು ಕಾಣುತ್ತದೆ. ಮುಳ್ಳಿನ ಪಾದುಕೆ ಹೊಂದಿ ದೇವರು ಮೆಲ್ಲಗೆ ಬಂದರು)

ಹೀಗೆ ಸೋಲಿಗರಲ್ಲಿ ದೇವರೆ ಬಂದು ಜನಗಳ ಜೊತೆ ಮಾತನಾಡುತ್ತಾನೆ. ಮಧ್ಯವರ್ತಿಗಳ ಅಗತ್ಯವಿಲ್ಲ. ತಮ್ಮಡಿ ಮೇಲೆ ದೇವರು ಆವಾಹನೆಯಾಗಿರುವುದರಿಂದ ಅವನು ಮಧ್ಯವರ್ತಿಯಲ್ಲವೇ ಅಲ್ಲ.

ಸಣ್ಣ ಉಲ್ಲಾಲಿ ಉದಿರಕ್ತದ
ಸರಣೆರಿಲ್ಲ ಮಾದೇವ

(ಸಣ್ಣ ಹುಲ್ಲಿನಲ್ಲಿ ರುದ್ರಾಕ್ಷಿ ಮಾಡಿಕೊಂಡಿರುವ ಮಾದೇವನನ್ನು ಕರೆ, ಇಲ್ಲಿ ಸರಣರು ಯಾರೂ ಇಲ್ಲ)

ಈಗ ಜನರ ಪ್ರಶ್ನೆಗಳನ್ನು ನೇರವಾಗಿ ದೇವರಿಗೆ ಕೇಳುತ್ತಾರೆ. ದೇವರು ಅತ್ಯಂತ ಕರುಣೆಯಿಂದ ಉತ್ತರ ಕೊಡುತ್ತಾನೆ. ದೇವರು ಸಂಭೋದಿಸುವುದಾದರೂ ಹೇಗೆ? 'ನನ್ನ ಶಿಶುವೆ' ಎಂಬುದಾಗಿ.

ಮಂತ್ರ ವಿಭೂತಿ ಭಕ್ತರಿಗೆ ದೊರೆಯುತ್ತದೆ. ಖಾಯಿಲೆಗಳು ಗುಣವಾಗುವ, ಸಮಸ್ಯೆಗಳು ಪರಿಹಾರವಾಗುವ ಆಶ್ವಾಸನೆಗಳು ದೊರೆಯುತ್ತದೆ. ಇದಕ್ಕಾಗಿ ಅವರು ಹೆಚ್ಚಿನ ಹಣ ಖರ್ಚು ಮಾಡಬೇಕಾಗಿಲ್ಲ. ಕೇವಲ ಒಂದೆರಡು ರೂಪಾಯಿ, ಎಲೆ ಅಡಿಕೆ, ಗಂಧದ ಕಡ್ಡಿ ಇಟ್ಟರೆ ಸಾಕು. ಹೀಗೆ ದೇವರು ಕಡುಬಡವರಿಗೂ ಖಂಡಿತವಾಗಿ ದೊರಕುತ್ತಾನೆ.

## ಸಾವು

ಸೋಲಿಗ ಪಾರಂಪರಿಕ ಆಚರಣೆಯನ್ನು ಸಾವು ಹುಟ್ಟುಗಳು ಸಹಜವೆಂಬ ಭಾವ. ಅತಿ ಚೀರಾಟವಾಗಲಿ, ಗೋಳಾಟವಾಗಲಿ ಇಲ್ಲಿ ಕಾಣುವುದಿಲ್ಲ. ಅವರವರ ಕುಟುಂಬದ ಶವ ಸಂಸ್ಕಾರ ಸ್ಥಳದ ಬಳಿಯೇ ಸಂಸ್ಕಾರ ನಡೆಯುತ್ತದೆ. ಶವವನ್ನು ಹೂಳಲಾಗುತ್ತದೆ. ಇವರಲ್ಲಿ ಗಮನಿಸಬೇಕಾದ ಅಂಶಗಳೆಂದರೆ ಸಾವಿನ ಸ್ವೀಕಾರ. ಕಷ್ಟ ಜೀವಿಗಳಾಗಿ ಆಕಸ್ಮಿಕಗಳಲ್ಲಿಯೇ ಬಾಳು ಸವೆಸುವ ಸೋಲಿಗರಿಗೆ ಇದು ಸಹಜವೆಂದು ಅನ್ನಿಸುವುದು ಸಹಜವೇ. ಆಹಾರ, ನೀರು, ಬೆಂಕಿಪೊಟ್ಟಣ, ಮಚ್ಚು ಮುಂತಾದವುಗಳನ್ನು ಇಡುವುದು ಸತ್ತ ನಂತರ ಜೀವವು ಇನ್ನೂ ಇರುವನೆಂಬುದಾಗಿ ಇರುವ ನಂಬಿಕೆಯನ್ನು ಸೂಚಿಸುತ್ತದೆ.

ಹೀಗೆ ಸೋಲಿಗ ಜನಾಂಗದ ಅತೀಂದ್ರಿಯ, ಆಧ್ಯಾತ್ಮಿಕ ವಿಚಾರ ಲಹರಿಯು ಸಾಂಪ್ರದಾಯಿಕ ಸಮುದಾಯದಷ್ಟೇ ಗಹನವಾಗಿ ಹರಿದು ಮನುಷ್ಯ ಜೀವನಕ್ಕೆ ಅರ್ಥವನ್ನು ನೆಮ್ಮದಿಯನ್ನು ಕೊಡುವ ಶಕ್ತಿ ಹೊಂದಿದೆ.

# ಆದಿವಾಸಿ ಸಂಸ್ಕೃತಿಯಲ್ಲಿ ವಿಶ್ವಶಾಂತಿ ಹೊಂಗಿರಣ

## ಸಂಸ್ಕೃತಿ ಮತ್ತು ನಾಗರೀಕತೆ

ಮೇಲ್ನೋಟಕ್ಕೆ ಎರಡುಪದದ ಅರ್ಥಗಳು ಒಂದೆನಿಸಿದರೂ ಸಂಸ್ಕೃತಿ ಮತ್ತು ನಾಗರಿಕತೆ ಈ ಪದಗಳಿಗೆ ವ್ಯತ್ಯಾಸವಿದೆ. ಒಂದು ಸಮಾಜದ ಜೀವನ ಶೈಲಿಯು ನಾಗರಿಕತೆ ಎನಿಸಿಕೊಳ್ಳುತ್ತದೆ. ಅದರ ಅಂತರಾಳವೇ ಸಂಸ್ಕೃತಿ. ಜೀವನವನ್ನು ಸುಗಮಗೊಳಿಸುವ ಹೊರಪ್ರಪಂಚದ ಬಾಳಿನಲ್ಲಿ ಸುಖ ತರುವ, ಹೊಂದಿಕೊಂಡು ಬಾಳುವ, ಅನೇಕ ವಸ್ತುಗಳ ಮತ್ತು ಪರಿಕರಗಳ ಆವಿಷ್ಕಾರ ಮಾಡಿ ಅದನ್ನು ಉಪಯೋಗಿಸುವ ಆಶಯಹೊಮದಿರುವುದು ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಮಾನವನ ಹೃದಯಾಂತರಾಳದಿಂದ ಹೊರಹೊಮ್ಮುವ ಭಾವನೆಗಳು ಸೃಜಶೀಲತೆಯನ್ನು ರೂಪಿಸುತ್ತದೆ. ಅಂತರ್ವಾಣಿಯನ್ನು ಪ್ರತಿಧ್ವನಿಸುವುದೇ ಸಂಸ್ಕೃತಿ. ನಾಗರೀಕತೆಯು ಸಾಮಾಜಿಕ ಬಾಹ್ಯ ಅಭಿವ್ಯಕ್ತಿಯಲ್ಲಿ ಪ್ರಕಟವಾಗುತ್ತದೆ. ಸಂಸ್ಕೃತಿಯು ಮನುಷ್ಯನ ಸುಪ್ತ ಚೇತನ, ಶಕ್ತಿಗಳ ಉನ್ನತಿಯಲ್ಲಿ ನೈತಿಕ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಆಂತರಿಕ ಸೌಂದರ್ಯ ಅಭಿವ್ಯಕ್ತಿಯಲ್ಲಿ ಕಂಗೊಳಿಸುವುದು.

ಆದಿಮಾನವನು ಅಲೆಮಾರಿಯಾಗಿ ಆಹಾರ ಸಂಗ್ರಹ ಮಾಡುತ್ತಾ ನಾಗರಿಕತೆಯನ್ನು ಬೆಳೆಸಿದನು ಒಂದೆಡೆ ನೆಲೆಯೂರಿ ನಿಂತು ವ್ಯವಸಾಯವನ್ನು ಪ್ರಾರಂಭಿಸಿದಾಗ ಮಾತ್ರ ಸಾವಿರಾರು ವರ್ಷಗಳಲ್ಲಿ ಸಂಸ್ಕೃತಿ ನಾಗರೀಕತೆಗಳು ವೃದ್ದಿಗೊಂಡು ಇಂದಿನವರೆಗೂ ಅವ್ಯಾಹತವಾಗಿ ಬೆಳೆದಿದೆ. ಇಂದಿನ ವೈಜ್ಞಾನಿಕ, ತಾಂತ್ರಿಕ ಯುಗದಲ್ಲಿ ನಾಗರೀಕತೆಯ ಪ್ರಭಾವವೇ ಹೆಚ್ಚಾಗಿ ಸಂಸ್ಕೃತಿಯ ಪ್ರಭಾವ ಕಡಿಮೆಯಾದಂತೆ ತೋರುತ್ತದೆ. ಸರಳ ಆಯುಧಗಳಿಂದ ಹೋರಾಡುತ್ತಿದ್ದ ಮಾನವನು ಇಂದು ಬಾಂಬುಗಳನ್ನೆಸೆದು ಭೂಮಿಯನ್ನು ಸುಡುತ್ತಿದ್ದಾನೆ.

ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುತ್ತಿದ್ದಾನೆ ಎಂದು ಗುರುತಿಸಿದರೂ ಅಮಾನವೀಯ ದುರ್ಘಟನೆಗಳು ಮಾತ್ರ ಮಾನವನನ್ನು ಬಿಟ್ಟಿಲ್ಲ. ಇಂದು ಎಲ್ಲೆಡೆ ತಲೆಯೆತ್ತುತ್ತಿರುವುದು ಸಂಘಟಿತ ಅಪರಾಧ. ಮೂಲಭೂತವಾದಿಗಳು, ಹಿಂಸೆ, ವ್ಯಾಪಾರಿ ಮನೋಭಾವ, ಮಾದಕವಸ್ತು ಸೇವನೆ, ಬಹುವಸ್ತು ಉಪಯೋಗಿ ಬಾದ್ಯ ಸ್ಥಳೀಯ ಜ್ಞಾನವನ್ನು ಧಿಕ್ಕರಿಸಿ ಬಹುರಾಷ್ಟ್ರೀಯ ವಸ್ತುಗಳ ತಾಂತ್ರಿಕತೆಯ ಮೇಲೆ ಮೋಹ, ಪರಿಸರದ ಮೇಲೆ ಆಕ್ರಮಣ, ಬಾಲಾಪರಾಧ, ಆತ್ಮಹತ್ಯೆ ಹೀಗೆ ನೂರಾರು ಸಮಸ್ಯೆಗಳು ನವನವೀನ ನಾಗರೀಕತೆಯಲ್ಲಿ ಬೆಳೆದು ಬಂದಿರುವುದಕ್ಕೆ ಮುಖ್ಯ ಕಾರಣ ಮಾನವನು ತನ್ನ ಮೂಲ ಸಂಸ್ಕೃತಿಯ ಬೇರನ್ನು ಮರೆತಿರುವುದೇ ಆಗಿದೆ. ಜೀವನಕ್ಕೆ ಅರ್ಥಕೊಡುವ ಸಂಸ್ಕೃತಿಯನ್ನು ಆಧಾರ ಸ್ಥಂಭವನ್ನಾಗಿ ಮಾಡಿಕೊಳ್ಳುವುದೇ ಇದಕ್ಕೆ ಪರಿಹಾರ ಸೂತ್ರ. ಆದಿವಾಸಿ ಸಂಸ್ಕೃತಿಯು ಆಧಾರ ಸ್ಥಂಭವಾಗಬಲ್ಲದು ಎಂದು ಹೇಳಬಹುದು.

ಪ್ರಕೃತಿಯೊಡನೆ ಹೊಂದಾಣಿಕೆ, ಸಾಮರಸ್ಯ, ಕೂಡಿ ಬಾಳುವಿಕೆ ಗಿರಿಜನರ ಸಹಜ ಬಾಳು, ಇತ್ಯಾದಿಗಳನ್ನು ಬೇರೆಯವರೂ ರೂಢಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಅಪಾರ ಹೃದಯ ಸಂವೇದನೆ ಅವಶ್ಯಕ. ಸಾವಿರಾರು ವರ್ಷಗಳು ನಿಸರ್ಗದೊಡನೆ ಒಂದಾಗಿ ಬಾಳ್ವೆ ನಡೆಸಿ, ಒಂದು ರೀತಿಯ ಅತೀಂದ್ರಿಯ ಸ್ಪಂದನವನ್ನು ಆದಿವಾಸಿಗಳು ಬೆಳೆಸಿಕೊಂಡಿದ್ದಾರೆ ಎಂದು ಕಾಣುತ್ತದೆ. ಈ ಸಹಜ ಸ್ಪಂದನದ ಪರಿಣಾಮವೇ ಪ್ರಕೃತಿಯನ್ನು ದೋಚದಿರುವುದು. ಪ್ರೀತಿಸುವವರು ದೋಚಲಾರರು ದೋಚುವವರು ಪ್ರೀತಿಸಲಾರರು ಪ್ರಕೃತಿಯಲ್ಲಿ ನಾವು ಪ್ರೇಮದಿಂದ ತಿಂದು ನಮಗೆಷ್ಟು ಸಾಕೋ ಅಷ್ಟೇ ಬಳಸಬೇಕು. “ಜೇನು ಕೀಳುವುದು” ಎಂಬ ಪದ ಪ್ರಯೋಗ ಆದಿವಾಸಿಗಳಲ್ಲಿಲ್ಲ ಅದರ ಬದಲಾಗಿ “ಜೇನು ಅಳೆಯುವುದು” ಎಂಬ ಶಬ್ದ ಪ್ರಯೋಗವಿದೆ. ಹೀಗೆ ಜೇನು

ಅಳೆಯಬೇಕಾದರೆ ಪೂಜೆ ಸಲ್ಲಿಸಿ ನಂತರ ಜೇನು ತೆಗೆಯಬೇಕು. ಮರಗಳಲ್ಲಿ, ಗಿಡಗಳಲ್ಲಿ ಹಣ್ಣು ಕೀಳಬೇಕಾದಾಗ ಸ್ವಲ್ಪವನ್ನು ಪಕ್ಷಿಗಳಿಗೆ ಪ್ರಾಣಿಗಳಿಗೆ ಮತ್ತೆ ಗಿಡ ಬರಲು ಬೀಜಗಳಿಗೆ ಬಿಡಬೇಕು. ಅವೂ ಬದುಕಲಿ ಎಂಬುದೇ ಇದರ ಹಿಂದಿನ ಉದ್ದೇಶವಾಗಿದೆ. ಸೋಲಿಗರಿಗೆ ಕಾಡಿನ ಮೇಲೆ ಅಪಾರ ಗೌರವವಿದೆ ಕಾಡಿನಿಂದ ಕಾಡಿಗೆ ಹೋಗುವಾಗ ಹೊಸ ಕಾಡಿಗೆ ಅಂದರೆ ಅಲ್ಲಲ್ಲಿಯ ವನತಾಯಿಗೆ ನಮಿಸುತ್ತಾರೆ. ಆನೆ ಎದುರಾದರೆ ನಮಿಸುತಾರೆ ಸೋಲಿಗರ ಹಬ್ಬವಾದರೂ ಅಷ್ಟೆ ಅವರ ಹಬ್ಬವಾದ ಎರಡನೇ ದಿನ ಪೋಡಿನ ಕಡೆ ನೋಡಿದಲ್ಲಿ ಅವರ ನೆಂಟರಿಷ್ಟರು ಧಾನ್ಯ ತೆಗೆದುಕೊಂಡು ಹೋಗುತ್ತಿರುವ ದೃಶ್ಯವು ಸಾಮಾನ್ಯ. ಹಾಗೆಯೇ ಮನೆಯಲ್ಲಿ ನಾಲ್ಕು ಜನರಿದ್ದರೆ ಆರು ಮುದ್ದೆಮಾಡಿ ಅಕ್ಕಪಕ್ಕದ ಮನೆಗೆ ಒಂದೊಂದು ಮುದ್ದೆಯನ್ನು ಕೊಡುತ್ತಾರೆ. ಅಥವಾ ಯಾರಾದರೂ ಅಗತ್ಯವಿದ್ದವರಿಗೆ ಕೊಡುತ್ತಾರೆ. ಸೋಲಿಗರ ಆರ್ಥಿಕ ಬಡತನ ಇದಕ್ಕೆ ಅಡಿಯಾಗುವುದಿಲ್ಲ. ಹೃದಯ ಶ್ರೀಮಂತಿಕೆ ಸೋಲಿಗರಿಗೆ ಈ ಪಾಠವನ್ನು ಕಲಿಸಿದೆ.

ಒಮ್ಮೆ ಸೋಲಿಗರಿಗಾಗಿ ಮನೆಗಳನ್ನು ಕಟ್ಟಲು ಜಾಗ ಬೇಕಾಯಿತು. ಜಾಗಕ್ಕಾಗಿ ಪರದಾಡುತ್ತಿದ್ದಾಗ ಸೋಲಿಗನ ಬಾಯಲ್ಲಿ ಈ ಮಾತು ಬಂದಿತು. ಅದಕ್ಕೆ 'ಯಾಕೆ ಸ್ವಾಮಿ ಚಿಂತೆ ನನ್ನ ಜಮೀನಿನಲ್ಲಿಯೇ ಜಾಗವನ್ನು ಕೊಡುತ್ತೇನೆ ಅಗತ್ಯವಾಗಿ ಮನೆಗಳನ್ನು ಕಟ್ಟಿ' ಎಂದು ಹೇಳಿದ ಮಾತು ಇಂದಿನ ನಾಗರೀಕ ಜನಾಂಗ ಕಲಿಯಬೇಕಾದ್ದು ಬಹಳಷ್ಟಿದೆ. ಇದಕ್ಕೆ ಹಿನ್ನೆಲೆಯೆಂದರೆ ಆದಿವಾಸಿ ಜನಾಂಗಗಳಲ್ಲಿ ಸಮುದಾಯದ ಜೀವನ ನಡೆಸುತ್ತಿದ್ದು ಅವರಿಗೆ ಸಮುದಾಯ ಆಸ್ತಿಯ ಕಲ್ಪನೆಯಿತ್ತೇ ವಿನಾ ಖಾಸಗಿ ಸೊತ್ತಿನ ಭಾವನೆಗಳಿರಲಿಲ್ಲ. ಇದು ನನ್ನ ವಸ್ತು ನಾನೊಬ್ಬನೇ ಇದನ್ನು ಅನುಭವಿಸಬೇಕು ಎಂಬ ಸ್ವಾರ್ಥ ಆದಿವಾಸಿಗಳಲ್ಲಿ ಇಲ್ಲ ಇನ್ನೊಬ್ಬರಿಗೆ ಸಂತೋಷದಿಂದ ಕೊಡುವ ಔದಾರ್ಯವಿದೆ. ಇನ್ನು ಮುಂದುವರೆದ ನಾಗರಿಕತೆಗಳಲ್ಲಿ ಅಣ್ಣನು ತಮ್ಮನ ಶರ್ಟನ್ನು ಹಾಕಿಕೊಂಡರೆ ನೀನೇಕೋ ಅವನ ವಸ್ತು ಮುಟ್ಟಿದೆ ಎಂದು ತಂದೆಯೇ ನಾಲ್ಕು ಬಾರಿಸುತ್ತಾನೆ. ಇನ್ನು ಮಕ್ಕಳು ಎಂತಹ ಔದಾರ್ಯ ಕಲಿತಾರು? ಚೌಕಟ್ಟುಗಳಲ್ಲಿ ಸಿಲುಕಿ ತಮ್ಮದೇ ಸ್ವಂತಿಕೆಯ ಗೂಡು ಸುತ್ತಲೂ ಕಟ್ಟಿಕೊಂಡು ಮುಂದುವರೆದ ಜನಾಂಗದ ನಾಗರೀಕತೆ ನರಳುತ್ತದೆ.

ಇಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ ಬಾಳುತ್ತಿದ್ದೇವೆ. ಇಲ್ಲಿ ಮಾಂಸ ಖಂಡಗಳ ಬಲ, ಕುಯುಕ್ತಿಗಳ ಬಲಗಳ ಪ್ರದರ್ಶನ ಹಾಗೂ ಮೇಲುಗೈ ಪಡೆದಿದೆ ಬದುಕಿನಲ್ಲಿ ಭೀತಿ, ಭಯ ನಮ್ಮನ್ನು ಕಾಡುತ್ತಿದೆ. ವಿಕೃತ ದಿಕ್ಕಿನಲ್ಲಿ ನಡೆಯುತ್ತಿರುವ ದೃಶ್ಯವೇ ಇಂದಿನ ನಾಗರೀಕತೆಯ ಕೊಡುಗೆ ಒಂದು ಪೋಡು ಇನ್ನೊಂದು ಪೋಡಿನ ವಿರುದ್ದ ಗುಂಪು ದಾಂದಲೆಯನ್ನು ನಡೆಸಿಲ್ಲ ಕೊಲೆ, ಸುಲಿಗೆ ಹಿಂಸೆ ಮಾಡಲಿಲ್ಲ ಅದರ ಬಳಿ ಹೋದ ಹೊಸಬರನ್ನು ಸಹ ಸಹೃದಯದಿಂದ ನೋಡಿಕೊಳ್ಳುತ್ತಾರೆ ಜನ ಬಡವರಾದರೂ ಅವರದೇ ರೀತಿ ನೀತಿ ನಯ ನಾಜೂಕಿನಲ್ಲಿ ಬಾಳ್ವೆ ನಡೆಸುತ್ತಾರೆ. ಅಣ್ಣಾ ಅಕ್ಕಾ ಎಂದು ಕರೆದು ಗೌರವ ಕೊಡುತ್ತಾ ನಿಜವಾಗಿ ಸಂಭಾವಿತ ಜನರು ಯಾರಾದರೂ ಗುಡಿಸಲಿಗೆ ಬಂದರೆ ಮಂದಲಿಗೆ ಹಾಸುವರು, ಎಲೆಯಲ್ಲಿ ಸ್ವಲ್ಪ ಜೇನನ್ನು ಕೊಡುವರು. ತಮ್ಮಲ್ಲಿ ಉಂಟಾಗುವ ಸಮಸ್ಯೆಗಳನ್ನು ತಮ್ಮದೇ ಆದ ನ್ಯಾಯದಿಂದ ಪರಿಹರಿಸಿಕೊಳ್ಳುತ್ತಾರೆಯೇ ವಿನಹಃ ಘರ್ಷಣೆಗಿಳಿಯುವುದಿಲ್ಲ. ಇದರಲ್ಲಿ ಅವರು ತೋರುವ ಸಹನೆ ಜಾಣ್ಮೆ ಮೆಚ್ಚಬೇಕಾದ್ದೆ. ಆರ್ಥಿಕವಾಗಿಯೂ ಇದು ಹೊರೆಯಾಗದು.

ಆದಿವಾಸಿಗಳ ಜೀವನ ಸರಳತೆಯ ಸುತ್ತ ಹೆಣೆದಿದೆ ಒಂದು ಚಿಕ್ಕಗುಡಿಸಲು ನಾಲ್ಕಾರು ಮಡಿಕೆ ಕುಡಿಕೆಗಳು, ಒಂದೆರಡು ಬಟ್ಟೆ ಇಷ್ಟು ಇವರ ಆಸ್ತಿ. ಮನೆಗೆ ಎಂದೂ ಬೀಗ ಹಾಕುವ ಅಭ್ಯಾಸವಿಲ್ಲ.

## ಇಂದಿನ ಸೋಲಿಗರ ಬದುಕು

ಜಗತ್ತು ಮೂರನೇ ಸಹಸ್ರಮಾನಕ್ಕೆ ಕಾಲಿಟ್ಟಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ನೈತಿಕ ಬದಲಾವಣೆಗಳು ಸೋಲಿಗ ಸಮುದಾಯದ ಮೇಲೆ ಪ್ರಭಾವ ಬೀರದೇ ಇಲ್ಲ ರಾಜ್ಯ ಮಟ್ಟದ ಗಿರಿಜನ ಸಂಘಟನೆಯು ಬದಲಾವಣೆಗೆ ಸ್ಪಂದಿಸುವ ಸೋಲಿಗ ಸಮುದಾಯವನ್ನು ನಿರ್ಮಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ಸೋಲಿಗ ಅಭಿವೃದ್ಧಿ ಸಂಘಗಳು, ಹಾಡಿ, ಪೋಡುಗಳ ಮಟ್ಟದಿಂದಿಡಿದು ತಾಲ್ಲೂಕು ಜಿಲ್ಲಾ ಮಟ್ಟದವರೆಗೂ ಗಿರಿಜನ ಅಭಿವೃದ್ಧಿಯಲ್ಲಿ ಕೆಲಸ ಮಾಡುತ್ತಿವೆ. ರಾಜ್ಯ ಮಟ್ಟದ ಕ್ರೀಡಾಕೂಟವು ಇದಕ್ಕೆ ಒತ್ತಾಸೆಯಾಗಿ ಕೆಲಸ ಮಾಡುತ್ತಿದೆ. ಹೊಸ ಅರಿವಿನ ನೆಲೆಯಲ್ಲಿ ಸೋಲಿಗ ಸಮುದಾಯ ಗ್ರಾಮ, ತಾಲ್ಲೂಕು ಜಿಲ್ಲಾ ಮಟ್ಟದ ಪಂಚಾಯಿತಿಗಳಲ್ಲಿ ಭಾಗವಹಿಸುತ್ತಿವೆ. ಸೋಲಿಗ ಮಹಿಳೆಯರೆ ಅನೇಕ ಕಡೆ ಮುಖ್ಯ ಪಾತ್ರ ವಹಿಸಿದ್ದಾರೆ. ಪ್ರಾಥಮಿಕ ಕೇಂದ್ರಗಳ ಅರೆ ವೈದ್ಯಕೀಯ ಕಾರ್ಯಕರ್ತರಾಗಿ, ನರ್ಸ್‌ಗಳಾಗಿ, ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವೃತ್ತಿ ತರಬೇತಿಯಲ್ಲಿಯೂ ಸೋಲಿಗ ಯುವಕರು ಆಸಕ್ತಿ ತೋರುತ್ತಿದ್ದಾರೆ. 'ಲ್ಯಾಂಪ್ಸ್' ಸದಸ್ಯತ್ವವನ್ನು ಹೊಂದಿರುವುದರ ಜೊತೆಗೆ ಕಿರು ಅರಣ್ಯ ಉತ್ಪನ್ನ ಸಂಸ್ಕರಣ ಕೇಂದ್ರವನ್ನು ಸ್ಥಾಪಿಸಿಕೊಂಡು ಸಮುದಾಯಕ್ಕೆ ಲಾಭವು ಬರುವಂತೆ ಮಾಡಿಕೊಂಡಿರುತ್ತಾರೆ. ಸರ್ಕಾರದ ಅಭಿವೃದ್ಧಿ ಕಾರ್ಯಗಳಲ್ಲಿ ಸಮುದಾಯ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದೆ. ಕೆಲವು ಕಡೆ ಜಮೀನನ್ನು ಗಿರಿಜನರು ಪಡೆದುಕೊಂಡಿದ್ದಾರೆ. ತೋಟಗಾರಿಕೆ, ಮೀನುಗಾರಿಕೆ ಹಾಗೂ ಗಿರಿಜನ ಉಪಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಸೋಲಿಗ ಸಂಘವು ಫಲಾನುಭವಿಗಳಿಗೆ ಯೋಜನೆಗಳನ್ನು ತಲುಪಿಸುವಲ್ಲಿ ಜಾಗ್ರತೆ ವಹಿಸುತ್ತಿದೆ. ಸಮುದಾಯದ ಸಬಲೀಕರಣ ತಮ್ಮ ಗುರಿಯೆಂಬ ಆಶಾದಾಯಕ ಭಾವದೊಂದಿಗೆ ಸೋಲಿಗ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟಿನಲ್ಲಿ ತಮ್ಮತನವನ್ನು ಬಿಡದೆ ಕಾಲನ ಬದಲಾವಣೆಗಳಿಗೂ ಜಗ್ಗದೆ ಸ್ಪಂದಿಸಿ ಸೋಲಿಗರ ಬದುಕು ಸಾಗುತ್ತಿದೆ ಎಂದು ಹೇಳಬಹುದು.

*****